ಪ್ರಬುದ್ಧ ಕರ್ಣಾಟಕ



೨೮೧, ೨೮೨

ಪ್ರಸಾರಾಂಗ :: ಮೈಸೂರು ವಿಶ್ವವಿದ್ಯಾನಿಲಯ

ಲೇಖಕರಿಗೆ ಸೂಚನೆಗಳು

೧. 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟನೆಗಾಗಿ ಎಲ್ಲ ಬಗೆಯ ಲೇಖನಗಳಿಗೂ ಸ್ವಾಗತವಿದೆ. ಲೇಖನಗಳು ಸ್ವತಂತ್ರವಾಗಿರಬಹುದು, ಇಲ್ಲವೆ ಅನುವಾದಗಳಾಗಿರಬಹುದು. ಅನುವಾದವಾಗಿದ್ದರೆ ಮೂಲಲೇಖಕರ ಹಾಗೂ ಲೇಖನದ ಹೆಸರನ್ನು ತಪ್ಪದೆ ಸೂಚಿಸಿದ್ದು, ಲೇಖನದ ಜೊತೆಯಲ್ಲಿಯೇ ಮೂಲಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನು ಕಳುಹಿಸಬೇಕು.

೨. ಲೇಖನಗಳನ್ನು ಕಾಗದದ ಒಂದೇ ಮಗ್ಗುಲಿನಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಲೇಖನದೊಂದಿಗೆ ಲೇಖಕರ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು. ಲೇಖಕರಿಗೆ ಕರಡನ್ನು ತಿದ್ದುವ ಅವಕಾಶವಿಲ್ಲದಿರುವುದರಿಂದ ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿರಬಾರದು; ಅಸಂಪೂರ್ಣವಾಗಿರಬಾರದು. ಲೇಖನಗಳು ಸಚಿತ್ರವಾಗಿದ್ದರೆ, ಲೇಖನದಲ್ಲಿ ಚಿತ್ರಗಳು ಇರಬೇಕಾದ ಜಾಗವನ್ನು ನಿರ್ದೇಶಿಸಿರಬೇಕು.

೩. ಲೇಖನಗಳಲ್ಲಿ, ಇಂಗ್ಲಿಷನ್ನುಳಿದ ಅನ್ಯಭಾಷೆಗಳ ಉದ್ಧರಿತ ಭಾಗಗಳು ಕನ್ನಡ ಲಿಪಿಯಲ್ಲೇ ಇರಬೇಕು. ಅಡಿ ಟಿಪ್ಪಣಿಗಳಲ್ಲಿ, ಲೇಖಕರ ಹೆಸರು, ಪುಸ್ತಕ ಅಥವಾ ಲೇಖನಗಳ ಹೆಸರು, ಪ್ರಕಾಶಕರ ಹೆಸರು, ಸ್ಥಳ, ಪ್ರಕಟಣೆಯ ವರ್ಷ ಹಾಗೂ ಸಂಬಂಧಿಸಿದ ಪುಟಸಂಖ್ಯೆ ಇವುಗಳನ್ನು ಖಚಿತವಾಗಿ ನಮೂದಿಸಿರಬೇಕು. ಮಾದರಿಗಾಗಿ ಇಲ್ಲಿ ಎರಡು ಉದಾಹರಣೆಗಳನ್ನು ಕೊಟ್ಟಿದೆ:

ನರಸಿಂಹಾಚಾರ್, ಡಿ. ಎಲ್., ಕನ್ನಡ ಗ್ರಂಥಸಂಪಾದನೆ (ಶಾರದಾಮಂದಿರ, ಮೈಸೂರು), ೧೯೬೪, ಪು. ೧೬.

Sreekantaiya, T. N., 'A Century and a Half of Literary Activity in Kannada,' **Kannada Studies**, Vol. 1, No. 2 (Mysore 1965), p.62.

೪. ಕನ್ನಡ, ಇಂಗ್ಲಿಷ್, ಸಂಸ್ಕೃತ, ತೆಲುಗು ಮತ್ತು ಹಿಂದಿ ಭಾಷೆಗಳ ಪುಸ್ತಕಗಳನ್ನು ವಿಮರ್ಶೆಗಾಗಿ ಸ್ವೀಕರಿಸಲಾಗುತ್ತದೆ. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೫. ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಒದಗಿಸಲಾಗುತ್ತದೆ. ತಗಲಬಹುದಾದ ವೆಚ್ಚವನ್ನು ವಹಿಸಿದರೆ ಹೆಚ್ಚಿಗೆ ಪ್ರತಿಗಳನ್ನೂ ಒದಗಿಸಲಾಗುತ್ತೆ. ಲೇಖನ ಸ್ವೀಕೃತವೇ ಇಲ್ಲವೇ ಎಂಬುದನ್ನು ತಿಳಿಯಬಯಸುವವರು, ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

೬. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು, ಪ್ರಬುದ್ಧ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೬,** ಇವರಿಗೆ ಕಳುಹಿಸಬೇಕು.

‘ಪ್ರಬುದ್ಧ ಕರ್ಣಾಟಕ’ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras, *Brahmavidya*, Adyar, Madras; *Bulletin of the School of Oriental and African Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *The Indian P.E.N.*, Bombay; *Annals of the Venkateswara Oriental Institute*, Tirupati; *The Jaina Siddhanta Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Annals of the Bhandarkar Oriental Research Institute*, Poona; *Journal of the Karnataka University*, Dharwar; *Public Affairs*, Bangalore.

‘ಪ್ರಪಂಚ’, ಹುಬ್ಬಳ್ಳಿ; ‘ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ’ (ತೆಲುಗು), ಕಾಕಿನಾಡ; ‘ಪುಸ್ತಕ ಪ್ರಪಂಚ’, ಮೈಸೂರು; ‘ಕನ್ನಡ ನುಡಿ’, ಬೆಂಗಳೂರು; ‘ಸೋವಿಯೆತ್ ದೇಶ’, ಮದ್ರಾಸು; ‘ಪ್ರಕಾಶ’, ಉಡುಪಿ; ‘ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ”, ಬೆಂಗಳೂರು; ‘ಕರ್ಣಾಟಕ ಭಾರತಿ’, ಧಾರವಾಡ; ‘ಸಾಧನೆ’, ಬೆಂಗಳೂರು; ‘ಪರಂಜ್ಯೋತಿ’, ಹುಬ್ಬಳ್ಳಿ; ‘ಸಪ್ತಗಿರಿ’, ತಿರುಪತಿ; ‘ಲೋಚನ’, ಬೆಂಗಳೂರು; ‘ತುಳುವ’, ಉಡುಪಿ.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಪ್ರಬುದ್ಧ ಕರ್ಣಾಟಕ

★ ಮಾನವಿಕ ಕರ್ಣಾಟಕ

★ ವಿಜ್ಞಾನ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ಐದು ರೂಪಾಯಿ
ಇತರರಿಗೆ	....	ಹತ್ತು ರೂಪಾಯಿ
ಸಂಸ್ಥೆಗಳಿಗೆ	....	ಹದಿನೈದು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ನಿರ್ದೇಶಕರು
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

ಮಾನ್ಯರೆ,

ಈ ಸಂಚಿಕೆಯೊಂದಿಗೆ ಪ್ರಬುದ್ಧ ಕರ್ಣಾಟಕದ ೭೧ನೆಯ ಸಂಪುಟ ಮುಗಿಯುತ್ತದೆ. ೭೨ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳುಹಿಸಿಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮಗ್ಗುಲಿಗಿರುವ ಹಾಳೆಯಲ್ಲಿ ವಿವರಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು
ಕೆ. ಟಿ. ವೀರಪ್ಪ
ನಿರ್ದೇಶಕ

ಮಾನ್ಯರೆ,

ದಯವಿಟ್ಟು ನನ್ನನ್ನು/ಈ ಸಂಸ್ಥೆಯನ್ನು **ಪ್ರಬುದ್ಧ ಕರ್ಣಾಟಕ**ದ ೭೨ನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ಐದು/ಹತ್ತು/ ಹದಿನೈದು ರೂಪಾಯಿಗಳನ್ನು ಮನಿಯಾರ್ಡರ್/ ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ

(ರುಜು)

೧ ಹೆಸರು [ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ] —

೨. ವಿಳಾಸ [ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸ ಗಳೆರಡನ್ನೂ ನಮೂದಿಸಿರಿ] —

೩. ಶಿಫಾರಸು [ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು] —

೪. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ ? —

೫. ಕಳೆದ ವರ್ಷ ನನ್ನ ಚಂದಾಸಂಖ್ಯೆ —

[ತಿರುಗಿಸಿ

'ಪ್ರಬುದ್ಧ ಕರ್ಣಾಟಕ'ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

೧.

೨.

೩.

೪.

೫.

ಪ್ರಬುದ್ಧ ಕರ್ಣಾಟಕದ ಚಂದಾ ವಿವರ

ಆಜೀವ ಸದಸ್ಯತ್ವ		: ರೂ. ೧೦೦-೦೦
ಪ್ರತಿ ಸಂಪುಟಕ್ಕೆ	ವಿದ್ಯಾರ್ಥಿಗಳಿಗೆ	: ರೂ. ೫-೦೦
	ಇತರರಿಗೆ	: ರೂ. ೧೦-೦೦
	ಸಂಸ್ಥೆಗಳಿಗೆ	: ರೂ. ೧೫-೦೦

ವಿಳಾಸ :

ನಿರ್ದೇಶಕರು
ಪ್ರಸಾರಾಂಗ
ಮೈಸೂರು ೫೭೦ ೦೦೬

ಪ್ರಬುದ್ಧ ಕರ್ಣಾಟಕ

ಸಂಪುಟ ೭೧ ಸಂಚಿಕೆ ೩, ೪ (ಸಂಯುಕ್ತ)

೨೮೧, ೨೮೨

ಶ್ರೀಶುಕ್ಲ ಸಂವತ್ಸರ

ಆಶ್ವಯುಜ–ಪುಷ್ಯ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೯–೯೦

PRABUDDHA KARNATAKA, Kannada Quarterly of the *University of Mysore*, Volume 71, Numbers 3 & 4, October 1989–January 1990, Edited by G. H. Nayak and Lakshminarayana Aurora.

ಪ್ರಧಾನ ಸಂಪಾದಕರು

ಡಾ. ಸಿ. ಪಿ. ಕೃಷ್ಣಕುಮಾರ್

ಸಂಪಾದಕರು

ಜಿ. ಎಚ್. ನಾಯಕ

ಲಕ್ಷ್ಮೀನಾರಾಯಣ ಅರೋರಾ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೫೭೦ ೦೦೬

ಮುದ್ರಕರು

ಎನ್. ಹನುಮಯ್ಯ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು ೫೭೦ ೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧	ಡಾ. ಕೆ. ಕೆಂಪೇಗೌಡ	ಭಾಷಾವಿಜ್ಞಾನ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೨	ಕೆ. ಮೊಹಮ್ಮದ್ ಶರೀಫ್	ಶಾಸನ ಸಹಾಯಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೩	ಕೆ. ಎಚ್. ಶ್ರೀನಿವಾಸ	ಪಿ.ಇ.ಐ. ಪಾಲಿಟೆಕ್ನಿಕ್ ಹತ್ತಿರ, ಮುಬಾರಕ ಮೊಹಲ್ಲಾ, ಮೊಳಕಾಲ್ಮೂರು ೫೭೭ ೫೩೫
೪	ಡಾ. ಟಿ. ಬಿ. ಬಸವರಾಜು	ಅಧ್ಯಾಪಕರು, ತತ್ವಶಾಸ್ತ್ರ ವಿಭಾಗ ಮಾನಸಗಂಗೋತ್ರಿ, ಮೈಸೂರು ೫೭೦ ೦೦೬
೫	ಶಂಕರನಾರಾಯಣ ಖಂಡಿಗೆ	'ಕೃಷ್ಣಕೃಪಾ', ಖಂಡಿಗೆ, ಕಾಸರಗೋಡು ತಾಲ್ಲೂಕು, ಜಿಲ್ಲೆ, ಅಂಚೆ: ಪೆರ್ಲ ೬೭೦ ೫೫೨
೬	ಡಾ. ಆರ್. ರಾಮಕೃಷ್ಣ	ಭಾಷಾವಿಜ್ಞಾನ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ೫೭೦ ೦೦೬
೭	ಡಾ. ಎನ್. ಎಸ್. ತಾರಾನಾಥ್	ಕನ್ನಡ ಅಧ್ಯಾಪಕರು, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೮	ಡಾ. ಎಚ್.ಎಸ್. ಸುಜಾತಾ	ಕನ್ನಡ ರೀಡರ್, ಡಿ. ಬನುಮಯ್ಯನವರ ಕಾಲೇಜು, ಮೈಸೂರು ೫೭೦ ೦೦೧
೯	ಡಿ. ಆರ್. ವೆಂಕಟರಮಣನ್	ಗೋಖಲೆ ಸಾರ್ವಜನಿಕ ಸಂಸ್ಥೆ, ನರಸಿಂಹರಾಜ ಕಾಲೋನಿ, ಬೆಂಗಳೂರು ೫೬೦ ೦೧೯
೧೦	ಎನ್ ಎಸ್. ಶಾರದಾ ಪ್ರಸಾದ್	ಸಹಾಯಕ ಭಾಷಾಂತರಕಾರರು, ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು ೫೭೦ ೦೦೬

೧೧	ಡಾ. ಎಚ್. ಎಸ್. ಬಿಳಿಗಿರಿ	೨೭೭೯, ಲಲಿತಾ ಪ್ರಸಾದ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ, ಮೈಸೂರು ೫೭೦ ೦೦೨
೧೨	ಡಾ. ಟಿ. ವಿ ವೆಂಕಟಾಚಲ ಶಾಸ್ತ್ರೀ	ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬
೧೩	ಕಲಾಶ್ರೀ ಎಂ. ಹನಸೋಗೆ	ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ ಮೈಸೂರು ೫೭೦ ೦೦೬

ಡಾ. ಕೆ. ಕೆಂಪೇಗೌಡ

ಅರ್ಥವಿಜ್ಞಾನ

ಅರ್ಥವಿಜ್ಞಾನ ಭಾಷಾವಿಜ್ಞಾನದ ಒಂದು ಪ್ರಮುಖ ಶಾಖೆ. ಇದರಲ್ಲಿ ಭಾಷೆಯ ಶಬ್ದ, ವಾಕ್ಯ, ವಾಕ್ಯಾಂಶಗಳು, ನುಡಿಗಟ್ಟುಗಳು ಮುಂತಾದುವುಗಳ ಅರ್ಥವನ್ನು ವಿವೇಚಿಸಲಾಗುತ್ತದೆ. ಭಾಷೆಯ ವಿವಿಧ ಶಬ್ದ ಮತ್ತು ವಾಕ್ಯಗಳನ್ನು ಕಿವಿಯಿಂದ ಕೇಳುವುದರಿಂದ, ವಿವಿಧ ವಸ್ತುಗಳನ್ನು ಕಣ್ಣಿನಿಂದ ನೋಡುವುದರಿಂದ, ಮೂಗು ವಾಸನೆಯನ್ನು ಸೂಚಿಸುವುದರಿಂದ, ನಾಲಿಗೆ ರುಚಿಯನ್ನು ಸವಿಯುವುದರಿಂದ ಹೀಗೆ ಅನೇಕ ರೀತಿಯಲ್ಲಿ ಅರ್ಥದ ಅನುಭವವನ್ನು ನಾವು ಪಡೆಯುತ್ತಿರುತ್ತೇವೆ. ಒಂದು ಭಾಷೆಯ ವಿವಿಧ ಶಬ್ದ ಮತ್ತು ವಾಕ್ಯಗಳನ್ನು ಗ್ರಹಿಸುವುದರಿಂದ ನಮ್ಮ ಮನಸ್ಸಿನ ಮೇಲೆ ಯಾವ ಬಗೆಯ ಪರಿಣಾಮ ಉಂಟಾಗುತ್ತದೆಯೋ, ಯಾವ ಬಗೆಯ ಪರಿಕಲ್ಪನೆ ಮನಸ್ಸಿನಲ್ಲಿ ಮೂಡುತ್ತದೆಯೋ ಅಂತಹ ಕ್ರಿಯೆಯನ್ನೇ ಅರ್ಥ ಎನ್ನುವುದು. ಭಾಷೆಯ ವಿವಿಧ ಅಂಶಗಳನ್ನು ಕಿವಿಯಲ್ಲಿ ಕೇಳುವುದರಿಂದ ಉಂಟಾಗುವ ಒಂದು ಬಗೆಯ ಮಾನಸಿಕ ಕ್ರಿಯೆಯನ್ನು ಕೇಳುಗನು ಸವಿಯಬಹುದೇ ವಿನಾಃ ಅದನ್ನು ಇತರ ಭಾಷಿಕಾಂಶಗಳಂತೆ ವಿವರಿಸಿ ತೋರಿಸಲು ಬರುವುದಿಲ್ಲ. ಭಾಷೆಯ ಶಬ್ದ, ರೂಪ, ವಾಕ್ಯ, ವಾಕ್ಯಾಂಶಗಳು ನುಡಿಗಟ್ಟುಗಳು ಸೂಚಿಸುವ ಅರ್ಥ ಎಲ್ಲಾ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿಯೂ, ಎಲ್ಲಾ ಪರಿಸರ ಹಾಗೂ ಪರಿಸ್ಥಿತಿಗಳಲ್ಲಿಯೂ ಒಂದೇ ಬಗೆಯಲ್ಲಿರಲಾರದು. ಅದು ವಸ್ತು, ಕಾಲ, ಸ್ಥಳ, ವ್ಯಕ್ತಿ ಮುಂತಾದವುಗಳಿಗೆ ಅನುಗುಣವಾಗಿ ಪರಿವರ್ತನೆಯಾಗುತ್ತಿರುತ್ತದೆ.

ಅರ್ಥ ಮನುಷ್ಯನ ಮನಸ್ಸಿನಲ್ಲಿ ಮುಖ್ಯವಾಗಿ ಎರಡು ಬಗೆಯಲ್ಲಿ ವೇದ್ಯವಾಗುತ್ತದೆ. ಒಂದು ಆತ್ಮಾನುಭವದಿಂದ, ಇನ್ನೊಂದು ಪರಾನುಭವದಿಂದ. ಯಾವುದಾದರೊಂದು ವಸ್ತು ಅಥವಾ ವ್ಯಕ್ತಿಯ ನೇರ ಸಂಪರ್ಕದಿಂದ ಉಂಟಾಗುವ ಸ್ವತಃ ಅನುಭವ ಆತ್ಮಾನುಭಾವಕ್ಕೆ ಸಂಬಂಧಿಸಿದ್ದು. ಬೇರೆಯವರ ಅನುಭವವನ್ನು ಕೇಳಿ ಅಥವಾ ಓದಿ ತಿಳಿಯುವುದು ಪರಾನುಭವಕ್ಕೆ ಸಂಬಂಧಿಸಿದ್ದು. ಯಾವ ಅನುಭವವನ್ನು ಸ್ವತಃ ಅನುಭವದಿಂದ ಪಡೆಯಲು ಸಾಧ್ಯವಾಗುವುದಿಲ್ಲವೋ ಅಂತಹ ಅನುಭವವನ್ನು ಬೇರೆಯವರಿಂದಲೇ ಪಡೆಯಬೇಕಾಗುತ್ತದೆ. ಉದಾಹರಣೆಗೆ ಸಕ್ಕರೆ

ಸಿಹಿಯಾಗಿದೆ, ಬೆಂಕಿ ಸುಡುತ್ತದೆ ಎಂಬುದನ್ನು ಸ್ವತಃ ಅನುಭವದಿಂದ ಪಡೆಯಬಹುದು. ಆದರೆ ಆತ್ಮ, ಪರಮಾತ್ಮ, ದೇವ, ದೆವ್ವ, ನರಕ, ಸ್ವರ್ಗ, ರಾಕ್ಷಸ, ನ್ಯಾಯ, ನೀತಿ, ಧರ್ಮ ಮುಂತಾದುವುಗಳನ್ನು ಬೇರೆಯವರ ಅನುಭವದಿಂದಲೇ ಕೇಳಿ ಅಥವಾ ಓದಿ ಪಡೆಯಬೇಕಾಗುತ್ತದೆ.

ಪ್ರತಿಯೊಂದು ವಸ್ತುವೂ ತನ್ನದೇ ಆದ ಗುಣವನ್ನು ಸಂಪಾದಿಸಿಕೊಂಡಿರುತ್ತದೆ. ಈ ವಿವಿಧ ಗುಣಗಳಲ್ಲಿ ಯಾವುದಾದರೊಂದು ಗುಣ ಅದರ ಹೆಸರಾಗುತ್ತದೆ. ಈ ಹೆಸರಿನಿಂದ ಆ ವಸ್ತುವಿನ ಪೂರ್ಣ ಪರಿಚಯವಾಗುವುದಿಲ್ಲ. ಹೆಸರುಗಳು ಕೆಲವು ವಸ್ತುಗಳಿಗೆ ನೇರವಾಗಿ ಅನ್ವಯವಾದರೆ ಮತ್ತೆ ಕೆಲವು ವಸ್ತುಗಳಿಗೆ ಆ ಹೆಸರುಗಳು ನೇರವಾಗಿ ಅನ್ವಯವಾಗುವುದಿಲ್ಲ. ಆದರೆ ಆ ಹೆಸರುಗಳು ಆ ವಸ್ತುಗಳ ಎಲ್ಲಾ ಗುಣಗಳನ್ನು ನಿರ್ದೇಶಿಸಲಾರವು. ಕೆಲವು ವಸ್ತುಗಳಿಗೆ ಅವುಗಳ ಪ್ರಮುಖ ಗುಣ ಅವುಗಳ ಹೆಸರಾಗಿದ್ದರೆ, ಮತ್ತೆ ಕೆಲವು ವಸ್ತುಗಳಿಗೆ ಅವುಗಳ ಪ್ರಮುಖವಲ್ಲದ ಗುಣ ಅವುಗಳ ಹೆಸರಾಗಿರುತ್ತವೆ. ಕೆಲವು ವಸ್ತುಗಳಿಗೆ ಅವುಗಳ ಪ್ರಧಾನ ಮತ್ತು ಅಪ್ರಧಾನ ಗುಣಗಳೆರಡು ಸೇರಿ ಅವುಗಳ ಹೆಸರಾಗಿರುತ್ತವೆ. ಈ ಕಾರಣದಿಂದ ಆ ವಸ್ತುಗಳಿಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಹೆಸರುಗಳು ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ವಸ್ತುಗಳ ಹೆಸರುಗಳು ಅವುಗಳ ಗುಣವನ್ನು ಆಧರಿಸಿ ನಿರ್ಧಾರಿತವಾಗುತ್ತವೆಯೋ ಅಥವಾ ಇಲ್ಲವೆ ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಮತಬೇಧಗಳಿವೆ. ವಸ್ತುಗಳಂತೆಯೇ ವ್ಯಕ್ತಿಗಳ ಗುಣವನ್ನು ಆಧರಿಸಿ ಕೆಲವುವೇಳೆ ವ್ಯಕ್ತಿಗಳ ನಾಮಕರಣ ಮಾಡುತ್ತಿರುತ್ತೇವೆ. ಹಾಗೆಯೇ ವಸ್ತುಗಳ ಗುಣ, ಸ್ವಭಾವ, ಆಕಾರ, ಕ್ರಿಯೆ ಇತ್ಯಾದಿಗಳನ್ನು ಆಧರಿಸಿ ಅವನ್ನು ಹೆಸರಿಸಿಕೊಂಡಿರಬಹುದು. ಈ ಹೆಸರುಗಳು ಆ ವಸ್ತುಗಳಿಗೆ ಯಾದೃಚ್ಛಿಕವಾದದ್ದು. ಹಾಗೆಯೇ ಶಬ್ದ ಮತ್ತು ವಸ್ತುಗಳಿಗಿರುವ ಸಂಬಂಧವೂ ಕೂಡ ಯಾದೃಚ್ಛಿಕವಾದದ್ದು. ಯಾವುದಾದರೊಂದು ವಸ್ತುವನ್ನು ಸೂಚಿಸುವ ಶಬ್ದವನ್ನು ಕೇಳಿದ ಮತ್ತು ಓದಿದ ತಕ್ಷಣವೇ ನಮ್ಮ ಮನಸ್ಸಿನಲ್ಲಿ ಆ ವಸ್ತುವಿನ ಪರಿಕಲ್ಪನೆ ಉಂಟಾಗುತ್ತದೆ. ಈ ಪರಿಕಲ್ಪನೆಯನ್ನೇ ಅರ್ಥವೆಂದು ಭಾವಿಸಲಾಗುತ್ತದೆ. ಅರ್ಥದ ಈ ಪರಿಕಲ್ಪನೆಗೆ ಸಂಕೇತ ಮೂಲಕಾರಣವಾಗುತ್ತದೆ.

ಅರ್ಥವಿಜ್ಞಾನವನ್ನು ಕೆಲವರು ಶಬ್ದಾರ್ಥವಿಜ್ಞಾನವೆಂದೂ, ಅರ್ಥವಿಚಾರವೆಂದೂ, ಅರ್ಥಮೀಮಾಂಸೆ ಎಂದೂ ಕರೆಯುವರು. ಇವುಗಳಲ್ಲಿ ಅರ್ಥವಿಜ್ಞಾನ ಅರ್ಥದ ವೈಜ್ಞಾನಿಕ ಅಧ್ಯಯನ ಎಂಬರ್ಥದಲ್ಲಿ ಹೆಚ್ಚು ಬಳಕೆಯಲ್ಲಿದೆ. ಇಂಗ್ಲಿಷಿನಲ್ಲಿ ಈ ಬಗೆಯ ಅಧ್ಯಯನವನ್ನು Rhematology, Semasialogy, Rhematics, Sematology, Glossology, Semantics, Orthology ಎಂಬುದೇ ಮೊದಲಾದ ಹೆಸರುಗಳಿಂದ ಕರೆಯುತ್ತಿದ್ದಾರೆ. ಇವುಗಳಲ್ಲಿ Semantics ಎಂಬ ಶಬ್ದ ಜಗತ್ತಿನಾದ್ಯಂತ ಹೆಚ್ಚು ಬಳಕೆಯಲ್ಲಿದೆ. ಇದನ್ನೇ ಫ್ರೆಂಚ್ ಭಾಷೆಯಲ್ಲಿ

Semantique ಎಂತಲೂ ಕರೆಯುವರು. Semantics ಎಂಬ ಶಬ್ದ ಗ್ರೀಕ್ ಮೂಲ ದಿಂದ ಇಂಗ್ಲಿಷಿಗೆ ಬಂದಿದ್ದು. ಇದರಲ್ಲಿ Semasia (meaning) ಮತ್ತು tics (science) ಎಂಬ ಎರಡು ಅರ್ಥವತ್ತಾದ ರೂಪಗಳು ಸೇರಿವೆ. ಈ ಎರಡು ರೂಪಗಳು ಸೇರಿ ಆದ semantics ಎಂಬ ಶಬ್ದಕ್ಕೆ a science of meaning ಎಂಬ ಅರ್ಥವಿದೆ. ಇದನ್ನೇ ಇಂಗ್ಲಿಷಿನಲ್ಲಿ a scientific study of meaning ಎಂದಾಗಿ ವಿವರಿಸಿಕೊಳ್ಳುವರು.

ಅರ್ಥವಿಜ್ಞಾನದ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಮತಭೇದಗಳಿವೆ. ಯೂರೋಪಿನ ಕೆಲವು ವಿದ್ವಾಂಸರು ಅರ್ಥವಿಜ್ಞಾನವನ್ನು ಭಾಷಾವಿಜ್ಞಾನದ ಪ್ರಮುಖ ಶಾಖೆಯನ್ನಾಗಿ ಪರಿಗಣಿಸಿಕೊಂಡು ಅರ್ಥವನ್ನು ಭಾಷೆಯ ಇತರ ಅಂಶಗಳಂತೆ ವಿವೇಚಿಸತೊಡಗಿದರೆ, ಅಮೆರಿಕದ ಕೆಲವು ವಿದ್ವಾಂಸರು ಅರ್ಥವಿಜ್ಞಾನ ಭಾಷಾ ವಿಜ್ಞಾನದ ಪ್ರಮುಖ ಶಾಖೆಯಲ್ಲವೆಂದು ಭಾವಿಸಿ ಅರ್ಥವನ್ನು ಬಿಟ್ಟು ಭಾಷೆಯ ಇತರ ಅಂಶಗಳನ್ನು ಮಾತ್ರ ಭಾಷಾವಿಜ್ಞಾನದಲ್ಲಿ ವಿವೇಚಿಸುವರು. ಮತ್ತೆ ಕೆಲವರು ಅರ್ಥ ವಿಜ್ಞಾನವನ್ನು ಮನೋವಿಜ್ಞಾನ ಮತ್ತು ತತ್ವವಿಜ್ಞಾನಗಳ ಒಂದು ಪ್ರಮುಖ ಶಾಖೆ ಯನ್ನಾಗಿ ಪರಿಗಣಿಸಿಕೊಂಡು ಅರ್ಥವಿಚಾರವನ್ನು ಮನೋವಿಜ್ಞಾನದಲ್ಲಿ ವಿವೇಚಿಸು ವರು. ಇನ್ನೂ ಕೆಲವರು ಇದನ್ನು ಧ್ವನಿವಿಜ್ಞಾನದಂತೆ ಒಂದು ಸ್ವತಂತ್ರ ಶಾಖೆ ಯನ್ನಾಗಿ ಪರಿಗಣಿಸಿಕೊಂಡು ಅರ್ಥವನ್ನು ಪ್ರತ್ಯೇಕವಾಗಿ ವಿವೇಚಿಸಲು ಪ್ರಯತ್ನಿ ಸಿದ್ದಾರೆ. ಅರ್ಥವಿಜ್ಞಾನ ತರ್ಕಶಾಸ್ತ್ರ, ತತ್ವಶಾಸ್ತ್ರ ಮತ್ತು ಮನೋವಿಜ್ಞಾನ ಗಳೊಡನೆ ಸಾಕಷ್ಟು ಸಂಬಂಧ ಪಡೆದುಕೊಂಡಿರುವ ವಿಜ್ಞಾನವಾಗಿದೆ. ಅರ್ಥ ಭಾಷೆಯ ಆತ್ಮ, ಅದೇ ಅದರ ಜೀವ. ಭಾಷೆಯ ಧ್ವನಿ, ಶಬ್ದ, ರೂಪ, ವಾಕ್ಯ ಇವು ಅದರ ಶರೀರಕ್ಕೆ ಸಂಬಂಧಿಸಿದ ವಿಚಾರಗಳು. ಜೀವವಿಲ್ಲದ ಶರೀರ, ಅರ್ಥವಿಲ್ಲದ ಶಬ್ದ ಇವು ಯಾವ ಪ್ರಯೋಜನಕ್ಕೂ ಬರುವುದಿಲ್ಲ. ಇಷ್ಟಾದರೂ ಶಬ್ದ ಮತ್ತು ಅರ್ಥ ಇವು ಪರಸ್ಪರ ಒಂದನ್ನೊಂದು ಅವಲಂಬಿಸಿವೆ. ಇವುಗಳಲ್ಲಿ ಒಂದಿಲ್ಲದೆ ಇನ್ನೊಂದರ ಅಸ್ತಿತ್ವ ಸಾಧ್ಯವಾಗುವುದಿಲ್ಲ. ಭಾಷಾವಿಜ್ಞಾನದಲ್ಲಿ ಭಾಷೆಯ ಎಲ್ಲಾ ವಿಚಾರ ಗಳನ್ನು ವಿವೇಚಿಸುವಂತೆ ಅರ್ಥವನ್ನು ವಿವೇಚಿಸಬೇಕಾದುದು ಅತ್ಯಗತ್ಯ. ಭಾಷಾಧ್ಯಯನದಲ್ಲಿ ಅರ್ಥವಿಚಾರವನ್ನು ಬಿಟ್ಟು ಅದರ ಶರೀರಕ್ಕೆ ಸಂಬಂಧಿಸಿದ ರೂಪ, ಶಬ್ದ, ವಾಕ್ಯ, ವಾಕ್ಯಾಂಶ ಇಷ್ಟನ್ನೇ ವಿವೇಚಿಸಿದರೆ ಅದು ಆ ಭಾಷೆಯ ಪೂರ್ಣ ಅಧ್ಯಯನವೆನಿಸಿಕೊಳ್ಳುವುದಿಲ್ಲ.

ಧ್ವನಿ ಮತ್ತು ಅರ್ಥ ಇವು ಭಾಷೆಯ ಬಾಹ್ಯ ವಿಚಾರಗಳಾದರೆ ಧ್ವನಿಮಾ, ಆಕೃತಿಮಾ, ವಾಕ್ಯ, ಶಬ್ದ, ವಾಕ್ಯಾಂಶ ಮುಂತಾದುವು ಭಾಷೆಯ ಆಂತರಿಕ ರಚನೆಗೆ ಸಂಬಂಧಿಸಿದ ವಿಚಾರಗಳಾಗಿವೆ. ನಾವು ಮಾತನಾಡುವಾಗ ಧ್ವನಿಗಳ ಮೂಲಕ ಅಭಿವ್ಯಕ್ತಿಗೊಳಿಸುತ್ತಿರುತ್ತೇವೆ. ಇಂತಹ ಧ್ವನಿಸಮೂಹದಿಂದ ಅರ್ಥ ಹೊರಹೊಮ್ಮು ತ್ತದೆ. ಈ ಧ್ವನಿಸಮುದಾಯದಿಂದ ಹೊರಬರುವ ಅರ್ಥವನ್ನು ಕೇಳುಗ ಗ್ರಹಿಸಿ

ಅರ್ಥಮಾಡಿಕೊಳ್ಳುತ್ತಾನೆ. ಇವೆರಡು ಮಾತಾಡುವುದು ಮತ್ತು ಕೇಳಿ ಅರ್ಥಮಾಡಿಕೊಳ್ಳುವುದು ಭಾಷೆಯ ಬಾಹ್ಯಕ್ರಿಯೆಗಳು. ಈ ದೃಷ್ಟಿಯಿಂದ ಧ್ವನಿವಿಜ್ಞಾನ, ಮತ್ತು ಅರ್ಥವಿಜ್ಞಾನಗಳು ಭಾಷೆಯ ಬಾಹ್ಯ ವಿಚಾರಗಳ ಬೇರೆ ಬೇರೆ ಅಧ್ಯಯನ ವಿಭಾಗಗಳಾಗಿ ಕಾಣಿಸಿಕೊಳ್ಳುತ್ತವೆ. ಧ್ವನಿಗಳಿಗೆ ಅರ್ಥವಿಲ್ಲ. ಅವುಗಳ ಸಮುದಾಯದಿಂದಾದ ಶಬ್ದ ಮತ್ತು ರೂಪಗಳಿಗೆ ಅರ್ಥ ಉಂಟು. ಧ್ವನಿ ಮತ್ತು ಅರ್ಥ ವಿಚಾರಗಳ ಅಧ್ಯಯನಗಳು ಈಗ ಸ್ವತಂತ್ರವಾದ ಹಾಗೂ ಭಿನ್ನವಾದ ಅಧ್ಯಯನ ವಿಚಾರಗಳಾಗಿ ಪ್ರಚಾರದಲ್ಲಿವೆ. ಅತ್ಯಂತ ಸೂಕ್ಷ್ಮವಾದ ಅರ್ಥವಿಚಾರದ ಅಧ್ಯಯನ ಅಸ್ಪಷ್ಟತೆ ಹಾಗೂ ಅನಿಶ್ಚಿತವಾಗಿ ಮೊದಲಿನಿಂದಲೂ ಉಳಿದುಕೊಂಡು ಬಂದಿರುವ ಕಾರಣದಿಂದ ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸಕಾರ್ಯಗಳು ನಡೆಯಲು ಸಾಧ್ಯವಾಗಲಿಲ್ಲ. ಈ ದೃಷ್ಟಿಯಿಂದ ಇದು ಇನ್ನೂ ಶೈಶವಾವಸ್ಥೆಯಲ್ಲಿಯೇ ಉಳಿದುಕೊಂಡಿದೆ.

ಅರ್ಥವಿಜ್ಞಾನದಲ್ಲಿ ಅರ್ಥವನ್ನು ಮುಖ್ಯವಾಗಿ ಮೂರು ವಿಧಾನಗಳಲ್ಲಿ ವಿವೇಚಿಸಬಹುದು. ಯಾವುದಾದರೊಂದು ಕಾಲದ, ಯಾವುದಾದರೊಂದು, ಸ್ಥಳದ, ಯಾವುದಾದರೊಬ್ಬ ವ್ಯಕ್ತಿಯ ಭಾಷೆಯ ಅರ್ಥವನ್ನು ವಿವರಣಾತ್ಮಕವಾಗಿ ವಿವೇಚಿಸಬಹುದಾದುದನ್ನು ವಿವರಣಾತ್ಮಕ ಅರ್ಥವಿಜ್ಞಾನ (Descriptive semantics) ಎಂದೂ, ಯಾವುದಾದರೊಂದು ಭಾಷೆಯ ಅರ್ಥ ಅದು ಕಾಲಕಾಲಕ್ಕೆ ಪರಿವರ್ತನೆಗೊಂಡು ಬೆಳೆದು ಬಂದ ವಿಚಾರವನ್ನು ಐತಿಹಾಸಿಕವಾಗಿ ವಿವೇಚಿಸಬಹುದಾದುದನ್ನು ಐತಿಹಾಸಿಕ ಅರ್ಥವಿಜ್ಞಾನ (Historical semantics) ಎಂದೂ, ಯಾವುದಾದರೂ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಷೆಗಳ ಅರ್ಥವನ್ನು ತೌಲನಿಕವಾಗಿ ವಿವೇಚಿಸಬಹುದಾದುದನ್ನು ತೌಲನಿಕ ಅರ್ಥವಿಜ್ಞಾನ (Comparative semantics) ಎಂದೂ ಕರೆಯುವರು. ಭಾಷೆಯ ಶಬ್ದಗಳು ಮತ್ತು ವಾಕ್ಯಗಳು ಕೊಡುವ ಅರ್ಥವನ್ನು ಪರಿಸರ ಹಾಗೂ ಪರಿಸ್ಥಿತಿಗೆ ಅನುಗುಣವಾಗಿ ವಿವರಣಾತ್ಮಕವಾಗಿಯೂ ತೌಲನಿಕವಾಗಿಯೂ ವಿವೇಚಸಬೇಕಾದುದು ಅತ್ಯಗತ್ಯ, ಇಲ್ಲದಿದ್ದರೆ ಅರ್ಥದ ಅಧ್ಯಯನ ಪೂರ್ಣ ಅಧ್ಯಯನವೆನಿಸಿಕೊಳ್ಳುವುದಿಲ್ಲ.

ಅರ್ಥವಿಜ್ಞಾನ ಎಂದರೇನು ? ಎಂಬುದನ್ನು ಬೇರೆಬೇರೆ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿಕೊಂಡಿದ್ದಾರೆ. ಅರ್ಥದ ವೈಜ್ಞಾನಿಕ ಅಧ್ಯಯನ ಅರ್ಥವಿಜ್ಞಾನವೆನಿಸಿಕೊಳ್ಳುತ್ತದೆ. ಈ ಕಾರಣದಿಂದ ಕೆಲವರು ಅರ್ಥವಿಜ್ಞಾನವನ್ನು Semantics is that aspect of linguistics which deals with relation between referent (object) and referred (named) ಎನ್ನುವರು. ಚಾರ್ಲ್ಸ್ ಮೋರಿಸ್ ಎಂಬಾತನು ಅರ್ಥವಿಜ್ಞಾನ ಚಿಹ್ನೆ ಅಥವಾ ಸಂಕೇತ ಮತ್ತು ವಸ್ತು ಇವುಗಳ ನಡುವಿನ ಸಂಬಂಧವನ್ನು ತಿಳಿಸುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ Semantics will study the relation of signs and objects ಎಂದು ವಿವರಿಸಿಕೊಂಡಿದ್ದಾನೆ. ಸಂಕೇತ ಮತ್ತು ವಸ್ತುಗಳ ನಡುವೆ ಅವುಗಳ

ಅರ್ಥ ಅವುಗಳ ಸಂಬಂಧವನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ಭಾಷೆಯ ಶಬ್ದ, ರೂಪ, ವಾಕ್ಯ, ವಾಕ್ಯಾಂಶಗಳು ಸಂದರ್ಭ ಹಾಗೂ ಸನ್ನಿವೇಶಕ್ಕೆ ತಕ್ಕಂತೆ ಕೊಡುವ ಅರ್ಥ ವನ್ನು ವೈಜ್ಞಾನಿಕವಾಗಿ ವಿವೇಚಿಸಬಹುದಾದುದನ್ನು ಅರ್ಥವಿಜ್ಞಾನ ಎನ್ನುವರು.

ಪ್ರಾಚೀನ ಭಾರತದಲ್ಲಿ ಅರ್ಥವನ್ನು ಕುರಿತ ಮೊತ್ತಮೊದಲ ವಿವರಣೆ ಬ್ರಾಹ್ಮಣ ಗ್ರಂಥದಲ್ಲಿ ದೊರೆಯುವುದು. ಇದರ ಅನಂತರ ಯಾಸ್ಕ ಮಹಾ ಮುನಿಯ ನಿರುಕ್ತ ಎಂಬ ಗ್ರಂಥದಲ್ಲಿ ಅರ್ಥವಿಚಾರವನ್ನು ಕುರಿತ ಉಲ್ಲೇಖ ದೊರೆಯುತ್ತದೆ. ಇದು ಅರ್ಥವನ್ನು ಕುರಿತ ಹೆಚ್ಚು ಪ್ರಾಚೀನತಮ ಉಲ್ಲೇಖ. ಪ್ರಾಚೀನ ಭಾರತದಲ್ಲಿ ಯಾಸ್ಕ ಮಹಾಮುನಿಯ ಅನಂತರ ವ್ಯಾಕರಣಶಾಸ್ತ್ರ, ನ್ಯಾಯಶಾಸ್ತ್ರ, ಮೀಮಾಂಸೆ, ಕಾವ್ಯಶಾಸ್ತ್ರ ಮುಂತಾದ ಗ್ರಂಥಗಳಲ್ಲಿ ಅರ್ಥವನ್ನು ವಿವಿಧ ರೀತಿಯಲ್ಲಿ ಬೇರೆಬೇರೆ ವಿದ್ವಾಂಸರು ವಿವೇಚಿಸಿರುವ ಉದಾಹರಣೆಗಳಿವೆ. ಪ್ರಾಚೀನ ಯೂರೋಪಿನಲ್ಲಿ ಪ್ಲೆಟೋಮಹಾಶಯನು ಮೊತ್ತಮೊದಲಿಗೆ ಅರ್ಥ ವಿಚಾರವನ್ನು ಕುರಿತು ವಿವೇಚಿಸಲು ಪ್ರಯತ್ನ ನಡೆಸಿದನು. ಈ ಪ್ಲೇಟೊ ಮಹಾಶಯನು ಶಬ್ದ ಮತ್ತು ಅರ್ಥ ವಿಚಾರಗಳಿಗೆ ಇರುವ ಸಂಬಂಧವನ್ನು ಹೆಚ್ಚು ಸೂಕ್ಷ್ಮವಾಗಿ ವಿಚಾರ ಮಾಡಲು ಪ್ರಯತ್ನಿಸಿದ್ದಾನೆ. ಅನಂತರ ಆಧುನಿಕ ಕಾಲದಲ್ಲಿ ಬೇರೆಬೇರೆ ನಿಘಂಟುಕಾರರು ಅರ್ಥವನ್ನು ವಿವಿಧ ರೀತಿಯಲ್ಲಿ ವಿವೇಚಿಸುವ ಪ್ರಯತ್ನ ಮಾಡಿದರು. ಇವರ ಈ ಪ್ರಯತ್ನದ ಫಲವಾಗಿ ಅರ್ಥದ ವೈಜ್ಞಾನಿಕ ಅಧ್ಯಯನಕ್ಕೆ ನಾಂದಿಯಾಯಿತು. ಇಂದು ಅರ್ಥವಿಜ್ಞಾನ ಕ್ಷೇತ್ರದಲ್ಲಿ ರೀಜಿಂಗ್‌ನ ಸೇವೆ ತುಂಬ ಉಪ ಯುಕ್ತವಾದದ್ದು, ಲ್ಯಾಟಿನ್ ಭಾಷೆಯ ವಿಚಾರವಾಗಿ ಕೊಟ್ಟಿರುವ ಇವನ ವಾಖ್ಯಾನ ಅರ್ಥವಿಜ್ಞಾನದ ಅಧ್ಯಯನಕ್ಕೆ ಅರ್ಥಪೂರ್ಣವಾದುದಾಗಿದೆ. ಇವನ ಅನಂತರ ಇವನ ಶಿಷ್ಯ ಎಂ. ಬೆನರಿ ಎಂಬಾತನು ಇವನ ಅರ್ಥವಿಚಾರವನ್ನು ಮುಂದುವರಿಸಿ ಅರ್ಥವಿಜ್ಞಾನದ ಬೆಳವಣಿಗೆಗೆ ದಾರಿಮಾಡಿಕೊಟ್ಟನು. ಸುಮಾರು ಹದಿನಾರು ಮತ್ತು ಹದಿನೆಂಟನೇ ಶತಮಾನಗಳವರೆಗೆ ಅರ್ಥದ ವೈಜ್ಞಾನಿಕ ಅಧ್ಯಯನವೇನೂ ಅಷ್ಟಾಗಿ ನಡೆಯದಿದ್ದರೂ ಪಾಲ್, ಫೋರ್ಸ್ಟ್‌ಗೇಟ್, ಬ್ರೂಗ್‌ಮಾನ್, ಬೆಚ್‌ಟಿಲ್, ಸ್ವೀಟ್ ಮುಂತಾದವರು ಅರ್ಥವಿಜ್ಞಾನದ ಪ್ರಗತಿಗೆ ಶ್ರಮಿಸಿದವರಲ್ಲಿ ಮುಖ್ಯರೆನಿಸಿ ಕೊಂಡಿದ್ದಾರೆ.

ಫ್ರೆಂಚ್ ತತ್ವಜ್ಞಾನಿ ಮೈಕೇಲ್ ಬ್ರೆಲ್ ಎಂಬಾತನು 1883ರಲ್ಲಿ ಭಾಷೆಯ ಬೌದ್ಧಿಕನಿಯಮ The intellectual laws of language ಎಂಬ ಲೇಖನವನ್ನು ಬರೆದು ಪ್ರಕಟಿಸಿದನು. ಇದರಲ್ಲಿ ಇವನು ಅರ್ಥವನ್ನು ವಿವೇಚಿಸದೆ ಭಾಷೆಯ ಧ್ವನಿ, ಶಬ್ದ, ರೂಪ, ವಾಕ್ಯ ಮುಂತಾದುವುಗಳ ಅಧ್ಯಯನ ಭಾಷೆಯ ಪೂರ್ಣ ಅಧ್ಯಯನವೆನಿಸಿಕೊಳ್ಳುವುದಿಲ್ಲ, ಆದುದರಿಂದ ಇವುಗಳ ಜೊತೆಗೆ ಅರ್ಥ ವಿವೇಚಿಸಬೇಕಾದುದು ಅತ್ಯಗತ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದುದರ ಫಲವಾಗಿ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಅರ್ಥವಿಜ್ಞಾನವೆಂಬ ಒಂದು ಹೊಸ ಶಾಖೆಯ

ಸೇರ್ಪಡೆಗೆ ಅವಕಾಶ ದೊರೆಯಿತು. ಅರ್ಥವಿಜ್ಞಾನ ಇಂದು ಒಂದು ಸ್ವತಂತ್ರವಾದ ವಿಜ್ಞಾನವಾಗಿ ರೂಪುಗೊಳ್ಳಲು ಶ್ರಮಿಸಿದವರಲ್ಲಿ ಬ್ರೆಲ್ ಮತ್ತು ಅವನ ಶಿಷ್ಯರು ಮುಖ್ಯರೆನಿಸಿಕೊಂಡಿದ್ದಾರೆ. ಬ್ರೆಲ್ ಮಹಾಶಯನು ಅರ್ಥವಿಚಾರವನ್ನು ಕುರಿತು Essaide Semantique ಎಂಬ ಗ್ರಂಥವನ್ನು ಬರೆದು 1887ರಲ್ಲಿ ಪ್ರಕಟಿಸಿದನು. ಇದು ಇಂಗ್ಲಿಷಿನಲ್ಲಿ Semantics—Studies in the science of meaning ಎಂಬ ಹೆಸರಿನಲ್ಲಿ ಹೊರಬಂದಿತು. 20ನೇ ಶತಮಾನದಲ್ಲಿ ಅರ್ಥದ ಬಗೆಗೆ ಸಮರ್ಪಕವಾದ ವಿವರಣೆಯನ್ನು ನೀಡಿದ ಭಾಷಾವಿಜ್ಞಾನಿಗಳಲ್ಲಿ ಓಗ್‌ಡೆನ್ (Ogden) ಮತ್ತು ರಿಚರ್ಡ್ಸ್ (Richards) ಎಂಬುವವರು ಅತಿ ಮುಖ್ಯರು. ಇವರು ತಮ್ಮ ಗ್ರಂಥ Meaning of Meaning ಎಂಬುದರಲ್ಲಿ ಅರ್ಥವಿಚಾರವನ್ನು ಸ್ಪಷ್ಟವಾಗಿ ವಿವರಿಸಿ ತೋರಿಸಿದ್ದಾರೆ. ಇವರ ಈ ಗ್ರಂಥ ಇನ್ನೂ ಹೆಚ್ಚು ಉಪಯುಕ್ತವಾದುದಾಗಿ ಕಾಣಿಸಿಕೊಳ್ಳುತ್ತಿದೆ.

ಅರ್ಥ ವಿಚಾರವನ್ನು ಬೇರೆಬೇರೆ ಆಧುನಿಕ ಭಾಷಾವಿಜ್ಞಾನಿಗಳು, ತತ್ವಜ್ಞಾನಿಗಳು, ತರ್ಕಶಾಸ್ತ್ರಜ್ಞರು, ಮನೋವಿಜ್ಞಾನಿಗಳು ಮುಂತಾದವರು ವಿವಿಧ ರೀತಿಯಲ್ಲಿ ವಿವರಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇವರಲ್ಲಿ ಲಿಯೊನಾರ್ಡೊ ಬ್ಲೂಮ್‌ಫೀಲ್ಡ್ ಎಂಬಾತನು ಪ್ರಚೋದನೆ ಮತ್ತು ಪ್ರತಿಕ್ರಿಯೆಗಳ ನಡುವಿನ ಸಂಬಂಧವನ್ನು ಪ್ರತಿಪಾದಿಸುತ್ತಾ ಅರ್ಥವಿಚಾರವನ್ನು ತುಂಬ ಸ್ವಾರಸ್ಯಕರವಾಗಿ ವಿವರಿಸಿ ತೋರಿಸಿದ್ದರೆ, ಎರ್ಡ್‌ಮನ್ ಎಂಬಾತನು ಒಂದು ಭಾಷಾರೂಪ ಯಾವಾಗಲೂ ಒಂದೇ ಅರ್ಥವನ್ನು ಹೊಂದಿರಬೇಕೆಂಬ ನಿಯಮವೇನೂ ಇಲ್ಲ. ಅದು ಅನೇಕ ಅರ್ಥಗಳನ್ನು ಹೊಂದಿರಬಹುದು ಎಂದು ಪ್ರತಿಪಾದಿಸಿದನು. ಐ.ಎ. ರಿಚರ್ಡ್ಸ್ ಎಂಬುವವನು ಪ್ರಜ್ಞೆ (sense) ತಾನ (tone) ಭಾವನೆ (feeling) ಉದ್ದೇಶ (intention) ಇವುಗಳ ಮೊತ್ತವನ್ನು ಅರ್ಥ ಎಂದು ವಿವರಿಸಿಕೊಂಡನು. ಇದೇ ರೀತಿ ಫರ್ಡಿನಾಂಡ್ ಡಿ. ಸಸೂರ್ ಎಂಬುವವನು ಅರ್ಥವನ್ನು Langue ಮತ್ತು Parole ಎಂಬುವುಗಳ ಸಹಾಯದಿಂದಲೂ, ರೂಪಾಂತರ ವ್ಯಾಕರಣಕಾರ ಚೊಮ್‌ಸ್ಕಿಯು ಅರ್ಥವನ್ನು ಸಾಮರ್ಥ್ಯ (competence) ಮತ್ತು ಆಚರಣೆ (performance) ಎಂಬ ಅಂಶಗಳ ಸಹಾಯದಿಂದಲೂ, ನಿಘಂಟುಕಾರರು ವ್ಯವಸ್ಥೆ (system) ಮತ್ತು ಅನ್ವಯ (application) ಎಂಬವುಗಳ ಸಹಾಯದಿಂದಲೂ ವಿವರಿಸಿಕೊಳ್ಳತೊಡಗಿದರು.

ಅರ್ಥವಿಚಾರವನ್ನು ಹೊಸಹೊಸ ವಿಧಾನಗಳಲ್ಲಿ ವಿವೇಚಿಸುತ್ತಾ ಹೋದಂತೆಲ್ಲಾ ಇದರ ಫಲವಾಗಿ ಸಾಂಪ್ರದಾಯಿಕ ಅರ್ಥವಿಜ್ಞಾನ (Traditional semantics) ಸಂರಚನಾತ್ಮಕ ಅರ್ಥವಿಜ್ಞಾನ (Structural semantics) ಉತ್ಪಾದನಾತ್ಮಕ ಅರ್ಥವಿಜ್ಞಾನ (Generative semantics) ಸಾಂದರ್ಭಿಕ ಅರ್ಥವಿಜ್ಞಾನ (Contextual semantics) ಎಂಬ ಹೊಸಹೊಸ ಶಾಖೆಗಳು ಹೊರಬಂದವು. ಸಾಂಪ್ರದಾಯಿಕವಾಗಿ ಅರ್ಥವನ್ನು ವಿವೇಚಿಸುವ ವಿಧಾನವು ಸಾಂಪ್ರದಾಯಿಕ ಅರ್ಥವಿಜ್ಞಾನವೆನಿಸಿ

ಕೊಂಡರೆ, ಭಾಷೆಯ ರಚನಾತ್ಮಕ ಅರ್ಥವನ್ನು ವಿವೇಚಿಸುವ ವಿಧಾನವು ಸಂರಚನಾತ್ಮಕ ಅರ್ಥವಿಜ್ಞಾನವೆನಿಸಿಕೊಂಡಿತು. ಹಾಗೆಯೇ ಸಾಂದರ್ಭಿಕ ಅರ್ಥವನ್ನು ವಿವೇಚಿಸುವ ವಿಧಾನವು ಸಾಂದರ್ಭಿಕಾರ್ಥವಿಜ್ಞಾನವೆನಿಸಿಕೊಂಡರೆ ಭಾಷೆಯ ವಿವಿಧ ಅಂಶಗಳ ಅರ್ಥವನ್ನು ರೂಪಾಂತರಣ ಮತ್ತು ಉತ್ಪಾದನಾತ್ಮಕವಾಗಿ ವಿವೇಚಿಸುವ ವಿಧಾನವು ಉತ್ಪಾದನಾತ್ಮಕ ಅರ್ಥವಿಜ್ಞಾನವೆನಿಸಿಕೊಂಡಿತು. ಅರ್ಥವನ್ನು ಹೀಗೆ ಹೊಸ ಹೊಸ ವಿಧಾನಗಳಲ್ಲಿ ವಿವೇಚಿಸುವುದರಿಂದ ಹೊಸ ಹೊಸ ಅಧ್ಯಯನ ವಿಭಾಗಗಳು ಹೊರ ಬರಲು ಸಾಧ್ಯವಾಯಿತಲ್ಲದೆ ಇದರಿಂದ ಅರ್ಥದ ವೈಜ್ಞಾನಿಕ ಅಧ್ಯಯನಕ್ಕೆ ನೆರವಾಗುವ ಹೊಸ ಹೊಸ ಸಿದ್ಧಾಂತಗಳನ್ನೊಳಗೊಂಡ ಬೇರೆ ಬೇರೆ ಗ್ರಂಥಗಳು ಹೊರಬರಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಕಾರ್‌ನೈಪ್ (Carnap) ಎಂಬಾತನು Introduction to semantics ಎಂಬ ಗ್ರಂಥವನ್ನು, ಗ್ರಾಸ್ಸೆರಿ (Grasserie) ಎಂಬಾತನು Essaide une Semantique integral ಎಂಬ ಗ್ರಂಥವನ್ನು, ಪೋಸ್ಟ್‌ಗೇಟ್ (Postgate) ಎಂಬಾತನು History of meaning ಎಂಬ ಗ್ರಂಥವನ್ನು, ಅನ್‌ಶೆನ್ (Anshen) ಎಂಬಾತನು Language—an Enquiry into its meaning and function ಎಂಬ ಗ್ರಂಥವನ್ನು, ಲಿನ್‌ಸ್ಕಿ (Linsky) ಎಂಬಾತನು Semantics ಎಂಬ ಗ್ರಂಥವನ್ನು, ಉಲ್‌ಮನ್ (Ullmann) ಎಂಬಾತನು Principle of semantics ಎಂಬ ಗ್ರಂಥವನ್ನು ಹೊರತಂದಿದ್ದಾರೆ.

ವ್ಯುತ್ಪತ್ತಿಶಾಸ್ತ್ರ ಮತ್ತು ಅರ್ಥವಿಜ್ಞಾನಗಳು ಪರಸ್ಪರ ಹೆಚ್ಚು ಸಂಬಂಧ ಹೊಂದಿರುವ ಬೇರೆಬೇರೆ ಶಾಸ್ತ್ರಗಳಾಗಿವೆ. ಕೆಲವು ವಿದ್ವಾಂಸರು ಇವು ಒಂದೇ ಬಗೆಯ ಅಧ್ಯಯನಕ್ಕೆ ಸಂಬಂಧಿಸಿದ ಶಾಸ್ತ್ರಗಳಾಗಿವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವ್ಯುತ್ಪತ್ತಿಶಾಸ್ತ್ರ ಶಬ್ದಗಳು ಕಾಲಕಾಲಕ್ಕೆ ಪರಿವರ್ತನೆಗೊಂಡು ಬೆಳೆದು ಬಂದ ಚರಿತ್ರೆಯನ್ನು ತಿಳಿಸುತ್ತದೆ. ಶಬ್ದಗಳ ಜೊತೆಯಲ್ಲಿ ಅವುಗಳ ಅರ್ಥವೂ ಕಾಲಕಾಲಕ್ಕೆ ಪರಿವರ್ತನೆಗೊಂಡು ಬೆಳೆದುಬಂದಿರುತ್ತದೆ. ಅಂತಹ ಅರ್ಥವಿಚಾರವನ್ನು ವ್ಯುತ್ಪತ್ತಿ ಶಾಸ್ತ್ರ ಮತ್ತು ಅರ್ಥವಿಜ್ಞಾನ ಎರಡರಲ್ಲಿಯೂ ಬೇರೆ ಬೇರೆ ವಿಧಾನಗಳಲ್ಲಿ ವಿವೇಚಿಸಬಹುದಾದ ಅವಕಾಶಗಳಿವೆ. ಈ ಕಾರಣದಿಂದ ಕೆಲವು ವಿದ್ವಾಂಸರು ವ್ಯುತ್ಪತ್ತಿಶಾಸ್ತ್ರ ಮತ್ತು ಅರ್ಥವಿಜ್ಞಾನಗಳು ಬೇರೆ ಬೇರೆ ವಿಜ್ಞಾನಗಳು ಎಂದು ಅಭಿಪ್ರಾಯ ವ್ಯಕ್ತಪಡಿಸುವರು. ವ್ಯುತ್ಪತ್ತಿಶಾಸ್ತ್ರದಲ್ಲಿ ಶಬ್ದ ಪರಿವರ್ತನೆ, ಶಬ್ದ ಮತ್ತು ಅರ್ಥಗಳ ಸಂಬಂಧ, ಅರ್ಥದ ವ್ಯಾಪಕತೆ, ಅರ್ಥದ ವೈವಿಧ್ಯ ಮುಂತಾದುವುಗಳನ್ನು ವಿಶೇಷವಾಗಿ ಗಮನಿಸಲಾಗುತ್ತದೆ ಮಾತ್ರವಲ್ಲದೆ ಪರ್ಯಾಯ ಶಬ್ದಗಳು, ಭಿನ್ನಾರ್ಥಕ ಶಬ್ದಗಳು, ಅನೇಕಾರ್ಥಕ ಶಬ್ದಗಳು, ವಿರೋಧಾರ್ಥಕ ಶಬ್ದಗಳು ಮುಂತಾದುವುಗಳನ್ನು ಅರ್ಥವಿಜ್ಞಾನದಲ್ಲಿ ವಿಶೇಷವಾಗಿ ಗಮನಿಸಬಹುದು. ಈ ದೃಷ್ಟಿಯಿಂದ ಕೆಲವರು ಇವುಗಳನ್ನು ಬೇರೆ ಬೇರೆ ಶಾಸ್ತ್ರಗಳನ್ನಾಗಿ ಪರಿಗಣಿಸಿಕೊಳ್ಳುವರು. ಈ ವಿಚಾರವಾಗಿ ವಿದ್ವಾಂಸರಲ್ಲಿ ಸಾಕಷ್ಟು ಮತಭೇದಗಳಿವೆ. ಆದರೂ ಈ ದಿಸೆಯಲ್ಲಿ

ಆಳವಾದ ಸಂಶೋಧನೆ ನಡೆಯದ ಹೊರತು ಇವುಗಳ ಬಗ್ಗೆ ಯಾವುದನ್ನು ಖಚಿತವಾಗಿ ಹೇಳಲು ಬರುವುದಿಲ್ಲ.

ಭಾಷೆಯ ಪ್ರತಿಯೊಂದು ಶಬ್ದವೂ ತನ್ನದೇ ಆದ ಅರ್ಥವನ್ನು ಹೊಂದಿರುತ್ತದೆ. ಅಂತೆಯೇ ಶಬ್ದಗಳ ಅರ್ಥದ ವ್ಯಾಪ್ತಿಯೂ ಕೂಡ ಬೇರೆ ಬೇರೆಯಾಗಿರುತ್ತದೆ. ಶಬ್ದ ಹೊಂದಿರುವ ಅರ್ಥದ ವ್ಯಾಪ್ತಿಯನ್ನು Semantic range ಎನ್ನುವರು. ಶಬ್ದದ ಅರ್ಥ ಸ್ಪಷ್ಟ ಹಾಗೂ ಅಸ್ಪಷ್ಟ ಗ್ರಹಿಕೆಯಿಂದ ಮುಕ್ತವಾಗಿದ್ದರೂ ಕೆಲವು ವೇಳೆ ಅದರ ಸೀಮಾರೇಖೆ ನಿರ್ದಿಷ್ಟವಾದ ಗಡಿಯನ್ನು ಹೊಂದಿರುವುದಿಲ್ಲ ಎಂಬುದು ಸ್ಟೀಫನ್ ಉಲ್‌ಮನ್ ಎಂಬಾತನ ಅಭಿಪ್ರಾಯ. ಉದಾಹರಣೆಗೆ ಕೂಲಿ, ಸಂಬಳ ಎಂಬ ಶಬ್ದಗಳು ದುಡಿತಕ್ಕಾಗಿ ಪಡೆಯುವ ಸಂಭಾವನೆ ಎಂಬ ಅರ್ಥವನ್ನು ಪಡೆದುಕೊಂಡಿವೆಯಾದರೂ ಇವುಗಳ ಅರ್ಥದ ವ್ಯಾಪ್ತಿ ಭಿನ್ನವಾಗಿದೆ. ಕೂಲಿ ಒಂದು ದಿನಕ್ಕೆ ಅಥವಾ ದಿನದ ಕೆಲವು ಸಮಯಕ್ಕೆ ಪಡೆಯುವ ಸಂಭಾವನೆಯಾದರೆ ಸಂಬಳ ಒಂದು ತಿಂಗಳ ಅಥವಾ ಒಂದು ವಾರದ ದುಡಿತಕ್ಕೆ ಪಡೆಯುವ ಸಂಭಾವನೆಯಾಗುತ್ತದೆ. ಈ ಬಗೆಯ ಅರ್ಥ ಕ್ಷೇತ್ರದ ಭಿನ್ನತೆಯನ್ನು ಕನ್ನಡದ ಕೂಳು, ಊಟ, ತಿನ್ನು, ಉಣ್ಣು ಇತ್ಯಾದಿ ಶಬ್ದಗಳಿಂದಲೂ ಗುರುತಿಸಿಕೊಳ್ಳಬಹುದು. ಇದೇ ರೀತಿ ಇಂಗ್ಲೀಷಿನ kill, murder, assassinate ಎಂಬ ಶಬ್ದಗಳ ಅರ್ಥಕ್ಷೇತ್ರದ ಭಿನ್ನತೆಯನ್ನು ಮೇಲಿನಂತೆಯೇ ಗುರುತಿಸಿ ತೋರಿಸಬಹುದು. Kill ಎಂಬುದು ಕೊಲ್ಲು ಎಂಬ ಅರ್ಥವನ್ನು, murder ಎಂಬುದು ನಿಶ್ಚಿತ ಕಾರಣಕ್ಕಾಗಿ ಕೊಲ್ಲು ಎಂಬ ಅರ್ಥವನ್ನು, assasinate ಎಂಬುದು ರಾಜಕೀಯ ವ್ಯಕ್ತಿಯ ಕೊಲೆಯನ್ನು ಸೂಚಿಸುತ್ತವೆ. ಶಬ್ದ ಹೀಗೆ ಅದು ಹೊಂದಿರುವ ಅರ್ಥದ ವ್ಯಾಪ್ತಿ ಶಬ್ದದಿಂದ ಶಬ್ದಕ್ಕೆ ಭಿನ್ನವಾಗಿರುತ್ತದೆ. ಇದು ಜಗತ್ತಿನ ಎಲ್ಲಾ ಭಾಷೆಗಳಲ್ಲಿಯೂ ಕಂಡುಬರುತ್ತದೆ.

ಉತ್ಪಾದನಾತ್ಮಕ ಅರ್ಥವಿಜ್ಞಾನಿಗಳು ಸಂಘಟನಾತ್ಮಕ ವಿಶ್ಲೇಷಣೆ (Componential Analysis) ಎಂಬುದನ್ನು ಅರ್ಥವಿಜ್ಞಾನ ಕ್ಷೇತ್ರಕ್ಕೆ ನೀಡಿದ ಮಹತ್ತರವಾದ ಕೊಡುಗೆಯಾಗಿ ನೀಡಿದ್ದಾರೆ. ಇದರ ಸಹಾಯದಿಂದ ಒಂದು ಶಬ್ದ ಪಡೆದಿರುವಅರ್ಥವನ್ನು ಹೆಚ್ಚು ಖಚಿತವಾಗಿ ಸಂದೇಹಕ್ಕೆ ಆಸ್ಪದವೆ ಇಲ್ಲದ ರೀತಿಯಲ್ಲಿ ಹೆಚ್ಚುವೈಜ್ಞಾನಿಕವಾಗಿ ವಿವರಿಸಿ ತೋರಿಸಬಹುದು. ಇದರಿಂದ ಒಂದು ಶಬ್ದದ ಅರ್ಥದ ಗ್ರಹಿಕೆಯ ಕಾರ್ಯ ಹೇಗೆ ನಡೆಯುತ್ತದೆ ಎಂಬುದನ್ನು ಕೆಲವು ಉದಾಹರಣೆಗಳ ಸಹಾಯದಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಕುರ್ಚಿ ಮತ್ತು ಟೇಬಲ್ ಎಂಬ ಶಬ್ದಗಳು ಅಮೂರ್ತವೂ, ಅಚೇತನವೂ, ಅಮಾನವಿಕವೂ, ನಿಶ್ಚಿತ ರೂಪಿಯೂ ಆಗಿರುತ್ತವೆ ಎಂಬುದನ್ನು ತಿಳಿಯಬಹುದಾಗಿದೆ. ಇದೇ ರೀತಿ ಕೆಲವು ಶಬ್ದಗಳು ಮೂರ್ತವೂ, ಚೇತನವೂ, ಮಾನವಿಕವೂ, ಅನಿಶ್ಚಿತರೂಪಿಯೂ ಆಗಿ ಗೋಚರಿಸಬಹುದು. ಇಂತಹ ವಿಚಾರ ಸರಣಿಯನ್ನು ಧನ (+) ಮತ್ತು ಋಣ (—) ಎಂಬ ಅಂಶಗಳ ಸಹಾಯದಿಂದ ಅರ್ಥ ವಿಚಾರವನ್ನು ವಿಶ್ಲೇಷಿಸಿ ವಿವರಿಸಿ ತೋರಿಸಬಹುದಾದ

ಅರ್ಥ ವಿಶ್ಲೇಷಣೆಯನ್ನೇ ಸಂಘಟನಾತ್ಮಕ ಅರ್ಥ ವಿಶ್ಲೇಷಣೆ ಎನ್ನುವರು. ಶಬ್ದ ಅಥವ ರೂಪಗಳ ಸಾಮಾನ್ಯ ಹಾಗೂ ಸಾಮಾನ್ಯವಲ್ಲದ ಗುಣಲಕ್ಷಣಗಳನ್ನು ಆಧರಿಸಿ ಧನ (+) ಮತ್ತು ಋಣ (—) ಎಂಬ ಅಂಶಗಳ ಸಹಾಯದಿಂದ ಅವು ಪಡೆದಿರುವ ಅರ್ಥವನ್ನು ಖಚಿತವಾಗಿ ಹೇಗೆ ವಿವರಿಸಿ ತೋರಿಸಬಹುದು ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು. ಗಂಡಸು, ಹುಡುಗ, ಮುದುಕ ಎಂಬ ಶಬ್ದಗಳಲ್ಲಿ ಪುಲ್ಲಿಂಗ ಸಮಾನವಾದ ಅಂಶವಾಗಿದೆ ಹೆಂಗಸು, ಹುಡುಗಿ, ಮುದುಕಿ ಎಂಬ ಶಬ್ದಗಳಲ್ಲಿ ಸ್ತ್ರೀಲಿಂಗ ಸಮಾನವಾದ ಅಂಶವಾಗಿದೆ. ಹುಡುಗ, ಹುಡುಗಿ, ಮಗು, ಕರು ಎಂಬ ಶಬ್ದಗಳಲ್ಲಿ ವಯಸ್ಸು ಸಾಮಾನ್ಯ ಅಂಶವಾಗಿದೆ. ಹೀಗೆ ಶಬ್ದಗಳಲ್ಲಿ ಕಂಡು ಬರುವ ಲಿಂಗ ಭಿನ್ನತೆ, ವಯಸ್ಸು ಭಿನ್ನತೆ ಇತ್ಯಾದಿಗಳು ಅರ್ಥ ವ್ಯತ್ಯಾಸಕ್ಕೆ ಕಾರಣವಾಗುತ್ತವೆ. ಹುಡುಗ, ಹುಡುಗಿ, ಮುದುಕ, ಮುದುಕಿ, ಮಗು ಮುಂತಾದ ರೂಪಗಳ ಅರ್ಥವನ್ನು ಅವುಗಳ ಧನ ಮತ್ತು ಋಣ ಅಂಶಗಳ ಸಹಾಯ ದಿಂದ ವಿವರಿಸಿ ತೋರಿಸಲು ಸಾಧ್ಯವಿದೆ. ಮಾನವಿಕ, ಚೇತನ, ಮತ್ತು ಲಿಂಗ ಇತ್ಯಾದಿ ಅಂಶಗಳು ಇವುಗಳಲ್ಲಿ ಸಮಾನ ಅಂಶಗಳಾಗಿವೆ. ಹೀಗೆ ಅರ್ಥವನ್ನು ನಾನಾ ಬಗೆಯಲ್ಲಿ ವಿಶ್ಲೇಷಿಸಿ ವಿವರಿಸಿಕೊಳ್ಳುವ ವಿಧಾನಗಳು ಜಗತ್ತಿನಾದ್ಯಂತ ಸಾಕಷ್ಟು ನಡೆಯುತ್ತಿವೆಯಾದರೂ ಈ ದಿಸೆಯಲ್ಲಿ ಇನ್ನು ಆಳವಾದ ಸಂಶೋಧನಾಕಾರ್ಯ ನಡೆಯಬೇಕಾಗಿದೆ.

ಜಗತ್ತಿನ ಪ್ರತಿಯೊಂದು ಭಾಷೆಯೂ ತನ್ನದೇ ಆದ ಶಬ್ದಕೋಶವನ್ನು ಸಂಪಾದಿಸಿಕೊಂಡಿರುತ್ತದೆ. ಕೆಲವು ಭಾಷೆಗಳಲ್ಲಿ ಶಬ್ದಗಳ ಸಂಖ್ಯೆ ಹೆಚ್ಚಿರಬಹುದು, ಮತ್ತೆ ಕೆಲವು ಭಾಷೆಗಳಲ್ಲಿ ಶಬ್ದಗಳ ಸಂಖ್ಯೆ ಕಡಿಮೆ ಇರಬಹುದು. ಇವು ಆಯಾ ಭಾಷೆಯ ಜಾಯಮಾನಕ್ಕೆ ತಕ್ಕಂತೆ ರೂಪುಗೊಂಡಿರುತ್ತವೆ. ಹೀಗೆ ಕಂಡುಬರುವ ಶಬ್ದಗಳನ್ನು ಅವುಗಳ ಅರ್ಥವನ್ನು ಆಧರಿಸಿ ಬೇರೆ ಬೇರೆ ವರ್ಗಗಳಲ್ಲಿ ವರ್ಗೀಕರಿಸಿ ಕೊಳ್ಳಬಹುದು.

ಭಾಷೆಯ ಕೆಲವು ಶಬ್ದಗಳು ಒಂದೊಂದೇ ಅರ್ಥ ಹೊಂದಿದ್ದರೆ, ಮತ್ತೆ ಕೆಲವು ಶಬ್ದಗಳು ಎರಡು ಅಥವಾ ಎರಡಕ್ಕಿಂತ ಹೆಚ್ಚು ಅರ್ಥವನ್ನು ಹೊಂದಿರುತ್ತವೆ. ಯಾವ ಶಬ್ದಗಳು ಒಂದೊಂದೇ ಅರ್ಥವನ್ನು ಹೊಂದಿರುತ್ತವೆಯೋ ಅಂತಹ ಶಬ್ದ ಗಳನ್ನು ಏಕಾರ್ಥಕ ಶಬ್ದಗಳೆಂದೂ, ಯಾವ ಶಬ್ದಗಳು ಎರಡೆರಡು ಅರ್ಥವನ್ನು ಹೊಂದಿರುತ್ತವೆಯೋ ಅಂತಹ ಶಬ್ದಗಳನ್ನು ದ್ವಂದ್ವಾರ್ಥಕ ಶಬ್ದಗಳೆಂದೂ, ಯಾವ ಶಬ್ದಗಳನು ಎರಡಕ್ಕಿಂತ ಹೆಚ್ಚು ಅರ್ಥವನ್ನು ಹೊಂದಿರುತ್ತವೆಯೋ ಅಂತಹ ಶಬ್ದಗಳನ್ನು ಅನೇಕಾರ್ಥಕ ಶಬ್ದಗಳೆಂದೂ, ಅಂತೆಯೇ ಸಮಾನ ಅರ್ಥಹೊಂದಿರುವ ಶಬ್ದಗಳನ್ನು ಸಮಾನಾರ್ಥಕ ಶಬ್ದಗಳೆಂದೂ, ಬೇರೆ ಬೇರೆ ಅರ್ಥ ಹೊಂದಿರುವ ಶಬ್ದ ಗಳನ್ನು ಭಿನ್ನಾರ್ಥಕ ಶಬ್ದಗಳೆಂದೂ, ವಿರೋಧ ಅರ್ಥ ಹೊಂದಿರುವ ಶಬ್ದಗಳನ್ನು ವಿರೋಧಾರ್ಥಕ ಶಬ್ದಗಳು ಎಂದೂ, ವಿಶೇಷಾರ್ಥ ಹೊಂದಿರುವ ಶಬ್ದಗಳನ್ನು ವಿಶೇಷಾರ್ಥಕ ಶಬ್ದಗಳೆಂದೂ ಹೆಸರಿಸಿಕೊಳ್ಳಬಹುದು.

ಶಬ್ದಗಳು ಎಲ್ಲಾ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿಯೂ ಎಲ್ಲಾ ಪರಿಸರ ಹಾಗೂ ಪರಿಸ್ಥಿತಿಗಳಲ್ಲಿಯೂ ಒಂದೇ ಬಗೆಯ ಅರ್ಥವನ್ನು ಹೊಂದಿರಲಾರವು. ಅವುಗಳ ಅರ್ಥ ಸಂದರ್ಭ, ಸನ್ನಿವೇಶ, ಪರಿಸರ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗುತ್ತಿರುತ್ತದೆ. ಈ ಕಾರಣದಿಂದಲೇ ಶಬ್ದಗಳ ಅರ್ಥದಲ್ಲಿ ವೈವಿಧ್ಯ ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ಶಬ್ದವಿಚಾರವನ್ನು ಶಬ್ದವಿಜ್ಞಾನದಲ್ಲಿ ವಿವೇಚಿಸುವಂತೆ ಅವುಗಳ ಅರ್ಥವನ್ನು ಅರ್ಥವಿಜ್ಞಾನದಲ್ಲಿ ಪ್ರತ್ಯೇಕವಾಗಿ ವಿವೇಚಿಸಬಹುದು. ಆದರೆ ಅರ್ಥವು ಪರಿಸರ, ಪರಿಸ್ಥಿತಿ, ಸಂದರ್ಭ ಹಾಗೂ ಸನ್ನಿವೇಶಗಳಿಗೆ ಅನುಗುಣವಾಗಿ ಬದಲಾಗುವುದನ್ನು ಈ ಎರಡು ಬಗೆಯ ವಿಜ್ಞಾನಗಳಲ್ಲಿಯೂ ವಿವರಿಸಿ ತೋರಿಸಬಹುದು.

(1) ವಾಚ್ಯಾರ್ಥ (Denotative meaning) : ಸಮಾಜದಲ್ಲಿ ಪರಂಪರಾಗತವಾಗಿ ಬಳಕೆಗೆ ಬಂದಿರುವ ನೀರು, ಗಾಳಿ, ಟೇಬಲ್, ಕುರ್ಚಿ, ಕುದುರೆ, ಕಲ್ಲು, ಮಣ್ಣು ಚಿಕ್ಕದು, ದೊಡ್ಡದು, ಹೊಸದು, ಬೆಂಗಳೂರು, ಮೈಸೂರು ಇತ್ಯಾದಿ ಶಬ್ದಗಳನ್ನು ಕೇಳಿದ ತಕ್ಷಣವೇ ನಮಗೆ ಅವುಗಳ ನೇರವಾದ ಅರ್ಥ ತಿಳಿದುಬರುತ್ತದೆ. ಈ ಬಗೆಯ ನೇರ ಅರ್ಥ (direct meaning) ವನ್ನೇ ವಾಚ್ಯಾರ್ಥ ಎನ್ನುವರು. ಈ ಬಗೆಯ ಸಾಂಕೇತಿಕ ಅರ್ಥವನ್ನು ತಿಳಿಸುವ ಶಬ್ದಗಳ ಶಕ್ತಿಯನ್ನು ಅಭಿಧಾಶಕ್ತಿ ಎಂತಲೂ ಕರೆಯುವರು. ಇಂತಹ ಶಬ್ದಶಕ್ತಿಯ ಸಹಾಯದಿಂದ ತಿಳಿದುಬರುವ ಅರ್ಥವನ್ನು ಸಂದರ್ಭಕ್ಕೆ ತಕ್ಕಂತೆ ವಿಧೇಯಾರ್ಥ, ವಾಚ್ಯಾರ್ಥ, ಕೋಶಾರ್ಥ (lexical meaning) ಮುಖ್ಯಾರ್ಥ (main meaning) ಮೂಲಾರ್ಥ (basic meaning) ನೇರಾರ್ಥ ಸಂಕೇತಾರ್ಥ (symbolic meaing) ಸಾಮಾನ್ಯ ಅರ್ಥ (general meaning) ಇತ್ಯಾದಿ ಹೆಸರುಗಳಿಂದ ಕರೆದುಕೊಳ್ಳುವರು. ವಾಚ್ಯಾರ್ಥ ಸಾಮಾನ್ಯವಾಗಿ ರೂಢಿಗತವಾದ ಅರ್ಥ. ಇದು ಬದಲಾಗುವುದು ಕೂಡ ಅಪರೂಪ. ಇದರಲ್ಲಿ ವಸ್ತುಗಳ ನೇರ ಗುಣಲಕ್ಷಣಗಳನ್ನು ಗಮನಿಸಲಾಗುತ್ತದೆ ಮಾತ್ರವಲ್ಲದೆ ಇವುಗಳ ಇತರ ಗುಣಲಕ್ಷಣಗಳನ್ನು ಇದರಲ್ಲಿ ಗಮನಿಸುವುದಿಲ್ಲ. ಇದು ಕೆಲವು ವೇಳೆ ವಿಕೃತಾರ್ಥ (hypernymy) ವಾಗಿಯೂ ಸಾಂದರ್ಭಿಕಾರ್ಥ (contextual meaning) ವಾಗಿಯೂ, ವಿವರಣಾತ್ಮಕ ಅರ್ಥ(descriptive meaning)ವಾಗಿಯೂ, ಸಾಂಕೇತಿಕಾರ್ಥವಾಗಿಯೂ ಕಾಣಿಸಿಕೊಳ್ಳುವುದು. ವಾಚ್ಯಾರ್ಥ ನೇರ ಅರ್ಥದ ಜೊತೆಗೆ ಹೆಚ್ಚಿನ ಅರ್ಥವನ್ನು ಸೂಚಿಸಿದರೆ ಅದು ಗೂಢಾರ್ಥವೆನಿಸಿಕೊಳ್ಳುತ್ತದೆ.

(2) ಲಕ್ಷ್ಯಾರ್ಥ (Affective meaning) : ಶಬ್ದಗಳು ಕೊಡುವ ಅರ್ಥ ಅವು ಅವುಗಳ ಮುಖ್ಯಾರ್ಥಕ್ಕಿಂತ ಭಿನ್ನವಾಗಿದ್ದರೆ ಅಂತಹ ಅರ್ಥವನ್ನೇ ಲಕ್ಷ್ಯಾರ್ಥವೆನ್ನುವರು. ಇದರಲ್ಲಿ ವಾಚ್ಯಾರ್ಥಕ್ಕೆ ಬಾಧೆ ಉಂಟಾಗಿ ಅದಕ್ಕೆ ಸಂಬಂಧಿಸಿದ ಬೇರೊಂದು ಅರ್ಥ ತೋರಿಬರುವುದರಿಂದ ಇಂತಹ ಅರ್ಥ ಲಕ್ಷ್ಯಾರ್ಥವೆನಿಸಿಕೊಳ್ಳುತ್ತದೆ. ಉದಾಹರಣೆಗೆ ನೀನು ಕತ್ತೆ ಎಂಬ ವಾಕ್ಯದಲ್ಲಿ ಕತ್ತೆ ಎಂಬ ಶಬ್ದದ ಮೂಲ ಅರ್ಥ ಮೂರ್ಖ

ಎಂದಾಗುತ್ತದೆ. ಮೂರ್ಖ ಎನ್ನುವ ಅರ್ಥ ಕತ್ತೆ ಎನ್ನುವ ಮುಖ್ಯಾರ್ಥಕ್ಕಿಂತ ಭಿನ್ನವಾದದ್ದು. ಇಲ್ಲಿ ಕತ್ತೆ ಎನ್ನುವ ಶಬ್ದದ ಸಾಮಾನ್ಯ ಅರ್ಥ ಹೋಗಿ ಅದಕ್ಕೆ ಸಂಬಂಧಿಸಿದ ಬೇರೊಂದು ಅರ್ಥ ವ್ಯಕ್ತವಾಗುತ್ತದೆ. ಉದಾಹರಣೆಗೆ, ಅಂತಹ ಒಳ್ಳೆಯ ಹುಡುಗಿಗೆ ಎಂತಹ ಕಷ್ಟ ಬಂದಿತೆಂದು ಕೇಳಿ ನಮ್ಮ ಕೇರಿಯೆಲ್ಲಾ ಕಣ್ಣೀರು ಸುರಿಸಿತು ಎಂಬ ವಾಕ್ಯವನ್ನು ಗಮನಿಸಿದರೆ ಇಲ್ಲಿ ಕರ್ತೃವಿಗೂ ಕ್ರಿಯೆಗೂ ಬಾಧೆಯುಂಟಾಗಿ ಕೇರಿ ಎಂಬ ಶಬ್ದದ ಮನೆಗಳ ಸಾಲು ಎಂಬ ಸಾಮಾನ್ಯ ಅರ್ಥಹೋಗಿ ಅದಕ್ಕೆ ಸಂಬಂಧಿಸಿದ ಇನ್ನೊಂದು ಅರ್ಥ ಕೇರಿ ಎಂದರೆ ಕೇರಿಯಲ್ಲಿರುವ ಜನಗಳು ಎಂಬರ್ಥ ವ್ಯಕ್ತವಾಗುತ್ತದೆ. ಇದೇ ರೀತಿ ಮುಳ್ಳಿನ ಹಾಸಿಗೆ ಎಂಬ ವಾಕ್ಯದಲ್ಲಿಯೂ ವಾಚ್ಯಾರ್ಥಕ್ಕೆ ಭಿನ್ನವಾದ ಲಕ್ಷ್ಯಾರ್ಥವನ್ನು ಗುರುತಿಸಿ ವಿವರಿಸಿಕೊಳ್ಳಬಹುದು. ಹೀಗೆ ಯಾವ ಶಬ್ದ ರೂಢಿಯಲ್ಲಿದ್ದ ಮುಖ್ಯ ಅರ್ಥವನ್ನು ಕಳೆದುಕೊಂಡು ಅದಕ್ಕೆ ಸಂಬಂಧಿಸಿದ ಬೇರೊಂದು ಅರ್ಥ ಪಡೆಯುತ್ತದೆಯೋ ಅದು ಸಾಮಾನ್ಯವಾಗಿ ಲಕ್ಷ್ಯಾರ್ಥವೆನಿಸಿಕೊಳ್ಳುತ್ತದೆ.

(3) ಗೂಢಾರ್ಥ (Connotative meaning): ಯಾವ ಶಬ್ದ ತನ್ನ ಮೂಲಾರ್ಥ ಅಥವಾ ವಾಚ್ಯಾರ್ಥದ ಜೊತೆಗೆ ಹೆಚ್ಚಿನ ಒಳ ಅರ್ಥವನ್ನು ಪಡೆಯುತ್ತದೆಯೋ ಅದನ್ನೇ ಗೂಢಾರ್ಥ ಎನ್ನುವರು. ಇದು ಒಂದು ರೀತಿಯಲ್ಲಿ ಸೂಚ್ಯಾರ್ಥವೂ (directive meaning) ವ್ಯಂಗ್ಯಾರ್ಥವೂ ಆಗಿ ಕಾಣಿಸಿಕೊಳ್ಳಬಹುದು. ಗೂಢಾರ್ಥ ಶಬ್ದದ ಒಳ ಅರ್ಥವನ್ನು ಸೂಚಿಸುತ್ತದೆ ಮಾತ್ರವಲ್ಲದೆ ಆ ಶಬ್ದದ ವಾಚ್ಯಾರ್ಥವನ್ನೊಳಗೊಂಡ ಎಲ್ಲಾ ಇತರ ಅರ್ಥವನ್ನು ಸೂಚಿಸಬಲ್ಲದು. ಅವನು ವೈಕುಂಠಕ್ಕೆ ಹೋದ ಎಂಬ ವಾಕ್ಯವನ್ನು ಗಮನಿಸಿದರೆ ಸತ್ತ ವ್ಯಕ್ತಿ ವೈಕುಂಠಕ್ಕೆ ಅಥವಾ ಸ್ವರ್ಗಕ್ಕೆ ಹೋದ ಎಂಬ ಒಳಅರ್ಥ ಗೂಢಾರ್ಥವೆನಿಸಿಕೊಳ್ಳುತ್ತದೆ. ಒಟ್ಟಿನಲ್ಲಿ ಗೂಢಾರ್ಥ ವಾಚ್ಯಾರ್ಥದ ಜೊತೆಗೆ ಹೆಚ್ಚಿನ ಒಳಅರ್ಥ ಪಡೆಯುವುದು ಇದರ ಬಹುಮುಖ್ಯವಾದ ಲಕ್ಷಣ. ಮೇಲುನೋಟಕ್ಕೆ ಈ ಅರ್ಥ ಒಂದು ರೀತಿಯಲ್ಲಿ ಭಾವಪೂರ್ಣ ಹಾಗೂ ಹಾಸ್ಯಮಯವಾಗಿ ತೋರಿಬರುವುದು. ಈ ಅರ್ಥ ಒಟ್ಟಿನಲ್ಲಿ ಹೆಚ್ಚು ಪರಿಣಾಮಕಾರಿಯಾದದ್ದು. ಇದನ್ನು ಕಾವ್ಯಮೀಮಾಂಸೆಯಲ್ಲಿ ಒಂದು ಬಗೆಯ ಕಾವ್ಯದೋಷವನ್ನಾಗಿ ಪರಿಗಣಿಸಿಕೊಂಡಿದ್ದಾರೆ. ನಿಶ್ಚಿತ ಅರ್ಥವನ್ನು ಹೇಳಲು ಬಯಸುವ ಶಬ್ದಗಳು ನಿತ್ಯದ ಬಳಕೆಯಲ್ಲಿಲ್ಲದ ಅರ್ಥ ವ್ಯಕ್ತಪಡಿಸಿದರೆ ಸಾಕು ಅದು ಗೂಢಾರ್ಥವೂ, ವ್ಯಂಗ್ಯಾರ್ಥವೂ ಆಗಿ ಕಾಣಿಸಿಕೊಳ್ಳುತ್ತದೆ.

(4) ಸಾದೃಶ್ಯಾರ್ಥ (Analogical meaning) : ಯಾವುದಾದರೊಂದು ವಸ್ತುವಿನ ಅರ್ಥವನ್ನು ಬೇರೊಂದು ವಸ್ತುವಿನ ಸಾದೃಶ್ಯ ಬಲದಿಂದ ತಿಳಿಯಬಹುದಾದುದಕ್ಕೆ ಸಾದೃಶ್ಯಾರ್ಥ ಎನ್ನುವರು. ಉದಾಹರಣೆಗೆ ತಾಯಿಯನ್ನು ನೋಡುತ್ತಲೇ ಮಗುವಿನ ಮುಖ ಅರಳಿತು ಎಂಬ ವಾಕ್ಯದಲ್ಲಿ ಅರಳುವ ಹೂವಿನ ಕ್ರಿಯೆಯನ್ನು ಮಗುವಿನ ಸಂತಸದ ಕ್ರಿಯೆಗೆ ಸಾದೃಶ್ಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನೇ

ಕೆಲವರು ಕಾರ್ಯಾರ್ಥ (functional meaning) ಎಂತಲೂ ಕರೆಯುವರು. ಒಂದು ವಸ್ತುವಿನ ಅರ್ಥ ಇನ್ನೊಂದು ವಸ್ತುವಿನ ಸಾದೃಶ್ಯ ಬಲದಿಂದ ವ್ಯಕ್ತವಾಗುವುದು ಸಾದೃಶ್ಯಾರ್ಥದ ಬಹು ಮುಖ್ಯ ಲಕ್ಷಣ.

(5) ವ್ಯಂಗ್ಯಾರ್ಥ (Suggestive meaning): ಯಾವ ಶಬ್ದ ವಾಚ್ಯಾರ್ಥ ಮತ್ತು ಲಕ್ಷ್ಯಾರ್ಥಕ್ಕಿಂತ ಭಿನ್ನವಾದ ಅರ್ಥ ಹೊಂದಿರುತ್ತದೆಯೋ ಅದು ವ್ಯಂಗ್ಯಾರ್ಥವೆನಿಸಿಕೊಳ್ಳುತ್ತದೆ. ಇದು ವಾಚ್ಯಾರ್ಥ ಮೂಲದಿಂದಲೋ ಅಥವಾ ಲಕ್ಷ್ಯಾರ್ಥ ಮೂಲದಿಂದಲೋ ವ್ಯಕ್ತವಾಗುವಂತಹದ್ದು. ಅನೇಕಾರ್ಥವಾಚಕ ಶಬ್ದಗಳ ಸ್ಥಾನದಲ್ಲಿ ಒಂದು ವಿಶಿಷ್ಟ ಅರ್ಥ ಅನ್ಯಾರ್ಥವಾಗಿ ವ್ಯಕ್ತವಾದರೆ ಸಾಕು ಅದು ವ್ಯಂಗ್ಯಾರ್ಥವೆನಿಸಿಕೊಳ್ಳುತ್ತದೆ. ಈ ವ್ಯಂಗ್ಯಾರ್ಥವನ್ನೇ ಕೆಲವರು ಗೂಢಾರ್ಥ ಎಂತಲೂ ಕರೆಯುವರು.

(6) ತಾತ್ಪರ್ಯಾರ್ಥ (Thematic meaning): ವಾಚ್ಯಾರ್ಥದಿಂದ ಎಲ್ಲವನ್ನು ತಿಳಿಯಲು ಬರುವುದಿಲ್ಲ. ಉದಾಹರಣೆಗೆ ಯಾವುದಾದರೂ ಒಂದು ಅಥವಾ ಎರಡು ವಾಕ್ಯಗಳನ್ನು ತೆಗೆದುಕೊಂಡರೆ ಅದರಲ್ಲಿರುವ ಒಂದೊಂದು ಪದದಿಂದ ಮೊದಲು ಅವುಗಳ ವಾಚ್ಯಾರ್ಥವನ್ನು ತಿಳಿಯಬಹುದು. ಅನಂತರ ಅವುಗಳ ಸಹಾಯದಿಂದ ತಾತ್ಪರ್ಯಾರ್ಥವನ್ನು ಗ್ರಹಿಸಬಹುದು. ಕೆಲವುವೇಳೆ ಕೆಲವು ವಾಕ್ಯಗಳ ಮೂಲಕ ಕೆಲವು ಅರ್ಥವಿಚಾರಗಳನ್ನು ವಿವರಿಸಿ ಹೇಳಲು ಸಾಧ್ಯವಾಗದೆ ಇದ್ದಾಗ ಇಂತಹ ವಿವರಣಾತ್ಮಕ ವಿಷಯದ ವಿವರಣೆ ಬೇಕಾಗುತ್ತದೆ. ಆಗ ಹೆಚ್ಚು ವಾಕ್ಯಗಳ ಮೂಲಕ ವಿವರವಾಗಿ ಹೇಳಬಹುದಾದುದನ್ನು ವಿವರಣಾತ್ಮಕಾರ್ಥ (descriptive meaning) ಎನ್ನುವರು. ಇದಕ್ಕೆ ವಿರುದ್ಧವಾದ ಪರಿಸ್ಥಿತಿಯಲ್ಲಿನ ಅರ್ಥವಿವರಣೆಯನ್ನೇ ತಾತ್ಪರ್ಯಾರ್ಥ ಎನ್ನುವುದು. ತಾತ್ಪರ್ಯಾರ್ಥವನ್ನು ಒಂದು ಬಗೆಯಲ್ಲಿ ಸಾರಾಂಶದ ರೀತಿಯಲ್ಲಿ ಸೂಚಿಸಲಾಗುತ್ತದೆ. ತಾತ್ಪರ್ಯಾರ್ಥ, ವಿವರಣಾತ್ಮಕಾರ್ಥ ಇವು ಬೇರೆ ಬೇರೆ ಅರ್ಥವಿಶೇಷತೆಗಳು. ಇದಕ್ಕೆ ನಕ್ಷತ್ರ ಮಿನುಗುತ್ತಿದೆ ಎಂಬ ವಾಕ್ಯವನ್ನು ಗಮನಿಸಿದರೆ ಇದರಲ್ಲಿ ನಕ್ಷತ್ರ ಕರ್ತೃ, ಮಿನುಗುತ್ತದೆ ಕ್ರಿಯೆ. ಇವುಗಳನ್ನು ಬಿಡಿಬಿಡಿಯಾಗಿ ಗಮನಿಸಿದರೆ ಇವುಗಳಲ್ಲಿ ಒಂದಕ್ಕೊಂದು ಸಂಬಂಧವೇನೂ ಗೋಚರಿಸುವುದಿಲ್ಲ. ವಾಕ್ಯದಲ್ಲಿ ಕರ್ತೃ. ಮತ್ತು ಕ್ರಿಯೆಗೆ ವಿಶಿಷ್ಟವಾದ ಸ್ಥಾನವಿದೆ. ವಾಕ್ಯದಲ್ಲಿ ಪದಗಳ ವಿಶಿಷ್ಟ ಅರ್ಥಸಂಬಂಧವನ್ನು ತಿಳಿಸುವ ಶಕ್ತಿ ತಾತ್ಪರ್ಯಾರ್ಥವೆನಿಸಿಕೊಳ್ಳುತ್ತದೆ.

(7) ಸಾಂದರ್ಭಿಕಾರ್ಥ (Contextual meaning): ಶಬ್ದಗಳನ್ನು ಸಂದರ್ಭಕ್ಕೆ ತಕ್ಕಂತೆ ಬೇರೆ ಬೇರೆ ಅರ್ಥದಲ್ಲಿ ಬಳಸುವುದು ರೂಢಿ. ಉದಾಹರಣೆಗೆ ನೀರು ಝುಳಝುಳನೆ ಹರಿಯಿತು. ಕಾಗದವನ್ನು ಪರಪರನೆ ಹರಿದನು. ಈ ಎರಡು ವಾಕ್ಯಗಳಲ್ಲಿ ಬರುವ ಕ್ರಿಯಾಪದ ಹರಿ ಎಂಬುದು ಬೇರೆ ಬೇರೆ ಪರಿಸರ ಹಾಗೂ ಪರಿಸ್ಥಿತಿಗಳಲ್ಲಿ ಬೇರೆ ಬೇರೆ ಅರ್ಥ ವ್ಯಕ್ತಗೊಳಿಸುವುದನ್ನು ಕಾಣಬಹುದಾಗಿದೆ. ಇದನ್ನೇ

ಸಾಂದರ್ಭಿಕಾರ್ಥ ಎನ್ನುವರು. ಆಯಾ ಶಬ್ದ ಆಯಾ ಸಂದರ್ಭದ ಹಿನ್ನೆಲೆಯಲ್ಲಿ ವ್ಯಕ್ತವಾಗುವ ಅರ್ಥ ಸಾಂದರ್ಭಿಕಾರ್ಥವೆನಿಸಿಕೊಳ್ಳುತ್ತದೆ. ಇದು ಕೆಲವು ವೇಳೆ ವಿಶಿಷ್ಟಾರ್ಥವಾಗಿಯೂ ಕಾಣಿಸಿಕೊಳ್ಳಬಹುದು. ಸಾಂದರ್ಭಿಕಾರ್ಥ ಭಾಷಾವಿಶ್ಲೇಷಣೆ ಯಲ್ಲಿ ಹೆಚ್ಚಿನ ಮಹತ್ವಪೂರ್ಣವಾದ ಸ್ಥಾನವನ್ನು ಸಂಪಾದಿಸಿಕೊಂಡಿದೆ. ಮಾಂಗಲ್ಯ ಹಿಂದೂ ಸಮಾಜದಲ್ಲಿ ಪವಿತ್ರವಾದದ್ದು, ಗಂಗಾಜಲ ಇದು ಸಾಮಾನ್ಯ ಜಲವಲ್ಲ ಇದೊಂದು ಪವಿತ್ರವಾದ ಜಲ. ಇವು ಬೇರೆ ಬೇರೆ ಸಮಾಜದವರಿಗೆ ಬೇರೆಬೇರೆಯಾಗಿ ತೋರಿಬರಬಹುದು. ಮಾಂಗಲ್ಯ ಕೆಲವರಿಗೆ ಕರಿಮಣಿಸರವಾದರೆ, ಗಂಗಾಜಲ ಕೆಲವರಿಗೆ ಸಾಮಾನ್ಯ ನೀರಾಗಿ ತೋರಿಬರುತ್ತದೆ. ಈ ಕಾರಣದಿಂದ ಸಂದರ್ಭ ಹಾಗೂ ಸನ್ನಿವೇಶಕ್ಕೆ ಅನುಗುಣವಾಗಿ ಅರ್ಥವಿಶ್ಲೇಷಣೆಮಾಡುವುದು ಹೆಚ್ಚು ಉಪಯುಕ್ತ ವಾದದ್ದು. ಭಾಷೆಯ ಶಬ್ದಗಳು ಆಯಾ ಸಮಾಜದ ಜನರ ಸಂಪ್ರದಾಯಬದ್ಧವಾದ ಅರ್ಥವನ್ನು ಹೊಂದುವುದಕ್ಕೆ ಅವು ಬರುವ ಸಂದರ್ಭ ಮುಖ್ಯವಾಗಿರುತ್ತದೆ.

(8) ವಿಶಿಷ್ಟಾರ್ಥ (Special meaning): ಶಬ್ದಗಳನ್ನು ಬೇರೆಬೇರೆ ಪರಿಸರ ಗಳಲ್ಲಿ, ಬೇರೆಬೇರೆ ಅರ್ಥದಲ್ಲಿ ಬಳಸುವುದು ಹೆಚ್ಚು ರೂಢಿಯಲ್ಲಿದೆ. ಉದಾಹರಣೆಗೆ ನೀರು ಎಂಬುದನ್ನು ಸಾಮಾನ್ಯ ಸಂದರ್ಭದಲ್ಲಿ ನೀರು ಎಂಬರ್ಥದಲ್ಲಿ ಬಳಸಿದರೆ, ಅದು ದೇವರ ನೈವೇದ್ಯದಲ್ಲಿ ಬಳಸುವಾಗ ಪೂಜಾರಿ ಕೊಡುವ ತೀರ್ಥ ಎಂಬ ವಿಶಿಷ್ಟ ಅರ್ಥ ವನ್ನು ಪಡೆದುಕೊಳ್ಳುತ್ತದೆ. ಅದೇ ರೀತಿ ಅನ್ನ ಪ್ರಸಾದವಾಗುತ್ತದೆ. ಕಣದಲ್ಲಿ ಬಳ್ಳ ಸಾಣಿಯಾಗುತ್ತದೆ. ತೊಪ್ಪೆ ಸಗಣಿಯಾಗುತ್ತದೆ, ಕುಡುಗೋಲು ರಾಶಿಯ ಮೇಲೆ ಬಸವನಾಗುತ್ತದೆ. ಈ ವಿಶಿಷ್ಟ ಅರ್ಥ ಕೆಲವೇ ಕೆಲವು ಸಂದರ್ಭಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ಈ ಕಾರಣದಿಂದಲೇ ವಿಶಿಷ್ಟಾರ್ಥವು ಕೆಲವು ಸಲ ಸಾಂದರ್ಭಿಕಾರ್ಥವಾಗಿ ಕಾಣಿಸಿಕೊಳ್ಳುವುದು. ಹೀಗೆ ನೀರು, ಅನ್ನ, ಬಳ್ಳ, ಕುಡುಗೋಲು ಎಂಬ ಶಬ್ದಗಳು ಸಾಮಾನ್ಯ ಅರ್ಥಕ್ಕಿಂತ ಭಿನ್ನವಾದ ಅರ್ಥವನ್ನು ಪಡೆಯುತ್ತವೆ. ಇವನ್ನು ಸಾಮಾನ್ಯ ಜನರು ಎಲ್ಲಾ ವೇಳೆಯಲ್ಲಿಯೂ ಅರಿಯಲು ಸಾಧ್ಯವಾಗುವುದಿಲ್ಲ. ಇದರಿಂದ ಇದು ವಿಶಿಷ್ಟಾರ್ಥ. ಈ ವಿಶಿಷ್ಟಾರ್ಥವನ್ನು ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ಮಾತ್ರ ಗ್ರಹಿಸಲು ಸಾಧ್ಯ. ಆದರೆ ಇದು ಸಾಮಾನ್ಯ ಹಾಗೂ ಸಾಧಾರಣ ಅರ್ಥಕ್ಕಿಂತ ಭಿನ್ನವಾದದ್ದು. ಈ ಕಾರಣದಿಂದ ಇದು ಕೆಲವು ವೇಳೆ ಗೂಢಾರ್ಥವಾಗಿಯೂ ಗೋಚರಿಸಬಹುದು. ಇದಕ್ಕೆ ಕೆಲವು ನಿಷಿದ್ಧ ಶಬ್ದಗಳನ್ನು (taboos) ಉದಾಹರಿಸಿಕೊಳ್ಳಬಹುದಾಗಿದೆ.

(9) ವಿರೋಧಾರ್ಥ (Antonymy): ಶಬ್ದಗಳು ಪರಸ್ಪರ ವಿರುದ್ಧವಾದ ಅರ್ಥವನ್ನು ಹೊಂದಿದ್ದರೆ ಅದು ವಿರೋಧಾರ್ಥವೆನಿಸಿಕೊಳ್ಳುತ್ತದೆ. ಯಾವುದಾದ ರೊಂದು ವಾಕ್ಯ ಅಥವಾ ಶಬ್ದ ಬರುವ, ಸಂದರ್ಭವನ್ನು ಗಮನಿಸಿದರೆ ಅಲ್ಲಿ ಆ ವಾಕ್ಯ ಕೊಡುವ ಅರ್ಥಕ್ಕೂ ನಮಗೆ ಮನಸ್ಸಿನಲ್ಲಿ ಹೊಳೆಯುವ ಅರ್ಥಕ್ಕೂ ತೀರ ಭಿನ್ನತೆ

ಅಥವಾ ವಿರೋಧ ಕಾಣಿಸಿಕೊಂಡರೆ ಸಾಕು ಅದು ವಿರೋಧಾರ್ಥವಾಗಿ ತೋರುವುದು. ಶಬ್ದ ಅಥವಾ ವಾಕ್ಯಗಳು ಕೊಡುವ ವಾಚ್ಯಾರ್ಥಕ್ಕೆ ವಿರುದ್ಧವಾದದ್ದು ವಿರೋಧಾರ್ಥ. ಉದಾಹರಣೆಗೆ ರಸಿಕ ಶಿಖಾಮಣಿ ಎಂಬ ವಾಕ್ಯ ಕೊಡುವ ಅರ್ಥ ಒಂದಾದರೆ ನಾವು ಅರ್ಥಮಾಡಿ ಕೊಳ್ಳುವುದು ಅದಕ್ಕೆ ವಿರುದ್ಧವಾಗಿರುತ್ತದೆ. ಇದು ವಿರೋಧಾರ್ಥದ ಬಹುಮುಖ್ಯ ಲಕ್ಷಣ, ಇಂತಹ ವಿರೋಧಾರ್ಥವನ್ನು ನಾವು ನಮ್ಮ ದಿನಚರಿಯ ಆಡುಮಾತಿನಲ್ಲಿ ಸಾಮಾನ್ಯವಾಗಿ ಗುರುತಿಸಿಕೊಳ್ಳಬಹುದು.

(10) ದ್ವಂದ್ವಾರ್ಥ (Doublets) : ಒಂದು ಮಾತಿಗೆ ಎರಡು ಅರ್ಥ ಬರುವಂತೆ ಹೇಳುವುದು ದ್ವಂದ್ವಾರ್ಥವೆನಿಸಿಕೊಳ್ಳುತ್ತದೆ. ಇದನ್ನು ಕೆಲವರು ಶ್ಲೇಷಾರ್ಥ ಎಂತಲೂ ಕರೆಯುವರು. ಈ ಶ್ಲೇಷವನ್ನು ದಂಡಿ, ರುದ್ರಟ, ವಾಮನ ಮುಂತಾದವರು ಒಂದು ಬಗೆಯ ಅಲಂಕಾರವನ್ನಾಗಿ ವಿವರಿಸಿಕೊಳ್ಳುವರು. ಇದಕ್ಕೆ ದಂಡಿಯ ಉದಾಹರಣೆಯೊಂದನ್ನು ಗಮನಿಸಬಹುದು. ಉದಯರೂಢನಾದ (ಉನ್ನತಿಗೇರಿದ ಹಾಗೂ ಉದಯಾಚಲವನ್ನೇರಿದ) ಈ ರಾಜನು (ಚಂದ್ರನು ಹಾಗೂ ಅರಸನು) ಕಾಂತಿಯುಕ್ತನೂ (ಕಮಲನಯನು ಹಾಗೂ ತೇಜಸ್ವಿಯೂ) ರಕ್ತಮಂಡಲನೂ (ಅನುರಕ್ತರಾದ ಮಂತ್ರಿ ಮಂಡಲವುಳ್ಳವನು ಹಾಗೂ ಕೆಂಪಾದ ಬಿಂಬವುಳ್ಳವನು) ಆಗಿ ಮೃದುವಾದ (ಕ್ರೂರವಲ್ಲದ ಹಾಗೂ ತಂಪಾದ) ಕರಗಳಿಂದ (ತೆರಿಗೆಯಿಂದ ಹಾಗೂ ಕಿರಣಗಳಿಂದ) ಲೋಕದ ಹೃದಯವನ್ನು ಸೂರೆಗೊಂಡಿದ್ದಾನೆ. ದ್ವಂದ್ವ ಸಮಾಸದಲ್ಲಿ ಪೂರ್ವಪದ ಮತ್ತು ಉತ್ತರಪದ ಎರಡು ಮುಖ್ಯವಾಗಿರುವಂತೆ ಶಬ್ದಗಳ ಎರಡೆರಡು ಅರ್ಥಗಳು ದ್ವಂದ್ವಾರ್ಥದಲ್ಲಿ ಮುಖ್ಯವಾಗಿರುತ್ತವೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಶಬ್ದಗಳು ಸೇರಿದಾಗ ಅವುಗಳ ಮೂಲ ಅರ್ಥದ ಜೊತೆಗೆ ಇದರಲ್ಲಿ ಬೇರೊಂದು ಅರ್ಥವೂ ವ್ಯಕ್ತವಾಗುವುದು.

(11) ಅನ್ಯಾರ್ಥ (Referential meaning) : ಒಂದು ಶಬ್ದ ರೂಢಿಗೆ ಹೊರತಾದ ಅರ್ಥವನ್ನು ವ್ಯಕ್ತಗೊಳಿಸಿದರೆ ಸಾಕು ಅದು ಅನ್ಯಾರ್ಥವೆನಿಸಿಕೊಳ್ಳುತ್ತದೆ. ಉದಾಹರಣೆಗೆ ಗುಂಡು ಎಂಬ ಶಬ್ದವನ್ನು ಗಮನಿಸಿ. ಗುಂಡು ಎಂಬುದಕ್ಕೆ ಗೋಳಾಕಾರದ ಯಾವುದಾದರೊಂದು ಲೋಹದ ವಸ್ತು ಅಥವಾ ಕಲ್ಲಿನ ವಸ್ತು ಎಂಬರ್ಥವಿದ್ದರೆ, ಇದು ಮದ್ಯಪಾನ ಎಂಬುದಕ್ಕೆ ಅನ್ಯಾರ್ಥವಾಗಿ ಬಳಕೆಯಲ್ಲಿದೆ. ಇದು ಕೆಲವು ವೇಳೆ ಅನ್ವಯಾರ್ಥ, ಕೋಶಾರ್ಥ, ಮೂಲಾರ್ಥಕ್ಕಿಂತ ಭಿನ್ನವಾದದ್ದು. ಇದನ್ನು ಗೂಢಾರ್ಥವೆಂತಲೂ ಹೆಸರಿಸಿಕೊಳ್ಳಬಹುದು.

(12) ಅನ್ವಯಾರ್ಥ (Agreement) : ಯಾವುದರೊಂದು ವಸ್ತು ಅಥವಾ ವ್ಯಕ್ತಿಗೆ ಅರ್ಥ ನೇರವಾಗಿ ಅನ್ವಯವಾಗುವಂತಿದ್ದರೆ ಸಾಕು ಅದು ಅನ್ವಯಾರ್ಥವೆನಿಸಿಕೊಳ್ಳುತ್ತದೆ. ಇದನ್ನು ಸಂದರ್ಭಕ್ಕೆ ತಕ್ಕಂತೆ ಸಾಮಾನ್ಯಾರ್ಥ, ನೇರಾರ್ಥ,

ಮೂಲಾರ್ಥ, ಸಾಂದರ್ಭಿಕಾರ್ಥ ಎಂತಲೂ ಹೆಸರಿಸಿಕೊಳ್ಳಬಹುದು. ಉದಾಹರಣೆಗೆ ಕುಂಡ, ಸೊತ್ತು, ಕರಿಯ ಇತ್ಯಾದಿ.

(13) ಏಕಾರ್ಥ (Monosymy) : ಒಂದು ಶಬ್ದಕ್ಕೆ ಒಂದೇ ಅರ್ಥ ಇದ್ದಾಗ ಅದು ಏಕಾರ್ಥ ಎನಿಸಿಕೊಳ್ಳುತ್ತದೆ. ಉದಾಹರಣೆಗೆ ನೀರನ್ನು ಕೊಡು ಎಂಬ ವಾಕ್ಯದ ನೀರು ಶಬ್ದಕ್ಕೆ ಬೇರೆ ಯಾವ ಅರ್ಥವೂ ಹೊಳೆಯದಿದ್ದರೆ ಸಾಕು, ಅದು ಏಕಾರ್ಥವಾಗಿ ತೋರಿಬರುತ್ತದೆ. ಇದರಲ್ಲಿ ವಾಚ್ಯಾರ್ಥ ಅಥವಾ ಸಾಮಾನ್ಯ ಅರ್ಥ ಪ್ರಧಾನವಾಗಿರುತ್ತದೆ. ಇದಕ್ಕೆ ವಿರುದ್ಧವಾದ ಅರ್ಥದ ಪರಿಸ್ಥಿತಿಯನ್ನೇ ಅನೇಕಾರ್ಥ ಎಂದು ಕರೆಯುವರು. ಏಕಾರ್ಥಕ ಶಬ್ದಗಳು ಭಾಷೆಯಲ್ಲಿ ಸಾಮಾನ್ಯವಾಗಿ ಬಹಳ ಕಡಿಮೆ ಸಂಖ್ಯೆಯಲ್ಲಿ ದೊರೆಯುತ್ತವೆ. ಉದಾಹರಣೆಗೆ ಸೂರ್ಯ, ಚಂದ್ರ, ಭೂಮಿ, ಕಿವಿ, ಕಣ್ಣು, ಮೂಗು, ಕಾಲು, ಕೈ ಮುಂತಾದುವುಗಳನ್ನು ಇದಕ್ಕೆ ಹೆಸರಿಸಬಹುದು.

(14) ಅನೇಕಾರ್ಥ (Polysymy); ಒಂದು ಶಬ್ದ ಮೂರಕ್ಕಿಂತ ಹೆಚ್ಚು ಅರ್ಥ ಹೊಂದಿದ್ದರೆ ಸಾಕು ಅದು ಅನೇಕಾರ್ಥ ಎನಿಸಿಕೊಳ್ಳುತ್ತದೆ. ಉದಾಹರಣೆಗೆ ಬೇರು ಎಂಬ ಶಬ್ದ ಮರದ ಬೇರು, ರೋಗದ ಬೇರು, ಜಗಳದ ಬೇರು ಎಂಬುದೇ ಇತ್ಯಾದಿ ಅರ್ಥವನ್ನು ಹೊಂದಿದೆ. ಇದರಂತೆ ಗರುಡ ಎಂಬ ಶಬ್ದಕ್ಕೆ ನಮ್ಮ ಪೌರಾಣಿಕ ಕಲ್ಪನೆಯಂತೆ ನಾಲ್ಕಕ್ಕಿಂತ ಹೆಚ್ಚು ಅರ್ಥವನ್ನು ಕಲ್ಪಿಸಬಹುದು. ಶಬ್ದಗಳು ಕೆಲವು ವೇಳೆ ಹೊಸ ಹೊಸ ಅರ್ಥವನ್ನು ಪಡೆದುಕೊಂಡಂತೆಲ್ಲಾ ಅವು ಅವುಗಳ ಹಿಂದಿನ ಅರ್ಥವನ್ನು ಕಳೆದುಕೊಳ್ಳುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಶಬ್ದಗಳು ಎರಡಕ್ಕಿಂತ ಹೆಚ್ಚು ಅರ್ಥದಲ್ಲಿ ಬಳಕೆಯಾಗಬಹುದಾದ ಅವಕಾಶಗಳಿವೆ. ಈ ಬಗೆಯ ಅರ್ಥವನ್ನೇ ಅನೇಕಾರ್ಥ ಎನ್ನುವರು. ಸಂಸ್ಕೃತದಲ್ಲಿ ಇಂತಹ ಅರ್ಥಹೊಂದಿರುವ ಅನೇಕ ಶಬ್ದಗಳು ದೊರೆಯುತ್ತವೆ. ಸಂಸ್ಕೃತದ ಸಾರಂಗ ಎಂಬ ಶಬ್ದಕ್ಕೆ ಜಿಂಕೆ, ಕೋಗಿಲೆ, ನವಿಲು, ಚಾತಕ, ಭ್ರಮರ, ದುಂಬಿ, ಸೂರ್ಯ, ಚಂದ್ರ, ಕೃಷ್ಣ, ಕಾಮದೇವ, ಕುದುರೆ, ಹಯ, ಮೃಗ, ಸರ್ಪ, ಪೃಥ್ವಿ ಇತ್ಯಾದಿ ಅರ್ಥಗಳಿರುವುದು ತೋರಿಬರುತ್ತದೆ. ಇದೇ ರೀತಿ ಹರಿ ಎಂಬ ಶಬ್ದಕ್ಕೆ ವಿಷ್ಣು, ಹನುಮ, ಇಂದ್ರ, ಸಿಂಹ, ಹಯ, ಚಂದ್ರ, ನೀರು, ಸರ್ಪ, ಅಗ್ನಿ ಇತ್ಯಾದಿ ಅರ್ಥವಿರುವುದನ್ನು ಗುರುತಿಸಿಕೊಳ್ಳಬಹುದು. ಇವು ಅನೇಕಾರ್ಥಕ ಶಬ್ದಗಳು. ಇವುಗಳ ಅರ್ಥವಿಕಾಸಕ್ಕೆ ಅನೇಕ ಅಂಶಗಳು ಕಾರಣವಾಗಿರುತ್ತವೆ. ಅನೇಕಾರ್ಥ ಕೆಲವು ವೇಳೆ ಸೂಕ್ಷ್ಮವಾಗಿಯೂ, ಸ್ಥೂಲವಾಗಿಯೂ ಮತ್ತೆ ಕೆಲವು ವೇಳೆ ವಿಸ್ತೃತವಾಗಿಯೂ ಕಾಣಿಸಿಕೊಳ್ಳಬಹುದು.

(15) ಸಂಕೇತಾರ್ಥ (Symbolic meaning) : ಸಂಕೇತಗಳ ಮೂಲಕ ಅರ್ಥವನ್ನು ವ್ಯಕ್ತಗೊಳಿಸುವುದು ಸಂಕೇತಾರ್ಥವೆನಿಸಿಕೊಳ್ಳುತ್ತದೆ. ಕೆಲವು ಶಬ್ದಗಳು

ತಮ್ಮ ಪ್ರಧಾನ ಅರ್ಥಕ್ಕಿಂತ ಬೇರೊಂದು ವಿಶಿಷ್ಟ ಅರ್ಥವನ್ನು ಸೂಚಿಸಬಹುದು. ಉದಾಹರಣೆಗೆ ಗರುಡ ಪೌರಾಣಿಕ ಪ್ರತಿಮೆಯಾಗಿ ವಿಷ್ಣುವಿನ ವಾಹನವಾಗಿಯೂ, ಮೂಷಿಕ ಗಣೇಶನ ವಾಹನವಾಗಿಯೂ ತೋರಿಬರುತ್ತದೆ. ಹಾಗೆಯೇ ಒಂದು ಎಂಬುದು ಒಂದು ಎಂಬ ಸಂಖ್ಯೆಯ ಸಂಕೇತ. ಭಂಗಿ ನೃತ್ಯದ ಒಂದು ರೀತಿ, ಹೀಗೆ ಸಂಕೇತಗಳು ಬೇರೆ ಬೇರೆ ಅರ್ಥವನ್ನು ಸೂಚಿಸಬಹುದು. ಸಂಕೇತಗಳು ಕೆಲವು ವೇಳೆ ಮೂಲಾರ್ಥವನ್ನು, ಗೂಢಾರ್ಥವನ್ನು, ವ್ಯಂಗ್ಯಾರ್ಥವನ್ನು ವ್ಯಕ್ತಗೊಳಿಸ ಬಹುದು. ಆದರೆ ಸಂಕೇತಾರ್ಥ ಆ ಭಾಷಾ ವ್ಯವಸ್ಥೆ ನೀಡಿದ ಅರ್ಥವಲ್ಲ. ಇದು ಆಯಾ ಸಂದರ್ಭ ಹಾಗೂ ಆಯಾ ಸಂಕೇತದ ಮೂಲಕ ವೇದ್ಯವಾಗುವಂತಹದ್ದು. ಸಂಕೇತಾರ್ಥ ಮೇಲಿಂದ ಮೇಲೆ ಆ ಭಾಷೆಯಲ್ಲಿ ಕಾಣಿಸಿಕೊಂಡರೆ ಅದು ಆಗ ಸಾಮಾನ್ಯ ಅರ್ಥವಾಗಿ ಪರಿಣಮಿಸುತ್ತದೆ. ಉದಾಹರಣೆಗೆ ಇಂಗ್ಲಿಷಿನ beak ಎಂಬ ಶಬ್ದವನ್ನು ಗಮನಿಸಿ. ಇದು ಒಂದು ಪಕ್ಷಿಯ ಕೊಕ್ಕು, ಇದರ ಇನ್ನೊಂದು ಅರ್ಥ ಪಾತ್ರೆಯ ತುದಿ. ಹಾಗೆಯೇ horn ಎಂಬ ಶಬ್ದವನ್ನು ಗಮನಿಸಿ. ಇದು ಹಸುವಿನ ಕೊಂಬು, ಇದರ ಇನ್ನೊಂದು ಅರ್ಥ ಕಾರಿನ ಹಾರನ್ ಆಗಬಹುದು. ಅಂತೆಯೇ Crane ಕೊಕ್ಕರೆ, ಇದರ ಇನ್ನೊಂದು ಅರ್ಥ ಯಂತ್ರ; ಕೊಕ್ಕರೆಯ ಕೊಕ್ಕಿನ ಆಕಾರದಿಂದಾಗಿ ಆ ಯಂತ್ರಕ್ಕೆ ಈ ಹೆಸರು ಬಂದಿದೆ. ಇಂತಹ ಶಬ್ದಗಳ ಅರ್ಥ ಮೇಲಿಂದ ಮೇಲೆ ಆ ಭಾಷೆಗಳಲ್ಲಿ ಕಾಣಿಸಿಕೊಂಡು ಅದು ಸಾಮಾನ್ಯ ಅರ್ಥ ವಾಗಿ ತೋರಿಬರುವುದು.

(16) ಸಮಾನಾರ್ಥ (Synonymy) : ಯಾವ ಶಬ್ದಗಳು ಅರ್ಥದ ದೃಷ್ಟಿಯಿಂದ ಪರಸ್ಪರ ಸಮಾನವಾದ ಅರ್ಥಹೊಂದಿರುತ್ತವೆಯೋ ಅಂತಹ ಶಬ್ದಗಳು ಸಮಾನಾರ್ಥಕ ಶಬ್ದಗಳು ಎನಿಸಿಕೊಳ್ಳುತ್ತವೆ. ಭಾಷೆಗಳಲ್ಲಿ ಸಂಪೂರ್ಣ ಸಮಾನಾರ್ಥಕ ಶಬ್ದಗಳು ಕಂಡುಬರುವುದು ಅಪರೂಪ. ಇದಕ್ಕೆ ಕಾಲು ಎಂಬ ಶಬ್ದವನ್ನು ಗಮನಿಸಿ. ಕಾಲು ದೇಹದ ಒಂದು ಭಾಗವಾಗಿಯೂ, ಅದು ಬೆಂಚು, ಕುರ್ಚಿಗಳ ಕಾಲುಗಳಾಗಿಯೂ, ಮರಗಾಲಾಗಿಯೂ ತೋರಿಬರುತ್ತದೆ. ಶಬ್ದಗಳು ಧ್ವನಿಯ ದೃಷ್ಟಿಯಿಂದ ಸಮಾನವಾಗಿ ಕಂಡುಬಂದರೂ ಅವು ಅರ್ಥದ ದೃಷ್ಟಿಯಿಂದ ಬೇರೆಬೇರೆಯಾಗಿವೆ. ಪೂರ್ಣ ಸಮಾನಾರ್ಥಕ ಶಬ್ದಗಳಲ್ಲಿ ಕೆಲವು ವೇಳೆ ಅಲ್ಪಸ್ವಲ್ಪವಾದರೂ ಅರ್ಥಭಿನ್ನತೆ ಕಂಡು ಬರುತ್ತದೆ. ಉದಾಹರಣೆಗೆ ವರ್ಷ, ತಿಂಗಳು, ಗೃಹ, ಮನೆ, ವಂಶ, ಕುಟುಂಬ ಎಂಬ ಶಬ್ದಗಳನ್ನು ಗಮನಿಸಬಹುದು. ಇವುಗಳ ಅರ್ಥದಲ್ಲಿಯೂ ಅಂತರವಿದೆ. ವರ್ಷ ತುಂತುರು ಮಳೆಯನ್ನು ನಿರ್ದೇಶಿಸಿದರೆ, ಗೃಹ ಪ್ರವೇಶ ಮನೆ ಪ್ರವೇಶ ವಾಗಲಾರದು, ವಂಶ ತಲೆ ತಲಾಂತರಕ್ಕೆ ಸಂಬಂಧಿಸಿದ್ದು, ಕುಟುಂಬ ಆ ಕುಟುಂಬದ ಜನರಿಗೆ ಮಾತ್ರ ಸಂಬಂಧಿಸಿದ್ದು. ಹೀಗೆ ಅನೇಕ ಶಬ್ದಗಳಲ್ಲಿ ಎಷ್ಟೇ ಸಮಾನತೆ ಕಂಡು ಬಂದರೂ ಅವು ಬರುವ ಸಂದರ್ಭಕ್ಕೆ ಅನುಗುಣವಾಗಿ ಅವುಗಳಲ್ಲಿ ಸ್ವಲ್ಪವಾದರೂ ಅರ್ಥಭಿನ್ನತೆ ಉಳಿದೇ ಉಳಿಯುತ್ತದೆ.

ಸಮಾನ ಅರ್ಥ ಹೊಂದಿರುವ ಶಬ್ದಗಳನ್ನು ಪರ್ಯಾಯ ಶಬ್ದಗಳು ಎಂದು ಕರೆಯುವುದು ರೂಢಿ. ಇವು ಸಾಮಾನ್ಯವಾಗಿ ಒಂದೇ ಅರ್ಥ ಪಡೆದಿರುವ ಶಬ್ದಗಳಾಗಿರುತ್ತವೆ. ಇವನ್ನೇ ಸಮಾನಾರ್ಥಿಗಳು ಎಂತಲೂ ಕರೆಯುವರು. ಯಾವ ಭಾಷೆಯಲ್ಲಿಯೂ ಪೂರ್ಣ ಸಮಾನಾರ್ಥಿ ಅಥವಾ ಪೂರ್ಣ ಪರ್ಯಾಯ ಶಬ್ದಗಳು ಅಧಿಕ ಸಂಖ್ಯೆಯಲ್ಲಿ ದೊರೆಯಲಾರವು. ಪರ್ಯಾಯ ಶಬ್ದಗಳಲ್ಲಿ ಮುಖ್ಯವಾಗಿ ಎರಡು ವಿಧ. ಅವೇ ಪೂರ್ಣ ಪರ್ಯಾಯಗಳು ಮತ್ತು ಅಪೂರ್ಣ ಪರ್ಯಾಯಗಳು. ಈ ಪರ್ಯಾಯ ಶಬ್ದಗಳ ಅರ್ಥವನ್ನು ಶೈಲಿಕವಾಗಿಯೂ, ವೈಚಾರಿಕವಾಗಿಯೂ ಮತ್ತು ಪ್ರಾಯೋಗಿಕವಾಗಿಯೂ ಮೂರು ರೀತಿಯಲ್ಲಿ ವಿವರಿಸಿ ತೋರಿಸಬಹುದು. ಉದಾಹರಣೆಗೆ ಭಾವಮಯ, ಭಾವಪೂರ್ಣ, ಸಾಮಾನ್ಯ, ಸಾಮಾನ್ಯತಃ ಎಂಬ ಶಬ್ದಗಳನ್ನು ಗಮನಿಸಿ. ಭಾವಮಯ, ಭಾವಪೂರ್ಣ ಎಂಬ ಶಬ್ದಗಳಿಗೆ ಸಾಮಾನ್ಯವಾಗಿ ಒಂದೇ ಅರ್ಥವಿದೆ. ಹಾಗೆಯೇ ಸಾಮಾನ್ಯ, ಸಾಮಾನ್ಯತೆ ಎಂಬುವೂ ಒಂದೇ ಅರ್ಥ ಹೊಂದಿವೆ. ಹೀಗೆ ಶಬ್ದಗಳಲ್ಲಿ ಯಾವಾಗಲೂ ಒಂದೇ ಅರ್ಥವಿದ್ದು ಅದರಲ್ಲಿ ಯಾವ ಬದಲಾವಣೆಯೂ ಆಗದಿದ್ದರೆ ಸಾಕು ಅದು ಸಮಾನಾರ್ಥಕವೆನಿಸಿಕೊಳ್ಳುತ್ತದೆ. ಈ ಶಬ್ದಗಳನ್ನು ಎಲ್ಲಾ ಸಂದರ್ಭಗಳಲ್ಲಿಯೂ ಒಂದರ ಸ್ಥಾನದಲ್ಲಿ ಇನ್ನೊಂದನ್ನು ಬಳಸಬಹುದಾದ ಸಾಧ್ಯತೆಗಳಿವೆ. ಹಾಗೆ ಬಳಸಿದಾಗ ಅವುಗಳ ಅರ್ಥದಲ್ಲಿ ಯಾವ ವ್ಯತ್ಯಾಸವು ಕಾಣಿಸಿಕೊಳ್ಳಲಾರದು. ಆಗ ಅಂತಹ ಶಬ್ದಗಳು ಒಂದು ರೀತಿಯಲ್ಲಿ ಏಕಾರ್ಥಕ ಶಬ್ದಗಳಾಗಿ ತೋರಿಬರುತ್ತವೆ. ಇವನ್ನೇ ಕೆಲವರು ಪೂರ್ಣ ಪರ್ಯಾಯಗಳೆಂದು ಹೆಸರಿಸಿಕೊಳ್ಳುವರು. ಕಷ್ಟ, ಕಠಿಣ ಎಂಬ ಶಬ್ದಗಳು ಒಂದೇ ಅರ್ಥ ಹೊಂದಿವೆ. ಈ ಶಬ್ದಗಳನ್ನು ವಾಕ್ಯದಲ್ಲಿ ಈ ಹುಡುಗ ಕಷ್ಟದಿಂದ ಐದು ವರ್ಷ ಕಳೆದ, ಈ ಹುಡುಗ ಕಠಿಣದಿಂದ ಐದುವರ್ಷ ತುಂಬಿಸಿದ ಎಂದಾಗಿ ಬಳಸಬಹುದು. ಈ ಪೂರ್ಣ ಪರ್ಯಾಯಕ್ಕೆ ವಿರುದ್ಧವಾದ ಶಬ್ದಗಳನ್ನೇ ಅಪೂರ್ಣ ಪರ್ಯಾಯ ಶಬ್ದಗಳು ಎನ್ನುವರು. ಈ ಬಗೆಯ ಶಬ್ದಗಳು ಭಾಷೆಯಲ್ಲಿ ಸಾಮಾನ್ಯವಾಗಿ ದೊರೆಯುತ್ತವೆ. ಇವುಗಳ ಅರ್ಥವನ್ನು ಪೂರ್ಣ ಪರ್ಯಾಯಗಳಂತೆ ಶೈಲಿಕವಾಗಿಯೂ, ವೈಚಾರಿಕವಾಗಿಯೂ ಮತ್ತು ಪ್ರಾಯೋಗಿಕವಾಗಿಯೂ ವಿವರಿಸಿಕೊಳ್ಳಬಹುದು. ಉದಾಹರಣೆಗೆ ಜಲ ಜಲಮಯವಾಗಿದೆ ನೀರು ನೀರಾಗಿದೆ ಎಂಬುವುಗಳ ಜಲ ಮತ್ತು ನೀರು ಎಂಬ ಶಬ್ದಗಳಲ್ಲಿ ಶೈಲಿಕ ಹಾಗೂ ವೈಚಾರಿಕ ಅಂತರವೇನೂ ತೋರಿಬರುವುದಿಲ್ಲ. ಜಲ ಪಾನಮಾಡಿ ಎಂಬುದನ್ನು ಯಾರೂ ನೀರು ಪಾನ ಮಾಡಿ ಎಂದು ಬಳಸುವುದಿಲ್ಲ. ಇದರಲ್ಲಿ ಪ್ರಾಯೋಗಿಕ ಅಂತರವಿದೆ. ಹೀಗೆ ಅಪೂರ್ಣ ಪರ್ಯಾಯ ಶಬ್ದಗಳಲ್ಲಿ ಅವುಗಳ ಅರ್ಥದ ಅಂತರವನ್ನು ಶೈಲಿಕ, ವೈಚಾರಿಕ ಮತ್ತು ಪ್ರಾಯೋಗಿಕವಾಗಿ ವಿವರಿಸಿ ತೋರಿಸಬಹುದು. ಹೀಗೆ ಪರ್ಯಾಯ ಶಬ್ದಗಳನ್ನು ವೈಜ್ಞಾನಿಕವಾಗಿ ವಿವೇಚಿಸಬಹುದಾದ ವಿಜ್ಞಾನವನ್ನು ಪರ್ಯಾಯ ವಿಜ್ಞಾನ (Synonymics or Synonymology) ವೆಂದು ಹೆಸರಿಸಿಕೊಳ್ಳುವರು. ಪರ್ಯಾಯ ವಿಜ್ಞಾನ ಇಂದು ಅರ್ಥವಿಜ್ಞಾನದ

ಒಂದು ಪ್ರಮುಖ ಶಾಖೆಯಾಗಿದೆ. ಕೆಲವರು ಇದನ್ನು ಭಾಷಾವಿಜ್ಞಾನದ ಪ್ರಮುಖ ಶಾಖೆಯನ್ನಾಗಿ ಪರಿಗಣಿಸಿಕೊಂಡು ಪರ್ಯಾಯ ಶಬ್ದಗಳನ್ನು ಇತರ ಭಾಷಿಕಾಂಶಗಳಂತೆ ವಿವರಣಾತ್ಮಕವಾಗಿಯೂ, ತೌಲನಿಕವಾಗಿಯೂ ಮತ್ತು ಐತಿಹಾಸಿಕವಾಗಿಯೂ ವಿವೇಚಿಸುವರು. ಆದರೆ ಪರ್ಯಾಯಶಬ್ದಗಳನ್ನು ಹೀಗೆ ಮೂರು ರೀತಿಯಲ್ಲಿ ವಿವೇಚಿಸಿರುವ ಉದಾಹರಣೆಗಳು ಬಹಳ ಕಡಿಮೆ.

(17) ಭಿನ್ನಾರ್ಥ (Homonymy): ಶಬ್ದಗಳ ಧ್ವನಿಗಳು ಕೆಲವು ವೇಳೆ ಸಮಾನವಾಗಿ ತೋರಿಬಂದರೂ ಅವುಗಳ ಅರ್ಥ ಬೇರೆ ಬೇರೆಯಾಗಿರಬಹುದಾದ ಸಾಧ್ಯತೆಗಳಿವೆ. ಏಕಾರ್ಥಕ ಶಬ್ದಗಳು ಮೊದಮೊದಲು ಒಂದೇ ಅರ್ಥ ಹೊಂದಿದ್ದು ಅನಂತರ ಬೇರೆಬೇರೆ ಕಾರಣಗಳಿಂದ ಬೇರೆಬೇರೆ ಅರ್ಥವನ್ನು ಸಂಪಾದಿಸಿಕೊಂಡು ಭಿನ್ನಾರ್ಥಕಗಳಾಗಿ ಬೆಳೆದುಬಂದಿರುತ್ತವೆ. ಉದಾಹರಣೆಗೆ ಸಂಸ್ಕೃತದ ಆಮ್ರ (ಮಾವು) ಅರಬ್ಬಿಯ ಆಮ್ (ಸಾಧಾರಣ) ಎಂಬ ಶಬ್ದಗಳನ್ನು ಗಮನಿಸಬಹುದು. ಸಂಸ್ಕೃತದ ಆಮ್ರ ಮಾವು ಎಂಬರ್ಥವನ್ನು, ಹಿಂದಿಯ ಆಮ್ ಮಾವಿನ ಹಣ್ಣು ಎಂಬರ್ಥವನ್ನು, ಅರಬ್ಬಿಯ ಆಮ್ ಸಾಧಾರಣ ಎಂಬರ್ಥವನ್ನು ಸೂಚಿಸುತ್ತವೆ. ಇದೇ ರೀತಿ ಸಂಸ್ಕೃತದ ಕುಲ ಗುಂಪು ಎಂಬರ್ಥವನ್ನು, ಹಿಂದಿಯಲ್ಲಿ ಕುಲ್ ಎಂಬುದು ಪರಿವಾರ ಎಂಬರ್ಥವನ್ನು ಅರಬ್ಬಿಯಲ್ಲಿ ಕುಲ್ ಸಮಸ್ತ ಎಂಬರ್ಥವನ್ನು ಹೊಂದಿರುತ್ತವೆ. ಹೀಗೆ ಸಮಧ್ವನಿಯ ಶಬ್ದಗಳು ಬೇರೆಬೇರೆ ಭಾಷೆಗಳಲ್ಲಿ ಬೇರೆಬೇರೆ ಅರ್ಥವನ್ನು ಪಡೆದುಕೊಂಡಿರಬಹುದಾದ ಸಾಧ್ಯತೆಗಳು ಇಲ್ಲದೆ ಇಲ್ಲ. ಇಂತಹ ಸಮಾನ ಧ್ವನೀಯ ಭಿನ್ನಾರ್ಥಕ ಶಬ್ದಗಳನ್ನೇ ಭಿನ್ನಾರ್ಥಕಗಳು ಎನ್ನುವರು. ಇದಕ್ಕೆ ಇಂಗ್ಲಿಷಿನ Hare (ಮೊಲ) Hair (ಕೂದಲು) I (ನಾನು) eye (ಕಣ್ಣು) ಎಂಬ ಶಬ್ದಗಳನ್ನು ಉದಾಹರಿಸಿಕೊಳ್ಳಬಹುದು. ಭಾಷೆಗಳಲ್ಲಿ ಇಂತಹ ಶಬ್ದಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವೆ. ಇದಕ್ಕೆ ಕನ್ನಡದ ಧನ (ಹಣ) ದನ (ಪಶು) ಅಜಿ³ (ಬಂಡೆ) ಅರೆ (ಅರ್ಧ) ಬರೆ (ಬರೆಯುವುದು) ಬರೆ (ಬರೆಹಾಕು) ಬಾಳೆ (ಬಾಳೆ ಹಣ್ಣು) ಬಾಟಿ³ (ಬಾಳೆಮೀನು) ಎಂಬ ಶಬ್ದಗಳನ್ನು ಗಮನಿಸಬಹುದು. ಈ ಭಿನ್ನಾರ್ಥ ಸಮಧ್ವನೀಯ ಶಬ್ದಗಳು ಮೊದಮೊದಲು ಒಂದೇ ಆಗಿದ್ದು ಅವು ಕಾಲಾನಂತರ ಬೇರೆ ಬೇರೆಯಾಗಿ ಪರಿವರ್ತನೆಗೊಂಡು ಬೇರೆ ಬೇರೆ ಅರ್ಥವನ್ನು ಪಡೆದುಕೊಂಡು ಬೆಳೆದುಬಂದ ಶಬ್ದಗಳಾಗಿರುವುದರಿಂದ ಅವುಗಳ ಬೆಳವಣಿಗೆಯಲ್ಲಿ ಧ್ವನಿಗಳ ಐಕ್ಯ ಮತ್ತು ಅವುಗಳ ವಿಭಜನೆ ಸಾಮಾನ್ಯವಾಗಿ ತೋರಿಬರುತ್ತವೆ ಈ ಕಾರಣದಿಂದ ಅವು ಒಂದೇ ರೂಪದ ಬೇರೆಬೇರೆ ಅರ್ಥ ಹೊಂದಿರುವ ಭಿನ್ನಾರ್ಥಕ ಶಬ್ದಗಳಾಗಿ ಕಾಣಿಸಿಕೊಳ್ಳುತ್ತವೆ. ಹೀಗೆ ಭಾಷೆಯಲ್ಲಿ ಒಂದೇ ಅರ್ಥ ಹೊಂದಿರುವ ಬೇರೆ ಬೇರೆ ರೂಪದ ಶಬ್ದಗಳು, ಬೇರೆ ಬೇರೆ ಅರ್ಥಹೊಂದಿರುವ ಒಂದೇ ರೂಪದ ಶಬ್ದಗಳು ಹೆಚ್ಚು ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲು ಸಾಧ್ಯವಾಗಿದೆ. ಇಂತಹ ಶಬ್ದಗಳನ್ನು ಬೇರೆಬೇರೆ ಭಾಷೆಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಪಟ್ಟಿಮಾಡಿ ತೋರಿಸಬಹುದು.

ಕೆ. ಮೊಹಮ್ಮದ್ ಶರೀಫ್

ಕೆಳದಿ ಅರಸರು ಮತ್ತು ಕವಲೇದುರ್ಗ

ಕ್ರಿ.ಶ. ಹದಿನಾರನೆಯ ಶತಮಾನದ ಪ್ರಾರಂಭದಿಂದ ಹದಿನೆಂಟನೆಯ ಶತಮಾನದ ಮೂರನೆಯ ಪಾದದವರೆಗೆ ಕರ್ನಾಟಕ ರಾಜ್ಯದ ಮಲೆನಾಡು ಮತ್ತು ಕರಾವಳಿ ಪ್ರದೇಶದಲ್ಲಿ ಆಳಿದ ಕೆಳದಿ ವಂಶದ ಅರಸರು ಮೊದಲು ವಿಜಯನಗರ ಅರಸರ ಸಾಮಂತರಾಗಿದ್ದು ಆ ರಾಜ್ಯದ ಪತನಾನಂತರ ಸ್ವತಂತ್ರರಾದರು. ಈ ಅರಸರ ರಾಜ್ಯ ಅದರ ಉಚ್ಛ್ರಾಯಸ್ಥಿತಿಯಲ್ಲಿ ಈಗಿನ ಶಿವಮೊಗ್ಗ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಬಹುಭಾಗ, ಉತ್ತರ ಕನ್ನಡ, ಧಾರವಾಡ, ಚಿತ್ರದುರ್ಗ ಜಿಲ್ಲೆಗಳ ಕೆಲಭಾಗ ಮತ್ತು ಕೇರಳದ ಸ್ವಲ್ಪ ಭಾಗಗಳನ್ನು ಒಳಗೊಂಡಿತ್ತು. ಈ ರಾಜ್ಯದ ರಾಜಧಾನಿಗಳು ಕ್ರಮವಾಗಿ ಕೆಳದಿ, ಇಕ್ಕೇರಿ ಮತ್ತು ಕೊನೆಗೆ ಬಿದನೂರು (ನಗರ) ಸ್ವಲ್ಪಕಾಲ ಭುವನಗಿರಿ ಅಥವಾ ಕವಲೇದುರ್ಗ ಆಗಿದ್ದವು.

ಉತ್ತುಂಗ ಪರ್ವತಶ್ರೇಣಿ ಹಾಗೂ ದಟ್ಟವಾದ ಕಾಡುಗಳಿಂದ ಕೂಡಿ ನಿಸರ್ಗ ಸೌಂದರ್ಯಕ್ಕೆ ಹೆಸರಾದ ಮಲೆನಾಡಿನ ಮಡಿಲಿನಲ್ಲಿರುವ ಕವಲೇದುರ್ಗ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿಗೆ ಸೇರಿದ್ದು ಇದು ತೀರ್ಥಹಳ್ಳಿಗೆ ಸು. ೧೩ ಮೈಲಿ ದೂರದಲ್ಲಿ ಪಶ್ಚಿಮದಲ್ಲಿದೆ. ಕವಲೇದುರ್ಗದಿಂದ ಪಶ್ಚಿಮಕ್ಕೆ ಬಿದನೂರು (ನಗರ) ಇದೆ. ಸಮುದ್ರಮಟ್ಟದಿಂದ ಸು. ೩೦೫೮ ಅಡಿಗಳಷ್ಟು ಎತ್ತರದಲ್ಲಿರುವ ಇದು ಕೆಳದಿ ಅರಸರ ದುರ್ಗಗಳಲ್ಲಿಯೇ ಅತ್ಯಂತ ದುರ್ಗಮವಾದದ್ದು. ಸುತ್ತಲೂ ಅರಣ್ಯ ಹಾಗೂ ವಿಶಾಲವಾದ ಗುಡ್ಡಗಾಡುಗಳಿಂದ ತುಂಬಿ ಅಚ್ಚ ಹಸಿರಾಗಿದೆ. ಈ ಸ್ಥಳಕ್ಕೆ ಕವಿಲೇ ದುರ್ಗ, ಕವಲೇದುರ್ಗ, ಕವುಲೇದುರ್ಗ, ಕೌಲೇದುರ್ಗ ಎಂಬೆಲ್ಲ ಹೆಸರುಗಳಿವೆ. ಇದನ್ನು ಕೆಳದಿ ಅರಸರ ಶಾಸನಗಳಲ್ಲಿ ದುರ್ಗ, ಭುವನಗಿರಿದುರ್ಗ ಎಂದು ಕರೆದಿದ್ದಾರೆ. ಹೈದರ್ಅಲಿ ಇದನ್ನು ವಶಪಡಿಸಿಕೊಂಡ ನಂತರ ಈ ಭುವನಗಿರಿದುರ್ಗಕ್ಕೆ 'ಕಾವಲ ದುರ್ಗ' ಎಂಬ ಹೆಸರು ಬಂತು.[1] ಇದನ್ನು ಕೃತಯುಗದಲ್ಲಿ ರೇಣುಕಾಶ್ರಮವೆಂದೂ, ತ್ರೇತಾಯುಗದಲ್ಲಿ ಆಗಸ್ತ್ಯಾಶ್ರಮವೆಂದೂ ಮತ್ತು ದ್ವಾಪರಯುಗದಲ್ಲಿ ಕಾಮ್ಯಕವನ ವೆಂದೂ ಕರೆದರು. ಈ ಸ್ಥಳದಲ್ಲಿ ಪಾಂಡವರು ವನವಾಸ ಕಾಲದಲ್ಲಿ ತಂಗಿದ್ದರೆಂದೂ ಬೆಟ್ಟದ ಮೇಲೆ ಕೋಟೆ ಕೊತ್ತಲಗಳನ್ನು ಕಟ್ಟಿದರೆಂದೂ ಭೀಮ ನೀರಿಗಾಗಿ ಈ ಸ್ಥಳದ

ಸಮೀಪ ಒಂದು ಕಟ್ಟೆಯನ್ನು ನಿರ್ಮಿಸಿ ತುಂಗಾನದಿಯನ್ನು ಇಲ್ಲಿಗೆ ತಿರುಗಿಸಿದುದಾಗಿಯೂ ತದನಂತರ ಋಷಿಗಳ ಪ್ರಾರ್ಥನೆಯಂತೆ ಧರ್ಮರಾಯ ಕಟ್ಟೆಯಿಂದ ನೀರು ಬಿಡಿಸಿದುದಾಗಿಯೂ ಐತಿಹ್ಯವಿದೆ.[2]

ಕವಲೇದುರ್ಗ ಸು. ೧೮೮೩ರವರೆಗೂ ತಾಲ್ಲೂಕು ಕೇಂದ್ರವಾಗಿದ್ದ ಸ್ಥಳ.[3] ಅನಂತರ ಸಂಪೂರ್ಣವಾಗಿ ತಾಲ್ಲೂಕಿನ ಎಲ್ಲಾ ಆಡಳಿತ ಕಛೇರಿಗಳು ತೀರ್ಥಹಳ್ಳಿಗೆ ವರ್ಗಾಯಿಸಲ್ಪಟ್ಟು ತಾಲ್ಲೂಕಿನ ಹೆಸರೂ ತೀರ್ಥಹಳ್ಳಿ ತಾಲ್ಲೂಕು ಎಂದು ಬದಲಾಯಿತು. ೧೮೧೦ರಲ್ಲಿ ದಿವಾನ್ ಪೂರ್ಣಯ್ಯ ಕವಲೇದುರ್ಗದ ಅಮಲ್‌ದಾರನಿಗೆ ಕಳುಹಿಸಿರುವ ನಿರೂಪದಲ್ಲಿ ಈ ಅಮಲ್‌ದಾರನಿಗೆ ಕೆಲವು ಸಲಹೆಗಳನ್ನು ಮಾಡಿರುವುದನ್ನು ನಾವು ಕಾಣಬಹುದು.[4]

ಈ ಸ್ಥಳದ ದುರ್ಗಮವಾದ ಗುಡ್ಡದಲ್ಲಿ ಕೆಳದಿ ಅರಸರ ಭವ್ಯವಾದ ಕೋಟೆ ಇದೆ. ಭವ್ಯವಾದ ಬಾಗಿಲುಗಳಿಂದ ಕೂಡಿದ ಈ ಕೋಟೆ ಬಹು ಸುಂದರವಾಗಿದೆ. ಚಿತ್ರದುರ್ಗದ ಕೋಟೆಯಂತೆ ಇದೂ ಏಳು ಸುತ್ತಿನ ಕೋಟೆ. ಕರ್ನಾಟಕದಲ್ಲಿ ಚಿತ್ರದುರ್ಗದ ಕೋಟೆಯನ್ನು ಬಿಟ್ಟರೆ ಇಷ್ಟು ಭದ್ರವಾದ ಮತ್ತು ಇಂದಿಗೂ ನೋಡಬಹುದಾದ ಏಳುಸುತ್ತಿನ ಕೋಟೆ ಇರುವುದು ಕವಲೇದುರ್ಗದಲ್ಲಿ ಮಾತ್ರ. ಈ ಏಳು ಸುತ್ತುಗಳಲ್ಲಿ ಎರಡು ಸುತ್ತುಗಳು ಗ್ರಾಮದ ಸುತ್ತಲೂ ಗ್ರಾಮದ ರಕ್ಷಣೆಗಾಗಿ, ಉಳಿದ ಐದು ಸುತ್ತುಗಳು ದುರ್ಗದ ರಕ್ಷಣೆಗಾಗಿ ಇವೆ. ದೊಡ್ಡ ದೊಡ್ಡ ಕಲ್ಲುಗಳಿಂದ ಕಟ್ಟಿರುವ ಈ ಗೋಡೆಗಳಲ್ಲಿ ಅಲ್ಲಲ್ಲಿ ಅಸಂಖ್ಯ ಕಿಂಡಿಗಳೂ ಚಿಕ್ಕಚಿಕ್ಕ ಬುರುಜುಗಳೂ ಇವೆ. ಈಗ ಈ ಗೋಡೆಗಳ ಸುತ್ತಮುತ್ತಲೂ ಮರಗಿಡಬಳ್ಳಿಗಳು ಬೆಳೆದು ನಿಂತು ಕಾಡಾಗಿ ಪರಿಣಮಿಸಿದೆ. ಈ ಕೋಟೆಯನ್ನು ಕೆಳದಿ ಅರಸ ಸದಾಶಿವನಾಯಕ (೧೫೪೦?–೧೫೬೬) ಕಟ್ಟಿಸಿದನೆಂದು ತಿಳಿದುಬರುತ್ತದೆ.[5] ಅದಲ್ಲದೆ ಈ ಕೋಟೆಯನ್ನು ಕೆಳದಿಯ ಅರಸರು ಆಗಾಗ ಭದ್ರಪಡಿಸುತ್ತಲೇ ಬಂದರು. ಎರಡನೆಯ ಸೋಮಶೇಖರನಾಯಕ (೧೭೧೪–೧೭೩೯) ಈ ಕೋಟೆಯನ್ನು ಜೀರ್ಣೋದ್ಧಾರ ಮಾಡಿದುದಲ್ಲದೆ ಗಾಳಿಯುಪ್ಪರಿಗೆಯನ್ನು ಕಟ್ಟಿಸಿದ.[6] ಈ ಕೋಟೆಯ ಅಂಚಿನಲ್ಲಿ (ಊರನ್ನೊಳಗೊಂಡು) ಕಲ್ಲಿನಿಂದ ಕಟ್ಟಿರುವ ಗೋಡೆಯೊಂದಿದೆ. ಕೋಟೆಯಿಂದ ಹೊರಗಡೆ ಹೋಗಲು ಚಪ್ಪೆ ಬಾಗಿಲು, ಕೌರಿ ಬಾಗಿಲು, ಭದ್ರಾಪುರದ ಬಾಗಿಲು, ದಿಡ್ಡಿ (ಗಿಡ್ಡಿ) ಬಾಗಿಲುಗಳೆಂಬ ಹಲವು ಬಾಗಿಲುಗಳಿವೆ.

ಕವಲೇದುರ್ಗದ ಊರೊಳಗೆ ವೆಂಕಟಪ್ಪನಾಯಕನಿಂದ ಪ್ರತಿಷ್ಠಿತವಾದ ವಿನಾಯಕ, ವಿರೂಪಾಕ್ಷ, ವಿಜಯವಿಠಲ, ವೀರಭದ್ರ, ನರಸಿಂಹ, ಗುರುನಾಥ, ಭುವನೇಶ್ವರಿ (ಮಾರಮ್ಮ) ಮುಂತಾದ ದೇವತೆಗಳ ಗುಡಿಗಳಿವೆ. ಈ ಗುಡಿಗಳು ದುರ್ಗದ ಹೊರಭಾಗಕ್ಕೆ ದುರ್ಗಕ್ಕೆ ಕಾವಲು ಇರುವಂತೆ ಸುತ್ತಲೂ ಕಂಗೊಳಿಸುತ್ತವೆ. ಇವುಗಳಲ್ಲಿ ಕೆಲವು ಈಗ ಪಾಳುಬಿದ್ದಿವೆ. ಇಂದಿಗೂ ಈ ಗುಡಿಗಳಲ್ಲಿ ಪೂಜೆ ನಡೆಯುತ್ತದೆ. 'ಭುವನೇಶ್ವರಿ' ಇಂದಿಗೂ ಈ ಊರಿನ ಗ್ರಾಮದೇವತೆ. ಈಗ ಈ ದೇವತೆಯನ್ನು

'ಮಾರಮ್ಮ' ಎಂದು ಕರೆಯುತ್ತಾರೆ. ಭುವನೇಶ್ವರಿ ಅಧಿದೇವತೆಯಾದ ಈ ಗ್ರಾಮವನ್ನು ಸಂಕೇತಿಸಿ ಹಿರಿಯ ವೆಂಕಟಪ್ಪನಾಯಕನು ತನ್ನ ಈ ಹೊಸದಾಗಿ ಕಟ್ಟಿರುವ ದುರ್ಗವನ್ನು ಭುವನೇಶ್ವರಿಗಿರಿ ಎಂಬ ಅರ್ಥದಲ್ಲಿ ಭುವನಗಿರಿ ಎಂದು ಕರೆದಿರಬಹುದು. ಭುವನೇಶ್ವರಿ ಅಥವಾ ಮಾರಮ್ಮ ಎಂದು ಕರೆಯುವ ಈ ದೇವತೆಯ ಹೆಸರಲ್ಲಿ ಎರಡು ವರ್ಷಕ್ಕೊಂದಾವರ್ತಿ ಬಹು ವಿಜೃಂಭಣೆಯಿಂದ ಜಾತ್ರೆ (ಮಾರಮ್ಮನ ಜಾತ್ರೆ) ನಡೆಯುತ್ತದೆ. ಸುತ್ತಮುತ್ತಲಿನ ಜನರೆಲ್ಲ ಬಂದು ಈ ಜಾತ್ರೆಯಲ್ಲಿ ತುಂಬ ಸಡಗರದಿಂದ ಪಾಲ್ಗೊಳ್ಳುತ್ತಾರೆ. ಕೆಳದಿ ಅರಸ ವೆಂಕಟಪ್ಪನಾಯಕನು (೧೫೮೬–೧೬೨೯) ಕಟ್ಟಿಸಿದ ಪುರಾತನವಾದ ಮಸೀದಿಯೂ ಇಲ್ಲಿದೆ.

ಇವುಗಳಲ್ಲದೆ ಕಲ್ಯಾಣ ಮಂಟಪ, ಟಂಕಶಾಲೆ[7], ಶಿವಗಂಗಾ ಎಂಬ ಜಲಕ್ರೀಡಾ ಕೊಳಗಳು, ಪುರಾತನ ಗೋರಿಗಳು, ಬಾವಿಗಳು ಹೇರಳವಾಗಿವೆ. ಕೆಳದಿ ಅರಸರ ಕಾಲದಲ್ಲಾದ, ತಿಮ್ಮಣ್ಣನಾಯಕನೆಂಬುವನು ಕಟ್ಟಿಸಿದ ಕೆರೆ, (ತಿಮ್ಮಣ್ಣನಾಯಕನ ಕೆರೆ), ಬಿಳಿಗಿ ಅರಸರು ಕಟ್ಟಿಸಿದ ಕೆರೆ (ಮಠದ ಕೆರೆ) ಹಾಗೂ ಶಿಸ್ತುಗಾರ ಶಿವಪ್ಪ ನಾಯಕನ (೧೬೪೫-೧೬೬೦) ಮೊದಲನೆಯ ಹೆಂಡತಿ ಲಿಂಗಮ್ಮಾಜಿಯ ಹೆಸರಿನ ಕೆರೆ (ಲಿಂಗಮ್ಮಾಜಿ ಕೆರೆ) ಇಲ್ಲಿವೆ. ಪರಿಹಾರಮಠ, ಗವಿಮಠವೆನ್ನಲಾದ ಪಾಳು ಬಿದ್ದಿರುವ ಮಠಗಳೂ ಇಲ್ಲಿವೆ. ತಿಮ್ಮಣ್ಣನಾಯಕನ ಕೆರೆಯ ದಂಡೆಯ ಮೇಲೆ ಮಹಾನವಮಿಯ ಬಯಲು ಎಂದು ಕರೆಯುವ ಬಯಲು ಸ್ಥಳದಲ್ಲಿ ಅಸಂಖ್ಯಾತ ಮಹಾಸತಿ ಕಲ್ಲುಗಳಿವೆ. ಶಾಸನಗಳಿಲ್ಲವಾದರೂ ಇವು ಆಗಿನ ಕಾಲದಲ್ಲಿ ಗ್ರಾಮರಕ್ಷಣೆಗೆ ಪ್ರಾಣಾರ್ಪಣೆ ಮಾಡಿದ ಸತಿಪತಿಯರ ಸಾಹಸದ ಕಥೆಯನ್ನು ಮುಕ್ತಮನದಿಂದ ಸಾರುತ್ತವೆ.

ಕವಲೇದುರ್ಗದ ಬೆಟ್ಟದ ಮೇಲೆ ತೊಲೆತಮ್ಮ, ಮುಂಡಿಗೆತಮ್ಮರೆಂಬ ಪರಾಕ್ರಮಶಾಲಿಗಳಾದ ಇಬ್ಬರು ಸಹೋದರರು ಸೇನೆಯ ಕಟ್ಟಿ 'ವಿಶೇಷವಾಗಿ ಮಲೆತು ನಡೆಯುತ್ತ ಇದ್ದ' ಅವರನ್ನು ವೆಂಕಟಪ್ಪನಾಯಕ ಸದೆಬಡಿದು ಕೋಟೆಯನ್ನು ಕೊಂಡ ಅನಂತರ ಇದನ್ನು 'ಭುವನಗಿರಿದುರ್ಗ' ಎಂದು 'ನಾಮಾಂಕಿತ ಮಾಡಿ' ದೊಡ್ಡ ಸಂಕಣ್ಣನಾಯಕ (೧೫೬೬) ಕಾಶೀಕ್ಷೇತ್ರದಿಂದ ತಂದ ದಿವ್ಯಲಿಂಗವನ್ನು 'ವಿಶ್ವೇಶ್ವರಲಿಂಗ' ಎಂದು ಹೆಸರಿಸಿ ಕೋಟೆಯೊಳಗೆ ಅದನ್ನು ಪ್ರತಿಷ್ಠೆ ಮಾಡಿಸಿದುದಲ್ಲದೆ ಅದಕ್ಕೆ ಪೂಜೆಯ ವ್ಯವಸ್ಥೆ ಮಾಡಿಸಿದನೆಂದೂ 'ಭಂಡಾರ, ಜ್ಞಾನಶಾಲೆ ಯುಗ್ರಾಣ, ಪಣತವಾನೆಯ ಮಹಲು, ಕುದುರೆಯಲಾಯ' ಮುಂತಾದ 'ಮಹಲು'ಗಳನ್ನು ಕಟ್ಟಿಸಿದನೆಂದು ಕೆಳದಿ ನೃಪವಿಜಯದಲ್ಲಿ ಹೇಳಿದೆ.[8] ಶಿಖರದಲ್ಲಿ ಕಟ್ಟಿಸಿದ ಈಶ್ವರದೇವಾಲಯಕ್ಕೆ ಬೆಟ್ಟದ ಮತ್ತು ಮಂದಿರದ ಶಿಖರಗಳ ವಿಶೇಷತೆಯನ್ನು ತೋರಿಸುವುದಕ್ಕಾಗಿಯೋ ಏನೋ ಶಿಖರೇಶ್ವರ ದೇವಾಲಯವೆಂದು ಕೆಳದಿ ದೊರೆ ಬಸವಭೂಪಾಲ (ಹಿರಿಯ ಬಸವಪ್ಪನಾಯಕ—೧೬೯೭-೧೭೧೪) ತನ್ನ 'ಶಿವತತ್ವ ರತ್ನಾಕರ' ಎಂಬ ಗ್ರಂಥದಲ್ಲಿ ಹೇಳಿದ್ದಾನೆ. ಇದಲ್ಲದೆ ಲಕ್ಷ್ಮೀನಾರಾಯಣ, ಮೈಲಾರೇಶ್ವರ ಮುಂತಾದ ಗುಡಿಗಳನ್ನು ಕೋಟೆಯ ಒಳಭಾಗದಲ್ಲಿ ಕಟ್ಟಿಸಿದ.

ಇವುಗಳಲ್ಲದೆ ಇನ್ನೂ ಅನೇಕ ಪಾಳು ಬಿದ್ದಿರುವ ಗುಡಿಗಳು ಕೋಟೆಯ ಒಳಭಾಗದಲ್ಲಿವೆ. ಇವೆಲ್ಲವೂ ಕೆಳದಿ ಅರಸರು ಕಲಾ ಪ್ರಪಂಚಕ್ಕೆ ಸಲ್ಲಿಸಿದ ಕಾಣಿಕೆಯ ಕುರುಹುಗಳಾಗಿ ಉಳಿದಿವೆ. ಕಾಶಿ ವಿಶ್ವೇಶ್ವರ ದೇವಾಲಯ ಶಿಲ್ಪಕಲಾ ವೈಭವದಿಂದ ಕೂಡಿದೆ. ಕೆಳದಿ ಅರಸರ ಈ ದೇವಾಲಯಗಳು ಮಲೆನಾಡ ವಾಸ್ತುಶಿಲ್ಪದ ಕೆಲವು ವಿಶಿಷ್ಟ ಮಾದರಿಗಳೆನ್ನಿಸಿವೆ.

ಉತ್ತಮ ಶಿಲ್ಪದಿಂದ ಕೂಡಿದ ಕೆಳದಿ ನಾಯಕರ ಕಾಲದ ಹಲವು ಕಲ್ಯಾಣಿಗಳು ಇಲ್ಲಿವೆ. ಅವುಗಳಲ್ಲಿ ಶಾಂತಗಂಗೆ ಸುಂದರವಾಗಿದೆ. ಬಾಗಿಲು, ಕಲ್ಲಿನ ಚಪ್ಪಡಿಗಳು ಮತ್ತು ಮುರಿದು ಬಿದ್ದಿರುವ ಕಲ್ಲು ಕಂಬಗಳು ಮುಂತಾದ ಅರಸರ ಕಾಲದ ಅರಮನೆಯ ಅವಶೇಷಗಳು ಇಂದಿಗೂ ಉಳಿದು ಬಂದಿವೆ. ಇವುಗಳಲ್ಲಿ ೮ ಅಡಿ ಉದ್ದ ೭ ಅಡಿ ಅಗಲವಿರುವ ಕಲ್ಲಿನ ಮಂಚವೂ ಒಂದು. ರಾಣಿಯ ಮಂಚವೆಂದು ಹೆಸರಿಸುವ ಈ ಮಂಚವನ್ನು ೧೬೯೪ರಲ್ಲಿ ನಿರ್ಮಿಸಲಾಯಿತೆಂದು. ಅದರ ಮೇಲಿರುವ ಶಾಸನದಲ್ಲಿ ಹೇಳಿದೆ. ಉತ್ತಮ ರೇಖಾಚಿತ್ರಗಳಿಂದ ಕೂಡಿ ತುಂಬ ಆಕರ್ಷಕವಾದ ಈ ಮಂಚ ಈಗ ಮೈಸೂರಿನಲ್ಲಿದೆ.[9] ಇವಲ್ಲದೆ ಮದ್ದುಗುಂಡುಗಳನ್ನು ಶೇಖರಿಸಿಡುವ ಕೋಣೆಗಳು, ಕಮಂಡಲತೀರ್ಥ (ಗದಾತೀರ್ಥ), ತುಪ್ಪ ಮತ್ತುಎಣ್ಣೆಯ ಬಾವಿಗಳು, ಕಲ್ಲುಮರಿಗೆಗಳು ಮುಂತಾದುವು ಇಲ್ಲಿವೆ.

ಇವುಗಳಲ್ಲದೆ ಕವಲೇದುರ್ಗದಲ್ಲಿ ಕೆಳದಿ ಅರಸರ ಕಾಲದಲ್ಲಿ 'ದುರ್ಗದ ತಿಂಮಣ' (ತಿಮ್ಮಣ್ಣ)ನೆಂಬುವನು ಕಟ್ಟಿಸಿಕೊಟ್ಟ ಮಹಾಮಹತ್ತಿನ ಮಠವೆಂದು ಕರೆಯುವ ಒಂದು ವೀರಶೈವ ಮಠವಿದೆ. ಈ ಮಠದ ವಿಷಯದಲ್ಲಿ ಕೆಳದಿ ವೆಂಕಟಪ್ಪನಾಯಕನ ಸೇವೆಯಂತೂ ಅಮೋಘವಾದುದು. ಇಲ್ಲಿ ಕೆಳದಿ ಅರಸರಿಗೆ ಸೇರಿದ ಸುಮಾರು ೭೦–೭೫ ತಾಮ್ರಶಾಸನಗಳು ಮತ್ತು ಓಲೆಗರಿಗಳು ಇವೆ.[10] ಇಲ್ಲಿರುವ ತಾಮ್ರಶಾಸನಗಳ ಪೈಕಿ ಏಳು ಶಾಸನಗಳು ಕೆಳದಿ ಅರಸ ವೆಂಕಟಪ್ಪನಾಯಕನಿಗೂ (೧೫೮೬–೧೬೨೯)[11] ಒಂದು ವೀರಪ್ಪನಾಯಕನಿಗೂ (೧೬೩೦)[12], ಹದಿನಾರು ವೀರಭದ್ರನಾಯಕನಿಗೂ (೧೬೨೯–೧೬೪೫)[13], ಒಂದು ಶಿವಪ್ಪನಾಯಕನಿಗೂ (೧೬೪೫–೧೬೬೦)[14], ಮೂರು ಭದ್ರಪ್ಪನಾಯಕನಿಗೂ (೧೬೬೨–೧೬೬೪)[15], ಹದಿನಾರು ಸೋಮಶೇಖರನಾಯಕನಿಗೂ (೧೬೬೪–೧೬೭೧)[16], ಹದಿನಾಲ್ಕು ಇದೇ ಸೋಮಶೇಖರನಾಯಕನ ಧರ್ಮಪತ್ನಿ ಚೆನ್ನಮ್ಮಾಜಿಗೂ (೧೬೭೧–೧೬೯೬)[17], ಹನ್ನೆರಡು (10 ಹಳೆಯವು+2 ಹೊಸವು) ಹಿರಿಯ ಬಸವಪ್ಪನಾಯಕನಿಗೂ (೧೬೯೭–೧೭೧೪)[18], ಮೂರು (2 ಹಳೆಯವು+1 ಹೊಸದು) ಸೋಮಶೇಖರನಾಯಕನಿಗೂ (೧೭೧೪–೧೭೩೯) ಸೇರಿವೆ.[19] ಇವಲ್ಲದೆ ಬಿಳಿಗಿ ಘಂಟೆ ವಡೆಯರ ಪೌತ್ರರಾದ ಶಿವಪ್ಪನಾಯಕರ ಪುತ್ರರಾದ ಇಂಮಡಿ ಶಿವಪ್ಪನಾಯಕನಿಗೆ ಸೇರಿದ ಒಂದು ಶಾಸನವೂ (೧೬೭೪) ಇದೆ.[20] ಮಠಗಳಲ್ಲೆಲ್ಲ ಇದು ಪ್ರಧಾನ ಮಠ (ಮಹಾಮಹತ್ತಿನ ಮಠ) ಆಗಿದ್ದುದರಿಂದ ವಿವಿಧ ಸ್ಥಳಗಳ ಮಠಗಳಿಗೆ ಕೊಟ್ಟ ದತ್ತಿಗಳನ್ನು ಉಲ್ಲೇಖಿಸುವ ಶಾಸನಗಳು ಈ ಮಠದಲ್ಲಿ ಉಳಿದುಕೊಂಡು ಬಂದಿರಬಹುದು.[21]

ಇಲ್ಲಿರುವ ಶಾಸನಗಳಲ್ಲಿ ಕವಲೇದುರ್ಗದ ಮಹಾಮಹತ್ತಿನ ಮಠಕ್ಕೂ ಕೊಟ್ಟ ದತ್ತಿಯನ್ನು ಹೆಸರಿಸುವ ಕೆಲವು ಶಾಸನಗಳಿವೆ. ಸು. ೧೬೭೪ರ ಶಾಸನವು[22] "ಶ್ರೀಮದನೇಕ ಬ್ರಂಹ್ಮಾಂಡಭಾಂಡಗರ್ಭಗರ್ಭೀಕೃತ ವಿಧಿಮಧುಸೂಧನ ತ್ರಿದಿಶಾಧೀಶ್ವರಾದ್ಯನೇಕ ದೇವತಾ ಮಕುಟಮಣಿಗಣಕಿರಣದೀಪ್ತಪಾದಪಯೋಜ ಪರಶಿವ ಲೀಲಾ ಸುಕೃತ ಕಳೇವರಮಪ್ಪ ಶ್ರೀ ನಂದಿನಾಥ ಶ್ರೀಭೃಂಗಿನಾಥ ಶ್ರೀ ವೀರಭದ್ರ ದೇವರ ಮುಖ್ಯರಾದ ಸಜ್ಜನಶುಧಶಿವಾಚಾರಸಂಪ್ಪಂನರಾದ ದೇವಾಪ್ರಥ್ವೀ ಮಹಾ ಮಹತ್ತಿನೊಳಗಾದ "ಭುವನಗಿರಿದುರ್ಗದಲ್ಲೂ" (ಕವಲೇದುರ್ಗದಲ್ಲಿ) 'ದುರ್ಗದ ತ್ರಿಂಮಂಣ' (ತಿಮ್ಮಣ್ಣ) ಕಟ್ಟಿಸಿದ 'ಮಹತ್ತಿನಮಠದ ಧರ್ಮಕೆ' ಕೆಳದಿಯ ವೆಂಕಟಪ್ಪನಾಯಕನು ಕೊಟ್ಟ ದತ್ತಿಯ 'ಪಟ್ಟಿಯು ಶಿಥಿಲವಾದ ಸಂಮಂಧ' ಚೆನ್ನಮ್ಮಾಜಿಯು ಪುನಃ ಈ ತಾಮ್ರಶಾಸನದಲ್ಲಿ ಬರೆಸಿ ಅದೇ ದತ್ತಿಯನ್ನು ಮುಂದುವರಿಸಿದ್ದನ್ನು ಕಾಣಬಹುದು. ಇನ್ನೊಂದು ಶಾಸನವು[23] ಕೆಳದಿ ಅರಸ ಸೋಮಶೇಖರ ನಾಯಕನ ಕಾಲಕ್ಕೆ ಸೇರಿದುದು. ಕೆಲವು ಸಂದರ್ಭಗಳಲ್ಲಿ ಮಠವೇ ಸರ್ಕಾರದಿಂದ ಭೂಮಿಯನ್ನು ಕೊಂಡದ್ದಕ್ಕೆ ಇದೊಂದು ನಿದರ್ಶನ. ಇಲ್ಲಿಯ 'ಮಹತ್ತಿನಮಠದವರ ಕೈಯ ಅರಮನೆಗೆ ಕ್ರಯದ ಬಗೆ ಗ ೨೧೦ಂ೫ ತೆಗೆದುಕೊಂಡು' ವೊಸರೂರ ಸೀಮೆಯ ಕಲ್ಲೂರ ಹೋಬಳಿ ಕಳಲೆಗ್ರಾಮದಲ್ಲಿ ಭೂಮಿಯನ್ನು ಕೊಟ್ಟುದುದನ್ನು ಇಲ್ಲಿ ಕಾಣಬಹುದು. ಹಾಗೆಯೇ ಇದೇ ಮಠದ ಇನ್ನೊಂದು ಶಾಸನವು[24] 'ಮಹತ್ತಿನವರ ಕೈಯಲ್ಲಿ ಕ್ರಯ ಗ೯೦೧॥೦ ಶಾಸನವ ಬರಸಿಕೊಡುವ ಬಗೆ ಗ ೧೯೫॥೦ ಒಟ್ಟು ಗ ೧೯೭೭ ಅರಮನೆಗೆ ತೆಗೆದುಕೊಂಡು' ಮರುಗಸೂರಗ್ರಾಮದಲ್ಲಿ 'ತೊಂಭತ್ತ ಆರು ವರಹಂನ್ನು ಯೇಳುಹಣ ಹಾಗದ ಸ್ವಾಸ್ಥೇನು ಯೀ ಮಹತ್ತಿನಮಠದ ಧರ್ಮಕೆ ಶಿವಾರ್ಪಿತವಾಗಿ ಬಿಟ್ಟು ಯಿಾ ಭೂಮಿಗೆ ನೆಟ್ಟ ಲಿಂಗಮುದ್ರೆ ಕಲ್ಲಿನೊಳಗುಳ್ಳ ನಿಧಿನಿಕ್ಷೇಪ ಜಲಪಾಷಾಣಅಕ್ಷೀಣಿಆಗಾಮಿಸಿದಸಾಧ್ಯಂಗಳೆಂಬ ಅಷ್ಟಭೋಗತೇಜಸ್ವಾಮ್ಯಂಗಳು ಯೀ ಭೂಮಿಯಲ್ಲಿ ಸಸ್ಯಾರಾಮ ಮುಂತಾಗಿ ಯೇನು ಅಧಿಕ ಫಲವಾಹಂತೆ ಸಹ ಆಗುಮಾಡಿಕೊಂಡು ಮಹತುಪಾರಂಪರ್ಯ್ಯವಾಗಿ ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಿಂ ಮಠದ ಧರ್ಮವ ನಡಸಿಕೊಂಡು' ಬರುವುದೆಂದು ಈ ಮಹತ್ತಿನಮಠಕ್ಕೆ ಚೆನ್ನಮ್ಮಾಜಿಯ ಪುತ್ರ ಬಸವಪ್ಪನಾಯಕ ಶಾಸನವನ್ನು ಬರೆಸಿಕೊಟ್ಟದ್ದಾನೆ.

ಈ ಶಾಸನಗಳ ಅಧ್ಯಯನದಿಂದ ಅಂದಿನ ಪ್ರಭುಗಳು ಮತ್ತು ಇತರರು ಸದಾಶಿವ ಸಾಗರ (ಸಾಗರ), ಬಾರಕೂರು, ಭದ್ರಾಪುರ, ಅಂಡಿಗೆ, ಕೆರೆಕೊಪ್ಪ, ಚಕೋಡು, ಮುಡುಬ, ಬಸರೂರು, ಆರಗ, ಹುಲಿಕಲ್ಲು, ಹೊಸಂಗಡಿ, ಬಿದನೂರು (ನಗರ), ಕೋಟೇಶ್ವರ, ಕಡೇಕೊಪ್ಪ, ಉಳುವೆ, ಯೆಡೆಹಳ್ಳಿ, ಆಗುಂಬೆ, ಮಂಡಲಿ, ತೀರ್ಥರಾಜ ಪುರ, ಕೊಡೂರು (ಕೋದೂರು), ಕಾರಗಲ್ಲು, ಭುವನಗಿರಿದುರ್ಗ (ಕವಲೇದುರ್ಗ) ಮುಂತಾದ ಕಡೆಗಳಲ್ಲಿ ಮಠಗಳನ್ನು ನಿರ್ಮಾಣಮಾಡಿಸಿ ಹೇರಳವಾಗಿ ದತ್ತಿಯನ್ನು ಕೊಟ್ಟರೆಂದು ತಿಳಿದುಬರುತ್ತದೆ.

ಅರಸರುಗಳಲ್ಲದೆ ಅವರ ಪತ್ನಿಯರು, ತಾಯಂದಿರು ಮತ್ತು ರಾಜಮನೆತನದ ಇತರ ಪರಿವಾರದವರೂ ಮಠಗಳನ್ನು ಕಟ್ಟಿಸಿರುವರು. ಇವರಲ್ಲದೆ ಸರಕಾರದ ಅಧಿಕಾರಿಗಳು ಮತ್ತು ಅವರ ಪತ್ನಿಯರೂ ಮಠಗಳನ್ನು ಕಟ್ಟಿಸುವ ಕಾರ್ಯದಲ್ಲಿ ಪಾಲ್ಗೊಂಡಿರುವರು. ಇವರಲ್ಲದೆ ಖಾಸಗಿ ವ್ಯಕ್ತಿಗಳಾದ ಬನದಮ್ಮ ಎಂಬ ದಾದಿ, ಶಿವಲಿಂಗಿ ಮತ್ತು ಪುಟ್ಟತಾಯಿ ಜಂಬುಖಂಡಿ ಚೆನ್ನಿ ಎಂಬ ನೃತ್ಯದ ಹುಡುಗಿಯರು ಹಾಗೂ ಶಾಂತಯ್ಯನೆಂಬುವನು ಸ್ವಇಚ್ಛೆಯಿಂದ ಮುಂದೆ ಬಂದು ಮಠಗಳನ್ನು ಕಟ್ಟಿಸಿ ಸರ್ಕಾರದಿಂದ ಭೂಮಿಯನ್ನು ಕೊಂಡು ಅದನ್ನು ದಾನಮಾಡಿದುದಾಗಿ ಇಲ್ಲಿನ ಶಾಸನಗಳಲ್ಲಿ ಹೇಳಿದೆ. ಕೆಲವು ಸಂದರ್ಭಗಳಲ್ಲಿ ಮಠಗಳು ಸರ್ಕಾರದಿಂದಲೇ ಭೂಮಿಯನ್ನು ಕೊಂಡುಕೊಂಡ ನಿದರ್ಶನಗಳನ್ನು ಕಾಣಬಹುದು. ವಿದ್ಯಾಪೀಠಗಳಾಗಿ, ಪೂಜಾ ಕ್ಷೇತ್ರಗಳಾಗಿ, ಸಾಮಾಜಿಕ ಜೀವನದ ಕೇಂದ್ರಗಳಾಗಿ ಮತ್ತು ಇವೆಲ್ಲಕ್ಕೂ ಮಿಗಿಲಾಗಿ ವೀರಶೈವ ತತ್ತ್ವದ ಮುಖ್ಯ ಕೇಂದ್ರಗಳಾಗಿ ವಿವಿಧ ಹಂತದ ಅಧಿಕಾರಿಗಳ ಮೂಲಕ ಬಹುಮುಖ ಕಾರ್ಯ ನಡೆಸುತ್ತಿದ್ದ ಪವಿತ್ರ ಸಂಸ್ಥೆಗಳಾಗಿದ್ದವು ಈ ಮಠಗಳು.

ಈ ಶಾಸನಗಳಲ್ಲಿ ಅರಸರು ತಮ್ಮನ್ನು 'ವಿಶುದ್ಧವೈದಿಕಾದ್ವೈತ ಸಿದ್ಧಾಂತ' ಮತ್ತು 'ಶಿವಗುರುಭಕ್ತಿಪರಾಯಣ' ಎಂದು ಹೇಳಿಕೊಂಡಿರುವುದು ಗಮನಾರ್ಹ. ಇದರಿಂದ ಕೆಳದಿ ಅರಸರು ವೀರಶೈವ ತತ್ವಾವಲಂಬಿಗಳಾಗಿದ್ದರೆಂದು ಸ್ಪಷ್ಟವಾಗುತ್ತದೆ.

ಈ ಶಾಸನಗಳಲ್ಲಿ ದತ್ತಿಕೊಟ್ಟಿರುವ ಮಠಗಳಲ್ಲಿ ಮಹತ್ತಿನ ಮಠಗಳೇ ಹೆಚ್ಚು ಸಂಖ್ಯೆಯಲ್ಲಿವೆ. ಒಂದೆರಡು ವಶೀಕೃತಮಠಕ್ಕೂ ಮತ್ತು ಒಂದು ವಿರಕ್ತಮಠಕ್ಕೂ ದತ್ತಿಕೊಟ್ಟಿರುವುದನ್ನು ಇಲ್ಲಿ ಕಾಣಬಹುದು. ಈ ಸ್ಥಳದಲ್ಲಿ ದೊರೆತ ತಾಮ್ರಶಾಸನಗಳ ಪೈಕಿ ಎರಡು ಶಾಸನಗಳಲ್ಲಿ[25] ಕವಲೇದುರ್ಗದಲ್ಲಿರುವ ಮುಸ್ಲಿಮರ ಮಸೀದಿಗೂ ದತ್ತಿಯನ್ನು ಕೊಟ್ಟಿರುವುದನ್ನು ಕಾಣಬಹುದು. ಇದು ಕೆಳದಿ ಅರಸರ ಧರ್ಮ ಸಹಿಷ್ಣುತೆ ಹಾಗೂ ಸಮದರ್ಶಿತ್ವವನ್ನು ತೋರಿಸುವ ಕುರುಹಾಗಿದೆ. ಕ್ರಿಶ್ಚಿಯನ್ನರ ಧರ್ಮಸಂಸ್ಥೆಗೆ ಕೊಟ್ಟಿರುವ ಉಲ್ಲೇಖಗಳಿಲ್ಲವಾದರೂ ಶಿವಪ್ಪನಾಯಕನ ಆಸ್ಥಾನದಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚಿಗೆ ಕ್ರಿಶ್ಚಿಯನ್ನರಿದ್ದರೆಂದು ತಿಳಿದುಬಂದಿದೆ.[26] ಒಟ್ಟಿನಲ್ಲಿ ಈ ಶಾಸನಗಳು ಆ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಜೀವನದ ಮೇಲೆ ಬೆಳಕು ಚೆಲ್ಲುತ್ತವೆ.

ಕವಲೇದುರ್ಗ ಗಂಡಾಂತರ ಪ್ರಸಂಗಗಳಲ್ಲಿ ಕೆಳದಿಯ ನಾಯಕರಿಗೆ ರಕ್ಷಣೆಯ ಸ್ಥಳವಾಗಿತ್ತು. ಬಿಜಾಪುರದ ಸುಲ್ತಾನ ಮಹಮ್ಮದ್ ಆದಿಲ್‌ಷಾಹನ (೧೬೨೭–೧೬೫೬) ದಂಡನಾಯಕನಾದ ರಣದುಲ್ಲಾಖಾನ್ ಇಕ್ಕೇರಿಯನ್ನು ಜಯಿಸಲು ಹೊರಟಾಗ ವೀರಭದ್ರನಾಯಕನಿಗೆ (೧೬೨೯–೧೬೪೫) ಶತ್ರುಗಳನ್ನು ಎದುರಿಸುವುದು ಕಷ್ಟಕರವಾದಾಗ ಕುಟುಂಬ ಹಾಗೂ ಪರಿವಾರಸಮೇತನಾಗಿ ಇಕ್ಕೇರಿಯನ್ನು ಬಿಟ್ಟು ಕವಲೇದುರ್ಗಕ್ಕೆ ಬಂದನು. ಆದರೆ ಇಕ್ಕೇರಿ ವಶವಾದ ಅನಂತರ[27] ರಣದುಲ್ಲಾಖಾನ ಕೆಂಗಹನುಮನೆಂಬುವನ ಸಹಾಯದಿಂದ ನಲವತ್ತು ಸಾವಿರ ಕುದುರೆ, ಒಂದು ಲಕ್ಷ

ಕಾಲಾಳು ಹಾಗೂ ನಲವತ್ತು ಆನೆಗಳಿದ್ದುವೆನ್ನಲಾದ ಬಹುದೊಡ್ಡ ಸೈನ್ಯ ಸಮೇತನಾಗಿ ಕವಲೇದುರ್ಗವನ್ನು ಮುತ್ತಿಗೆ ಹಾಕಿದಾಗ ವೀರಭದ್ರನಾಯಕ ಶಾಂತಿಯೊಪ್ಪಂದವನ್ನು ಮಾಡಿಕೊಂಡನು.[28]

ಸೈನ್ಯ ಸಮೇತನಾದ ಬಿಜಾಪುರದ ಎರಡನೆಯ ಅದಿಲ್‌ಷಾಹ (೧೬೫೬–೧೬೭೨) ಕೆಳದಿ ಅರಸರ ಮೂರನೆಯ ರಾಜಧಾನಿಯಾದ ಬಿದನೂರಿಗೆ (ನಗರ) ಮುತ್ತಿಗೆ ಹಾಕಿದಾಗ ಅಲ್ಲಿಯ ದೊರೆ ಭದ್ರಪ್ಪನಾಯಕ (೧೬೬೧–೧೬೬೪) ಶತ್ರುಗಳನ್ನು ಎದುರಿಸಲಾರದೆ ಕವಲೇದುರ್ಗಕ್ಕೆ ಬಂದು ರಕ್ಷಣೆ ಪಡೆದನು. ಅಂಬಲಿಗೊಳ ಎಂಬಲ್ಲಿ ಘೋರವಾದ ಯುದ್ಧವಾಗಿ ಬಿದನೂರು ಸೈನ್ಯ ಸಂಪೂರ್ಣ ಸೋಲನ್ನು ಅನುಭವಿಸಬೇಕಾಯಿತು. ಬಿದನೂರು ಸಂಪೂರ್ಣ ವಶವಾದ ಅನಂತರ ಆದಿಲ್‌ಷಾಹನ ಸೈನ್ಯ ಷನ್‌ಜರ್‌ಖಾನನೆಂಬ ದಂಡನಾಯಕನೊಂದಿಗೆ ಕವಲೇದುರ್ಗಕ್ಕೆ ಮುತ್ತಿಗೆ ಹಾಕಿತು. ಆದರೆ ಅಲ್ಲಿದ್ದ ಭದ್ರಪ್ಪನಾಯಕ ಧೈರ್ಯಗೆಡದೆ ಸೈನ್ಯವನ್ನು ಸಜ್ಜುಮಾಡಿಕೊಂಡು ಕವಲೇದುರ್ಗಕ್ಕೆ ಸಂಪರ್ಕಕಲ್ಪಿಸುವ ಎಲ್ಲ ರಸ್ತೆಗಳನ್ನು ಕಾಲುದಾರಿಗಳನ್ನು ಮುಚ್ಚಿಸಿ ಸಂಪರ್ಕ ಕಡಿದುಹಾಕಿದನು. ಇದರ ಪರಿಣಾಮದಿಂದಾಗಿ ಬಿಜಾಪುರದ ಸೈನ್ಯ ಯುದ್ಧರಂಗದಿಂದ ಹಿಂದಕ್ಕೆ ಸರಿಯಿತು. ಅನಂತರ ಭದ್ರಪ್ಪನಾಯಕ ಹೂವಯ್ಯನೆಂಬ ರಾಯಭಾರಿಯನ್ನು ಆದಿಲ್‌ಷಾಹನಲ್ಲಿಗೆ ಕಳುಹಿಸಿ ಶಾಂತಿಯೊಪ್ಪಂದವನ್ನು ಮಾಡಿಕೊಂಡನು.[29]

ಹಿರಿಯ ಸೋಮಶೇಖರನಾಯಕನ ಅನಂತರ ಕೆಳದಿಯ ಮುಖಂಡರಲ್ಲಿ ಎರಡು ಪಂಗಡಗಳಾಗಿ ದ್ವೇಷಕಾದಾಟಗಳಿಂದ ರಾಜ್ಯದಲ್ಲಿ ಅನಾಯಕತ್ವ, ಅರಾಜಕತೆ ತಲೆದೋರಿದುದರ ಪರಿಣಾಮವಾಗಿ ರಾಣಿ ಚೆನ್ನಮ್ಮಾಜಿ ತನ್ನ ಪ್ರಾಣಕ್ಕೆ ಅಪಾಯ ಸಂಭವಿಸಬಹುದೆಂದು ತಿಳಿದು ಬಿದನೂರನ್ನು ಬಿಟ್ಟು ಕವಲೇದುರ್ಗಕ್ಕೆ ಬಂದು ತಂಗಿದಳು. ಅಡವಿಗುಡ್ಡಗಳ ನಡುವಣ ಕವಲೇದುರ್ಗ ಅವಳ ರಾಜಧಾನಿಯಾಯಿತು. ಬಿಜಾಪುರದ ಸೇನೆಯನ್ನು ಸೋಲಿಸಿದ್ದ ಚೆನ್ನಮ್ಮನ ಸಾಮರ್ಥ್ಯದ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿತು. ಕಾಸರಗೋಡು ತಿಮ್ಮಣ್ಣನಾಯಕ, ಸಬ್ಬುನೀಸ ಕೃಷ್ಣಪ್ಪನಂತಹ ಮುತ್ಸದ್ದಿಗಳು ರಾಣಿಗೆ ನೆರವಾಗಲು ಮುಂದಾದರು.[30] ರಾಣಿ ಇವರೊಡನೆ ಸಮಾಲೋಚನೆ ನಡೆಸಿ ಬಿಕ್ಕಟ್ಟನ್ನು ಪರಿಹರಿಸಿದಳು. ಎಲ್ಲರೂ ರಾಜಿಯಾಗಿ ಕುತ್ಸಿತ ಶಿವಪ್ಪನಾಯಕನಿಗೆ[31] ಕೆಳದಿ ರಾಜಪಟ್ಟದ ಹಕ್ಕಿಲ್ಲವೆಂದು, ಚೆನ್ನಮ್ಮಾಜಿಯೇ ಪಟ್ಟದ ರಾಣಿಯೆಂದು ತೀರ್ಮಾನಿಸಿದುದರ ಫಲವಾಗಿ ಇವಳಿಗೆ (ಚೆನ್ನಮ್ಮಾಜಿಗೆ) ಶಕವರ್ಷ ೧೫೯೪[32] (ಕ್ರಿ.ಶ. ೧೬೭೨)ರಲ್ಲಿ ಕವಲೇದುರ್ಗದ ಅರಮನೆಯಲ್ಲಿ ಪಟ್ಟವಾಯಿತು. ನಂತರ ಈಕೆ ತನ್ನ ಸೇನೆ ಪರಿವಾರ ಸಮೇತ ಬಿದನೂರಿಗೆ ಹಿಂತಿರುಗಿದಳು.[33] ಚೆನ್ನಮ್ಮಾಜಿಯು ಬಲಾಢ್ಯನಾದ ಮೊಗಲ್ ಚಕ್ರವರ್ತಿ ಔರಂಗಜೇಬನ ಭಾರಿ ಸೈನ್ಯವನ್ನು ಸೋಲಿಸಿದುದು ಈ ರಾಣಿಯ ಆಳ್ವಿಕೆಯಲ್ಲಿ ಜರುಗಿದ ಚಿರಸ್ಮರಣೀಯ ಘಟನೆ. ಶಿವಾಜಿಯ ಮಗನಾದ ರಾಜಾರಾಮನು ಮೊಗಲರನ್ನು ಎದುರಿಸಲು ಯತ್ನಿಸಿದಾಗ

ಔರಂಗಜೇಬನು ಅವನ ಮೇಲೆ ಭಾರಿ ಸೈನ್ಯವನ್ನು ಕಳುಹಿಸಿದ. ಆಗ ರಾಜಾರಾಮ ಪನ್ಹಾಳಿ (ಕೊಲ್ಹಾಪುರದ ಹತ್ತಿರ ಪನ್ಹಾಳ)ಯಿಂದ ಓಡಿಹೋಗಿ ಕೆಳದಿ ರಾಜ್ಯದಲ್ಲಿ ಮೊರೆಹೊಕ್ಕನು. ಆಗ ಕರುಣಾಮಯಿಯಾದ ರಾಣಿ ಚೆನ್ನಮ್ಮಾಜಿಯು 'ಮೊರೆ ಹೊಕ್ಕವರನ್ನು ಬಿಟ್ಟುಕೊಡುವುದು ರಾಜಧರ್ಮವಲ್ಲ'ವೆಂದು ನಿಶ್ಚಯಿಸಿ ರಾಜಾ ರಾಮನಿಗೆ ರಕ್ಷಣೆಯ ಭರವಸೆಯನ್ನಿತ್ತಳು. ಅವನನ್ನು ವೇಷ ಮರೆಸಿ ಕಳಸ, ಖಾಂಡ, ಚಂದಿ (ಜಿಂಜಿ) ಮುಂತಾದ ಸ್ಥಳಗಳಿಗೆ ಕಳುಹಿಸಿದಳು. ರಾಜಾರಾಮನಿಗೆ ಆಶ್ರಯ ಕೊಟ್ಟಿದ್ದು ತಪ್ಪೆಂದು ಕ್ರಿ.ಶ. ೧೬೯೦ರಲ್ಲಿ ಔರಂಗಜೇಬನು ತನ್ನ ಮಗ ಅಜಮತಾರ ನೊಂದಿಗೆ ದೊಡ್ಡ ಸೈನ್ಯವನ್ನು ಕಳುಹಿಸಿದನು ಮೊದಲು ಆ ಸೈನ್ಯ ರಕ್ಷಣಾದುರ್ಗ ವಾದ ಕವಲೇದುರ್ಗವನ್ನು ಮುತ್ತಿತು. ಆಗ ಅಲ್ಲಿದ್ದ ಚೆನ್ನಮ್ಮಾಜಿಯೊಡನೆ ನಡೆದ ಈ ಯುದ್ಧದಲ್ಲಿ ಔರಂಗಜೇಬನ ಸೈನ್ಯ ಸೋಲನ್ನು ಅನುಭವಿಸಿತು. ಚೆನ್ನಮ್ಮಾಜಿಯು ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯವಿತ್ತು ಮೊಗಲರನ್ನು ಸೋಲಿಸಿದ ಈ ಮಹಾನ್ ಘಟನೆಯು ಭಾರತದ ಇತಿಹಾಸದ ಮೇಲೆಯೇ ಪರಿಣಾಮ ಉಂಟುಮಾಡಿ ತೆಂದು ಡಾ. ಬಿ. ಎ. ಸಾಲೆತ್ತೂರರು 'ಕನ್ನಡ ನಾಡಿನ ಚರಿತ್ರೆ'ಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಹೈದರ್ ಅಲಿಯು ಬಿದನೂರನ್ನು ಮುತ್ತಿಗೆ ಹಾಕಿದಾಗ ಕೋಟೆಯೊಳಗಿದ್ದ ರಾಣಿ ವೀರಮ್ಮಾಜಿ (೧೭೫೭–೧೭೬೩) ನವಾಬನಿಗೆ ಲೂಟಿಯಲ್ಲಿ ಏನೂ ಸಿಕ್ಕಬಾರ ದೆಂದು ಅರಮನೆಗೂ ರತ್ನಖಚಿತವಾದ ಆಭರಣಗಳಿಗೂ ಬೆಂಕಿ ಇಡಿಸಿ, ನಿಂಬಯ ಮತ್ತು ತನ್ನ ದತ್ತು ಮಗ ಸೋಮಶೇಖರನಾಯಕನೊಡಗೂಡಿ ರಹಸ್ಯವಾಗಿ ಒಳ ಮಾರ್ಗದಲ್ಲಿ ಕವಲೇದುರ್ಗಕ್ಕೆ ಬಂದು ತಂಗಿದಳು.[34] ಉಳಿದ ಬಂಡವಾಳದಿಂದ ಕವಲೇದುರ್ಗದ ಕೋಟೆಯನ್ನು ಭದ್ರಪಡಿಸಿದಳು. ಇದನ್ನು ತಿಳಿದ ಹೈದರ್ ಅಲಿಯು ಕವಲೇದುರ್ಗದ ಕೋಟೆಗೂ ಮುತ್ತಿಗೆ ಹಾಕಿದನು. ಆಗ ಅಲ್ಲಿದ್ದ ರಾಣಿ ಶರಣಾಗತ ಳಾದಳು. ಇದರ ಪರಿಣಾಮವಾಗಿ ಕ್ರಿ.ಶ. ೧೭೬೩ರಲ್ಲಿ ಕೆಳದಿ ಅರಸು ಮನೆತನದ ಪ್ರಭುತ್ವ ಕೊನೆಗೊಂಡಿತು.[35]

ಕ್ರಿ.ಶ. ೧೭೯೯ರಲ್ಲಿ ನಡೆದ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನು ಸತ್ತುಹೋದನು. ಆಗ ಅವನ ರಾಜ್ಯ ಬ್ರಿಟಿಷರ ವಶವಾಯಿತು. ಆಗ ಕವಲೇದುರ್ಗ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತು.

ವಿಜಯನಗರ ರಾಜ್ಯಕ್ಕೆ ಅನುಪಮ ಸೇವೆ ಸಲ್ಲಿಸಿ ಅದರ ಸಂಪ್ರದಾಯಧ್ಯೇಯ ಗಳನ್ನು ಸಮರ್ಥವಾಗಿ ಮುಂದುವರೆಸಿ ಚಿಕ್ಕ ಪುಟ್ಟ ಅರಸರಾದ ಸೋದೆ, ಬೀಳಗಿ, ತರೀಕೆರೆ, ಬಸವಾಪಟ್ಟಣ, ಚಿತ್ರದುರ್ಗ ಮುಂತಾದವರ ಜೊತೆ ಒಡನಾಟ ಒಡಿದಾಟ ಗಳೊಡನೆ ರಾಜ್ಯನಿರ್ವಹಣೆ ಮಾಡಿ ಭಾರಿ ಶತ್ರುಗಳಾದ ಆದಿಲ್‌ಷಾಹೀ ಅರಸರು, ಮೊಗಲರು, ಮರಾಠರು ಮತ್ತು ಮೈಸೂರು ಅರಸರೊಡನೆ ಯುದ್ಧ ಮಾಡಿ ವಿದೇಶೀಯ ರಾದ ಪೋರ್ಚುಗೀಸ್, ಡಚ್, ಫ್ರೆಂಚ್ ಮತ್ತು ಇಂಗ್ಲಿಷ್‌ರೊಡನೆ ವ್ಯಾಪಾರಕ್ಕಾಗಿ

ಕುಶಲ ವ್ಯವಹಾರ ನಡೆಸಿ ಸುಮಾರು ೨೫೦ ವರ್ಷಗಳ ಕಾಲ ಕರ್ನಾಟಕದ ಪ್ರಬಲ ರಾಜಕೀಯ ಶಕ್ತಿಯಾಗಿದ್ದ ಕೆಳದಿರಾಜ್ಯ ಕೊನೆಗೊಂಡಿತು.

ಭವ್ಯವಾದ ಕೋಟೆ, ಸುಸಜ್ಜಿತವಾದ ಅರಮನೆ, ದೇವಾಲಯಗಳು, ಮಠ, ಮಸೀದಿ, ಕೊಳಗಳಿಂದ ಕಂಗೊಳಿಸುತ್ತಿದ್ದು ಕೆಳದಿ ಅರಸರ ಇತಿಹಾಸದಲ್ಲಿ ಮಹತ್ತ್ವದ ಪಾತ್ರವಹಿಸಿದ ಕವಲೇದುರ್ಗ ಈಗ ಪ್ರೇಕ್ಷಣೀಯ ಸ್ಥಳವಾಗಿ ಉಳಿದಿದೆ.

ಅನುಬಂಧ : ಕವಲೇದುರ್ಗದ ಪ್ರಕಟಿತ ಶಾಸನಗಳು

ಅರಸ	ಕಾಲ	ದತ್ತಿ ಪಡೆದ ದೇವರು, ಮಠ, ಮಸೀದಿ ಅಥವಾ ವ್ಯಕ್ತಿ	ಟಿಪ್ಪಣಿ
1	2	3	4
ವಂದಗಿರಿ ವಿರುಪಣ್ಣ ವೊಡೆಯ (ಒಂದು ಶಾಸನ)	೧೩೬೨	ನಗರಿಯ ಕೋಟೆಯ ಮಯಿಲಾರ ದೇವರು	—
ವೆಂಕಟಪ್ಪ ನಾಯಕ (ಏಳು ಶಾಸನಗಳು)	೧೬೧೫	ಇಕ್ಕೇರಿಯ ಭತ್ತದ ಪೇಠೆಯ ಮಠ	—
	೧೬೧೬	ಸದಾಶಿವಸಾಗರದ ಮಹತ್ತಿನ ಮಠ	—
	೧೬೨೩	ಬಾರಕೂರು ಮಹತ್ತಿನ ಮಠ	—
	೧೬೨೩	ಮಲ್ಲಿಕಾರ್ಜುನ ದೇವರಿಗೆ ಕಟ್ಟಿಸಿಕೊಟ್ಟ ಮಠ	—
	೧೬೨೫	ಸಂಗಮೇಶ್ವರದ ಕೆರೆಯ ಸಮೀಪ ಮಹತ್ತಿನ ಮಠ	ಲಿಂಗಣ ಕಟ್ಟಿಸಿದುದು
	೧೬೨೮ ೧೬೨೮	ಕವಲೇದುರ್ಗದ ಮಸೀದಿಗೆ	ವೆಂಕಟಪ್ಪ ನಾಯಕನು ಕಟ್ಟಿಸಿದುದು
ವೀರಪ್ಪ ನಾಯಕ (ಒಂದು ಶಾಸನ)	೧೬೩೦	ಭದ್ರಾಪುರದ ಮಹತ್ತಿನ ಮಠವಾದ ವಿರಕ್ತ ಮಠ	—
ವೀರಭದ್ರ ನಾಯಕ (ಹದಿನಾರು ಶಾಸನಗಳು)	೧೬೩೦	ಭತ್ತದ ಪಿರೆಯ ಬಸವಲಿಂಗ ದೇವ	—
	೧೬೩೨	ಹೊಸ ಸೆಠಮಠದ ಮಹಂತ ದೇವ	—
	೧೬೩೫	ಕೆರ್ರೆಕೊಪ್ಪದ ಮಹತ್ತಿನ ಮಠ	ಬನದಂಮ ಕಟ್ಟಿಸಿದುದು
	೧೬೩೫	ಅಂಡಿಗೆ ಮಹತ್ತಿನ ಮಠ	ಅರಸನ ಮಾವ ರೇವಣ್ಣ ವೊಡೆಯರು ಕಟ್ಟಿಸಿದುದು
	೧೬೪೧	ಚಕೋಡು ಮಹತ್ತಿನ ಮಠ	ಕಪ್ಪುಗಳಲೆ ಬಸವಣ್ಣ ಕಟ್ಟಿಸಿದುದು

	೧೬೪೧	ಮುಡುಬ ಮಹತ್ತಿನ ಮಠ	ಹಾರೊವೆಂಕಟಯ್ಯ ಕಟ್ಟಿಸಿದುದು
	೧೬೪೧	ಮಳೆಯು ಕುದಿಹೇರ ಮಠದ ಶಿವಲಿಂಗದೇವ	—
	೧೬೪೧	ಭುವನಗಿರಿದುರ್ಗದ ಭದ್ರಾಪುರದ ಮಹತ್ತಿನ ಮಠ	ದುರ್ಗದ ತಿಮ್ಮಣ್ಣ ಕಟ್ಟಿಸಿದುದು
	೧೬೪೧	ಸೋಮೇಶ್ವರ ಮಹತ್ತಿನ ಮಠ	ಸಿದ್ದಮ್ಮಾಜಿ ಕಟ್ಟಿಸಿದುದು
	೧೬೪೧	ಬಸುರೂರು ಮಹತ್ತಿನ ಮಠ	ಕಪ್ಪುಗಳಲೆ ಬಸವಣ್ಣ ಕಟ್ಟಿಸಿದುದು
	೧೬೪೧	ಕಪ್ಪುಗಳಲೆ ಬಸವಪ್ಪ	—
	೧೬೪೨	ಮಂಡಲಿ ಮಹತ್ತಿನ ಮಠ	—
	೧೬೪೨	ಸುಂಣದ ಆಲೂರು ಮಹತ್ತಿನ ಮಠ	ಶಾಂತಪ್ಪ ಕಟ್ಟಿಸಿದುದು
	೧೬೪೨	ಕವಲೇದುರ್ಗ ಮಹತ್ತಿನ ಮಠ	ತಿಮ್ಮಣ್ಣ ಕಟ್ಟಿಸಿದುದು
	೧೬೪೨	ಸಂಗಮೇಶ್ವರದ ಕೆರೆಯ ಬಳಿಯ ಮಹತ್ತಿನ ಮಠ	ಸಿದ್ದಲಿಂಗಣ್ಣ ಕಟ್ಟಿಸಿದುದಂ
	೧೬೪೫	ಹುಲಿಕಲ್ಲು ಮಹತ್ತಿನ ಮಠ	ಚೆನ್ನಮಲ್ಲಿ ಸೆಟ್ಟಿ ಕಟ್ಟಿಸಿದುದು
ಶಿವಪ್ಪ ನಾಯಕ (ಒಂದು ಶಾಸನ)	೧೬೫೯	ಹೊಸಂಗಡಿ ಮಹತ್ತಿನ ಮಠ	ಚೆನ್ನಣ್ಣ ಕಟ್ಟಿಸಿದುದು
ಭದ್ರಪ್ಪ ನಾಯಕ (ಮೂರು ಶಾಸನಗಳು)	೧೬೬೨	ಹೆರೂರಗವಿ ಕರಿಬಸವರಾಜದೇವರಿಗೆ ಅದೇ ಗ್ರಾಮದ ಮಾರ್ಗಸ್ಥಳದ ಮಠ	—
	೧೬೬೩	ಕಂದಡಿಗನವಮಾನಿ ಮಹತ್ತಿನ ಮಠ	ಮೇಳದ ಶಿವಲಿಂಗಿಯ ದತ್ತಿ
	೧೬೬೬	ಕವಲೇದುರ್ಗದ (?) ಮಹತ್ತಿನ ಮಠ	ಘಂಟೆ ಅಮ್ಮಾಜಿಯ ದತ್ತಿ
ಸೋಮಶೇಖರ ನಾಯಕ (ಹದಿನಾರು ಶಾಸನಗಳು)	೧೬೬೪ } ೧೬೬೪ }	ಬಿದನೂರು ಹಳೇ ಮಹತ್ತಿನ ಮಠ	—
	೧೬೬೪	ಕೊಡುವಳಿ ಮಹತ್ತಿನ ಮಠ	ನಾಗಮ್ಮಾಜಿಯ ದತ್ತಿ
	೧೬೬೪	ಆರಗ ಮಹತ್ತಿನ ಮಠ	ಭದ್ರಪ್ಪನಾಯಕನ ದತ್ತಿಮುಂದುವರೆಸಿದ ಪ್ರಸ್ತಾಪ
	೧೬೬೪	ಕೋಟೇಶ್ವರ ಮಹತ್ತಿನ ಮಠ	ಪರಮೇಶ್ವರ ಅಮ್ಮಾಜಿ ಕಟ್ಟಿಸಿದುದು
	೧೬೬೫	ಕಲಿಸೆಯಿಂದ ಅಂಬಲಿಗೊಳದ ಮಾರ್ಗದ ಮಹತ್ತಿನ ಮಠ	ಚಿಕ್ಕ ಆರಮನೆಯ ಶಾಂತೈಯ್ಯ ಕಟ್ಟಿಸಿದುದು

1	2	3	4
	೧೬೬೫	ಸದಾಶಿವಸಾಗರ ವಶೀಕೃತ ಮಠ	ಹೊಸೂರು ಬೋವ ಕಟ್ಟಿಸಿದುದಂ
	೧೬೬೫	ಕಡೆಕೊಪ್ಪ ಮಹತ್ತಿನ ಮಠ	ಸಿದ್ದಲಿಂಗದೇವನು ಕಟ್ಟಿಸಿದುದು
	೧೬೬೭	ಉಳುವೆ ಸಿದ್ದಲಿಂಗೇಶ್ವರ ದೇವಾಲಯ	ಲಿಂಗಮ್ಮಾಜಿಯ ಹೆಸರಲ್ಲಿ ಕಟ್ಟಿಸಿದುದು
	೧೬೬೭	ಕವಲೇದುರ್ಗದ ಮಹತ್ತಿನ ಮಠ	ತಿಮ್ಮಣ್ಣ ಕಟ್ಟಿಸಿದುದು
	೧೬೬೭	ಉಳುವೆ ಮಹತ್ತಿನ ಮಠ	ಲಿಂಗಮ್ಮಾಜಿ ಹೆಸರಲ್ಲಿ ಕಟ್ಟಿಸಿದುದು
	೧೬೬೮ } ೧೬೬೯ }	ಪಟ್ಟಗುಪ್ಪೆ ಹೆದ್ದಾರಿಯ ಮಹತ್ತಿನ ಮಠ	ಹೊಳೆಯಮ್ಮ ಕಟ್ಟಿಸಿದುದು
	೧೬೭೦	ಎಡೆಹಳ್ಳಿ ಮಹತ್ತಿನ ಮಠ	ವೆಂಕಟಯ್ಯ ಕಟ್ಟಿಸಿದುದು
	೧೬೭೦	ಪಟ್ಟಗುಪ್ಪೆ ಹೆದ್ದಾರಿ ಮಹತ್ತಿನ ಮಠ	ಮರಿಬೋವ ಕಟ್ಟಿಸಿದುದು
	೧೬೭೧	ಜೆನಿ ಮಹತ್ತಿನ ಮಠ	ಹುಜೂರು ಮೋಳದ ಪುಟ್ಟತಾಯಿ ಜಂಬುಖಂಡಿ ಚೆನ್ನಿ ಕಟ್ಟಿಸಿದುದು
ಚೆನ್ನಮ್ಮಾಜಿ (ಹದಿನಾಲ್ಕು ಶಾಸನಗಳು)	೧೬೭೧	ಕಂದಡಿಗನಮಾನಿ ಮಹತ್ತಿನ ಮಠ	ಮೋಳದ ಶಿವಲಿಂಗಿ ಕಟ್ಟಿಸಿದುದು
	೧೬೭೩	ಜೆನಿ ಮಹತ್ತಿನ ಮಠ	ಹುಜೂರು ಮೋಳದ 'ಪುಟ್ಟತಾಯಿ ಜಂಬುಖಂಡಿ ಚೆನ್ನಿ ಕಟ್ಟಿಸಿದುದು
	೧೬೭೩	ಉಳುವೆ ಮಹತ್ತಿನ ಮಠ	ಲಿಂಗಮ್ಮಾಜಿ ಹೆಸರಲ್ಲಿ ಕಟ್ಟಿಸಿದುದು
	೧೬೭೪	ಕುಂಬಸಿ ಮಹತ್ತಿನ ಮಠ	ಚೆನ್ನಮ್ಮಾಜಿ ಕಟ್ಟಿಸಿದುದು
	೧೬೭೪	ಸಿದ್ಧಬಸವಣಾರಾಧ್ಯರಿಗೆ	ಇದು ಕ್ರಯದಾನ ಶಾಸನ
	೧೬೭೪	ಇಕ್ಕೇರಿ ರುದ್ರಮುನಿದೇವರು	ಪುನರ್ದತ್ತಿಯ ಪ್ರಸ್ತಾಪ
	೧೬೭೭	ಎಡೆಹಳ್ಳಿ ಮಹತ್ತಿನ ಮಠ	ಶಿವಮೊಗ್ಗೆ ಪುಟ್ಟಣ್ಣ ಕಟ್ಟಿಸಿದುದು
	೧೬೭೭	ಎಡೆಹಳ್ಳಿ ಮಹತ್ತಿನ ಮಠ	ಇದು ಕ್ರಯದಾನ ಶಾಸನ
	೧೬೭೯	ಹೊಸಹಳ್ಳಿ ಮಹತ್ತಿನ ಮಠ	—

	೧೬೮೧	ಆಗುಂಬೆ ಮಹತ್ತಿನ ಮಠ	ಪಾರ್ವತಿ ಅಮ್ಮ ಕಟ್ಟಿಸಿದುದು
	೧೬೮೯	ದಾಸನಗದ್ದೆ ವಶೀಕೃತ ಮಠದ ಗುರುಲಿಂಗದೇವ	ಇದು ಕ್ರಯದಾನ ಶಾಸನ
	೧೬೯೪	ಕವಲೇದುರ್ಗ ಮಹತ್ತಿನ ಮಠ	ದುರ್ಗದ ತಿಮ್ಮಣ್ಣ ಕಟ್ಟಿಸಿದುದು
	೧೬೯೫	ಕವಲೇದುರ್ಗದ ಮಹತ್ತಿನ ಮಠ	ಪುನರ್ದತ್ತಿಯ ಪ್ರಸ್ತಾಪ
	೧೬೯೫	ಕಂಬಾಳದ ವಿರುಪಾಕ್ಷದೇವ	ಇದು ಕ್ರಯದಾನ ಶಾಸನ
ಇಂಮಡಿ ಶಿವಪ್ಪ ನಾಯಕ (ಒಂದು ಶಾಸನ)	೧೬೭೫	ನೀರುಗುಡಿ ಗ್ರಾಮವನ್ನು ಹುಲುಗನಹಳ್ಳಿ ಚರಂತಿಗೆ	—
ಹಿರಿಯ ಬಸವಪ್ಪ ನಾಯಕ	೧೭೦೨	ಕವಲೇದುರ್ಗ ಮಹತ್ತಿನ ಮಠ	ದುರ್ಗದ ತಿಮ್ಮಣ್ಣ ಕಟ್ಟಿಸಿದುದು
(ಹನ್ನೆರಡು ಶಾಸನಗಳು)	೧೭೦೭	ಕಳಿಲೆ ಗುರುಮಲ್ಲಿಕಾರ್ಜುನದೇವ	ಕ್ರಯದಾನ ಶಾಸನ
	೧೭೦೭	ಎರಡು ದಂಡ ಮಠದ ಬಸವಪ್ರಭುದೇವ	15 ಎತ್ತಿನ ಮಾನ್ಯ ಬಿಟ್ಟಿದುದು
	೧೭೦೮	ತೀರ್ಥರಾಜಪುರ ಮಹತ್ತಿನ ಮಠ	ಲಿಂಗಮ್ಮಾಜಿ ಕಟ್ಟಿಸಿದುದು
	೧೭೦೮	ಬೊಕ್ಕಸದ ಸಿದ್ಧಬಸವಯ್ಯನೆಂಬುವನು ಹಂಪೆ ಜಾತ್ರೆಯಲ್ಲಿ ನಡೆಸುವ ಧರ್ಮಕ್ಕೆ	—
	೧೭೦೯	ಎರಡು ದಂಡ ಮಠದ ಬಸವ ಪ್ರಭುದೇವ	15 ಎತ್ತಿನ ಮಾನ್ಯ ಬಿಟ್ಟಿದುದು
	೧೭೦೯	ಮಂಡಲಿಯ ಮುಳ್ಳುಸೂಜಿಸ್ವಾಮಿ ಮಠ	—
	೧೭೦೯	ಬಿದನೂರಿಂದ ಆರಗಮಾರ್ಗದಲ್ಲಿನ ಮಹತ್ತಿನ ಮಠ	ಭದ್ರಯ್ಯನ ಹೆಸರಲ್ಲಿ ಕಟ್ಟಿಸಿದುದು
	೧೭೦೯	ತೀರ್ಥರಾಜಪುರ ಮಹತ್ತಿನ ಮಠ	ವೀರಮ್ಮಾಜಿ ಕಟ್ಟಿಸಿದುದು
	೧೭೧೧	ಮೂಡಗೊಪ್ಪ ಮಹತ್ತಿನ ಮಠ	ಶಾಂತವೀರಪ್ಪ ಕಟ್ಟಿಸಿದುದು
	೧೭೧೧	ಮೂಡಗೊಪ್ಪ ಮಹತ್ತಿನ ಮಠ	ಶಾಂತವೀರಪ್ಪ ಕಟ್ಟಿಸಿದುದು
	೧೭೧೩	ಆರಗದ ಮಹತ್ತಿನ ಮಠ	ಕದಳಿ ವೀರಶೆಟ್ಟಿ ಕಟ್ಟಿಸಿದುದು
ಎರಡನೆಯ ಸೋಮಶೇಖರ ನಾಯಕ	೧೭೧೯	ಚಿಕ್ಕಮಹಿಷಿ ವಶೀಕೃತ ಮಠ	ನಿರ್ವಾಣದೇವ ಕಟ್ಟಿಸಿದುದು
(ಮೂರು ಶಾಸನಗಳು)	೧೭೩೩	ಕೊಡೂರು ಮಹತ್ತಿನ ಮಠ	ವೀರಮ್ಮ ಕಟ್ಟಿಸಿದುದು
	೧೭೩೩	ಕಾರಗಲ್ಲು ಮಹತ್ತಿನ ಮಠ	ಬಸವಲಿಂಗದೇವ ಕಟ್ಟಿಸಿದುದು

ಅಡಿಟಿಪ್ಪಣಿಗಳು

1. ಡಾ. ಜಿ.ಎಸ್. ದೀಕ್ಷಿತ, ಕೆಳದಿ ನಾಯಕರು ಪು. ೧೮.
2. ಭೀಮನಕಟ್ಟೆ ಎಂದು ಕರೆಯುವ ಈ ಕಟ್ಟೆ ಕವಲೇದುರ್ಗಕ್ಕೆ ಸು. ೧೦ ಮೈಲಿಗಳ ದೂರದಲ್ಲಿದೆ.
3. C. Hayavadana Rao, *Mysore Gazetteer*, Vol. v., p. 1303.
4. (i) *M.A.R.* 1916, p. 78.
   (ii) ಈಗ ಈ ನಿರೂಪ ಶೃಂಗೇರಿಯ ಮಠದಲ್ಲಿದೆ.
5. K.D. Swaminathan, *The Nāyakas of Ikkēri*, p. 27.
6. ಲಿಂಗಣ್ಣಕವಿ ವಿರಚಿತ 'ಕೆಳದಿ ನೃಪವಿಜಯ' ಪು. ೧೬೮, ಸಂ. ಆರ್. ಶಾಮಶಾಸ್ತ್ರಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೩.
7. ಈಗ ಇಲ್ಲಿ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದೆ.
8. ಲಿಂಗಣ್ಣಕವಿ 'ಕೆಳದಿ ನೃಪವಿಜಯ' ಮೈಸೂರು ವಿಶ್ವವಿದ್ಯಾನಿಲಯ, ೧೯೭೩ ಪು. ೭೨
9. C. Hayavadana Rao, *Mysore Gazetteer* Vol. v, p. 1303.
10. *E.C. VIII*, Tl. 40–99, *M.A.R.* 1943, Ins. 37–45 ಮತ್ತು ಮೂರು ಹೊಸ ತಾಮ್ರ ಶಾಸನಗಳು (ನೋಡಿ. ಮಾನವಿಕ ಕರ್ಣಾಟಕ, ಸಂಪುಟ ೧೦, ಸಂಚಿಕೆ ೧, ಮೈಸೂರು ವಿಶ್ವವಿದ್ಯಾನಿಲಯ, ೧೯೭೯).
11. ಈ ದೊರೆಯ ಏಳು ಶಾಸನಗಳಲ್ಲಿ ಐದು ಶಾಸನಗಳು ಮಠದಿಂದಲೂ, ಎರಡು ಶಾಸನಗಳು ಸ್ಥಳದ ಖಾಜಿಯಿಂದಲೂ ಬಂದಿವೆ. *E.C. VIII* Tl, 38, 39, 56, 66, 82, 83, 97.
12. *E.C. VIII*, Tl. 51.
13. *E.C. VIII*, Tl. 40, 41, 42, 43, 44, 45, 49, 52, 54, 58, 62, 63, 84, 88, 94 ಮತ್ತು *M.A.R.* 1943–37.
14. *E.C. VIII*, Tl. 81.
15. *E.C. VIII*, Tl, 76, 85 ಮತ್ತು *M.A.R.* 1943–39.
16. *E.C. VIII*, Tl, 48, 50, 53, 55, 65, 71, 74, 75, 78, 80, 86, 92, 96, 98, 99 ಮತ್ತು *M.A.R.* 1943–38.
17. *E.C. VIII*, Tl, 46, 57, 61, 64, 67, 68, 69, 73, 77, 89, 90 ಮತ್ತು *M.A.R.* 1943–40, 41, 42.
18. *E.C. VIII*, Tl. 47, 59, 60, 72, 79, 91, 93, 95; *M.A.R.* 1943–43 44 ಮತ್ತು ಎರಡು ಹೊಸ ತಾಮ್ರ ಶಾಸನಗಳು (ನೋಡಿ : ಮಾನವಿಕ ಕರ್ಣಾಟಕ, ಸಂಪುಟ ೧೦, ಸಂಚಿಕೆ ೧, ಮೈ.ವಿ.ನಿ. ೧೯೭೯.)
19. *E.C. VIII*, Tl, 87, *M.A.R.* 1943–45 ಮತ್ತು ಒಂದು ಹೊಸ ತಾಮ್ರ ಶಾಸನ (ನೋಡಿ : ಮಾನವಿಕ ಕರ್ಣಾಟಕ ಸಂ. ೧೦. ಸಂ. ೧, ಮೈ.ವಿ.ನಿ. ೧೯೭೯)
20. *E.C. VIII*, Tl, 70.

21. ಡಾ. ಎಂ. ಎಚ್. ಕೃಷ್ಣ ಅವರು ಎಲ್ಲಾ ಮಠಗಳು ಪಾಳುಬಿದ್ದುದರಿಂದ ಅಲ್ಲಿಯ ತಾಮ್ರ ಶಾಸನಗಳನ್ನು ಈ ಮಠಕ್ಕೆ ತಂದಿರಬಹುದೆಂದು ಅಭಿಪ್ರಾಯಪಡುತ್ತಾರೆ. (*M.A.R.* 1943–p. 118). ಶಾಸನಗಳ ವಿವರಗಳಿಗೆ ನೋಡಿ, ಮಾನವಿಕ ಕರ್ಣಾಟಕ, ಸಂಪುಟ ೮, ಸಂಚಿಕೆ ೨, ಮೈ.ವಿ.ವಿ. ೧೯೭೮, ಪು. ೪೫.
22. *E.C. VIII,* Tl, 46
23. *E.C. VIII*, Tl, 78
24. *E.C. VIII*, Tl, 79
25. *E.C. VIII*, Tl, 38, 39
26. (i) B.L. Rice. *Mysore and Coorg from Inscriptions* p. 139
    (ii) ಕೆಳದಿ ರಾಜ್ಯದಲ್ಲಿ ಅನೇಕ ಶೈವ, ವೀರಶೈವ, ವೈಷ್ಣವ ಮಠಗಳಲ್ಲದೆ ಜೈನಬಸದಿಗಳು, ಮಸೀದಿಗಳು ಮತ್ತು ಚರ್ಚುಗಳಿದ್ದುವೆಂದು ಡಾ. ದೀಕ್ಷಿತರು ತಮ್ಮ ಉಪನ್ಯಾಸ ಗ್ರಂಥ ಮಾಲೆಯ ಹೊತ್ತಗೆಯಲ್ಲಿ ಹೇಳಿದ್ದಾರೆ (ಕೆಳದಿ ನಾಯಕರು ಪು. ೫೨).
27. ಶಕವರ್ಷ ೧೫೬೦, ಈಶ್ವರ ಸಂವತ್ಸರದ ಪುಷ್ಯ ಬ ೧೦ರಲ್ಲಿ ಅಂದರೆ ೩೦ ಡಿಸೆಂಬರ್ ೧೬೩೭ ರಲ್ಲಿ ಈ ಧಾಳಿ ನಡೆಯಿತೆಂದು 'ಕೆಳದಿ ನೃಪವಿಜಯ'ದಲ್ಲಿ ಹೇಳಿದೆ.
28 K.D. Swaminathan, *The Nāyakas of Ikkēri*, p. 73.
29. ಅದೇ. ಪುಟ ೧೦೬–೧೦೭
30. ಡಾ. ಸೂರ್ಯನಾಥ ಕಾಮತ್, 'ಕೆಳದಿ ಚೆನ್ನಮ್ಮಾಜಿ' ಪು. ೨೫–೨೬
31. ಇವನೇ ಅಂದಕವೆಂಕಟಯ್ಯನ ಮಗ
32. ಲಿಂಗಣ್ಣಕವಿ 'ಕೆಳದಿ ನೃಪವಿಜಯ,' ಮೈ.ವಿ.ವಿ. ೧೯೭೩
33. ಡಾ. ಜಿ.ಎಸ್. ದೀಕ್ಷಿತ 'ಕೆಳದಿ ನಾಯಕರು' ಪು. ೩೮–೩೯
34. (i) K.D. Swaminathan, *The Nāyakas of Ikkēri*, p. 159–60
    (ii) ಬಳ್ಳಾಳರಾಯನ ದುರ್ಗಕ್ಕೆ (ಬಲ್ಲಾಳರಾಯನ ದುರ್ಗಕ್ಕೆ) ಹೋದಳೆಂದು ಡಾ. ಜಿ.ಎಸ್. ದೀಕ್ಷಿತರು (ಕೆಳದಿ ನಾಯಕರು) ಮತ್ತು ಎಂ.ಎಸ್. ಪುಟ್ಟಣ್ಣ (ಇಕ್ಕೇರಿ ಸಂಸ್ಥಾನದ ಚರಿತ್ರೆ) ಹೇಳಿದ್ದಾರೆ.
35. K.D. Swaminathan, *The Nāyakas of Ikkēri*, p. 159–60.

ಡಾ. ಟಿ. ಬಿ. ಬಸವರಾಜು

ಬೌದ್ಧ ದರ್ಶನದಲ್ಲಿ ನೈರಾತ್ಮ್ಯತತ್ವ ಹಾಗೂ ನಶ್ವರತೆ—ಒಂದು ವಿವೇಚನೆ

'ಬುದ್ಧ' ಎಂಬ ಹೆಸರು ಇಂದು ಜಗತ್ಪ್ರಸಿದ್ಧವಾಗಿದೆ. ಬೌದ್ಧಧರ್ಮದ ಆದ್ಯ ಪ್ರವರ್ತಕನಾದ ಬುದ್ಧನು ತನ್ನದೇ ಆದ ವಿಶಿಷ್ಟತೆಯಿಂದ, ಮಾನವೀಯ ನೆಲೆಯುಳ್ಳ ಧಾರ್ಮಿಕ ಭಾವನೆಗಳಿಂದ ಮನೆಮಾತಾಗಿದ್ದಾನೆ. ಕ್ರಿ.ಪೂ. ಆರನೆಯ ಶತಮಾನದ ಮಧ್ಯಭಾಗದ ಸುಮಾರಿನಲ್ಲಿ ಹಿಮಾಲಯದ ತಪ್ಪಲಿನ 'ಕಪಿಲವಸ್ತು' ಎಂಬಲ್ಲಿ ಜನ್ಮತಾಳಿದ ಬುದ್ಧನಿಗೆ ತಂದೆತಾಯಿಗಳಿಟ್ಟ ಹೆಸರು 'ಸಿದ್ಧಾರ್ಥ'. ಸಿದ್ಧಾರ್ಥ ಒಬ್ಬ ರಾಜಮನೆತನದ ರಾಜಕುಮಾರ. ಕೇವಲ ಭೋಗವಸ್ತುಗಳ ನಡುವೆ, ಸುಖದ ಸುಪ್ಪತ್ತಿಗೆಯಲ್ಲಿದ್ದ ಈ ರಾಜಕುಮಾರ ಒಮ್ಮೆ ಊರ ಸಂಚಾರದ ಸಮಯದಲ್ಲಿ ಮೊದಲ ಬಾರಿಗೆ, 'ಮಾನವ'ನನ್ನು ಕಾಡುತ್ತಿರುವ ಸಾವು, ರೋಗ, ವೃದ್ಧಾಪ್ಯಗಳನ್ನು ಕಣ್ಣಾರೆ ಕಂಡು ದಂಗುಬಡಿದುಹೋಗುತ್ತಾನೆ. ಈ ಘಟನೆ ರಾಜಕುಮಾರ ಸಿದ್ಧಾರ್ಥನ ಬದುಕಿನಲ್ಲಿ ಮಹತ್ತರ ಪರಿಣಾಮವನ್ನೇ ಬೀರುತ್ತದೆ. ಇಡೀ ಮಾನವ ಸಮುದಾಯವನ್ನು ಪೀಡಿಸುತ್ತಿರುವ 'ಕೆಡುಕುಗ'ಳ ಬಗ್ಗೆ ಆತ ತೀವ್ರವಾಗಿ ಆಲೋಚಿಸುತ್ತಾ, ಕೆಡುಕಿನ ಕಾರಣವನ್ನು ಹುಡುಕುವ ಉದ್ದೇಶದ ನೆಲೆಯಲ್ಲಿ ಸರ್ವ ಲೌಕಿಕ ಬಂಧನಗಳಿಂದಲೂ ಬಿಡುಗಡೆ ಪಡೆಯಲು ಆಶಿಸುತ್ತಾನೆ. ಅನಂತರದಲ್ಲಿ ಅರಮನೆಯು ಆತನಿಗೆ ಕೊಳಕಿನ ಆಗರವಾಗಿಯೇ ತೋರತೊಡಗುತ್ತದೆ. ತನ್ನ ಉದ್ದೇಶ ಸಾಧನೆಗಾಗಿ ತನ್ನ ಕುಟುಂಬವನ್ನೂ, ಬಂಧು ಬಾಂಧವರನ್ನೂ, ಅರಮನೆಯನ್ನೂ ತ್ಯಜಿಸಿ ಕಾಡಿಗೆಹೋಗಿ ನಿರಂತರ ಸಾಧನೆಯಲ್ಲಿ ತೊಡಗುತ್ತಾನೆ. ಅಲ್ಲಿ 'ದ್ವಿತೀಯ'[1] ಪ್ರಯತ್ನದಲ್ಲಿ ಆತ ಜಯಶೀಲನಾಗಿ, ಕೆಡುಕಿಗೆ ಮೂಲವನ್ನು ಕಂಡುಕೊಂಡು, 'ಎಲ್ಲ ಆಸೆಗಳ ಅಂತಿಮಗುರಿ' ಎಂಬ ಸ್ಥಿತಿಯನ್ನು ಪಡೆದು 'ಬುದ್ಧ'ನಾಗುತ್ತಾನೆ. 'ಬುದ್ಧ' ಎಂದರೆ 'ಜಾಗೃತಿ ಪಡೆದವನು' ಎಂದೇ ಅರ್ಥೈಸಬಹುದಾಗಿದೆ.

ಬುದ್ಧನು ಸ್ವತಃ ಯಾವುದೇ ಗ್ರಂಥವನ್ನು ರಚಿಸಲಿಲ್ಲವಾದರೂ ಸುದೈವವಶಾತ್

---

1 ಆತ್ಮ ಸಂಸ್ಕರಣ ಮಾರ್ಗ

ಆತನ ಉಪದೇಶಗಳು ಆತನ ಶಿಷ್ಯರಿಂದಲೇ ಸಂಗ್ರಹಿತವಾಗಿವೆ.[1] ಬೌದ್ಧಧರ್ಮವು ಒಂದು ಅವೈದಿಕದರ್ಶನವೆಂದೇ ಖ್ಯಾತಿಹೊಂದಿದೆ. ಇದು ವೇದಗಳ ಪ್ರಾಮಾಣ್ಯ ವನ್ನು ಒಪ್ಪುವುದಿಲ್ಲ. ಉಪನಿಷತ್‍ಗಳ ತತ್ವ ಕೆಲವರಿಗೇ ಮೀಸಲಾಗಿದ್ದರೆ, ಬೌದ್ಧ ಧರ್ಮವು ಎಲ್ಲರನ್ನೂ ಮುಕ್ತವಾಗಿ ಸ್ವಾಗತಿಸುತ್ತದೆ. ಮುಖ್ಯವಾಗಿ ನೊಂದವರು, ಅಜ್ಞಾನಿಗಳು, ದೀನರು, ಅಸಹಾಯಕರ ಬಗೆಗೆ ಅದಕ್ಕೆ ವಿಶೇಷ ಆಸ್ಥೆ.

ಕರ್ಮಾಚರಣೆಗಳ ಬಗ್ಗೆ ಪ್ರಾಮುಖ್ಯತೆ ಹಾಗೂ ಪುನರ್ಜನ್ಮ ಕುರಿತ ವಿಷಯ ಗಳಲ್ಲಿ ಉಪನಿಷತ್‍ಗಳು ಹಾಗೂ ಬೌದ್ಧದರ್ಶನವು ಅನುರೂಪತೆ ಹೊಂದಿದರೂ 'ಸತ್ಯ'ದ ವಿಷಯ ಕುರಿತಂತೆ ಪರಸ್ಪರ ವಿರೋಧವಾಗಿವೆ. ಉಪನಿಷತ್‍ಗಳ ರೀತ್ಯಾ 'ಬ್ರಹ್ಮ'ವೊಂದೇ ಸತ್ಯ, ಅಂತಿಮಾರ್ಥದಲ್ಲಿ ಜಗತ್ತು ಮಿಥ್ಯೆಯೇ ಸರಿ. ಅಂತಿಮ ಸತ್ಯವಾದ ಬ್ರಹ್ಮವು ಅನಂತವಾದುದು, ಆದಿ-ಅಂತ್ಯರಹಿತವಾದ ಅದು ಎಲ್ಲವನ್ನೂ ಒಳಗೊಂಡು, ಎಲ್ಲಕ್ಕೂ ಆಧಾರವಾಗಿ, ಎಲ್ಲವನ್ನೂ ಮೀರಿನಿಂತಿರುವುದು. ಅದು ನಿರ್ಹೇತುಕ, ಅವಿನಾಶಿ; ಅದನ್ನು ನೀರಿನಿಂದ ನೆನಸುವುದಾಗಲೀ, ಕತ್ತಿಯಿಂದ ಕತ್ತರಿಸುವುದಾಗಲೀ, ಅಗ್ನಿಯಿಂದ ಸುಡುವುದೇ ಆಗಲೀ ಸಾಧ್ಯವಿಲ್ಲ. ಅದು ಅಚಲವೂ, ಸ್ವಯಂ ಪರಿಪೂರ್ಣವೂ ಆಗಿರುವುದು. ಅದು ಯಾವುದೇ ಬಗೆಯ ಕಾಮ, ಅಭಾವ ಗಳಿಂದ ಮುಕ್ತವಾಗಿದೆ, ಶುದ್ಧ ನಿರ್ಗುಣ ಸ್ವರೂಪದ ಅದು ಸತ್, ಚಿತ್, ಆನಂದ ಸ್ವರೂಪವೇ ಹೌದು. ಅರ್ಥಾತ್ ಎಲ್ಲ ಕಾಲದಲ್ಲಿಯೂ ನಿರಂತರವಾಗಿದ್ದು (ಸತ್), ಶುದ್ಧಚೈತನ್ಯ ಸ್ವರೂಪವೇ ಆಗಿ (ಚಿತ್), ದುಃಖಾತೀತವಾಗಿ ಶಾಂತಪೂರ್ಣ (ಆನಂದ) ವಾಗಿರುತ್ತದೆ. ಅದು ಜ್ಞಾನಸ್ವರೂಪವೇ ಆಗಿದೆ. ಬ್ರಹ್ಮತತ್ವವು ಎಲ್ಲವನ್ನೂ ಅರಿಯಬಲ್ಲುದು, ಆದರೆ ಶುಷ್ಕತರ್ಕದಿಂದ ತಿಳಿಯಲ್ಪಡಲಾಗದು. ಎಲ್ಲ ಬಗೆಯ ದೋಷಗಳಿಂದ ಮುಕ್ತವಾಗಿದೆ. ನೋವು, ಯಾತನೆ, ನರಳಾಟಗಳು ಅದಕ್ಕಿಲ್ಲ. ಅದು ಕೇವಲ ದುಃಖವಿಲ್ಲದ ಸುಖಾತ್ಮಕ ಸ್ಥಿತಿಯೂ ಅಲ್ಲ[2]' ಆದುದರಿಂದಲೇ 'ಸಚ್ಚಿದಾ ನಂದ' ಎಂದು ಉಪನಿಷತ್‍ಗಳು ಬ್ರಹ್ಮತತ್ವ ಸ್ವರೂಪವನ್ನು ಕುರಿತು ನಿರ್ದೇಶಿಸ ತ್ತವೆ. ಬ್ರಹ್ಮತತ್ವವು ಅಖಂಡ, ಅಭೇದ ಸ್ವಯಂಜ್ಯೋತಿಯಾಗಿರುವುದು. ಯಾವುದೇ ಎರಡನೆಯದರ ಸಹಾಯ, ಸಹಕಾರದಿಂದ ಅದು ಬೆಳಗದು. ಈ ನಿಟ್ಟಿನಲ್ಲಿಯೇ ಅದು ಆರುವುದಿಲ್ಲ, ನಾಶವಾಗುವುದಿಲ್ಲ. ಯಾವುದೇ ರೂಪ, ಗಂಧ, ಆಕಾರಗಳಿಲ್ಲದೆ ಇರುವಂತೆಯೇ ಯಾವುದೇ ಬಂಧನದಿಂದ ಹೊರತಾಗಿರುವುದು. ಅದು ಜಗತ್ತಿನ ಜೀವಾತ್ಮರುಗಳ ಅಂತಃಸ್ಸತ್ವವೂ ಹೌದು. ಅಂತಿಮ ಸತ್ಯವನ್ನು ಕುರಿತು ಉಪನಿಷತ್ ಗಳು ಸಾಧಿಸುವ ಈ ಬಗೆಯ ಏಕೈಕ ಪರತತ್ವವನ್ನು ಬುದ್ಧನು ಶುದ್ಧ ಮೂಢನಂಬಿಕೆ ಯಲ್ಲದೆ ಬೇರೇನಿಲ್ಲ ಎಂದೇ ಹೇಳುತ್ತಾನೆ. ಈ ಹಿನ್ನೆಲೆಯಲ್ಲಿಯೇ ಬುದ್ಧನ ತಾತ್ವಿಕ

---

1 ತ್ರಿಪಿಟಕಗಳು—ಸುತ್ತ, ವಿನಯ ಹಾಗೂ ಅಭಿಧಮ್ಮ

2 ಇದು ನ್ಯಾಯವೈಶೇಷಿಕ ದರ್ಶನದ ಮುಕ್ತಾತ್ಮನ ಸ್ಥಿತಿ

ಚಿಂತನೆಯನ್ನು ಅವಲೋಕಿಸಿದಾಗ ಆತ ಈ ಜಗತ್ತನ್ನು ಬಿಟ್ಟು ಎಲ್ಲೋ ಕಾಣದ ಕಡೆ 'ಸತ್ಯ'ವನ್ನು ನೋಡುವ ದೃಷ್ಟಿ ಕಾಣಸಿಗದು! ಸತ್ಯದ ಪರಿಪೂರ್ಣ ಅನುಭವ ಹೊಂದಿದ್ದ ಆತ ನಮ್ಮನ್ನು ಮೀರಿನಿಂತು, ನಮಗೆ ಆಧಾರವಾಗಿರುವ ಯಾವುದೇ ಪರವಸ್ತುವಿನ ಕಲ್ಪನೆಯನ್ನೇ ಕೈಬಿಡುತ್ತಾನೆ. ಉಪನಿಷತ್ತುಗಳು ಮಂಡಿಸುವ ಸಾರ್ವಭೌಮ ಆತ್ಮತತ್ವ ಅಥವಾ ಪರತತ್ವವನ್ನು ಒಪ್ಪದೇ ತನ್ನದೇ ಆದ ರೀತಿಯಲ್ಲಿ 'ಸತ್ಯ'ದ ಬಗೆಗೆ ವಿಚಾರವನ್ನು ನಮ್ಮ ಮುಂದಿಡುತ್ತಾನೆ.

ಹಿಂದೆ ತಿಳಿಸಿದಂತೆ ಯಾವುದನ್ನು ಉಪನಿಷತ್ತುಗಳು ಅಂತಿಮ ಸತ್ಯವೆಂದು ಒಪ್ಪಿಕೊಂಡವೋ ಅದನ್ನು ಬುದ್ಧನು 'ಮಿಥ್ಯೆ' ಎಂದೇ ಸಾರುತ್ತಾನೆ. ಉಪನಿಷತ್ ಗಳು ಅಂತಿಮವಲ್ಲವೆಂದು ನಿರ್ಣಯಿಸಿದ ಅಂಶಗಳನ್ನು ಬುದ್ಧನು 'ಸತ್ಯ'ವೆಂದೇ ತೀರ್ಮಾನಿಸುವ ರೀತಿ ಬೌದ್ಧದರ್ಶನದಲ್ಲಿ ನಮ್ಮ ಕುತೂಹಲವನ್ನು ಹೆಚ್ಚು ಮಾಡುತ್ತವೆ.

ಬುದ್ಧನ ಪ್ರಕಾರ ಮಾನವನು ತನ್ನ ಅನುಭವದ ಯಾವುದೇ ಸಮಯದಲ್ಲಿ ಅನೇಕ ಸಂವೇದನೆಗಳನ್ನು ಎದುರಿಸುತ್ತಾನೆ. ಮೂಲತಃ ಸಂವೇದನೆಗಳ ಮೂಲಕವೇ ವಸ್ತುಗಳ ಗುರುತಿಸುವಿಕೆ ಸಾಧ್ಯ. ಸಂವೇದನೆಗಳೆಂದರೆ: ಶೀತ–ಉಷ್ಣ, ನೆರಳು–ಬೆಳಕು, ಪ್ರೀತಿ–ದ್ವೇಷ; ನೋವು–ನಲಿವು ಇತ್ಯಾದಿ. ಉಪನಿಷತ್ತುಗಳ ಪ್ರಕಾರ ಈ ನಶ್ವರ ಸಂವೇದನೆಗಳಿಗೆ ಸ್ವತಂತ್ರವಾದ ಅಸ್ತಿತ್ವ ಸಾಧ್ಯವಾಗದು. ಅವು ಶಾಶ್ವತ ವಾದ ಸತ್ಯವೊಂದರ ಆಧಾರವನ್ನು ಪಡೆದಿರಲೇಬೇಕು, ಅದು ಅನಿವಾರ್ಯ. ಆದರೆ ಬುದ್ಧನು ಪ್ರತಿಪಾದಿಸುವಂತೆ ಸಂವೇದನೆಗಳಿಂದ ಹೊರತಾದ, ಅವುಗಳಿಗೆ ಆಧಾರವಾದ ಶಾಶ್ವತ ಸತ್ಯದ ಅಸ್ತಿತ್ವ ಇಲ್ಲವೇ ಇಲ್ಲ! ಇಂದ್ರಿಯ ನೀಡಿಕೆಗಳು ಏನನ್ನು ನಮ್ಮಲ್ಲಿ ಬಿತ್ತುತ್ತವೆಯೋ ಅವು ಮಾತ್ರ ಸತ್ಯ. ಪ್ರಜ್ಞೆಗೆ ಗೋಚರವಾಗುವ ಸ್ಥಿತಿಯನ್ನು ಮೀರಿ ನಿಂತ ಶಾಶ್ವತ ಸತ್ಯವೆನ್ನುವುದು ಕೇವಲ ಊಹೆಮಾತ್ರ! ಅಂತಹ ಪರತತ್ವಕುರಿತ ವಾದಗಳು ಕೇವಲ ಮಾನಸಿಕವಾಗಿ ಅನಗತ್ಯ ಗೊಂದಲ ಉಂಟುಮಾಡಬಹುದಷ್ಟೇ! ಸತ್ಯವೆಂದರೆ ನಮ್ಮ ಅನುಭವಕ್ಕೆ ಬರುವ ವಾಸ್ತವ ಜ್ಞಾನವೇ ಆಗಿದೆ. ಇಂತಹ ವಾಸ್ತವ ಜ್ಞಾನವಾಗಿರುವ 'ಸತ್ಯ'ವನ್ನು ಬುದ್ಧನು ಸಂಘಾತ ರೂಪದಲ್ಲಿಯೇ ಕಾಣುತ್ತಾನೆ. ಅಂದರೆ, ಸತ್ಯವು ನಮ್ಮ ಅನುಭವಕ್ಕೆ ಎಟಕುವ ಸಂವೇದನೆಗಳು, ಆಲೋಚನೆ, ಹಾಗೂ ಇವೆರಡನ್ನೂ ಸಂಸರ್ಗ ಕಲ್ಪಿಸಿರುವ ದೇಹ–ಇವುಗಳ ಸಂಘಾತ ವಾಗಿದೆ. ಬುದ್ಧನು ಪ್ರತಿಪಾದಿಸುವ ಈ ಸತ್ಯದ ಸಂಘಾತ ಅಥವಾ ಮೊತ್ತವನ್ನು 'ಆತ್ಮ'ವೆಂದು ಕರೆಯಲಾಗಿದೆ. ಈ ಬಗೆಯ ಆತ್ಮವು ಐದು ಅಂಶಗಳನ್ನು ಒಳಗೊಂಡಿರುತ್ತದೆ. ಕ್ರಮವಾಗಿ ಅವು ರೂಪಸ್ಕಂದ, ವೇದನಾಸ್ಕಂದ, ವಿಜ್ಞಾನ ಸ್ಕಂದ, ಸಂಜ್ಞಾಸ್ಕಂದ ಹಾಗೂ ಸಂಸ್ಕಾರ ಇವುಗಳ ಅರ್ಥವ್ಯಾಪ್ತಿಯ ಬಗೆಗೆ ಸಾಮಾನ್ಯವಾಗಿ ಹೀಗೆ ಹೇಳಬಹುದು.

ರೂಪಸ್ಕಂದ —ದೇಹ
ವೇದನಾಸ್ಕಂದ—ಭಾವನೆ
ವಿಜ್ಞಾನ —ಸ್ವ-ಪ್ರಜ್ಞೆ
ಸಂಜ್ಞಾ —ಪ್ರತ್ಯಕ್ಷಜ್ಞಾನ
ಸಂಸ್ಕಾರ —ಮಾನಸಿಕ ಪರಿಣಾಮ

ಬುದ್ಧನ ರೀತ್ಯಾ ಆತ್ಮವೆಂದರೆ ಅದು ಸಂಘಾತ ರೂಪವಾಗಿರುವ ವಾಸ್ತವ ಜ್ಞಾನ, ಬೌದ್ಧದರ್ಶನದ 'ಸತ್ಯ'ದ ಬಗೆಗಿನ ಈ ತೀರ್ಮಾನವು, ಆ ದರ್ಶನದ ಸ್ವಭಾವವು ಹೇಗೆ ಚಿಂತನೆಯನ್ನಾಧರಿಸಿದ ವಿಶ್ಲೇಷಣೆಯಾಗಿದೆ ಎಂಬುದನ್ನು ಪ್ರಕಟ ಪಡಿಸುತ್ತದೆ. ಉಪನಿಷತ್ತುಗಳು 'ದೇಹಕ್ಕೆ' ಆತ್ಯಂತಿಕವಾಗಿ ಯಾವ ಅರ್ಥವನ್ನೂ ನೀಡುವುದಿಲ್ಲ. ಅಲ್ಲಿ 'ಸತ್ಯ'ವನ್ನು ಕಂಡುಕೊಳ್ಳುವುದು ಮನಸ್ಸಿನ ಮೂಲಕವೇ. ಉಪನಿಷತ್ತುಗಳು ಮನಸ್ಸಿನ ಆಧಾರದ ಬಲದಿಂದಲೇ ಪರತತ್ವವನ್ನು ಗುರುತಿಸುತ್ತವೆ. ಬೌದ್ಧ ದರ್ಶನವು ಬಹು ಸೂಕ್ಷ್ಮ ರೀತಿಯಲ್ಲಿ ಉಪನಿಷತ್ತುಗಳ ಈ ಭಾವವನ್ನು ಖಂಡಿಸುತ್ತದೆ. ಜಡಸ್ವರೂಪವಾದ ದೇಹಕ್ಕಿಂತ ಮನಸ್ಸೇ ಹೆಚ್ಚು ಆಭಾಸಕರ ಲಕ್ಷಣ ಹೊಂದಿದೆ ಎಂಬ ಬುದ್ಧನ ಮಾತು ನಮ್ಮನ್ನು ಸೆಳೆಯುತ್ತದೆ. ಮನಸ್ಸು ನಿತ್ಯ ಚಂಚಲವಾದುದೆಂಬ ವಾಸ್ತವತೆಯ ಎಳೆಯ ಮೇಲೆ ತನ್ನ ಚಿಂತನೆ ಹರಿಯಿಸುವ ಬುದ್ಧ ಮನಸ್ಸನ್ನು 'ಕೋತಿ'ಗೆ ಹೋಲಿಸುತ್ತಾನೆ. ಅವನ ರೀತ್ಯಾ ಮನಸ್ಸೆಂಬುದು ಮತ್ತೊಂದು ಕೊಂಬೆಗೆ ಜಿಗಿಯುವುದಕ್ಕಾಗಿಯೇ ಒಂದು ಕೊಂಬೆಯನ್ನು ಹಿಡಿದು ಕೊಂಡು ಕೂಡಲೇ ಅದನ್ನೂ ಬಿಡುವ ಕಪಿಯಂತೆಯೇ ಹೌದು !

ತಾನು ಸತ್ಯವೆಂದು ಪ್ರತಿಪಾದಿಸುವ 'ಸಂಘಾತ'ಗಳಿಗೆ ಆಧಾರವಾಗಿ ಬುದ್ಧನು ಪಂಚಮಹಾಭೂತಗಳಲ್ಲಿ ಕೇವಲ ನಾಲ್ಕನ್ನು ಮಾತ್ರ ಸ್ವೀಕರಿಸುತ್ತಾನೆ. ಇವೆಲ್ಲವೂ ಭೌತಿಕ ಹಾಗೂ ಪ್ರತ್ಯಕ್ಷವಾಗಿ ಲಭ್ಯವಿರುವಂತಹವು.[1] ಕ್ರಿಯಾಶೀಲವಾಗಿರುವ ದೇಹದಲ್ಲಿ ಈ ನಾಲ್ಕು ಭೂತಗಳು ವಿಶಿಷ್ಟ ರೀತಿಯಲ್ಲಿ ಸಂಘಟಿತಗೊಂಡಿರುತ್ತವೆ. ಮನಸ್ಸು ಎನ್ನುವುದೂ ಇವುಗಳ ಆಧಾರದಿಂದುಂಟಾಗುವ ಒಂದು ಕ್ರಿಯೆಯೇ ಆಗಿದೆ ಎನ್ನುವುದು ನಿಸ್ಸಂಶಯ. ಒಟ್ಟಾರೆ, ಬುದ್ಧನ ಪ್ರಕಾರ ಆತ್ಮವೆನ್ನುವುದು ಭೌತಿಕ ಮತ್ತು ಮಾನಸಿಕ ಅಂಶಗಳ ಮೊತ್ತಕ್ಕೆ ಇಟ್ಟಿರುವ ಕೇವಲ 'ನಾಮ' ಮಾತ್ರ. ಭೌತಿಕ ಮತ್ತು ಮಾನಸಿಕ ಅಂಶಗಳು ಭಾಗಗಳಿಗಿಂತ ಹೆಚ್ಚಿನ ವ್ಯಾಪ್ತಿಯನ್ನು ಪಡೆದಿಲ್ಲ. ವಿಶಿಷ್ಟ ಭಾಗಗಳಾಗಿರುವ ಅವು ನಿರ್ದಿಷ್ಟವಾಗಿ ಸಂಘಟಿತಗೊಂಡಾಗ ಕ್ರಿಯಾಶೀಲವಾಗುತ್ತವೆ. ಇವುಗಳ ಹಿಂದೆ ಆಧಾರವಾಗಿ ಅಖಂಡ ತತ್ವವಿದೆ ಎನ್ನು ವುದು ಪೊಳ್ಳುಮಾತು. ಅರ್ಥಾತ್ ಬುದ್ಧನ ಅಭಿಪ್ರಾಯದಂತೆ ಸಾಮಾನ್ಯವಾಗಿ

---

1. ಪೃಥ್ವಿ, ಅಪ್, ಅಗ್ನಿ ಮತ್ತು ವಾಯು (ಕಡೆಯದಾದ ಆಕಾಶವನ್ನು ಬುದ್ಧನು ನಿರಾಕರಿಸುತ್ತಾನೆ)

'ಅದು ಕಪ್ಪಾಗಿದೆ' 'ಅದು ಯೋಚಿಸುತ್ತದೆ' ಎಂದು ಹೇಳುವಲ್ಲಿ 'ಅದು' ಎಂಬ ಪದವು ಯಾವ ಅರ್ಥವನ್ನೂ ಹೊಂದಿರುವುದಿಲ್ಲ.[1]

ಬುದ್ಧನ ಸತ್ಯ (ಆತ್ಮ)ವನ್ನು ಕುರಿತ ಚಿಂತನೆಯು ನಮ್ಮನ್ನು ಗಾಢವಾಗಿ ಆವರಿಸುತ್ತಿರುವಂತೆಯೇ ಒಂದು ಅಂಶ ಹೊಳೆಯುತ್ತದೆ. ಅದು ನಾವು ಈವರೆವಿಗೂ ಬುದ್ಧನ ವಿಚಾರಧಾರೆಯಲ್ಲಿ 'ಕಾಲ' ಎಂಬುದನ್ನು ಮರೆತು ಗ್ರಹಿಸಿದ್ದೇವೆ! ಈಗ ನಮ್ಮನ್ನು ಕಾಡಬಹುದಾದ್ದು 'ಕಾಲ'ದ ಪರಿಸರದಲ್ಲಿ ಬುದ್ಧ ಹೇಳುವ ಸತ್ಯದ ಅವಸ್ಥೆ ಕುರಿತಂತೆ. ಬುದ್ಧನ ಪ್ರಕಾರ ಜಗತ್ತಿನ ಪ್ರತಿಯೊಂದು ವಸ್ತುವೂ ಪ್ರತಿಕ್ಷಣವೂ ಬದಲಾವಣೆ ಹೊಂದುತ್ತಿರುತ್ತದೆ. ನಿರಂತರ ಬದಲಾಗುವಿಕೆಯೇ ವಸ್ತುವಿನ ಸಹಜ ಅವಸ್ಥೆ. ಆತ್ಮ ಮತ್ತು ಜಗತ್ತು ಎರಡೂ ಸಹ ಒಂದೊಂದು ಪ್ರವಾಹ (ಸಂತಾನ)ವೇ ಹೌದು ಎನ್ನುವ ಬುದ್ಧ ಇದಕ್ಕನುಗುಣವಾಗಿ ನೀರಿನ ಪ್ರವಾಹ ಮತ್ತು ಅಚಲವಾಗದೆ ತನ್ನಲ್ಲಿಯೇ ನಿರಂತರ ಬದಲಾವಣೆ ಕಾಣುತ್ತಿರುವ ದೀಪದ ಕುಡಿಯನ್ನು ಸಂಕೇತವಾಗಿ ಬಳಸುತ್ತಾನೆ. ಅವನ ಪ್ರಕಾರ ಯಾವುದೇ ಭೌತಿಕ ವಸ್ತು ಸ್ಥಿರವಾಗಿರುತ್ತದೆ ಎಂಬ ಅಭಿಪ್ರಾಯ ಶುದ್ಧಭ್ರಮೆ. ಇಂತಹ ಹೇಳಿಕೆಗಳು ಕೇವಲ ಕಟ್ಟುಕಥೆ ಎನ್ನುವ ಬುದ್ಧನ ಕಾಲದ ಪರಿಧಿಯಲ್ಲಿ ಸತ್ಯವನ್ನು ಕುರಿತು ಹೇಳುತ್ತಾ ವಸ್ತುವಿನ ಅಸ್ತಿತ್ವ ಅಥವಾ ನಾಸ್ತಿತ್ವಗಳು ಸತ್ಯದ ಪರಿಧಿಯಲ್ಲಿ ಬರಲಾರವು. ಸತ್ಯವೇನಿದ್ದರೂ ಪರಿಣಾಮ ಅಥವಾ ಆಗುವಿಕೆಯಲ್ಲಿಯೇ ಕಾಣಲು ಸಾಧ್ಯವೆಂದು ಹೇಳಿ ಆಸ್ತಿಕರು ಹುಬ್ಬೇರಿಸುವಂತೆ ಮಾಡುತ್ತಾನೆ! ಅವನ ಪ್ರಕಾರ ಈ ಆಗುವಿಕೆಯೇ ವಸ್ತುವಿಗೆ ಸಹಜವಾದುದು. ಇಂತಹ ಬದಲಾವಣೆಯ ಕ್ರಿಯೆಯಲ್ಲಿ ವಸ್ತುಪೂರ್ಣವಾಗಿ ಇನ್ನೊಂದಾಗಿ ಬದಲಾವಣೆ ಹೊಂದುವುದಿಲ್ಲವೆಂಬ ಅಂಶವನ್ನು ನಮ್ಮ ಗಮನಕ್ಕೆ ತರುತ್ತಾನೆ. ಅಂದರೆ ಯಾವುದೇ ವಸ್ತುವು ಅಚಲವಾಗಿರದು ಎಂಬ ಅನುಭವಾತ್ಮಕ ವಾಸ್ತವತೆಯನ್ನು ಎತ್ತಿ ಹಿಡಿಯುವ ಬುದ್ಧ ತನ್ನ ಈ ವಾದಕ್ಕೆ ಪೂರಕವಾಗಿ ನೀಡುವ ಉದಾಹರಣೆಗಳು ಅವನ ಅಭಿಪ್ರಾಯವನ್ನು ಸಾರ್ಥಕಗೊಳಿಸುತ್ತವೆ; 'ಒಬ್ಬನು ಒಂದೇ ಹೊಳೆಯಲ್ಲಿ ಎರಡು ಬಾರಿ ಕಾಲಿಡಲಾಗದು. ಏಕೆಂದರೆ ಆ ಎರಡೂ ಕ್ಷಣಗಳಲ್ಲಿ ಆ ಹೊಳೆಯು ಒಂದೇ ಆಗಿರಲಾರದು. ಅಲ್ಲಿ ಬದಲಾವಣೆ ನಿರಂತರವಾಗಿರುತ್ತದೆ. ಹೊರನೋಟಕ್ಕೆ ಆ ಹೊಳೆಯು ಒಂದೇ ಎಂಬ ಹಾಗೆಯೇ ಭಾಸವಾಗುತ್ತದೆ, ಅಷ್ಟೇ. ಎರಡನೆಯ ಉದಾಹರಣೆಯ ಬಗ್ಗೆ ಈ ಹಿಂದೆ ಪ್ರಸ್ತಾಪಿಸಲಾಗಿದೆ: 'ದೀಪದ ಕುಡಿಯಾದರೂ ಅಷ್ಟೇ', ಅದು ಸದೃಶರೂಪಗಳನ್ನು ತಾಳುತ್ತಾ, ಅನುಸರಿಸುತ್ತಾ ಸತತವಾದ ಗತಿಯಲ್ಲಿರುತ್ತದೆ. ಆದರೆ, ಹೊರನೋಟಕ್ಕೆ ಆ ಎರಡೂ ಕ್ಷಣಗಳಲ್ಲಿ ನಮಗೆ ಒಂದೇ ಎಂಬಂತೆ ತೋರುತ್ತದೆಯಲ್ಲವೆ? ಈ ಅರ್ಥದಲ್ಲಿಯೇ ಬುದ್ಧನ ಚಿಂತನೆ ಅಭಿವ್ಯಕ್ತಗೊಂಡಿದೆ ಎಂದು ಹೇಳಬಹುದು.

---

1 ಈ ವಿಚಾರಧಾರೆ 'ನೈರಾತ್ಮ್ಯ'ವಾದವೆಂದೇ ಪ್ರಸಿದ್ಧವಾಗಿದೆ.

ಪ್ರತಿ ಕ್ಷಣವೂ ಪ್ರತಿ ವಸ್ತುವೂ ನಿರಂತರ ಬದಲಾವಣೆ ಹೊಂದುತ್ತಲೇ ಇರುತ್ತದೆ ಎಂಬ ವಾದವನ್ನು ನಾವು ಒಪ್ಪಿಕೊಳ್ಳುವಾಗ ಮಾನವನಿಗನ್ವಯಿಸುವಂತೆ ನಮಗೆ ಮತ್ತೊಂದು ಸಂದೇಹ ಎದುರಾಗುತ್ತದೆ. ನಿರಂತರ ಬದಲಾವಣೆಯೇ ಸತ್ಯವೆಂದಾಗ ಮಾನವನು ನಿರಂತರ ಬದಲಾವಣೆಯ ಗತಿಯಲ್ಲಿ ಸಾಗುತ್ತಿರುವಾಗ, 'ಭೂತಕಾಲದಲ್ಲಿ ತಾನು ನೋಡಿದ್ದ ವಸ್ತು ಅಥವಾ ವ್ಯಕ್ತಿಯನ್ನು ಮುಂದೊಂದು ದಿನ ಇದೇ (ಈತನೇ) ಎಂದು ಗುರುತಿಸುವ ಕ್ರಿಯೆ ಹೇಗೆ ಸಾಧ್ಯವಾಗುತ್ತದೆ' ಎಂಬ ಪ್ರಶ್ನೆಯು ಸಹಜವಾಗಿಯೇ ಉದ್ಭವಿಸುತ್ತದೆ. ಬುದ್ಧನು ಈ ಪ್ರಶ್ನೆಗೆ ಉತ್ತರವೆಂಬಂತೆ ಆತ್ಮವು ಸಂಘಾತ ವಸ್ತು ಮಾತ್ರವೇ ಅಲ್ಲದೆ ಅದು ಸ್ಮೃತಿಶಕ್ತಿಯಿರುವ ವಸ್ತುವೂ ಹೌದು ಎಂದು ವಿವರಿಸುತ್ತಾನೆ. ಆತನ ಪ್ರಕಾರ ಯಾವ ಒಬ್ಬ ವ್ಯಕ್ತಿಯು ಬೆಳೆ ಬಿತ್ತಿದರೆ ಅವನೇ ಬೆಳೆ ಕೊಯ್ಯಲಾರ ಎನ್ನುವುದು ನಿಜ. ಆ ಎರಡು ಕ್ಷಣಗಳ ನಡುವಿನ ಕಾಲದಲ್ಲಿ (ಬದಲಾವಣೆ) 'ಆಗುವಿಕೆ'ಯು ತನ್ನ ಪ್ರಭಾವ ಬೀರಿರುತ್ತದೆ.

ಆದರೆ, ಬೆಳೆಕೊಯ್ಯುವವನು ಸಂಪೂರ್ಣವಾಗಿ ಬೇರೆಯಾದವನೂ ಅಲ್ಲವೆಂಬ ಸೂಕ್ಷ್ಮ ನಮ್ಮ ಗಮನದಲ್ಲಿದ್ದರೆ ಸಾಕು. ವಸ್ತುಮೂಲತಃ ಒಂದಲ್ಲ ಎಂಬ ನಿರಾಕರಣೆಯನ್ನು ಈ ದೃಷ್ಟಾಂತ ಎತ್ತಿ ಹಿಡಿಯುತ್ತದೆ. ಒಬ್ಬ ವ್ಯಕ್ತಿಯು ನಿರಂತರ ಬದಲಾವಣೆಯ ಘಟಿಸುವಿಕೆಯಲ್ಲಿ ಅನೇಕ ಹಂತಗಳಲ್ಲಿ ಅನೇಕ ವ್ಯಕ್ತಿಗಳಾಗಿಯೇ ಹೋಗುತ್ತಾನೆ. ಆ ಹಂತಗಳು ಒಂದೇ ಪಡಿಯಚ್ಚು ಎನಿಸಲಾರವು, ನಿಜ; ಆದರೆ ಆ ಹಂತಗಳಲ್ಲಿ ಒಂದು ವಿಶಿಷ್ಟ ಅವಿನಾಭಾವ ಸಂಬಂಧವಿರುತ್ತದೆ. ಇದನ್ನು ಉದಾಹರಣೆಯೊಂದರ ಮೂಲಕ ಸಾಂಕೇತಿಕಗೊಳಿಸಬಹುದು. 'ಅ$_೧$ ಅ$_೨$ ಅ$_2$'; 'ಆ$_೧$ ಆ$_೨$ ಆ$_2$'—ಈ ಎರಡು ಆತ್ಮ ಶ್ರೇಣಿಗಳಲ್ಲಿ 'ಅ$_೧$' ರಿಂದ 'ಅ$_2$' ಒಂದೇ ಎನಿಸಲಾರವು ಇದೇ ಮಾತು 'ಆ$_೧$–ಆ$_2$'ಕ್ಕೂ ಅನ್ವಯಿಸುತ್ತದೆ. ಅಲ್ಲಿ ಬದಲಾವಣೆ ಇದೆ, ಆದರೂ, ಪ್ರತಿ ಶ್ರೇಣಿಯ ವ್ಯಕ್ತಿಗಳಲ್ಲಿ ಒಂದು ವಿಶೇಷ ಬಾಂಧವ್ಯವನ್ನು ನಾವು ಗುರುತಿಸಲು ಸಾಧ್ಯ. ಇಂತಹ ಸಂಬಂಧ ಇತರ ಶ್ರೇಣಿಗಳ ನಡುವೆ ಕಾಣಲಾಗದು. 'ಅ$_೧$' ಮತ್ತು 'ಆ$_೧$', 'ಅ$_೨$' ಮತ್ತು 'ಆ$_೨$'—ಇವುಗಳ ನಡುವೆ ಮೇಲಿನ ಅರ್ಥದಲ್ಲಿ ಬಾಂಧವ್ಯ ಕಾಣಲಾಗುವುದಿಲ್ಲ.

ಬುದ್ಧನ ಪ್ರಕಾರ ಮಾನವನು ಎದುರಿಸುವ ಪ್ರತಿ ಅನುಭವವೂ ಅದು ಹುಟ್ಟಿ ಲಯಗೊಳ್ಳುವಾಗ ಮುಂದಿನ ಹಂತದಲ್ಲಿ ಸೇರಿಕೊಳ್ಳುತ್ತದೆ. ಅಂದರೆ ಮಾನವನ ಅನುಭವದ ಪ್ರತಿ ಹಂತವೂ ಅದರ ಹಿಂದಿನ ಅನುಭವದ ಅಂತಃಶಕ್ತಿಯನ್ನು ತುಂಬಿಕೊಂಡು ಅನುಕೂಲಕರ ಪರಿಸ್ಥಿತಿಯಲ್ಲಿ ಪ್ರಕಟಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿಯೇ ಒಂದು ಆತ್ಮಶ್ರೇಣಿ ಬದಲಾವಣೆಯ ಗತಿಯಲ್ಲಿದ್ದರೂ ಸಹ ಅದು ಸಂಪೂರ್ಣವಾಗಿ ಬೇರೆಯದೇ ಆಗುವುದಿಲ್ಲ. ಆದುದರಿಂದಲೇ ಸಾಮಾನ್ಯ ಜನರು 'ಒಬ್ಬವ್ಯಕ್ತಿ'ಯೆಂದೇ ತಿಳಿದು ಕೊನೆಯವರೆವಿಗೂ (ಬದುಕಿರುವವರೆಗೆ) ಗುರುತಿಸಲು ಸಾಧ್ಯ! ಬುದ್ಧನ ಈ ವಿಚಾರಧಾರೆಯ ರೀತ್ಯಾ ಮಾನವನಿಗೆ ದೊರಕುವ ಯಾವುದೇ

ಬಗೆಯ ಫಲಗಳಿಗೆ ಆತನೇ ಕಾರಣನಾಗುತ್ತಾನೆ. ಆತನ ಭೂತಕಾಲದ ಶ್ರೇಣಿಗಳ ಕರ್ಮಗಳು ಭವಿಷ್ಯದಲ್ಲಿ ಆತನನ್ನು ಜವಾಬ್ದಾರನನ್ನಾಗಿ ಮಾಡುವ ತರ್ಕವನ್ನು ಇಲ್ಲಿ ಕಾಣಬಹುದು. ದೇವದತ್ತ ಸುತ್ತದಲ್ಲಿ ಬರುವ ದೃಷ್ಟಾಂತವೊಂದು ಬೌದ್ಧದರ್ಶನದ ಈ ವಾದಕ್ಕೆ ಪುಷ್ಟಿಯಾಗುತ್ತದೆ. ಅಲ್ಲಿ ಯಮನು ಪಾಪಿಯೊಬ್ಬನನ್ನು ಉದ್ದೇಶಿಸಿ ಹೀಗೆ ನುಡಿಯುತ್ತಾನೆ: 'ಈ ನಿನ್ನ ಪಾಪಕರ್ಮಗಳನ್ನು ಮಾಡಿದವರು ಬೇರೆ ಯಾರೂ ಅಲ್ಲ. ನೀನೇ ಅದನ್ನು ಮಾಡಿದ್ದೀಯೆ; ಅವುಗಳ ಫಲವನ್ನು ಅನುಭವಿಸುವವನೂ ನೀನೆ.' ಈ ನಿದರ್ಶನವು ಬುದ್ಧನ ಚಿಂತನೆಯ ಸೂಚಕವಾಗಿದೆ. ಇಲ್ಲಿ ಬುದ್ಧನು ಮಾನವನು ಎಸಗುವ ಕರ್ಮಾಚರಣೆಗಳಿಗೆ ಪೂರ್ಣವಾಗಿ ಆತನನ್ನೇ ಬಾಧ್ಯಸ್ಥನನ್ನಾಗಿ ಮಾಡಿರುವುದು ಕಂಡುಬರುತ್ತದೆ. ಅಂದರೆ ಮಾನವನ ಬದುಕು ಅದಾಗಲೇ ಪೂರ್ವ ನಿರ್ಧಾರವಾಗಿರುವ ಕೇವಲ ಸೂತ್ರದ ಗೊಂಬೆಯ ತೆರನಾದುದಾಗಿಲ್ಲ! ಇಲ್ಲಿ ಯಾವುದೇ ಅದೃಶ್ಯಶಕ್ತಿಯು ಕೈವಾಡದ ಸ್ಥಾಪನೆಗೆ ಅವಕಾಶವೇ ಇಲ್ಲ! ಈ ಹಿನ್ನೆಲೆಯಲ್ಲಿಯೇ ರ್ಹಿಸ್‌ಡೇವಿಡ್ಸ್ ಎಂಬುವವರು ಯಾರನ್ನೋ ಕುಟುಕುವಂತೆ (?) ಹೀಗೆನ್ನುತ್ತಾರೆ[1]: 'ದರ್ಬಾರು ನಡೆಸುತ್ತಾ ಕಪ್ಪಕಾಣಿಕೆಗಳನ್ನು ಸ್ವೀಕರಿಸುವ ಅಹಂಸಾರ್ವಭೌಮ ಯಾವುದೂ ಇಲ್ಲಿಲ್ಲ ಎಂದು!' ಬೌದ್ಧದರ್ಶನದ ಈ ಬಗೆಯ ತಾತ್ವಿಕ ನಿಲುವು ಮಾನವನ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿದೆ ಎಂದು ಹೇಳಬಹುದು.

ಬೌದ್ಧದರ್ಶನದ ಮೇಲಿನ ಅಭಿಪ್ರಾಯವು ಮಾನವನಿಗೆ ಮುಕ್ತ ಸ್ವಾತಂತ್ರ್ಯ ನೀಡಿರುವುದೂ ಅಲ್ಲದೆ, ಅವನ ಉದ್ಧಾರವೂ ಆತನ ಕೈಯಲ್ಲೇ ಇದೆ ಎಂಬ ಸ್ವ-ಪ್ರಯತ್ನದ ಸಮರ್ಥನೆಯೂ ಆಗಿದೆ. ಮಾನವನು ಕೈಗೊಳ್ಳುವ ಯಾವುದೇ ಚಟುವಟಿಕೆಗಳು ಆತನ ಭವಿಷ್ಯವನ್ನು ನಿರ್ಧರಿಸಬಲ್ಲವು ಎಂಬ ಬದುಕಿನ ಎಚ್ಚರಿಕೆಯೂ ಆಗಿದೆ ಎಂದು ನಾವು ತರ್ಕಿಸಬಹುದಾಗಿದೆ.

ಬುದ್ಧನ ಮೂಲ ಆಶಯವೇ ಬದುಕಿನಲ್ಲಿ ದುಃಖ ಎನ್ನುವ ಕೆಡುಕನ್ನು ಕಿತ್ತೊಗೆಯುವುದು.[2] ಈ ಹಾದಿಯಲ್ಲಿ ಬುದ್ಧನು ಒಬ್ಬ ವೈದ್ಯನ ಮನೋಧರ್ಮವನ್ನೇ ಪ್ರಕಟಪಡಿಸಿ, ಆತ ದುಃಖವನ್ನು ಒಂದು 'ವ್ಯಾಧಿ' ಎಂದೇ ಪರಿಗಣಿಸಿರುವುದು ಗಮನಾರ್ಹ. ಈ ನಿಟ್ಟಿನಲ್ಲಿ ವ್ಯಕ್ತಿಯ 'ಅಜ್ಞಾನ' ತೊಲಗಿಸುವುದಲ್ಲದೆ, ಆತನಲ್ಲಿ ಜ್ಞಾನದ ಉದಯದ ಸಾಧ್ಯತೆಯನ್ನು ಮನಗಾಣಿಸಬೇಕೆಂದೇ ಬುದ್ಧ ಖಚಿತ

---

[1] Mrs. Rhys Davids: Buddhism p. 133.

[2] Mrs. Rhys Davids: Buddhism—ಪುಟ-159—ಈ ಗ್ರಂಥದಲ್ಲಿ ಬುದ್ಧ ಹೀಗೆ ಹೇಳಿದ್ದಾನೆ ಎಂದು ನಿರೂಪಣೆ ಮಾಡಲಾಗಿದೆ. 'ನಾನು ಬೋಧಿಸಿರುವುದೂ ಇಷ್ಟೇ, ಬೋಧಿಸುವುದೂ ಇಷ್ಟೇ—' ಕೆಡುಕು ಮತ್ತು ಅದರ ನಿವಾರಣೆ'.

ಅಭಿಪ್ರಾಯ ತಾಳುತ್ತಾನೆ. ಏಕೆಂದರೆ ಅಜ್ಞಾನ (ಅವಿದ್ಯೆ)ವು[1] ಆಸೆಗಳಿಗೆ ಕಾರಣ ವಾಗಿ, ಆಸೆಗಳು ಕರ್ಮಗಳಿಗೆ ತಳಹದಿಯಾಗಿ, ಕರ್ಮಗಳು ಸರದಿಯಂತೆ ಹೊಸ ಆಸೆ ಗಳಿಂದ ತುಂಬಿಕೊಂಡಿರುವ ಪುನರ್ಜನ್ಮಕ್ಕೆ[2] ಅಸ್ತಿಭಾರ ಹಾಕುತ್ತವೆ. ಬುದ್ಧನು ದುಃಖಕ್ಕೆ ಅಜ್ಞಾನವೇ ಮೂಲವೆಂದು ಕಂಡುಕೊಂಡಿದ್ದಾನೆ. ಇಲ್ಲಿ ಅಜ್ಞಾನ ತುಂಬಿದ ಮಾನವನ ನಡವಳಿಕೆಗಳು ಮತ್ತು ಕರ್ಮಗಳು ಮಾನವನನ್ನೇ ಆಧರಿಸಿರುವುದರಿಂದ ಅವನಲ್ಲಿ 'ಜ್ಞಾನದ' ಉದಯವಾದರೆ ಸಾಕು, ಅದು ಅಜ್ಞಾನವನ್ನು ಹೊಡೆ ದೋಡಿಸಿ ಪುನರ್ಜನ್ಮಕ್ಕೆ ಕಾರಣವಾಗುವ ಕೊಂಡಿಗಳಿಂದ[3] ಮಾನವನನ್ನು ಪಾರು ಮಾಡುತ್ತದೆ. ಜ್ಞಾನದ ಅರಿವಿಗಾಗಿ [ಉಪನಿಷತ್‌ಗಳು ಹೇಳುವ 'ನಿತ್ಯ'ವಾದುದಲ್ಲ] ಇಲ್ಲಿ ಸಾಧಕ ಆತ್ಮ ಸಂಸ್ಕರಣದ ಪಥಗಳ ಮೂಲಕ ಹಾಯ್ದು ಹೋಗಬೇಕು. ಉಪನಿ ಷತ್ತುಗಳು ಯೋಗ್ಯ ಗುರುವಿನ ಮಾರ್ಗದರ್ಶನವನ್ನು ಅವಶ್ಯವೆಂದು ಹೇಳಿ, ಶ್ರವಣ, ಮನನ, ನಿದಿಧ್ಯಾಸನ[4]ಗಳ ಮೂಲಕ ಆತ್ಮ ಸಾಕ್ಷಾತ್ಕಾರ ಬೋಧಿಸುತ್ತವೆ. ಆದರೆ ಬುದ್ಧನು 'ಸತ್ಯ' [ವಾಸ್ತವಜ್ಞಾನ]ದ ಅರಿವಿಗಾಗಿ ಇನ್ನೊಬ್ಬರನ್ನು ಆಶ್ರಯಿಸುವ ಪದ್ಧತಿಯನ್ನು ಒಪ್ಪುವುದಿಲ್ಲ. ಅವನ ನಿಲುವು ವಿಭಿನ್ನವಾದುದು. ಆರ್ಯಸತ್ಯಗಳ[5] ಬಗೆಗೆ ಹೊಂದುವ ಪ್ರಜ್ಞೆಯೇ ಸಾಧನೆಯ ಮೂಲ ಆಧಾರವಾಗಿ, ಸಮ್ಯಕ್ ಸಾಧನೆ ಗಳ[6] ಫಲವಾಗಿ ದೊರಕುವ 'ಒಳನೋಟ'ದಿಂದ ಮಾನವನಿಗೆ 'ಬಿಡುಗಡೆ' ಸಾಧ್ಯ ವಾಗುತ್ತದೆ.

ಬುದ್ಧನು ಈ ಮೇಲಿನ ತನ್ನ ನಿಲುವಿಗೆ ಅನುಸಾರವಾಗಿ ಯಾವುದೇ ಎರವಲು ಜ್ಞಾನವನ್ನು ಪಡೆಯುವ ಬಗೆಯನ್ನು ತಿರಸ್ಕರಿಸುತ್ತಾನೆ. ಆತ ಪ್ರತಿಪಾದಿಸುವಂತೆ

---

1 ಉಪನಿಷತ್ತುಗಳು ಕೂಡ ಮಾನವನು ತನ್ನ ನೈಜ ಸ್ವರೂಪವನ್ನರಿಯದೆ, ಅರ್ಥಹೀನ ಲೌಕಿಕ ಬದುಕಿನಲ್ಲಿ ಆಸಕ್ತಿ ತಾಳುವುದಕ್ಕೆ 'ಅವಿದ್ಯೆ'ಯೂ ಕಾರಣ ಎನ್ನುವುದನ್ನು ಹೋಲಿಸ ಬಹುದು.

2 'ಪುನರಪಿ ಜನನಂ, ಪುನರಪಿ ಮರಣಂ' ಎಂಬ ಸುಳಿ.

3 ಬುದ್ಧನ ಪ್ರಕಾರ ದುಃಖವು ಹನ್ನೆರಡು 'ನಿದಾನ'ಗಳ ಮೇಲೆ ನಿಂತಿದೆ. ಅವುಗಳನ್ನು ಹೀಗೆ ಹೇಳಬಹುದು. ಅವಿದ್ಯೆ, ಸಂಸ್ಕಾರಗಳು, ವಿಜ್ಞಾನ, ನಾಮರೂಪ, ಷಡಾಯತನ [ಪಂಚೇಂದ್ರಿಯಗಳು ಮತ್ತು ಚಿತ್ತ], ಸ್ಪರ್ಶ, ವೇದನಾ, ತೃಷ್ಣಾ, ಉಪಾದಾನ, ಭವ [ಇರುವಿಕೆಯ ಆಸೆ], ಪುನರ್ಜನ್ಮ, ಜರಾಮರಣ.

4 'ಶ್ರವಣ' ವೆಂದರೆ, ಅಂತಿಮ ಸತ್ಯವೆಂಬುದನ್ನು ಗುರುವಿನ ಮೂಲಕ ತಿಳಿಯುವುದು ; 'ಮನನ'ವೆಂದರೆ ತಾನು ತಿಳಿದ ಸತ್ಯವನ್ನು 'ಸ್ವತಃ ಸರಿ' ಎಂದೆನಿಸುವ ರೀತಿ ಪರ್ಯಾಲೋಚನೆ ; 'ನಿದಿಧ್ಯಾಸನ'ವೆಂದರೆ, 'ಸ್ವತಃ ಸರಿ' ಎಂದು ತೀರ್ಮಾನಿಸಿದ ಸತ್ಯದ ವಿಚಾರದಲ್ಲಿ ವಿಶ್ವಾಸವಿರಿಸಿ, ಅದಕ್ಕೆ ವಿರುದ್ಧವಾದ ವಿಚಾರಗಳ ನಿರ್ಮೂಲನೆಗೆ ಪ್ರಯತ್ನಪಡುವುದು.

5 'ಜೀವನದಲ್ಲಿ ದುಃಖವಿದೆ', 'ದುಃಖಕ್ಕೆ ಕಾರಣ', 'ದುಃಖ ನಿವಾರಿಸಲು ಸಾಧ್ಯ', 'ದುಃಖ ನಿವಾರಣಾ ಮಾರ್ಗ'.

6 'ಸಮ್ಯಕ್ ದೃಷ್ಟಿ', 'ಸಮ್ಯಕ್ ಸಂಕಲ್ಪ', 'ಸಮ್ಯಕ್ ವಚನ', 'ಸಮ್ಯಕ್ ಕರ್ಮ', 'ಸಮ್ಯಕ್ ಜೀವನ', 'ಸಮ್ಯಕ್ ಸ್ಮೃತಿ' ಮತ್ತು 'ಸಮ್ಯಕ್ ಸಮಾಧಿ'.

ಅಭಿಪ್ರಾಯಗಳು ಸ್ವಂತ ಆಲೋಚನೆಯ ಬಲದಿಂದ ರೂಪುಗೊಂಡಿರಬೇಕು. ಈ ಕಾರಣವಾಗಿಯೇ ಆತ ತನ್ನ ಶಿಷ್ಯರನ್ನು ಕುರಿತು ಹೇಳುತ್ತಿದ್ದುದುಂಟು; "ಆದ್ದರಿಂದ ಭಿಕ್ಕುಗಳೇ, ನೀವು ಈಗ ಏನು ಹೇಳಿದಿರೋ ಅದು ನೀವೇ ಮಾನ್ಯಮಾಡಿದ್ದು, ನೀವೇ ಅರಿತದ್ದು, ನೀವೇ ಅರ್ಥಮಾಡಿಕೊಂಡದ್ದು, ಅಲ್ಲವೇ?" "ಹೌದು, ಭಗವಾನ್."[1]

ಬುದ್ಧನು ಪ್ರತಿಪಾದಿಸುವ ಅಭಿಪ್ರಾಯಗಳ ವ್ಯಾಪ್ತಿ ವಿಶಾಲವಾದುದು. ಪಡೆದುಕೊಂಡ ಜ್ಞಾನವು ಸ್ಪಷ್ಟವೂ, ನಿಖರವೂ ಆಗಿ, ಯಥಾರ್ಥವಾಗಿ ಬದುಕಿನಲ್ಲಿ ಹೊರ ಹೊಮ್ಮಬೇಕಾದರೆ ಅದು ಸ್ವಂತಿಕೆಯನ್ನು ಹೊಂದಿರಬೇಕು. ಅಂತರ್ಬೋಧೆಯ [ಉಪನಿಷತ್ತುಗಳು ಹೇಳುವ ಆತ್ಮಸಾಕ್ಷಾತ್ಕಾರವಲ್ಲ] ಅಡಿಪಾಯದ ಭದ್ರತೆ ಹೊಂದಿರಬೇಕಾದುದು ಅತ್ಯವಶ್ಯ. ಇಲ್ಲಿ ಅಂತರ್ಬೋಧೆ ಎಂದರೆ ಯಾವುದೇ ಕೇವಲ ಬೌದ್ಧಿಕ ಶ್ರದ್ಧೆಯಲ್ಲ! ಅದನ್ನು ಮೀರಿ ಹೆಚ್ಚಿನದಾಗಿರುವುದು! ಅದು ಬದುಕಿನಲ್ಲಿ ಅನುಭವಕ್ಕೆ ಪರಿವರ್ತಿತವಾಗಿರಬೇಕು. ಪಡೆದುಕೊಂಡ ಈ ಬಗೆಯ ಸಮ್ಯಕ್ ಬೋಧೆಯನ್ನು ಬೌದ್ಧದರ್ಶನವು 'ಪ್ರಜ್ಞಾ' ಎಂದೇ ಕರೆದಿದೆ. ಇಂತಹ ವಾಸ್ತವ ಜ್ಞಾನದ ನೆಲೆಯಲ್ಲಿ ಪ್ರತಿಯೊಬ್ಬ ಮಾನವನಿಗೂ 'ಮೋಕ್ಷ' [ಕೇಡುಕಿನಿಂದ ಬಿಡುಗಡೆ] ಸಾಧಿತವಾಗಬೇಕು. ಆ ಮೋಕ್ಷವನ್ನು ಆತನೇ ಸಂಪಾದಿಸಿಕೊಳ್ಳಬೇಕು. ತನ್ಮೂಲಕ ದುಃಖದಿಂದ ಪೀಡಿತ ಮಾನವ ಸಮುದಾಯವನ್ನು ಪಾರುಮಾಡುವ ಬಲವಾದ ಆಶಯ ಬೌದ್ಧದರ್ಶನದಲ್ಲಿ ನಿಚ್ಚಳವಾಗಿದೆ.

ಜೀವವಿರೋಧಿಯಾದ ಯಾವುದೇ ನಿಲುವನ್ನು ಸಾರಾಸಗಟಾಗಿ ಕಿತ್ತೊಗೆಯುವ ಬುದ್ಧನು 'ಅತಿರೇಕಗಳ' ಬಗೆಗೆ ಜಿಗುಪ್ಸೆ ಪಡುತ್ತಿದ್ದನು. ವಿಷಯಾಸಕ್ತ ಕೊಳಕು ಬದುಕಿನ ಅತಿರೇಕಗಳ ಬಗ್ಗೆ ಎಚ್ಚರಿಸುವ ಆತ, ಬದುಕಿನ ಸಾರ್ಥಕ ಉದ್ದೇಶದ ಹೆಸರಿನಲ್ಲಿ ಯಾವುದೇ ರೀತಿಯಲ್ಲಿ ದೇಹವನ್ನು ಅತಿಯಾಗಿ ದಂಡಿಸುವ ಅಸಹಜ ಕ್ರಮಗಳನ್ನೂ, ನಿಯಮಗಳನ್ನೂ ತಿರಸ್ಕರಿಸುತ್ತಾನೆ. ಆತನ ಪ್ರಕಾರ ಈ ಮೇಲೆ ಹೇಳಿದ ಎರಡೂ ಅತಿರೇಕತೆಗಳು ಜೀವನದ ಮತಿಹೀನ ಚಟುವಟಿಕೆಗಳು ಈ ಹಿನ್ನೆಲೆಯಲ್ಲಿಯೇ ಬುದ್ಧನ ಪ್ರಥಮ ಪ್ರವಚನದ[2] ಉಪದೇಶವು ಪ್ರಾಮುಖ್ಯತೆ ಪಡೆಯುತ್ತದೆ. ಆತ ಅಲ್ಲಿ ಹೀಗೆ ಬೋಧಿಸಿದ್ದಾನೆ: 'ಭಿಕ್ಕುಗಳೇ..., ಧಾರ್ಮಿಕ ಜೀವನ ನಡೆಸುವವನು ದೂರವಿಡಬೇಕಾದ ಎರಡು ಅತಿರೇಕಗಳಿವೆ. ಆ ಎರಡು ಅತಿರೇಕಗಳು ಯಾವುವು ಗೊತ್ತೇ? ಆಸೆಭೋಗಗಳಿಗೆ ಮೀಸಲಾದ ಸುಖದ ಬದುಕು ಒಂದು. ಅದು ತುಚ್ಛವಾದದ್ದು, ಅನುದಾತ್ತವಾದದ್ದು, ಆಧ್ಯಾತ್ಮಿಕವಲ್ಲದ್ದು, ಅನರ್ಹ್ಯವಾದದ್ದು, ಅಸತ್ಯವಾದದ್ದು; ಇನ್ನೊಂದು ದೇಹದಂಡನೆಯ ಬದುಕು; ಅದು

---

2 ಮಜ್ಝಿಮನಿಕಾಯ—38 ನೆಯ ಪ್ರವಚನದಲ್ಲಿ.

3 'ವಾರಣಾಸಿಯ ಪ್ರವಚನ'.

ಮ್ಲಾನವಾದದ್ದು, ಅನರ್ಹವಾದದ್ದು, ಅಸತ್ಯವಾದದ್ದು ಎಂದು ಎಚ್ಚರಿಸುತ್ತಾ ಬುದ್ಧನು ಮುಂದುವರಿದು ಪೂರ್ಣನಾದವನ ಬಗೆಗೆ ಹೀಗೆ ಬೋಧಿಸುತ್ತಾನೆ: 'ಪೂರ್ಣವಾದವನು, ಓ...ಭಿಕ್ಕುಗಳೇ, ಈ ಎರಡು ಅತಿರೇಕಗಳಿಂದಲೂ ದೂರವಿರುತ್ತಾನೆ. ಅವೆರಡರ ನಡುವೆ ಇರುವ ದಾರಿಯನ್ನು ಕಂಡುಕೊಂಡಿದ್ದಾನೆ. ಆ ದಾರಿಯು ಕಣ್ಣು, ಮನಸ್ಸುಗಳನ್ನು ಬೆಳಗುತ್ತದೆ. ವಿಶ್ರಾಂತಿ, ಜ್ಞಾನ, ಬೋಧೆ, ನಿರ್ವಾಣಗಳಿಗೆ ಒಯ್ಯುತ್ತದೆ' (ಎಂದೇ ಅಭಿಪ್ರಾಯಪಡುತ್ತಾನೆ).

ಬೌದ್ಧದರ್ಶನದ ಪ್ರಕಾರ ಮಾನವನು ಬದುಕಿನಲ್ಲಿ ತನ್ನ ಸಾರ್ಥಕತೆಯನ್ನು ಕಾಣುವುದೆಂದರೆ 'ನಿರ್ವಾಣ' ಸ್ಥಿತಿಯನ್ನು ಪಡೆದುಕೊಳ್ಳುವುದು. ಅಂದರೆ, ಅವನು ಪುನರ್ಜನ್ಮ ಪಡೆಯುವ ತನ್ನ ಅಜ್ಞಾನಜನ್ಯ ಚಾರಿತ್ರ್ಯದಿಂದ ಪಾರಾಗುವುದು, ಅನರ್ಥಕಾರಿಯಾದ ವಿಷಯಾಸಕ್ತ ತೃಷ್ಣೆಯನ್ನು ಜಯಿಸುವುದು. ರ್‍ಹಿಸ್ ಡೇವಿಡ್ಸ್ ಎಂಬುವವರು ಈ ಬಗೆಗೆ ಬಹಳ ಚೆನ್ನಾಗಿ ತಮ್ಮದೇ ಆದ ಶೈಲಿಯಲ್ಲಿ ಹೀಗೆ ವ್ಯಾಖ್ಯಾನ ಮಾಡುತ್ತಾರೆ: "ಜನ್ಮಾಂತರವನ್ನು ಪಡೆಯುವುದು ಚಾರಿತ್ರ್ಯವೇ ಹೊರತು ಆತ್ಮವಲ್ಲ. ವ್ಯಕ್ತಿಯು ಸತ್ತಾಗ ಅವನ ನಂತರವೂ ಅವನ ಚಾರಿತ್ರ್ಯ ಜೀವಂತವಾಗಿರುತ್ತದೆ. ತನ್ನ ಶಕ್ತಿಯಿಂದ ಅದು ಇನ್ನೊಂದು ಜೀವಿಯನ್ನು ಅಸ್ತಿತ್ವಕ್ಕೆ ತರುತ್ತದೆ. ಆ ಜೀವಿಯೋ ಬೇರೆ ರೂಪವನ್ನು ತಾಳಿದ್ದರೂ, ಸಂಪೂರ್ಣವಾಗಿ ಅದರಿಂದ ಪ್ರಭಾವಿತವಾಗಿರುತ್ತದೆ. ಪ್ರಸ್ತುತ ವ್ಯಕ್ತಿಯು ಬದುಕಿನ ವಿಷಯದಲ್ಲಿ ತೃಷ್ಣೆಯನ್ನು ಸಂಪೂರ್ಣವಾಗಿ ಗೆಲ್ಲುವವರೆಗೂ ಈ ಪ್ರಕ್ರಿಯೆಯು ನಡೆಯುತ್ತಲೇ ಹೋಗುತ್ತದೆ."

ಶಂಕರನಾರಾಯಣ ಖಂಡಿಗೆ

ಹಾಳೆ ಜಾನಪದ—ಒಂದು ಅಧ್ಯಯನ

ಜನಪದರು ತಮ್ಮ ಸುತ್ತಲಿನ ಪ್ರಕೃತಿಯಿಂದ ದೊರೆಯುವ ಉತ್ಪನ್ನಗಳನ್ನು ದೈನಂದಿನ ಕಾರ್ಯ, ಕಲೆಗಳಿಗೆ ಅಳವಡಿಸಿಕೊಳ್ಳುತ್ತಾರೆ. ಅದರಲ್ಲಿ ಸಸ್ಯಗಳು, ಪ್ರಾಣಿಗಳು ಕೂಡಾ ಬರಬಹುದು. ತನ್ನ ಸುತ್ತಲಿನ ಸಸ್ಯವರ್ಗದಿಂದ ಜೀವನದ ಅನಿವಾರ್ಯ ಕಾರ್ಯ ಕುಶಲತೆಗಳಿಗೆ, ಆಚರಣೆ ಆರಾಧನೆಗಳಿಗೆ ಸಾಮಗ್ರಿಯನ್ನು ಆತ ಪಡೆಯುತ್ತಾನೆ. ಅಂತಹ ಸಸ್ಯವರ್ಗದಲ್ಲಿ ಹಲವಾರು ಉಪಯುಕ್ತ ವರ್ಗಗಳಿದ್ದು ' ಅಡಕೆ 'ಯೂ ಒಂದು. ತುಳುನಾಡು ಎಂದು ಕರೆಯಿಸಿಕೊಳ್ಳುವ ಈಗಿನ ದಕ್ಷಿಣ ಕನ್ನಡ, ಕಾಸರಗೋಡು ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೇರಳವಾಗಿ ಹಾಗೂ ಇತರೆಡೆಗಳಲ್ಲಿ ವಿರಳವಾಗಿ ಬೆಳೆಯುವ ನೀಳವಾದ ಈ ಮರ ಮನುಷ್ಯರು ಆರ್ಥಿಕ ಬೆಳೆಯಾಗಿ ಬೆಳೆಸುವಂತಾದ್ದು. ಈ ಆರ್ಥಿಕ ಲಾಭದ ನೆಲೆಯಿಂದ ಇದರಿಂದ ದೊರೆಯುವ ಅಡಕೆಯೊಂದಿಗೆ, ಮರ, ಸೋಗೆ, ಹೂಗಳು ಕೂಡಾ ಜನಪದರಿಗೆ ಅತ್ಯಂತ ಉಪಯುಕ್ತ ವಸ್ತುಗಳಾಗಿವೆ. ಅಡಕೆ ಮರದ ಎಲೆಯನ್ನು ' ಸೋಗೆ ' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈ ' ಸೋಗೆ ' ಮರಕ್ಕೆ ಸೇರುವಲ್ಲಿ ಅದರ ತುದಿಯ ಭಾಗವಾಗಿ ' ಹಾಳೆ 'ಯಿರುತ್ತದೆ. ದಕ್ಷಿಣ ಕನ್ನಡದ ಹೊರ ಪ್ರದೇಶಗಳಲ್ಲಿ ಇದಕ್ಕೆ ' ಅಡಕೆಯ ಪಟ್ಟೆ' ಅಂತ ಕರೆಯುತ್ತಾರೆ. ಅಡಕೆಯ ಸಂತಾನದ ಕುಡಿ ಶಿಂಗಾರವನ್ನು ತನ್ನ ಒಡಲಿನಲ್ಲಿ ತುಂಬ ಬೆಳೆದು ಹಣ್ಣಾದ ನಂತರ ಕೆಳಗೆ ಬೀಳುವ ಈ ಸೋಗೆಯಲ್ಲೇ ಇರುವ ' ಹಾಳೆ ' ಜನಪದರಿಗೆ ಹಲವು ಉಪಯೋಗಗಳಿಗೆ ಅತ್ಯಗತ್ಯವಾಗಿದೆ. ಸುಮಾರು ಮುಕ್ಕಾಲು ಮೀಟರಿನಿಂದ ಹಿಡಿದು ಒಂದು ಒಂದೂವರೆ ಮೀಟರು ಉದ್ದ, ಒಂದೂವರೆ ಅಡಿಯಿಂದ ಹಿಡಿದು ಎರಡು ಎರಡೂವರೆ ಅಡಿಯಷ್ಟು ಅಗಲದ ಹಾಳೆಗಳಿವೆ. ಎಳೆಯ ಪ್ರಾಯದ ಮರಗಳ ಹಾಳೆ ಗಾತ್ರದಲ್ಲಿ ದೊಡ್ಡದಾಗಿದ್ದು ಮರ ಬೆಳೆದಂತೆ ಹಾಳೆಯ ಗಾತ್ರ ಚಿಕ್ಕದಾಗುತ್ತಾ ಹೋಗುತ್ತದೆ. ಎಳೆಯ ಮರಗಳ ಹಾಳೆ ಚಪ್ಪಟೆಯಾಗಿದ್ದು ಕಡಿಮೆ ಪ್ರಮಾಣದಲ್ಲಿ ' ಗುಂಡಿ ' (ಆಳ) ಯಾಗಿರುತ್ತದೆ. ಆದರೆ ಮರ ಬೆಳೆದಂತೆಲ್ಲಾ ಹಾಳೆ ಗುಂಡಿಯಾಗಿರುತ್ತದೆ. ಹಾಳೆಯ ಒಳಭಾಗ ಬಿಳಿಯಾಗಿದ್ದು ಕೆಲವೊಮ್ಮೆ ಕಂದುಬಣ್ಣದ ಗೆರೆಗಳು ಕಾಣಸಿಗುತ್ತವೆ. ಹೊರಭಾಗ ನಸು ಹಸುರು, ಹಳದಿಮಿಶ್ರಿತವಾಗಿದೆ.

ಹಗಲು ರಾತ್ರಿಯೆನ್ನದೆ, ಹುಟ್ಟು ಸಾವುಗಳೆನ್ನದೆ ಹಾಳೆಯ ಬಳಕೆಯಾಗುತ್ತದೆ. ದೈನಂದಿನ ಕಾರ್ಯಗಳಲ್ಲಿ, ಆಚರಣೆಗಳಲ್ಲಿ, ಆರಾಧನೆಯಲ್ಲಿ ಮುಖ್ಯವಾಗಿ ಇದು ಉಪಯೋಗ ಹೊಂದಿದೆ. ಗಮನಿಸಬೇಕಾದ ಅಂಶವೆಂದರೆ ಉಪಯೋಗ ಎಲ್ಲಾ ಪ್ರದೇಶಗಳಲ್ಲೂ ಒಂದೇ ರೀತಿಯಾಗಿರುವುದು. ಜನಪದರಲ್ಲಿ ಹುಟ್ಟಿನಿಂದ ಸಾವಿನ ವರೆಗೆ ಹಾಳೆಯ ಮಹತ್ತ್ವವಿದೆ. ಹಾಳೆ ಬಳಕೆಯಾಗುವ ರೀತಿ, ಅದು ಉಪಯೋಗ ವಾಗುವ ವಿವಿಧ ನೆಲೆಗಳನ್ನು ಕೆಲವು ವಿಭಾಗಗಳಾಗಿ ವಿಂಗಡಿಸಿ ಗುರುತಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಪ್ರತಿಯೊಂದು ವಿಭಾಗದ ಒಳಗಡೆ ಕೆಲವು ಮರು ಭಾಗಗಳು ಬರುತ್ತವೆ. ಹಾಳೆ ಜನಪದರಿಗೆ ಸುಲಭವಾಗಿ ದೊರೆಯುವುದರಿಂದ ನಡು ಗುಂಡಿಯಾಗಿದ್ದು ಟೊಳ್ಳಾಗಿರುವುದರಿಂದ ಬಹೂಪಯೋಗಿ ವಸ್ತುವಾಗಿ ಇದು ಉಪ ಯೋಗವಾಗುತ್ತದೆ. ಪ್ರತಿಯೊಂದು ಭಾಗದಲ್ಲಿ ಹಾಳೆಯ ಪ್ರಯೋಜನ, ಬಳಕೆ ಯಾಗುವ ರೀತಿ, ಮಹತ್ತ್ವಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

೧. ಕಸುಬುಗಳಲ್ಲಿ ಹಾಳೆಯ ಬಳಕೆ
೨. ದೈನಂದಿನ ವಿವಿಧ ಉಪಯೋಗದಲ್ಲಿ ಹಾಳೆ
೩. ನೀರಾವರಿ ವ್ಯವಸ್ಥೆಯಲ್ಲಿ ಹಾಳೆ
೪. ಶೇಖರಣ ಸಾಧನವಾಗಿ ಬಳಕೆ
೫ ರಕ್ಷಣೆಯ ಸಾಧನವಾಗಿ ಹಾಳೆ
೬. ಆಚರಣೆಯಲ್ಲಿ ಹಾಳೆ
೭. ಆರಾಧನಾ ನೆಲೆಯಲ್ಲಿ ಉಪಯೋಗ
೮. ಆಹಾರವಾಗಿ ಮತ್ತು ಸೇವನೆಯಲ್ಲಿ ಹಾಳೆ
೯. ಹಾಳೆ ಬಗೆಗಿನ ನಂಬಿಕೆಗಳು
೧೦. ಪಾಡ್ದನಗಳಲ್ಲಿ ಹಾಳೆ

೧. ಕಸುಬುಗಳಲ್ಲಿ ಹಾಳೆಯ ಬಳಕೆ

ಕಸುಬು ಎಂದಾಗ ಬೇಸಾಯ, ತೋಟಗಾರಿಕೆ, ಕುಶಲ ನಿರ್ಮಾಣಗಳು ಸೇರುತ್ತವೆ. ಆಧುನಿಕ ತಂತ್ರಜ್ಞಾನ, ವಿಜ್ಞಾನದ ಬೆಳವಣಿಗೆಯಾಗದ ಹಂತದಲ್ಲಿ ಜನಪದರು ಈಗಿನ ಹಲವು ಆಧುನಿಕ ಉಪಕರಣಗಳಿಗೆ ಬದಲಾಗಿ ಹಾಳೆಯನ್ನು ಉಪಯೋಗಿಸುತ್ತಿದ್ದರು. ಶ್ರಮವನ್ನು ಕಡಿಮೆ ಮಾಡುವುದು, ಬಾಳ್ವಿಕೆ ಹೆಚ್ಚಾಗು ವಂತೆ ನೋಡಿಕೊಳ್ಳುವ ಉದ್ದೇಶ, ಬದುಕಿನ ಒಟ್ಟಂದದಲ್ಲಿನ ಬದಲಾವಣೆ ಹಾಳೆಯ ಉಪಯೋಗವನ್ನು ಮೊದಲಿನ ಪ್ರಮಾಣದಿಂದ ಕುಗ್ಗಿಸಿದೆ.

(ಅ) ಅಡಕೆ ಕೃಷಿಕರು ಅಡಕೆ ಮರದಿಂದ ಬೀಳುವ ಪ್ರಮಾಣ ಕಡಿಮೆ ಇರುವ ಹಂತದಲ್ಲಿ ಅಥವಾ ಬೆಳಗ್ಗೆ ಒಮ್ಮೆ ಹೆಕ್ಕಿ ನಂತರ ತೋಟದಲ್ಲಿ ಬೇರೆ ಕೆಲಸಗಳಿಗೆ ಹೋದಾಗ ಬಿದ್ದ ಅಡಕೆಯನ್ನು ಹೆಕ್ಕಲು ಹಾಳೆಯನ್ನು ಉಪಯೋಗಿಸುತ್ತಾರೆ.

ಹಾಳೆಯು ನಡುಭಾಗ ಗುಂಡಿಯಿರುವುದರಿಂದ ಅಡಕೆಯನ್ನು ಮನೆಗೆ ತರಲು ಸಹಾಯ ವಾಗುತ್ತದೆ. ಹಾಳೆ ಎಲ್ಲಾ ಸಮಯದಲ್ಲೂ ಸಾಕಷ್ಟು ಬಿದ್ದಿರುವುದರಿಂದ ಸೋಗೆ ಯಿಂದ ಬೇರ್ಪಡಿಸಿ ಅಡಕೆ ಹೆಕ್ಕಲು ಬಳಸುತ್ತಾರೆ.

(ಆ) ಅಡಕೆ ಹಣ್ಣಾದಾಗ, ಪೂಜೆ ಪುನಸ್ಕಾರಗಳಿಗೆ ಹಿಂಗಾರ ಬೇಕಾದಾಗ, ಹಲಸಿನಮರ, ತೆಂಗಿನಮರ ಏರುವಾಗ, ಮರಗಳಿಂದ ಸಪ್ಪುಸೌದೆ ಕಡಿಯುವಾಗ ಸುಸೂತ್ರವಾಗಿ ಮರ ಏರಲು ಹಾಳೆಯನ್ನು ಸಿಗಿದು ಹಗ್ಗಮಾಡಿ, ಹಗ್ಗದ ಎರಡು ತುದಿಯನ್ನು ಸೇರಿಸಿ ಕಟ್ಟಿ 'ತಳೆ' ಮಾಡಿ ಬಳಸಲಾಗುತ್ತದೆ. ಇದು ಒಂದು ದಿನದ ಮಟ್ಟಿಗೆ ಮಾತ್ರ ಉಪಯೋಗವಾಗುತ್ತದೆ. ನಂತರ ದ್ರವಾಂಶ ಕಳೆದುಕೊಂಡು ಒಣಗುವುದರಿಂದ ತುಂಡಾಗುತ್ತದೆ. ಹೆಚ್ಚು ತೋರ ಇರುವ ಮರಗಳಿಗೆ ಇದು ಸಾಕಾಗುವುದಿಲ್ಲ.

(ಇ) ಅಡಕೆಮರ, ತೆಂಗಿನಮರಕ್ಕೆ ಕಾಯಿಗಳನ್ನು ತೆಗೆಯಲು ಕೀಳಲು ಏರು ವಾಗ ಕಚ್ಚೆಹಾಕುವುದು ರೂಢಿ. ಕಚ್ಚೆಯು ಬಟ್ಟೆ ಮರಕ್ಕೆ ತಾಗುವುದರಿಂದ ಹಾಳಾಗ ದಂತೆ ಮತ್ತು ಮುಖ್ಯವಾಗಿ ಮರ್ಮಾಂಗ ಅದೇ ಸ್ಥಳಕ್ಕೆ ತಾಗುವುದರಿಂದ ತೊಂದರೆ ಯಾಗದಂತೆ ಹಾಳೆಯ 'ಬೆನ್ನಿ'ನ (ಹಿಂದಿನ ಹಸುರು, ಹಳದಿ ಮಿಶ್ರಿತ ಭಾಗ) ಭಾಗ ದಿಂದ ಮೇಲಿನ ಬಣ್ಣದ ಭಾಗದ ನಾರು ತೆಗೆದು ಕೌಪೀನದ ರೀತಿಯಲ್ಲಿ 'ಕೋಮಣ' ಕಟ್ಟಿಕೊಳ್ಳುತ್ತಾರೆ. ಒಂದು ತುದಿಗೆ ಒಂದು ಹಗ್ಗ, ಮತ್ತೊಂದು ತುದಿಗೆ ಎರಡು ಮೂಲೆಗೆ ಎರಡು ಹಗ್ಗ ಕಟ್ಟಿ ಹಗ್ಗವನ್ನು ಸೊಂಟಕ್ಕೆ ಕಟ್ಟಿಕೊಳ್ಳಲಾಗುತ್ತದೆ.

(ಈ) ತರಕಾರಿಗಳನ್ನು, ಕಾಯಿಪಲ್ಯಗಳನ್ನು ಸಸಿಗಳಿಂದ ಕೊಯಿದು ತರಲು ಹಾಳೆಯನ್ನು ಬಳಸುತ್ತಾರೆ.

(ಉ) ತರಕಾರಿ ಗಿಡಗಳಿಗೆ, ತೋಟಗಳಿಗೆ ರಾಸಾಯನಿಕ ಗೊಬ್ಬರ ಹಾಕಲು ಹಾಳೆಯ ಬಳಕೆಯಾಗುತ್ತದೆ. ಗುಂಡಿಯಿರುವುದರಿಂದಲೂ, ಯಾವುದೇ ಸಮಯದಲ್ಲಿ ಸಿಗುವುದರಿಂದಲೂ, ಉಪಯೋಗದ ನಂತರ ಬಿಸಾಡಬಹುದಾಗಿದೆ. ಹಾಳೆಯ ಎರಡು ತುದಿಗಳನ್ನು ಒಂದು ಆಕಾರ ಬರುವಂತೆ ಕಟ್ಟಿ 'ಬೆಳ್ಳಿ' ಅಥವಾ 'ಪಡಿಗೆ'ಮಾಡಿಯೂ ಮೇಲ್ಕಿನ ಉಪಯೋಗಕ್ಕೆ ಬಳಸಲಾಗುತ್ತದೆ.

(ಊ) ಕಮ್ಮಾರರು ತಮ್ಮಲ್ಲಿಗೆ ತಂದ ಹಾರೆ ಪಿಕ್ಕಾಸುಗಳನ್ನು ಹರಿತಗೊಳಿಸಿ ಕೊಡುವಾಗ, ಹೊಸ ಉಪಕರಣಗಳನ್ನು ತಯಾರಿಸಿ ಗಿರಾಕಿಗಳಿಗೆ ಕೊಡುವಾಗ ರಕ್ಷಣೆಯ ಉದ್ದೇಶದಿಂದ ಹಾಳೆಯನ್ನು ಕಟ್ಟಿಕೊಡುತ್ತಾರೆ.

(ಎ) ಮರದ ಕೆಲಸದವರು ಮನೆಯಿಂದ ಮನೆಗೆ ತಮ್ಮ ಕೆತ್ತನೆ ಕೆಲಸದ ಉಪಕರಣಗಳನ್ನು ಸಾಗಿಸಬೇಕಾಗಿರುವುದರಿಂದ ಅದನ್ನು ಕಟ್ಟಲು ಹಾಳೆಯನ್ನು ಉಪಯೋಗಿಸುವುದಿದೆ.

(ಏ) ಕೇರಳದಲ್ಲಿ ಕಳ್ಳು ತೆಗೆಯುವವರು ಕಳ್ಳು ಸಾಗಿಸಲು ಹಾಳೆಯನ್ನು ಬಳಸುತ್ತಾರೆ.

(ಐ) ಮರದ ದಿಮ್ಮಿಗಳನ್ನು ಸಿಗಿಯುವ ಕಸುಬಿನವರು ತಮ್ಮ ಗರಗಸ ಹೋಗುವ ದಾರಿಯನ್ನು ನಿಗದಿಪಡಿಸಲು ಗೆರೆಯನ್ನು ಹಾಕಬೇಕಾಗುತ್ತದೆ. ಅದಕ್ಕೆ ಮಸಿಯನ್ನು ಕಲಸಿ ಹಗ್ಗವನ್ನು ಮುಳುಗಿಸಿ ಮರಕ್ಕೆ ಗುರುತುಮಾಡಲಾಗುತ್ತದೆ. ಇಲ್ಲಿ ಮಸಿಯನ್ನು ಕಲಸಲು ಹಾಳೆಯ 'ಬೆಳ್ಳಿ'ಯನ್ನು ಬಳಸಲಾಗುತ್ತದೆ.

೨. ದೈನಂದಿನ ವಿವಿಧ ಉಪಯೋಗದಲ್ಲಿ ಹಾಳೆ

ಜನಪದರಿಗೆ ಹಾಳೆ ಸುಲಭ ರೀತಿಯಲ್ಲಿ ಸಿಗುವುದರಿಂದ ದೈನಂದಿನ ಹಲವು ಅಗತ್ಯದ ಕಾರ್ಯಗಳಿಗೆ ಸೇವೆಗಳಿಗೆ ಹಾಳೆ ಉಪಯೋಗವಾಗುತ್ತದೆ. ಹಾಳೆ ಹಸಿಯಾಗಿ, ಒಣಗಿ ಹಾಗೂ ವಿವಿಧ ಆಕಾರಗೊಂಡು ಬಳಕೆಯಾಗುತ್ತದೆ.

೧. ವಿದ್ಯುತ್ ಇಲ್ಲದ ಹಳ್ಳಿಗಳಲ್ಲಿ ಅಥವಾ ವಿದ್ಯುತ್ ಕೈಕೊಟ್ಟಲ್ಲಿ ಒಣ ಹಾಳೆಯಿಂದ ತಯಾರಿಸಿದ 'ಬೀಸಣಿಗೆ'ಯನ್ನು ಸೆಕೆಯಿಂದ ರಕ್ಷಿಸಲು ಬಳಸುವುದು ಸಾಮಾನ್ಯವಾಗಿ ಕಂಡುಬರುತ್ತದೆ ಹಾಳೆ ಚಪ್ಪಟೆಯಾಗಿದ್ದು ತಕ್ಕಮಟ್ಟಿಗೆ ಅಗಲ ವಾಗಿರಬೇಕು. ವೃತ್ತಾಕಾರವಾಗಿ ಚೂರಿಯಿಂದ ತಯಾರಿಸುವ ಇದರಲ್ಲಿ ಒಂದು ಬದಿಯಲ್ಲಿ ಕೈ ಹಿಡಿಯುವ ವ್ಯವಸ್ಥೆಯಿದೆ. ಕೈಯಿಂದ ಬೀಸುತ್ತಾ ಇರುವ ಈ ವ್ಯವಸ್ಥೆ ಸುಲಭದ್ದು. ಹವ್ಯಕರ ಮದುವೆಯಲ್ಲಿ ವಧೂವರರನ್ನು ವಿವಾಹ ಮಂಟಪಕ್ಕೆ ಕರೆತಂದು ಉಪಚಾರಮಾಡುವ ಸಂದರ್ಭದಲ್ಲಿ ಬೀಸಾಳೆ (ಬೀಸಣಿಗೆ) ಬಳಕೆಯಾಗು ತ್ತದೆ. ಸತ್ಯನಾರಾಯಣ ಪೂಜೆಯಲ್ಲಿ ದೇವರ ಮಂಟಪದಲ್ಲಿ ಇದನ್ನು ಇರಿಸಲಾಗು ತ್ತದೆ.

೨. ಎಳೆಯ ಕಂದಮ್ಮಗಳಿಗೆ ಎಣ್ಣೆಹಚ್ಚಿ ಸ್ನಾನಮಾಡಿಸುವಲ್ಲಿ, ದಿನನಿತ್ಯ ಬಟ್ಟೆ ಹಾಸಿ ಮಲಗಿಸುವಲ್ಲಿ ಸಮತಲವಾದ ಹಾಳೆಯನ್ನು ಬಳಸುತ್ತಾರೆ. ಆಚೀಚೆ ಕೊಂಡುಹೋಗಲು ಸುಲಭವಾಗುವುದರಿಂದ ಇದರ ಬಳಕೆಯಾಗಿರಬಹುದು.

೩. ಗೋಣಿಚೀಲಗಳ ಬಾಯಿಕಟ್ಟಲು, ಮದುವೆ, ಸಮಾರಂಭಗಳ ಚಪ್ಪರಕ್ಕೆ ತೆಂಗಿನಗರಿಗಳನ್ನು ಕಟ್ಟಲು ಅಡಕೆಯ ಸೋಗೆ, ಹಾಳೆಯ ಕಟ್ಟುಗಳನ್ನು, ತೆಂಗಿನ ಗರಿಗಳನ್ನು, ಸೌದೆಗಳನ್ನು ಕಟ್ಟಲು ಹಾಳೆಯ ಹಗ್ಗಗಳನ್ನು ಬಳಸಲಾಗುತ್ತದೆ.

೪. ಗುದ್ದಲಿಯ 'ತಳ್ಳಿ' (ಹಿಡಿ) ಗುದ್ದಲಿಯಿಂದ ಸಡಿಲಾದರೆ ಅದರ ಎಡೆಗೆ ಹಾಳೆಯ ತುಂಡನ್ನು ಇಟ್ಟು ಗಟ್ಟಿಮಾಡಲಾಗುತ್ತದೆ.

೫. ಮಳೆಗಾಲಕ್ಕಾಗಲಿ, ಇತರ ದಿನಗಳಿಗೆ—ಶೇಖರಿಸಿ ಇಡುವಲ್ಲಿ ಮಣ್ಣಿನ ಮಡಕೆಯ ಬಾಯಿಗೆ ನಾರು ತೆಗೆದ ಹಾಳೆಯನ್ನು ಮುಚ್ಚಿಟ್ಟು ಹಗ್ಗದಿಂದ ಕಟ್ಟ ಲಾಗುತ್ತದೆ.

೬. ಹಾಳೆ ಧಾರಾಳವಾಗಿ ಸಿಗುವಲ್ಲಿ ಹೆಚ್ಚಾಗಿ ಬಿಸಿನೀರು ಕಾಯಿಸಲು ಉರುವಲಾಗಿ ಹಾಳೆಯನ್ನು ಬಳಸಲಾಗುತ್ತದೆ. ಒಣಗಿದ ಹಾಳೆಯನ್ನು ಕಟ್ಟಿ ಮಳೆಗಾಲಕ್ಕೆ ಶೇಖರಿಸಿಟ್ಟು ದಿನನಿತ್ಯ ಸ್ನಾನಕ್ಕೆ ಬಿಸಿನೀರು ಕಾಯಿಸಲು ಬಳಸುತ್ತಾರೆ. ಒಣಗಿದ ಹಾಳೆಗೆ ಬೆಂಕಿ ಬೇಗನೆ ಹಿಡಿಯುವುದರಿಂದ ಅಡಿಗೆ ಒಲೆಗಳಿಗೂ ಬಳಸುವುದಿದೆ.

೭. ಹಳ್ಳಿ ಪರಿಸರದ ಸಣ್ಣಪುಟ್ಟ ನಗರಗಳಲ್ಲಿ ಹಸಿಮೀನನ್ನು ಕಟ್ಟಿಕೊಡಲು ಮೀನಿನ ವ್ಯಾಪಾರಿಗಳಿಗೆ ಹಾಳೆ ಉಪಯೋಗವಾಗುತ್ತದೆ. ದ್ರವಾಂಶವಿದ್ದರೂ ಒದ್ದೆಯಾಗದ ಗುಣ ಹಾಳೆಗಿರುವುದರಿಂದ ಇದು ನೆರವಾಗುತ್ತದೆ. ಕೆರೆಯಿಂದಲೋ, ನದಿಯಿಂದಲೋ ಹಿಡಿದ ಮೀನನ್ನು ಏಡಿಯನ್ನು ತರಲು ಹಾಳೆಯನ್ನು ಚೀಲದ ಆಕಾರಕ್ಕೆ ಬರಿಸಿ ' ಮೂಡೆ ' ಮಾಡುತ್ತಾರೆ.

೮. ದೋಸೆ ಹೊಯ್ಯುವ ಕಾವಲಿಗೆ ಎಣ್ಣೆ ಉಜ್ಜುವ ಸಾಧನವಾಗಿ ಹಾಳೆಯ ತುದಿ ತುಂಡೊಂದನ್ನು ' ಚುಟ್ಟಿ ' ಸಾಧನವಾಗಿ ಬಳಸುತ್ತಾರೆ. ಉಪ್ಪಿನಕಾಯಿಗೆ ಮಸಾಲೆ ಕಡೆಯುವಲ್ಲಿ ಮೆಣಸಿನಹುಡಿ ಕೈಗೆ ತಾಗದಂತೆ ಹಾಳೆಯ ತುಂಡು ಬಳಕೆಯಾಗುತ್ತದೆ. ಹಿಟ್ಟು ರುಬ್ಬುವಾಗ ಕೈಗೆ ಹಿಡಿದುದನ್ನು ತೆಗೆಯಲೂ ಇಂತಹುದೇ ಬಳಕೆಯಾಗುತ್ತದೆ.

೯. ಪದಾರ್ಥಗಳಿಗೆ ತರಕಾರಿ ಹಚ್ಚಿಹಾಕಲು, ಮೀನು ತುಂಡುಮಾಡಿ ಹಾಕಲು ಬಿಸಾಡುವ ವಸ್ತುಗಳನ್ನು ತುಂಬಿಸಿಡಲು ಹಾಳೆ ನೆರವಾಗುತ್ತದೆ.

೧೦. ಪ್ರಸವದ ನಂತರ ಕಶ್ಮಲಗಳನ್ನು ಮನೆಯಿಂದ ಹೊರಹಾಕಲು ಹಾಳೆಯನ್ನು ಜನಪದರು ಬಳಸುತ್ತಾರೆ.

೧೧. ಸೋಗೆಯ ಗರಿಗಳನ್ನು ಕಿತ್ತು ಅದರ ಕೋಲು ಮತ್ತು ಹಾಳೆಯಿರುವ ಸಾಧನದಲ್ಲಿ ಮಕ್ಕಳು ಆಟ ಆಡುತ್ತಾರೆ. ಹಾಳೆಯಲ್ಲಿ ನೆಲದಲ್ಲಿ ಕೂರಿಸಿ ಮತ್ತೊಬ್ಬ ಎಳೆಯುತ್ತಾನೆ. ಹರಳು ಕಲ್ಲಿನ ಪ್ರದೇಶದಲ್ಲಿ ಈ ಆಟದ ಹಾಳೆ ಹರಿದುಹೋಗುತ್ತದೆ.

೧೨. ಹಲಸಿನ ಹಣ್ಣಿನ ಸೊಳೆಯನ್ನು ತಿಂಡಿಗೊ, ಪಾಯಸಗಳಿಗೊ ಹಚ್ಚಲು ಉಳಿಯನ್ನು ಬಳಸುತ್ತಾರೆ. ಉಳಿಯಿಂದ ಹಣ್ಣನ್ನು ತುಂಡುಮಾಡುವಲ್ಲಿ ಹಾಳೆಯನ್ನು ಬಳಸುತ್ತಾರೆ. ಹಲಸಿನಹಣ್ಣಿನ ಸೊಳೆಯನ್ನು ಹಾಳೆಯಲ್ಲಿ ಹಾಕುವುದರಿಂದ ತುಂಡುಮಾಡಲು ಅನುಕೂಲವಾಗುತ್ತದೆ. ಹಾಗೆಯೇ ಹಲಸಿನಕಾಯಿಯನ್ನು ತುಂಡರಿಸಿ ಬೇಕಾದ ಅಂಶಗಳನ್ನು ಪ್ರತ್ಯೇಕಿಸಿ ಹಾಳೆಯಲ್ಲಿ ತುಂಬಿಸಲಾಗುತ್ತದೆ.

೧೩. ರೋಗಿಗಳಿಗೆ ಮುದುಕರಿಗೆ ಮನೆಯಲ್ಲೂ ಸುತ್ತಾಡಲು ಕಷ್ಟವಾದಾಗ ವಾಂತಿಮಾಡಲು, ಉಗುಳಲು, ಮಲಮೂತ್ರ ವಿಸರ್ಜನೆ ಮಾಡಲು ಹಾಳೆಯಿಂದ ಮಾಡಿದ ಪಾತ್ರೆ ಬಳಕೆಯಾಗುತ್ತದೆ.

೩. ನೀರಾವರಿ ವ್ಯವಸ್ಥೆಯಲ್ಲಿ ಹಾಳೆ

೧. ಅಡಿಕೆ, ತೆಂಗು, ಬಾಳೆ ಮುಂತಾದ ಆರ್ಥಿಕ ಮತ್ತು ಆಹಾರ ಬೆಳೆಗಳಿಗೆ ಹರಿಯುವ ಕಣಿಯಿಂದ ನೀರನ್ನು ಬುಡಕ್ಕೆ ಹಾಕಲು, ಹೊಯ್ಯಲು, ಸಿಂಪಡಿಸಲು ಹಾಳೆಯ ಉಪಯೋಗ 'ಬೆಳ್ಳಿ'ಯ ರೂಪದಲ್ಲಿದೆ. ಹಾಳೆಯನ್ನು ವಿಶಿಷ್ಟ ಆಕಾರಕ್ಕೆ ಒಳಪಡಿಸಿ ಎರಡು ತುದಿಯನ್ನು ಕಟ್ಟಿ ನಡುಗುಂಡಿಯಾಗಿರುವಂತೆ ಮಾಡಿದ ವಸ್ತುವೇ 'ಬೆಳ್ಳಿ'. ಹಸಿ ಹಾಳೆಯಿಂದ ಮಾಡುವ ಈ ಸಾಧನ ನೀರು ಹೊಯ್ಯುವಾಗ ನೆಲಕ್ಕೆ ತಾಗಿ ತಳೆದು ಹೋಗುತ್ತದೆ. ಬಗ್ಗಿನಿಂತು ನೀರನ್ನು ಮರಗಳ, ಸಸಿಗಳ ತಳಕ್ಕೆ ಹೊಯ್ಯಲು ಇದು ನೆರವು ನೀಡುತ್ತದೆ.

೨. ನವಂಬರ್, ದಶಂಬರ್ ಮತ್ತು ಜನವರಿ ತಿಂಗಳಲ್ಲಿ ಹೆಚ್ಚಾಗಿ ನೀರು ತೋಡು, ನದಿಗಳಲ್ಲಿ ಹರಿದುಹೋಗುತ್ತದೆ. ಬೇಸಾಯ ತೋಟಗಳಿಗೆ ನೀರು ಹಾಯಿಸಲು ಸುಲಭ ರೀತಿಯಲ್ಲಿ ಬಾಳೆ ಮರಗಳನ್ನೂ ಕಲ್ಲುಗಳನ್ನೂ ಬಳಸಿ ಕಟ್ಟೆ ಕಟ್ಟಲಾಗುತ್ತದೆ. ಅದರ ಸೋರುವ ಸೆರೆಗೆ ಇಡಲು, ಮುಚ್ಚಲು ಹಾಳೆ ಪ್ರಮುಖ ವಾಗಿ ಬಳಕೆಯಾಗುತ್ತದೆ.

೩. ನೀರನ್ನು ತೋಟದಲ್ಲಿ ಮರಗಿಡಗಳಿಗೆ ಹಾಯಿಸುವಾಗ 'ಬೆಳ್ಳಿ'ಯಲ್ಲಿ ಹಾಯಿಸಲು ನೀರು ನೆಲೆ ನಿಲ್ಲಬೇಕಾಗುತ್ತದೆ. ಅದಕ್ಕಾಗಿ ಹಾಳೆಯ ತಡೆಗಳನ್ನು ಅಲ್ಲಲ್ಲಿ ನಿರ್ಮಿಸಲಾಗುತ್ತದೆ.

೪. ಶೇಖರಣ ಸಾಧನವಾಗಿ ಬಳಕೆ

೧. ಜನವರಿ, ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಗೇರುಬೀಜದ ಬೆಳೆ ಧಾರಾಳವಾಗಿರುತ್ತದೆ. ಅದನ್ನು ಕೊಯಿದು ಹೆಕ್ಕಿತರಲು ಹಾಳೆಯ (ಚೀಲ) 'ಮೂಡೆ' ಮಾಡಿಕೊಳ್ಳಲಾಗುತ್ತದೆ. ಅದಕ್ಕೆ ಹಗ್ಗಹಾಕಿ ಕೈಯಲ್ಲಿ ನೆಲಿಸುವ ವ್ಯವಸ್ಥೆಮಾಡುತ್ತಾರೆ. ಇದರಂತೆಯೇ ಇತರ ಕಾಡು ಉತ್ಪನ್ನಗಳ ಶೇಖರಣೆಯಲ್ಲಿ ಮೂಡೆಯನ್ನು ಬಳಸಲಾಗುತ್ತದೆ.

೨. ಗೇರುಬೀಜ ಹೆಕ್ಕಲು, ಧವಸ ಧಾನ್ಯಗಳು ಅತಿ ಸಣ್ಣ ಪ್ರಮಾಣದಲ್ಲಿದ್ದಾಗ ಶೇಖರಿಸಿಡಲು 'ಪಡಿಗೆ'ಯನ್ನು ಬಳಸುತ್ತಾರೆ. ಪಡಿಗೆಯನ್ನು ಹಸಿಹಾಳೆಯಿಂದಲೇ ತಯಾರಿಸಬೇಕಾಗುತ್ತದೆ. ಅದು ಒಣಗಿದಂತೆ ಮುರುಟುವ ಅಭ್ಯಾಸ ಇರುವುದರಿಂದ ಹಸಿ ಹಾಳೆಯಿಂದ ತಯಾರಿಸಿದ ಕೂಡಲೇ ಅದರಲ್ಲಿ ಮರಳು ಅಥವಾ ಮಣ್ಣನ್ನು ತುಂಬಿಸಿಡುತ್ತಾರೆ.

೩. ಒಣಗಿದ ತರಕಾರಿ ಬೀಜಗಳನ್ನು ನಾರು ತೆಗೆದ ಹಾಳೆಯನ್ನು ಒಣಗಿಸಿ ಅದರಲ್ಲಿ ಕಟ್ಟಿ ಇಡಲಾಗುತ್ತದೆ. ಒಲೆಯ ಮೇಲಿಟ್ಟರೆ ಸದಾ ಬಿಸಿಯನ್ನು ಕಾಯ್ದುಕೊಂಡು ಬರುವ ಹಾಳೆ ತುಂಬಾ ಪ್ರಯೋಜನಕಾರಿ.

೪. ಮಳೆಗಾಲದ ಖರ್ಚಿಗೆ ಬೇಕಾದ ಹುಳಿ, ಹಪ್ಪಳ, ಸಂಡಿಗೆ ಮಿಾನು, ಕರಿಯಲಿರುವ ವಸ್ತುಗಳನ್ನು ಒಣಗಿಸಲು ಹಾಳೆಯನ್ನು ಉಪಯೋಗಿಸಲಾಗುತ್ತದೆ.

೫. ಪಂಪುಗಳಿಂದ ಹಳೆಯ ಎಣ್ಣೆಯನ್ನು ಪಡಿಗೆಯಲ್ಲಿ ತುಂಬಿಸಿ ಇಡಲಾಗುತ್ತದೆ. ಹಾಳೆ ಎಣ್ಣೆಗಳಿಂದ ಯಾವುದೇ ರೀತಿಯ ಪರಿವರ್ತನೆ ಹೊಂದುವುದಿಲ್ಲ.

೫. ರಕ್ಷಣೆಯ ಸಾಧನವಾಗಿ ಬಳಕೆ

೧. ನೆಲಕಿತ್ತು ಹೋಗುವುದರ ವಿರುದ್ಧ ಸದಾ ಶುಚಿಯಾಗಿಡಲು ಸೆಗಣಿ ಸಾರಿಸಲು ಹಾಳೆಯ ತುಂಡನ್ನು ಬಳಸುತ್ತಾರೆ. ಅದರ ತೇವ ಬೇಗನೆ ಆರುವಂತೆ ಹಾಳೆಯ ತುಂಡು ನಯವಾಗಿ ನೆಲವನ್ನು ಇರಿಸುತ್ತದೆ.

೨. ಮಣ್ಣು ಹೊರುವಾಗ ತಲೆಗೆ ಮುಖಕ್ಕೆ ಮಣ್ಣಿನಹುಡಿ ಬೀಳದಂತೆ, ಗೊಬ್ಬರ ಹೊರುವಾಗ ತಲೆಗೆ ನೀರು ಬೀಳದಂತೆ ಹೆಚ್ಚಿನ ನೋವಾಗದಂತೆ ಹಾಳೆಯಿಂದ ತಯಾರಿಸಿದ ಕೊರಂಬೆಯನ್ನು ಬಳಸುತ್ತಾರೆ. ಇದೊಂದು ವಿಶಿಷ್ಟ ರೀತಿಯ ತಯಾರಿಕೆ.

೩. ಕೃಷಿಕರು ಕೃಷಿಕಾರ್ಮಿಕರು, ಗದ್ದೆ, ತೋಟಗಳಿಗೆ ಹೋಗುವಾಗ, ವಸ್ತುಗಳನ್ನು ಹೊತ್ತುತರುವಾಗ 'ಮುಟ್ಟಾಳೆ'ಯನ್ನು ತಲೆಗೆ ಇಟ್ಟುಕೊಳ್ಳುತ್ತಾರೆ. ಅತ್ಯಂತ ಪರಿಶ್ರಮದಿಂದ ಕೆಲವೇ ಮಂದಿ ನಿಪುಣರು ತಯಾರಿಸುವ ಸಾಧನವಿದು. ಒಣ ಹಾಳೆಯನ್ನು ನೀರಿನಲ್ಲಿ ಹಾಕಿ ತೆಗೆದು ನಂತರ ವಿವಿಧ ಆಕಾರ ಬರಿಸಿ ಇದನ್ನು ಕಟ್ಟಲಾಗುತ್ತದೆ. ಇದರಲ್ಲಿ ಹೂವಿನಾಕಾರದ ಚಿತ್ರಗಳನ್ನು ಬಿಡಿಸುವುದುಂಟು. ಇದರಲ್ಲಿ ಸಾಮಾನ್ಯ ಮುಟ್ಟಾಳೆ ಮತ್ತು ಗೋಂಪಾರು ಮುಟ್ಟಾಳೆಯೆಂದು ಎರಡು ವಿಧಗಳಿವೆ. ಗೋಂಪಾರು ತುಂಬಾ ಆಳವಿರುತ್ತದೆ. ಮಳೆಗಾಲದಲ್ಲಿ ಒದ್ದೆಯಾಗಿ ತೇವಭರಿತಹೊಂದಿ ಮೃದುವಾಗುವುದರಿಂದ ರಾತ್ರಿಯ ಸಮಯದಲ್ಲಿ ಒಲೆಯ ಮೇಲಿಟ್ಟು ಒಣಗಿಸುತ್ತಾರೆ.

೪. ಮಳೆಗಾಲದಲ್ಲಿ ಮನೆಯಂಗಳದಲ್ಲಿ ಅಡ್ಡಾಡುವಾಗ ಮಳೆಯಿಂದ ರಕ್ಷಿಸಲು ಒಂದು ಹಾಳೆಯನ್ನೋ, ಎರಡು ಹಾಳೆಯನ್ನೋ ಬಳಸಿದರೆ, ತೋಟಕ್ಕೆ ಗದ್ದೆಗಳಿಗೆ ಹೋಗುವಾಗ ಮಳೆಯಿಂದ ರಕ್ಷಣೆಗೆ ನಾಲ್ಕೈದು ಹಾಳೆಗಳನ್ನು ಸೇರಿಸಿ ಅದರ ತುದಿಗೆ ' ಕೊರಂಬೆ 'ಯನ್ನು ಸೇರಿಸಿ ಹಾಕಿಕೊಳ್ಳುತ್ತಾರೆ.

೫. ಹಂಚು, ಸೋಗೆ, ಹುಲ್ಲಿನ ಮಾಡುಗಳಲ್ಲಿ ನೀರು ಸೋರುತ್ತಿದ್ದರೆ ಅದರ ನೆರೆಯ ಎಡೆಗೆ ಇಟ್ಟು ತಡೆಗಟ್ಟಲು ಹಾಳೆಯನ್ನು ಬಳಸುತ್ತಾರೆ. ಹಾಗೆಯೇ ಮೇಲಿಂದ ಬೀಳುವ ತುಂತುರು ನೀರನ್ನು ನೆಲ ಹಾಳಾಗದಂತೆ ರಕ್ಷಿಸಲು ಹಾಳೆಯ ಪಡಿಗೆಯನ್ನು ನೆಲದಲ್ಲಿ ಇರಿಸುತ್ತಾರೆ. ಹಟ್ಟಿಯ ಸೊಪ್ಪುಗೊಬ್ಬರ, ಮಳೆಗಾಲದಲ್ಲಿ ಹುಲ್ಲಿನ ಕಟ್ಟು ಹೊತ್ತು ತರುವಾಗ ನೀರಿನಿಂದ ರಕ್ಷಿಸಲು ಹಾಳೆ ಪ್ರಯೋಜನಕಾರಿ.

೬. ಮಣ್ಣನ್ನು ಬುಟ್ಟಿಗೆ ತುಂಬಿಸುವಾಗ ಬುಟ್ಟಿ ಕಾಲಿಗೆ ತಾಗಿ ಗಾಯ ವಾಗದಂತೆ ನೋವಾಗದಂತೆ ಹಾಳೆಯ ತುಂಡನ್ನು 'ಕಾರಪಾಳೆ'ಯಾಗಿ ಮೊಣ ಕಾಲಿಗೆ ಕಟ್ಟುತ್ತಾರೆ.

೭. ಹಣ್ಣು ತರಕಾರಿ ಪ್ರಾಣಿಗಳಿಂದ ಕೀಟಗಳಿಂದ ಪಕ್ಷಿಗಳಿಂದ ರಕ್ಷಿಸಲು ಅವು ಮುಚ್ಚುವಂತೆ ಹಾಳೆಯನ್ನು ಬಳಸಿಕೊಳ್ಳಲಾಗುತ್ತದೆ. ಅಷ್ಟೊಂದು ಸುಲಭ ವಾಗಿ ಕಣ್ಣಿಗೆ ಹಣ್ಣುಕಾಯಿಗಳು ಬೀಳದಂತೆ ಮತ್ತು ಕೆರೆಯಲಾರದಂತೆ ಇದು ರಕ್ಷಿಸುತ್ತದೆ. ಅನಾನಸು, ಮುಳ್ಳುಸೌತೆಗಳನ್ನು ಪಕ್ಷಿ, ಪ್ರಾಣಿಗಳಿಂದ ರಕ್ಷಿಸಲು, ಕುಂಬಳ, ಚೀನಿಕಾಯಿಗಳನ್ನು ಬಿಸಿಲಿನ ಬೇಗೆಯಿಂದ ರಕ್ಷಿಸಲು, ಮಣ್ಣಿನ ಕೆರೆತದಿಂದ ರಕ್ಷಿಸಲು ಹಾಳೆಯನ್ನು ಉಪಯೋಗಿಸುತ್ತಾರೆ. ಅನಾನಸು, ಮುಳ್ಳು ಸೌತೆಗಳಿಗೆ ನಡುಗೊಳೆಯಿರುವಂತೆ ಹಾಳೆ ಕಟ್ಟಿ ತಯಾರಿಸಿ ಹಣ್ಣು ಅದರೊಳಗೆ ನಿಲ್ಲುವಂತೆ ಮಾಡಲಾಗುತ್ತದೆ.

೮. ಅಡಿಕೆ ಮರವನ್ನು ಬಿಸಿಲ ಬೇಗೆಯಿಂದ ರಕ್ಷಿಸಲು, ಹಾಳೆಯನ್ನು ಮರಕ್ಕೆ ತಡೆಯಾಗಿ ಕಟ್ಟಲಾಗುತ್ತದೆ. ತರಕಾರಿ ಸಸಿಗಳನ್ನು ನೆಟ್ಟಾಗ ಬಿಸಿಲಿನಿಂದ ತಡೆಯಲು ಹಾಳೆಯನ್ನು ಬಳಸುವುದಿದೆ.

೯. ತರಕಾರಿ ಹಣ್ಣು ಹಂಪಲುಗಳಿಗೆ ಪ್ರಾಣಿ ಪಕ್ಷಿ, ಬಾರದಂತೆ ಎತ್ತರಕ್ಕೆ ಕೋಲಿನಲ್ಲಿ ಹಾಳೆಗಳನ್ನು ನಿಲ್ಲಿಸಲಾಗುತ್ತದೆ. ಬಿಳಿಹಾಳೆಯಾದುದರಿಂದ ರಾತ್ರಿಯ ನಸುಬೆಳಕಿನಲ್ಲಿ ಹಂದಾಡುವುದರಿಂದಲೂ ಭಯ ಹುಟ್ಟಿಸುತ್ತದೆ.

೧೦. ತೋಟಕ್ಕೆ ಕಳ್ಳರು ಬೇಲಿ ದಾಟಿ ಬರುವಲ್ಲಿ ಒಣಹಾಳೆಯನ್ನು ಸಿಕ್ಕಿಸಿಡ ಲಾಗುತ್ತದೆ. ಅದು ಸ್ವಲ್ಪ ತಾಗಿದರೂ ಸದ್ದಾಗುತ್ತದೆ.

೧೧. ಮಾರಾಟದ ಬಾಳೆಗೊನೆಗಳನ್ನು ಹೊತ್ತು ಸಾಗಿಸುವಾಗ, ಅದರ ಕಾಯಿಗಳಿಗೆ ಪೆಟ್ಟಾಗದಂತೆ ರಕ್ಷಿಸಲು ಹಾಳೆಯನ್ನು ಸುತ್ತಲೂ ಇಟ್ಟು ಹಗ್ಗದಿಂದ ಕಟ್ಟಲಾಗುತ್ತದೆ.

೧೨. ಹೊಸ ಮಣ್ಣಿನ ಅಥವಾ ಕಲ್ಲಿನ ಗೋಡೆ ಅರ್ಧ ಕೆಲಸದ ಹಂತದಲ್ಲಿ ದ್ದಾಗ ಬಿಸಿಲು ಹಾಗೂ ಮಳೆಯಿಂದ ರಕ್ಷಿಸಲು ಹಾಳೆಯನ್ನು ಉಪಯೋಗಿಸ ಲಾಗುತ್ತದೆ.

೧೩. ಅಂಗಳದಲ್ಲಿ ಹುಲ್ಲು ಹುಟ್ಟಿ ಅಂಗಳ ಹಾಳಾಗದಂತೆ ತಡೆಗಟ್ಟಲು ಹಾಳೆಯನ್ನು ಹೊದಿಸಲಾಗುತ್ತದೆ.

೬. ಆಚರಣೆಯಲ್ಲಿ ಹಾಳೆ

೧. ಹವ್ಯಕರಲ್ಲಿ ಮದುವೆಗಿಂತ ಮುಂಚೆ 'ನಾಂದಿ ಸಮಾವರ್ತನ' ಎಂಬ ವಿಧಿಯಲ್ಲಿ ಹಾಳೆಯ ಚಪ್ಪಲಿ ಅಗತ್ಯವಾಗಿ ಬೇಕಾಗುತ್ತದೆ. ಕಾಶಿಗೆ ಮದುಮಗ

ಹೋಗುವಂತೆ ಅಣಕವಾಡುವ ಈ ಕಾರ್ಯಕ್ರಮದಲ್ಲಿ ಮದುಮಗ ಹಾಳೆಯ ಚಪ್ಪಲಿಯನ್ನು ಬಳಸುತ್ತಾನೆ.

೨. ಹವ್ಯಕರಲ್ಲಿ ಶ್ರಾದ್ಧದ ದಿನ ವಿಶೇಷವಾಗಿ ಊಟಕ್ಕೆ ಕುಳಿತುಕೊಳ್ಳುವ ಬ್ರಾಹ್ಮಣರಿಗೆ ಊಟದ ನಂತರ ಅಲ್ಲಿಯೇ ಕೈತೊಳೆಯಲು ಹಾಳೆಯ ಪಡಿಕೆಗಳು ಬಳಕೆಯಾಗುತ್ತವೆ.

೩. ಹವ್ಯಕರಲ್ಲಿ ಮದುವೆ ದಿನ ವಧೂವರರನ್ನು ಮಂಟಪಕ್ಕೆ ಕರೆತಂದು 'ಉಪಚಾರ' ಮಾಡುವಾಗ 'ಬೀಸಾಳೆ'ಯಿಂದ ಗಾಳಿಬೀಸುವ ಕ್ರಮವಿದೆ.

೪. ಹಾಸನ ಪರಿಸರದಲ್ಲಿ ದೇವಸ್ಥಾನಕ್ಕೆ ನೈವೇದ್ಯದ ಹರಕೆ ಹೇಳಿದ್ದಾದಲ್ಲಿ ಅದನ್ನು ಹಾಳೆಯಲ್ಲಿ ಕಟ್ಟಿಕೊಂಡು ಹೋಗುತ್ತಾರೆ.

೫. ಹಾಸನ ಪರಿಸರದಲ್ಲಿ ಶ್ರಾವಣದ ಮೂರನೇ ವಾರ ಅಥವಾ ನಾಲ್ಕನೆಯ ವಾರ ಊರ ಹೊರಗಿನ 'ಕರಿಕಲ್ಲಿಗೆ ಕಾರಹಬ್ಬ' ಎಂಬ ಆಚರಣೆ ನಡೆಯುತ್ತದೆ. ಭಾನುವಾರ ಮತ್ತು ಗುರುವಾರ ರಾತ್ರಿ ಊಟ ಆದನಂತರ ಮಾತ್ರ ನಡೆಯುವ ಈ ಆಚರಣೆಯಲ್ಲಿ ಕಲ್ಲಿಗೆ ಬಸವನನ್ನು ಸುತ್ತು ಬರಿಸುತ್ತಾರೆ. ಆಗ ಬಸವನಹಣೆಗೆ ನಿಲ್ಲುವ ಆಕಾರದಲ್ಲಿ ಹೂವು ಪೋಣಿಸಿದ ಹಾಳೆಯನ್ನು ಕಟ್ಟಲಾಗುತ್ತದೆ.

೬. ಸತ್ಯನಾರಾಯಣ ಪೂಜೆ ದಿನ ಕೆಲವು ಪ್ರದೇಶಗಳಲ್ಲಿ ಮಂಟಪದ ಹಿಂದೆ ಕನ್ನಡಿಯ ಜತೆಯಲ್ಲಿ 'ಬೀಸಾಳೆ'ಯನ್ನು ಇರಿಸುವುದಿದೆ.

೭. ಆರಾಧನಾ ನೆಲೆಯಲ್ಲಿ ಉಪಯೋಗ

ಭೂತಾರಾಧನೆ, ನಾಗಾರಾಧನೆಗಳಂತಹ ಆರಾಧನೆಗಳಲ್ಲಿ ಅಲಂಕಾರ ಹಾಗೂ ಇತರ ಉಪಯೋಗಗಳಿಗೆ ಹಾಳೆ ಬಳಕೆಯಾಗುತ್ತದೆ.

೭.೧. ಅಲಂಕಾರವಾಗಿ

೭.೧.೧ ಭೂತಾರಾಧನೆಯಲ್ಲಿ ಅಣಿ, ಮುಗಗಳಿಗೆ, ಹಾಳೆಯ ಬಳಕೆಯಾಗುತ್ತದೆ. ಹಾಳೆಯನ್ನು ವಿವಿಧ ಆಕಾರಗಳಲ್ಲಿ ಕತ್ತರಿಸಿ ಬಣ್ಣಹಚ್ಚಿ ಬಳಸಲಾಗುತ್ತದೆ. ಮುಗವಾದರೆ ಕಣ್ಣು, ನಾಲಗೆ, ಮೂಗು, ಬಾಯಿ, ಮೀಸೆಗಳನ್ನು ವಿವಿಧ ಬಣ್ಣಗಳಿಂದ ಹೊಂದಿಸಲಾಗುತ್ತದೆ. ಗುಳಿಗ ಮುಂತಾದ ಭೂತಗಳು ಮುಗ ಕಟ್ಟಿಕೊಳ್ಳುತ್ತವೆ. ಅಣಿಗೆ ಎತ್ತರಕ್ಕೆ ಕಟ್ಟಲು ಹೆಚ್ಚು ಸಂಖ್ಯೆಯಲ್ಲಿ ಹಾಳೆ ಬಳಕೆಯಾಗುತ್ತದೆ. ೧೦೧, ೧೦೦೧ ಹಾಳೆಯೇ ಆಗಬೇಕೆಂದು ನಂಬಿಕೆಯ ಕೆಲವು ಭೂತಗಳಿವೆ. ಪಂಜುರ್ಲಿ, ಮೂಜುಲ್ನಾಯ ಮೊದಲಾದ ಭೂತಗಳ ಅಣಿಗಳ ಬಗೆಗೆ ಈ ರೀತಿಯ ನಂಬಿಕೆಯಿದೆ. ಜಕ್ಕಲಣಿಗೂ ಹಾಳೆಯನ್ನು ಬಳಸುತ್ತಾರೆ. ಉಳ್ಳಾಲ್ತಿ ಭೂತಕ್ಕೂ ಹಾಳೆಯ ಮುಗವಿರುತ್ತದೆ. ಅಣಿ, ಒಕ್ಕಲಣೆ, ಚಪ್ಪರೊಂಬು, ಪುಂಚಾವ್ವ, ತಿಲಿಯಡಿ, ಕಡಿರ–ಮುಡಿಗಳಲ್ಲಿ ಹಾಳೆಯ ಬಳಕೆ ಹಿಂದೆ ಆಗುತ್ತಿತ್ತು.

೭.೧.೨ ಗಗ್ಗರ ಕಟ್ಟುವಾಗ ಹಾಳೆಯನ್ನು ಕಟ್ಟಿ ಗಗ್ಗರ ಕಟ್ಟಲಾಗುತ್ತದೆ. ರಕ್ಷಣೆ ಮತ್ತು ಅಲಂಕಾರದ ಉದ್ದೇಶದಿಂದ ಇದಿರುತ್ತದೆ.

೭.೧.೩ ಭುಜಪಾಳೆ ಎಡಪಾಳೆಗಳನ್ನು ಭೂತಾರಾಧನೆಯಲ್ಲಿ ಬಳಸುತ್ತಾರೆ.

೭.೨. ಇತರ ಉಪಯೋಗಕ್ಕೆ

೭.೨.೧ ಭೂತ ತಂಬಿಲದಲ್ಲಿ 'ಕುರುದಿ'. ನೀರು ಮಿಶ್ರಮಾಡಲು ಹಾಳೆಯ 'ಪಡಿಗೆ' ಬಳಕೆಯಾಗುತ್ತದೆ. ಹೊರಳು ಮತ್ತು ಕುರುದಿ ನೀರು ಬೆರೆಸಲು ಹಾಗೂ ಕೊಲುತ್ತಿ ಇಡಲು ಹಾಳೆಯನ್ನು ಬಳಸುತ್ತಾರೆ.

೭.೨.೨ ಭೂತಕ್ಕೆ ಬಣ್ಣ ಕಲಸಲು, ಚಟ್ಟಿ ಬಳೆಯುವಾಗ ಕಲಸಲು ಹಾಳೆಯನ್ನು ಉಪಯೋಗಿಸುತ್ತಾರೆ.

೭.೨.೩ ಭೂತಾರಾಧನೆಯ ಸಮಯದಲ್ಲಿ ಉಗುಳಲು, ಕೈ ತೊಳೆಯಲು 'ಪಡಿಗೆ' ಬಳಕೆಯಾಗುತ್ತದೆ.

೭.೨.೪ ಬಾರಣೆಗೆ, ಇನ್ನಿತರ ವಸ್ತುಗಳನ್ನು ತಂದಿಡಲು, 'ಬೇಸಾಳೆ'ಗೆ ಹಾಳೆಯನು ಬಳಸುತ್ತಾರೆ.

೭.೨.೫ ನವರಾತ್ರಿ ದಿವಸಗಳಲ್ಲಿ ಕೊರಗನ ವೇಷ ಹಾಕುವವರು ತಲೆಟೊಪ್ಪಿಯಾಗಿ ಹಾಳೆಯನ್ನು ಉಪಯೋಗಿಸುವುದಿದೆ. ಇದು ಸರಳ ರೀತಿಯ ತಯಾರಿಕೆ. ನಾರು ತೆಗೆದ ಹಾಳೆಯ ಎರಡು ತುದಿಗಳನ್ನು ಹಗ್ಗದಿಂದ ಕಟ್ಟುವುದು. ಅದಕ್ಕೆ ಹೂವಿನಿಂದ ಅಲಂಕಾರವೂ ಇರುತ್ತದೆ.

೭.೨.೬ 'ಕನ್ಯಾಪು' ಕುಣಿತದಲ್ಲಿ ಬರುವ ಕೊರಗನಿಗೂ ತಲೆಗೆ ಹಾಳೆಯ ಟೊಪ್ಪಿಗೆಯಿರುತ್ತದೆ. ಇದು ಕೂಡಾ ಸರಳ ರೀತಿಯ ತಯಾರಿಕೆ.

೭.೨.೭ ಆಟಿ ಕಳೆಂಜನು ಕೂಡಾ ಹಾಳೆಯ ಟೊಪ್ಪಿಗೆಯನ್ನು ಬಳಸುತ್ತಾನೆ.

೭.೨.೮ ದುರ್ಗೆಯ ಆರಾಧನೆಯಲ್ಲಿ ತ್ರಿಕಾಲ ಪೂಜೆಗೆ ಮಂಡಲದ ಬದಿಯಲ್ಲಿ ಕುಂಬಳಕಾಯಿ ಮತ್ತು ಕುರುದಿಗಳನ್ನು ತುಂಬಿಸಿಡಲು ಹಾಳೆ ಅಗತ್ಯ.

೭.೨.೯ ಉಪ್ಪಿನಂಗಡಿ 'ಮಾಂಕಾಳಿಯಬ್ಬೆ' ಭೂತದ ಆರಾಧನಾ ಸಮಯದಲ್ಲಿ ಬಹು ಉದ್ದದ ಹಾಳೆಯ ನಾಲಿಗೆ ಬಳಕೆಯಾಗುತ್ತದೆ.

೭.೨.೧೦ ನಾಗಾರಾಧನೆಯಲ್ಲಿ ತಂಬಿಲಕ್ಕೆ ಬೇಕಾದ ಪರಿಕರಗಳನ್ನು ಸಾಗಿಸಲು ಹಾಳೆಯನ್ನು ಬಳಸುವುದಿದೆ.

೮. ಆಹಾರವಾಗಿ ಮತ್ತು ಸೇವನೆಯಲ್ಲಿ ಹಾಳೆ:

೧. ಹಳ್ಳಿಗಳಲ್ಲಿ ಜಾನುವಾರುಗಳಿಗೆ ಆಹಾರವಾಗಿ ಹಾಳೆಯ ತುಂಡುಗಳನ್ನು

ಕೊಡುತ್ತಾರೆ. ಊಟಕ್ಕಾಗಿ ತುಂಡರಿಸಿ ಉಳಿದ ತ್ಯಾಜ್ಯ ತುಂಡುಗಳನ್ನು ಜಾನುವಾರುಗಳಿಗೆ ಕೊಡುತ್ತಾರೆ. ಇದಕ್ಕೆ ಹಸಿಯಾದ ಹಾಳೆಯೇ ಆಗಬೇಕೆಂಬುದು ಗಮನೀಯ ವಿಷಯವಾದರೂ ಜಾನುವಾರುಗಳು ದಾರಿಯಲ್ಲಿ ಒಣಹಾಳೆ ಸಿಕ್ಕಿದರೆ ತಿನ್ನುತ್ತವೆ. ಉಪ್ಪಿನ ಅಂಶ ಇರುವುದೇ ಜಾನುವಾರುಗಳಿಗೆ ಹಾಳೆ ಇಷ್ಟವಾಗಲು ಕಾರಣ.

೨. ಹಾಳೆಯು ಹಸಿಯಾಗಿರುವಾಗ ತಂದು ಒಂದು ಆಕಾರದಲ್ಲಿ ಕತ್ತರಿಸಿ ಹೊರಗಿನ ನಾರು (ಸಿಪ್ಪೆ) ತೆಗೆದು ಊಟದ ತಟ್ಟೆಯಾಗಿ ಬಳಸುವುದು ಸಾಮಾನ್ಯ. ಬಳಕೆಯ ನಂತರ ಬಿಸಾಡಲಾಗುತ್ತದೆ. ಸುಲಭವಾಗಿ ದೊರೆಯುವುದರಿಂದ ಜನಪದರು ಇದನ್ನು ಸುಲಭವಾಗಿ ಆಯ್ದುಕೊಳ್ಳುತ್ತಾರೆ. ಹಾಳೆಯ ಎರಡು ತುದಿಗಳನ್ನು ಮಡಚಿ (ನಾರು ತೆಗೆಯದೆ) ಕಟ್ಟಿದಾಗ 'ಕಟ್ಟಿಂಪಾಳೆ'ಯಾಗುತ್ತದೆ. ಇದನ್ನು ಊಟಕ್ಕೆ ಮನೆಯ ಒಳಗೆ ಮತ್ತು ಹೊರಗೆ ಕೆಲಸದ ಸಮಯದಲ್ಲಿ ಬಳಸುತ್ತಾರೆ. ತಿಳಿಸಹಿತವಾದ ಗಂಜಿಯಊಟಕ್ಕೆ ಇದು ತುಂಬಾ ಸಹಾಯಕ. ಒಂದೇ ತುದಿ ಕಟ್ಟಿ ಊಟಮಾಡುವುದು ಇದೆ. ಹಾಸನ ಪರಿಸರದಲ್ಲಿ ಕೆಲಸದವರು ಮಾತ್ರ ಇಂತಹದ್ದರಲ್ಲಿ ಊಟಮಾಡುತ್ತಾರೆ.

೩. ನಾಯಿಗಳಿಗೆ ತಿಂಡಿ, ಅನ್ನ ಹಾಕಲು ಸಾಮಾನ್ಯವಾಗಿ ಒಣಗಿದ ಹಾಳೆಯನ್ನು ಬಳಸುತ್ತಾರೆ. ಜನಪದರು ಊಟಮಾಡಿದ ಹಾಳೆಯಲ್ಲಿಯೇ ನಾಯಿಗಳಿಗೆ ಕೊಡುತ್ತಾರೆ.

೪. ಮನುಷ್ಯರಿಗೆ ಮತ್ತು ನಾಯಿಗಳಿಗೆ ಮಳೆಗಾಲದಲ್ಲಿ ಊಟಮಾಡಲು (ಮಳೆಗಾಲದಲ್ಲಿ ಹಾಳೆ ಶುಷ್ಕವಾಗಿ ಸಿಗುವುದಿಲ್ಲ ಮತ್ತು ಪ್ರಮಾಣ ಕಡಿಮೆ) ಬೇಸಿಗೆಯಲ್ಲಿ ಹಾಳೆತಂದು ಅದರ ನಾರು ತೆಗೆದು ಒಣಗಿಸಿ ಮಡಿಚಿ ಕಟ್ಟಿ ತೆಗೆದಿಡಿಸಲಾಗುತ್ತದೆ. ನೆಲಸಾರಿಸಲು ಹಾಳೆ ತುಂಡನ್ನು ಕೂಡ ಶೇಖರಿಸಿಡುವುದಿದೆ.

೫. ಪರಿಶಿಷ್ಟ ವರ್ಗದವರಿಗೆ ಮೇಲುವರ್ಗದವರು ನೀರು, ಅನ್ನ ಕೊಡುವಾಗ ಪಡಿಗೆಯಲ್ಲಿ ಕೊಡುತ್ತಾರೆ. ಕೆಲಸದ ಸಮಯದಲ್ಲಿ ಬೇರೆ ಪಾತ್ರೆ ಸಿಗದಿದ್ದರೆ ಅವರು 'ಮಟ್ಟಾಳೆ'ಯಲ್ಲಿ ನೀರು ಕುಡಿಯುವುದುಂಟು.

೯. ಹಾಳೆಯ ಬಗೆಗಿನ ನಂಬಿಕೆಗಳು

೧. ಆಟಿ ತಿಂಗಳಲ್ಲಿ ಹಾಳೆಯನ್ನು ಒಳಗೆ ತರಬಾರದೆಂಬ ನಂಬಿಕೆಯಿದೆ. ಅಡಿಕೆ ಮರಕ್ಕೆ 'ಅನೆ' (ಸೂತಕ) ಆಟಿ ತಿಂಗಳಲ್ಲಿರುವುದರಿಂದ ಹಾಳೆಯನ್ನು ಒಳಗೆ ತರಬಾರದೆಂಬ ನಂಬಿಕೆ ಬಂತು. ಈ ತಿಂಗಳಲ್ಲಿ ಹಿಂಗಾರ ಹೆಚ್ಚು ಬಿಡುವುದರಿಂದ 'ಅನೆ'ಯ ಕಲ್ಪನೆಯಿರಬಹುದು. ಮತ್ತೊಂದು ಅಂಶ ಈ ತಿಂಗಳು ಮಳೆಯಿರುವುದರಿಂದ ಹಾಳೆಯು ತೇವದಿಂದ ಕರಟಿರುತ್ತದೆ. ಬಸವನ ಹುಳುಗಳು

ಹೆಚ್ಚಿನ ಸಂಖ್ಯೆಯಲ್ಲಿ ಹರಿದಾಡುತ್ತಿರುತ್ತವೆ. ಈ ನಂಬಿಕೆ ಹೆಚ್ಚಿನ ಪ್ರದೇಶದಲ್ಲಿ ಕಂಡುಬರುವುದಿಲ್ಲ.

೨. ಹವ್ಯಕರು ಮದುವೆಯ ಸಂದರ್ಭದಲ್ಲಿ ಹಾಳೆಯ ಚಪ್ಪಲಿ ಬಳಸುವುದರಿಂದ ಉಳಿದ ಸಮಯದಲ್ಲಿ ಹಾಳೆಯ ಚಪ್ಪಲಿ ಬಳಸಬಾರದೆಂಬ ನಂಬಿಕೆಯಿದೆ. ಉಳಿದ ಜಾತಿಗಳಲ್ಲಿ ಹಾಳೆಯ ಚಪ್ಪಲಿ ಧರಿಸಬಾರದು, ಕಾರಣ ಅದನ್ನು 'ಕುಲೆ'ಗಳು ಧರಿಸುತ್ತವೆ ಎಂಬ ನಂಬಿಕೆ. ಇದು ಎಲ್ಲಾ ಪ್ರದೇಶಗಳಲ್ಲಿ ಇಲ್ಲ.

೩. ಹಾಸನ ಪರಿಸರದಲ್ಲಿ ಕಾಮಾಲೆ ರೋಗಬಂದವರು ಹಾಳೆಯಲ್ಲಿ ಊಟ ಮಾಡಬಾರದೆಂಬ ನಂಬಿಕೆ ಇದೆ.

೪. ಮರ ಹತ್ತಲು ಮಾಡಿದ ತಳೆಯನ್ನು ಕಡಿದು ಹಾಕಬೇಕು ಎಂಬ ನಂಬಿಕೆಯಿದೆ. ಇದು ಬರಲು ಕಳ್ಳರು ಅದನ್ನು ಉಪಯೋಗಿಸಿಯಾರೆಂಬ ನಂಬಿಕೆ ಕಾರಣವಾಗಿರಬಹುದು.

೧೦. ಪಾಡ್ದನಗಳಲ್ಲಿ ಹಾಳೆ

೧. "ಕೊರಗತನಿಯ ಪಾಡ್ದನದಲ್ಲಿ ಬೈರಕ್ಕೆ ತನಿಯನನ್ನು ಕರೆಯುವಾಗ ತನಗೆ ಸೊಂಟಕ್ಕೆ ಬಟ್ಟೆಯಿಲ್ಲ, ತಲೆಗೆ ಗೋಂಪರು (ಮುಟ್ಟಾಳೆ)ಯಿಲ್ಲ ಎನ್ನುತ್ತಾರೆ. ಆಗ ಬೈರಕ್ಕ ತಲೆಗಿಟ್ಟ ಹಾಳೆಯನ್ನು ದಿಂಬಿನ ಬಟ್ಟೆಯನ್ನು ಬಿಚ್ಚಿ ಹುಡುಗನಿಗೆ ಕೊಡುತ್ತಾಳೆ. ಬುತ್ತಿ ತಂದ ಕಂಗಿನ ಹಾಳೆಯನ್ನು ಮುಟ್ಟಾಳೆಗೆಂದು ಕೊಡುವ ಪ್ರಸ್ತಾಪ ಬರುತ್ತದೆ". (ಅಮೃತ ಸೋಮೇಶ್ವರ ೧೯೭೮).

ಹೀಗೆ ಹಾಳೆ ಜನಪದರ ಜೀವನದಲ್ಲಿ ಹಾಸುಹೊಕ್ಕಾಗಿರುತ್ತದೆ. ತೋಟಗಳಿದ್ದಲ್ಲಿ ಸುಲಭವಾಗಿ ದೊರೆಯುವುದರಿಂದ ಹೆಚ್ಚು ಹಲವು ಉಪಯೋಗಗಳಿಗೆ ಹಾಳೆ ಬಳಕೆಯಾಗುತ್ತದೆ. ಹಾಳೆ ಬೇಕಾದ ಆಕಾರಕ್ಕೆ ಒಗ್ಗುವುದರಿಂದ, ಕರಗದೆ ಉಳಿಯುವುದರಿಂದ ವಸ್ತು, ದ್ರವಗಳನ್ನು ಶೇಖರಿಸಿ ಇಡಲೂ ಸಹಾಯಕವಾಯಿತು. ತಮ್ಮ ಸುತ್ತಲಿನ ಪರಿಸರದಿಂದ ಜನಪದರು ಜೀವನ ಪದ್ಧತಿಯಲ್ಲಿ ವಸ್ತುವನ್ನು ಬಳಸಿಕೊಳ್ಳುತ್ತಾರೆಂಬುವುದಕ್ಕೆ ಹಾಳೆಯೊಂದು ನಿದರ್ಶನ. ಜೀವನದ ಪ್ರತಿಯೊಂದು ಸನ್ನಿವೇಶದಲ್ಲಿ ಹಾಳೆ ಬಳಕೆಯಾಗುತ್ತದೆ. ಕಸಬು, ಆಹಾರ ಸೇವನೆ, ಆಚರಣೆ, ಆರಾಧನೆ ಹೀಗೆ ಒಂದಲ್ಲ ಒಂದು ರೀತಿಯಲ್ಲಿ ದಿನನಿತ್ಯ ಇದರ ಬಳಕೆಯಿದೆ. ಆಧುನಿಕತೆಯ ಗಾಳಿ ಬೀಸಿದಂತೆ ಇದರ ಮಹತ್ವ ಕಡಿಮೆಯಾಗುತ್ತಿದೆಯಾದರೂ ಯಂತ್ರದ ಸಹಾಯದಿಂದ ಊಟದ ತಟ್ಟೆ, ಟೊಪ್ಪಿಗೆ, ಜಾನುವಾರುಗಳ ಹಿಂಡಿ ಹಾಳೆಯಿಂದ ತಯಾರಾಗುತ್ತಿದೆ. ಒಟ್ಟಿನಲ್ಲಿ ಹಾಳೆ ಜನಪದರ ಜೀವನದ ಒಂದು ಅಂಗ.

ಗ್ರಂಥಋಣ

೧. ಅಮೃತ ಸೋಮೇಶ್ವರ—ಅವಿಲು ೧೯೭೮ ಕೊರಗತನಿಯ, ಪು. ೧೦೬ ಕನ್ನಡ ಸಂಘ, ವಿವೇಕಾನಂದ ಕಾಲೇಜು, ಪುತ್ತೂರು.

ಡಾ. ಆರ್. ರಾಮಕೃಷ್ಣ

ಚಾಮರಾಜನಗರ ತಾಲ್ಲೂಕಿನ ಜೈನಕ್ಷೇತ್ರಗಳು

ಜೈನಧರ್ಮ ಪ್ರಪಂಚದ ಪ್ರಾಚೀನ ಧರ್ಮಗಳ ಪೈಕಿ ಒಂದು. ಜೈನ ಮತ್ತು ಜೈನೇತರ ಗ್ರಂಥಗಳು, ಶಾಸನಗಳು, ಸ್ಮಾರಕಗಳು ಹರಪ್ಪ ಮೊಹೆಂಜೋದಾರೊ ನಗರಗಳ ಅವಶೇಷಗಳಲ್ಲಿ ಸಿಕ್ಕಿರುವ ವಿಗ್ರಹಗಳು ಮತ್ತು ಅವುಗಳ ಪೀಠದಲ್ಲಿ ಕೆತ್ತಿರುವ ಶಾಸನಗಳು—ಇವೆಲ್ಲವೂ ಜೈನಧರ್ಮದ ಪ್ರಾಚೀನತೆಯನ್ನು ಸಾರುತ್ತವೆ. ಜೈನ ಧರ್ಮ ಸುಸಂಘಟಿತವಾದ ಪ್ರಾಚೀನ ಧರ್ಮ. ಇಪ್ಪತ್ತಮೂರನೆಯ ತೀರ್ಥಂಕರ ನಾದ ಪಾರ್ಶ್ವನಾಥನಿಗಿಂತ (ಕ್ರಿ. ಪೂ. ಸು ೭೦೦) ಮೊದಲೇ ಜೈನರ ಇಪ್ಪತ್ತೆರಡು ಮಂದಿ ತೀರ್ಥಂಕರರು ಅವತರಿಸಿದ್ದಾರೆ. ಆದುದರಿಂದ ಜೈನಧರ್ಮದ ಆದಿಯನ್ನು ಅರಿಯುವುದು ಸುಲಭವಲ್ಲ ಎಂಬುದಾಗಿ ವಿಶ್ವದ ವಿವಿಧ ಧರ್ಮಗಳ ತೌಲನಿಕ ಅಧ್ಯಯನ ನಡೆಸಿದ ಫರ್‌ಲಾಂಗ್ ಎಂಬಾತ ಹೇಳಿದ್ದಾನೆ. ವೃಷಭ ಲಾಂಛನವುಳ್ಳ ಮೊದಲನೆಯ ತೀರ್ಥಂಕರನ ವಿಗ್ರಹವೊಂದು ಸಿಂಧೂನದಿಯ ಮೈದಾನದಲ್ಲಿ ದೊರಕಿರುವುದು ಜೈನಧರ್ಮದ ಪ್ರಾಚೀನತೆಗೆ ಸಾಕ್ಷಿಯಾಗಿದೆಯೆಂದು ಪ್ರಾಕ್ತನ ತಜ್ಞರಾದ ಶ್ರೀರಾಮಪ್ರಸಾದ್ ಚಂದಾ ಹೇಳಿದ್ದಾರೆ. ಜೈನಧರ್ಮ ಬಹು ಪ್ರಾಚೀನ ಧರ್ಮವೆಂದೂ ಮೊದಲನೆಯ ತೀರ್ಥಂಕರ ವೃಷಭನಾಥನೇ ಜೈನಧರ್ಮ ಸಂಸ್ಥಾಪಕ ನೆಂದೂ ಡಾ. ಎಸ್. ರಾಧಾಕೃಷ್ಣನ್ ಅವರು ತಮ್ಮ 'ಇಂಡಿಯನ್ ಫಿಲಾಸಫಿ' ಗ್ರಂಥದಲ್ಲಿ ಹೇಳಿದ್ದಾರೆ. ಈ ಮಾತನ್ನು ಲೋಕಮಾನ್ಯ ಬಾಲಗಂಗಾಧರ ತಿಲಕರೂ ಅನುಮೋದಿಸಿದ್ದಾರೆ.

ಕರ್ನಾಟಕದಲ್ಲಿ ಜೈನಧರ್ಮವು ಅನೇಕ ರಾಜಮಹಾರಾಜರ ಪೋಷಣೆಯಲ್ಲಿ ಜೈನಯತಿಗಳ ಮಾರ್ಗದರ್ಶನದಲ್ಲಿ ಪ್ರವರ್ಧಮಾನಕ್ಕೆ ಬಂದಿದೆ. ಗಂಗರ ಮತ್ತು ಹೊಯ್ಸಳರ ಕಾಲದಲ್ಲಿ ಈ ಧರ್ಮ ಉಚ್ಛ್ರಾಯ ಸ್ಥಿತಿಗೇರಿತು. ಗಂಗರಾಜ್ಯದ ಅವತರಣ ಜೈನಾಚಾರ್ಯರಾದ ಸಿಂಹನಂದಿಯವರ ಪ್ರಭಾವದಿಂದಲೇ ಆಯಿತು. ಈ ಅರಸರ ಕಾಲದಲ್ಲಿ ಜೈನಧರ್ಮವೇ ರಾಜಧರ್ಮವಾಗಿತ್ತು. ಹೊಯ್ಸಳ ಸಾಮ್ರಾಜ್ಯದ ಅವತರಣವೂ ಕೂಡ ಜೈನಯತಿಯ ಪ್ರಭಾವದಿಂದಲೇ ಆಯಿತೆಂದು ಕೆಲವು ಜೈನವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಹೊಯ್ಸಳ ದೊರೆ ವಿಷ್ಣುವರ್ಧನ

ವೈಷ್ಣವನಾಗಿ ಮತಾಂತರ ಹೊಂದಿದರೂ ಜೈನಧರ್ಮವನ್ನು ಕಡೆಗಣಿಸಲಿಲ್ಲ. ಈತನ ಪಟ್ಟಮಹಿಷಿ ಶಾಂತಲಾದೇವಿ ಅನೇಕ ಜೈನಬಸದಿಗಳನ್ನು ಕಟ್ಟಿಸಿ ಅವುಗಳಿಗೆ ದತ್ತಿ ಬಿಟ್ಟಿದ್ದಾಳೆ. ಹೊಯ್ಸಳರ ತರುವಾಯ ಆಡಳಿತ ನಡೆಸಿದ ದೊರೆಗಳೂ ಕೂಡ ಜೈನ ಧರ್ಮವನ್ನು ಪೋಷಿಸಿಕೊಂಡು ಬಂದಿದ್ದಾರೆ. ಅವರ ಪೈಕಿ ಅನೇಕ ಅರಸರು ಜೈನ ಮತಾನುಯಾಯಿಗಳೂ ಆಗಿದ್ದಾರೆ. ಆದ್ದರಿಂದಲೇ ಜೈನಮತ ಕರ್ನಾಟಕದಲ್ಲಿ ಉಳಿದು ಬೆಳೆದುಬಂದಿದೆ.

ಮೈಸೂರು ಜಿಲ್ಲೆಯ ಆಗ್ನೇಯ ದಿಕ್ಕಿನಲ್ಲಿರುವ ಚಾಮರಾಜನಗರ ತಾಲ್ಲೂಕು ಅನೇಕ ಪ್ರಾಚೀನ ಜೈನಬಸದಿಗಳನ್ನೊಳಗೊಂಡು ಜೈನರ ಪುಣ್ಯಕ್ಷೇತ್ರವೆನಿಸಿದೆ. ಈ ತಾಲ್ಲೂಕಿನಲ್ಲಿ ಪ್ರಾಚೀನಕಾಲದಿಂದಲೂ ಜೈನಧರ್ಮದ ಅಸ್ತಿತ್ವವಿತ್ತು ಎಂಬುದಕ್ಕೆ ಜೈನಬಸದಿಗಳೂ ಶಾಸನಗಳೂ ಸಾಕ್ಷಿಯಾಗಿವೆ.

ಚಾಮರಾಜನಗರ ಕಸಬೆಯಲ್ಲಿರುವ ಪಾರ್ಶ್ವನಾಥ ಬಸದಿಯೇ ಈಗ ಇಲ್ಲಿ ಉಳಿದಿರುವ ಪ್ರಾಚೀನತಮ ಕಟ್ಟಡ. ಇದೊಂದು ತ್ರಿಕೂಟ ಬಸದಿ. ಕ್ರಿ.ಶ. ೧೧೧೭ ರಲ್ಲಿ ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ಸೇನಾಪತಿಯಾದ ಇಮ್ಮಡಿ ಪುಣಿಸಮಯ್ಯನು ತನ್ನ ಹೆಸರಿನಲ್ಲಿ ಕಟ್ಟಿಸಿದ ಪುಣಿಸಜಿನಾಲಯವೇ ಈ ಪಾರ್ಶ್ವನಾಥ ಬಸದಿ. ಇಲ್ಲಿಯ ಮೂರ್ತಿಯನ್ನು ವಿಜಯನಾಥನೆಂದು ಕರೆಯಲಾಗಿದೆ. ಈ ವಿಷಯ ಕ್ರಿ.ಶ. ೧೫೧೮ರ ಶಾಸನದಿಂದ ತಿಳಿದುಬರುತ್ತದೆ. ಬಸದಿಯಲ್ಲಿ ಕುಳಿತಿರುವ ಪಾರ್ಶ್ವನಾಥಮೂರ್ತಿಯ ಜೊತೆಗೆ ಯಕ್ಷ ಧರಣೇಂದ್ರ ಮತ್ತು ಯಕ್ಷಿ ಪದ್ಮಾವತಿ ವಿಗ್ರಹಗಳೂ ಇವೆ. ಪದ್ಮಾವತಿ ವಿಗ್ರಹವನ್ನು ಗುಂಡ್ಲುಪೇಟೆ ತಾಲ್ಲೂಕಿನ ತೆರಕಣಾಂಬಿಯಿಂದ ತಂದುದೆನ್ನಲಾಗಿದೆ. ಈ ವಿಗ್ರಹಗಳ ಜೊತೆಗೆ ಸಪ್ತಹೆಡೆಗಳ ಸರ್ಪದ ಮುಂದೆ ನಿಂತಿರುವ ಸುಂದರ ಪಾರ್ಶ್ವನಾಥಮೂರ್ತಿಯೂ ಉಂಟು. ಇದನ್ನು ಹರಳುಕೋಟೆಯಿಂದ (ಮಣಿಪುರ) ತಂದು, ಈ ಬಸದಿಯಲ್ಲಿ ಪ್ರತಿಷ್ಠಾಪಿಸಿದ್ದೆನ್ನಲಾಗಿದೆ. ನಿಂತಿರುವ ಪಾರ್ಶ್ವನಾಥಮೂರ್ತಿಯ ತಲೆಯ ಮೇಲೆ ಸಪ್ತಹೆಡೆಗಳ ಸರ್ಪದ ಛತ್ರ ಇರುವುದರ ಬಗ್ಗೆ ತಾಲ್ಲೂಕಿನಲ್ಲಿ ಪ್ರಚಲಿತವಿರುವ ಜನಪದ ಕಥೆಯಿದು :

ಭಗವಾನ್ ಪಾರ್ಶ್ವನಾಥಸ್ವಾಮಿ ಇಪ್ಪತ್ತಮೂರನೆಯ ತೀರ್ಥಂಕರ. ಕಾಶಿಯ ರಾಜ ಅಶ್ವಸೇನ–ಮಾಯಾದೇವಿಯರ ಪ್ರೀತಿಯ ಮಗ. ತೇಜಸ್ವಿಯಾಗಿದ್ದ. ಚಿಕ್ಕಂದಿನಿಂದಲೂ ಅನ್ಯವಿಷಯಕ್ಕೆ ಮನಗೊಡದೆ ವೈರಾಗ್ಯಭಾವವನ್ನೇ ತುಂಬಿಕೊಂಡ. ಒಮ್ಮೆ ಗಂಗಾನದಿತೀರದಲ್ಲಿ ನಡೆಯುತ್ತಿದ್ದ ಹಿಂಸಾಮಯ ಯಜ್ಞವನ್ನು ನೋಡಿ, ಅದನ್ನು ವಿರೋಧಿಸಿ ಸಾಯುತ್ತಿದ್ದ ಸರ್ಪದಂಪತಿಗಳನ್ನು ಉಳಿಸಿದ. ಅದರ ಕುರುಹಿಗಾಗಿ ಪಾರ್ಶ್ವನಾಥಸ್ವಾಮಿಯ ತಲೆಯ ಮೇಲೆ ಸಪ್ತಹೆಡೆಗಳ ಸರ್ಪದ ಛತ್ರ ಇದೆಯಂತೆ.

ಈ ಬಸದಿಯಲ್ಲಿರುವ ಕ್ರಿ.ಶ. ೧೧೧೭ ಮೇ ೨೯ರ ಶಾಸನ ಹೊಯ್ಸಳ ದೊರೆ ವಿಷ್ಣುವರ್ಧನನ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದ ಇಮ್ಮಡಿ ಪುಣಿಸ

ಮುಯ್ಯನ ದಂಡಯಾತ್ರೆಗಳನ್ನೂ ಆತನ ವಂಶಾವಳಿಯನ್ನೂ ತಿಳಿಸುತ್ತದೆ. ಪುಣಿಸಮಯ್ಯನ ವಂಶಸ್ಥರು ಜೈನಧರ್ಮವನ್ನು ಅವಲಂಬಿಸಿದ್ದರು. ಇವರ ಪೈಕಿ ಚಾಮುಚಮೂಪನೇ ಮೊತ್ತಮೊದಲಿಗ. ಇವನ ಮಗ ಒಂದನೆಯ ಪುಣಿಸಮ್ಮಚಮೂಪ, ಸೊಸೆ ಪೋಚಲೆ, ಮೊಮ್ಮಕ್ಕಳು ಮೂರು ಮಂದಿ: ೧. ಚಾಮರಾಜ, ೨. ನಾಕಣ (ನಾಗದೇವ) ಮತ್ತು ೩. ಕುಮರಯ್ಯ. ಇವರಲ್ಲಿ ಚಾಮರಾಜನಿಗೆ ಅರಸಿಕಬ್ಬೆ ಮತ್ತು ಚೌಂಡಲೆ ಎಂಬ ಇಬ್ಬರು ಪತ್ನಿಯರು. ಇವರಿಗೆ ಅನುಕ್ರಮವಾಗಿ, ಪ್ರಸ್ತುತ ಶಾಸನದ ದಾನಿಯಾದ ಇಮ್ಮಡಿ ಪುಣಿಸಮಯ್ಯ ಮತ್ತು ಬಿಟ್ಟಿಗ ಎಂಬ ಮಕ್ಕಳು ಜನಿಸಿದರು. ಈ ಇಮ್ಮಡಿ ಪುಣಿಸಮಯ್ಯನ ತಾತನನ್ನು 'ಶಾಸನವಾಚಕ ಚಕ್ರವರ್ತಿ' ಎಂಬುದಾಗಿ ವರ್ಣಿಸಲಾಗಿದೆ. ಇಮ್ಮಡಿ ಪುಣಿಸಮಯ್ಯನು ಪ್ರಸ್ತುತ ಬಸದಿಯನ್ನು ಕಟ್ಟಿಸಿದ ಅಲ್ಲದೆ ಗಂಗವಾಡಿ ೯೬೦೦೦ದ ಬಸದಿಗಳನ್ನೂ ಸಹ ಊರ್ಜಿತಗೊಳಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಪುಣಿಸಮಯ್ಯನ ಗುರು ದ್ರವಿಡಾನ್ವಯದ ಅಜಿತಮುನಿಪನೆಂಬ ವಿಚಾರವೂ ವ್ಯಕ್ತವಾಗಿದೆ.

ಇದೇ ತಾಲ್ಲೂಕಿನ ಹರವೆ ಹೋಬಳಿಗೆ ಸೇರಿರುವ ಮಲೆಯೂರು, ಪ್ರಸಿದ್ಧ ಜೈನಕ್ಷೇತ್ರಗಳ ಪೈಕಿ ಒಂದು. ಮಲೆಯೂರು ಬೆಟ್ಟದಲ್ಲಿ ಜೈನ ಅವಶೇಷಗಳಿವೆ. ಪಾರ್ಶ್ವನಾಥ ಬಸದಿಯೇ ಇಲ್ಲಿಯ ಪ್ರಾಚೀನತಮ ಬಸದಿ. ಮಲೆಯೂರು ಬೆಟ್ಟಕ್ಕೆ ಕನಕಗಿರಿ ಅಥವಾ ಕನಕಾಚಲ ಎಂಬ ಹೆಸರುಂಟು. ಇಲ್ಲಿಯ ಪಾರ್ಶ್ವನಾಥಸ್ವಾಮಿಯ ಪಂಚಪರ್ವಗಳ ಆಚರಣೆ ಸಂದರ್ಭದಲ್ಲಿ ಚಿಕ್ಕತಾಯಿ ಎಂಬಾಕೆ, ಸ್ವಾಮಿಯ ಪೂಜೆಗೆಂದು ಕಿನ್ನರಿಪುರವೆಂಬ ಗ್ರಾಮವೊಂದನ್ನು ದತ್ತಿ ಬಿಟ್ಟಿದ್ದಾಳೆ. ಈಕೆ ಅಚ್ಯುತರಾಜೇಂದ್ರನ ಮಗನಾದ ಅಚ್ಯುತವೀರೇಂದ್ರ ಶಿಕ್ಯಪನೆಂಬ ಪ್ರಸಿದ್ಧ ವೈದ್ಯನ ಪತ್ನಿ. ಇವರ ಮಗ ವಿದ್ಯಾಸಾರ ಎಂಬಾತನೂ ವೈದ್ಯನಾಗಿದ್ದ ಎಂಬ ವಿಚಾರ ಬಸದಿಯ ಪ್ರಾಕಾರದಲ್ಲಿರುವ ಚಪ್ಪರಮಂಟಪದಲ್ಲಿಯ ಕ್ರಿ.ಶ. ೧೧೮೧ ಸೆಪ್ಟೆಂಬರ್ ೧೯ರ ಶಿಲಾಶಾಸನದಿಂದ ತಿಳಿದುಬಂದಿದೆ.

ಕನಕಗಿರಿಯಲ್ಲಿ ರಾಯರಾಜಗುರು ಹೇಮಚಂದ್ರ ಭಟ್ಟಾರಕರ ಶಿಷ್ಯನಾದ ತೆಲುಗ ಆದಿದೇವ ಮತ್ತು ಲಲಿತಕೀರ್ತಿಭಟ್ಟಾರಕರ ಶಿಷ್ಯನಾದ ಲಲಿತಕೀರ್ತಿ ಭಟ್ಟಾರಕ ಎಂಬ ಇಬ್ಬರು ಜೈನಗುರುವರ್ಯರು ತಮ್ಮ ನಿಷಿದ್ಧಿ ನಿಮಿತ್ತವಾಗಿ 'ಶ್ರೀವಿಜಯನಾಥ' ಪ್ರತಿಮೆಯನ್ನು ಮಾಡಿಸಿದರೆಂಬ ವಿಷಯ ಕ್ರಿ.ಶ ೧೩೫೫ರ ಶಾಸನದಿಂದ ತಿಳಿದುಬರುತ್ತದೆ. ವಿಜಯನಗರದ ಅರಸನಾದ ಇಮ್ಮಡಿ ದೇವರಾಯನ ಮಗ ಮುಮ್ಮಡಿ ಹರಿಹರನು ತ್ರಿಯಂಬಕದೇವರ ಸನ್ನಿಧಿಯಲ್ಲಿ ಕನಕಗಿರಿಯ ಶ್ರೀವಿಜಯನಾಥದೇವರಿಗೆ ಮಲೆಯೂರು ಮತ್ತು ಅದರ ಉಪಗ್ರಾಮ ಹುಣಸೂರಪುರವನ್ನೂ ಸುಂಕ ಆದಾಯಗಳನ್ನೂ ದಾನಮಾಡಿರುವ ವಿಷಯ ಬಸದಿಯಲ್ಲಿರುವ ಕ್ರಿ.ಶ. ೧೪೩೨ ಆಗಸ್ಟ್ ೨ರ ತಾಮ್ರಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ೧೫೧೭ರಲ್ಲಿ ಮುನಿಚಂದ್ರಯತಿಯ ಶಿಷ್ಯನಾದ ಮುನಿಚಂದ್ರನು ಮಲೆಯೂರು ಬೆಟ್ಟದಲ್ಲಿ

ಸಮಾಧಿ ಹೊಂದಿದ ವಿಷಯ, ಬೆಟ್ಟದಲ್ಲಿರುವ ಮುನಿಚಂದ್ರ ನಿಷಿಧಿಕಲ್ಲಿನ ಮೇಲೆ ನಿರೂಪಿತವಾಗಿದೆ. ಕ್ರಿ.ಶ. ೧೮೮೧ ರಲ್ಲಿ ದೇಶೀಗಣದ ಭಟ್ಟಾಕಳಂಕನು ಈ ಬೆಟ್ಟದ ಮೇಲೆ ಮರಣವಿಧಿಯಿಂದ ನಾಕಲೋಕಕ್ಕೆ ಸಂದ ವಿಚಾರವೂ ಶಾಸನವೊಂದರಲ್ಲಿ ವ್ಯಕ್ತವಾಗಿದೆ.

ಸಂತೇಮರಹಳ್ಳಿ ಹೋಬಳಿಗೆ ಸೇರಿರುವ ಉಮ್ಮತ್ತೂರಿನಲ್ಲೂ ಪ್ರಾಚೀನ ಬಸದಿಯೊಂದನ್ನು ಕಾಣಬಹುದು. ಉಮ್ಮತ್ತೂರು ಪ್ರಸಿದ್ಧವಾದ ಐತಿಹಾಸಿಕ ಸ್ಥಳ. ಹಿಂದೆ ಇದು ಪಾಳೆಯಗಾರರ ಆಡಳಿತ ಕೇಂದ್ರವಾಗಿತ್ತು. ಚಾಮರಾಜನಗರ ಕಸಬೆಯಿಂದ ಉತ್ತರಕ್ಕೆ ಸುಮಾರು ೧೬ ಕಿ.ಮೀ. ದೂರದಲ್ಲಿ ನಂಜನಗೂಡು--ಯಳಂದೂರು ರಸ್ತೆಯಲ್ಲಿರುವ ಗ್ರಾಮವಿದು. ಈ ಗ್ರಾಮ ೧೧ನೆಯ ಶತಮಾನದಲ್ಲಿಯೇ ಅಸ್ತಿತ್ವದಲ್ಲಿತ್ತು ಎಂಬ ವಿಚಾರ ಇಲ್ಲಿಯ ನಿಷಿಧಿ ಶಾಸನಗಳಿಂದ ತಿಳಿದುಬರುತ್ತದೆ. ಆ ಕಾಲದಲ್ಲಿ ಜೈನವಸತಿ ಈ ಊರಿನಲ್ಲಿ ಅಧಿಕವಾಗಿತ್ತೆಂಬ ಅಂಶವೂ ಚಾರಿತ್ರಿಕ ಸಂಶೋಧನೆಗಳಿಂದ ಸ್ಥಿರಪಟ್ಟಿದೆ.

ಉಮ್ಮತ್ತೂರಿನಲ್ಲಿ ಕ್ರಿ.ಶ. ಸುಮಾರು ೧೩ನೆಯ ಶತಮಾನಕ್ಕೆ ಸೇರಿದ ವರ್ಧಮಾನ ಬಸದಿಯಿದೆ. ಇದು ದ್ರಾವಿಡ ಶೈಲಿಯಲ್ಲಿದೆ. ಬಸದಿಯಲ್ಲಿರುವ ವರ್ಧಮಾನಮೂರ್ತಿ ಬಹುಸುಂದರವಾಗಿದೆ. ಬಸದಿ ಈಗ ಶಿಥಿಲಾವಸ್ಥೆಯಲ್ಲಿರುವುದರಿಂದ ಪೂಜೆ ನಿಂತುಹೋಗಿದೆ. ಸುದೈವದಿಂದ ಮೂರ್ತಿ ಪಾಳಾಗದೆ ಉಳಿದಿದೆ. ಈ ಬಸದಿಯ ಗರ್ಭಗುಡಿಯ ಹೊರಗೋಡೆ ಮೇಲಿರುವ ಕ್ರಿ.ಶ. ೧೮ನೆಯ ಶತಮಾನದ್ದೆಂದು ಊಹಿಸಲಾಗಿರುವ ಶಾಸನದಲ್ಲಿ, ಈ ಊರಿನ ವರ್ಧಮಾನಸ್ವಾಮಿಗೆ ಪೆನುಗೊಂಡೆ ಪಾಯಣಪಂಡಿತರು ಸಲ್ಲಿಸಿದ ಸೇವೆಯನ್ನು ಕುರಿತ ವಿಚಾರ ವ್ಯಕ್ತವಾಗಿದೆ. ಉಮ್ಮತ್ತೂರಿನಲ್ಲಿ ಈಗ ಸುಸ್ಥಿತಿಯಲ್ಲಿರುವುದೆಂದರೆ ಆದಿನಾಥ ಬಸದಿ. ಇದು ಇತ್ತೀಚಿನ ಕಟ್ಟಡ. ಇಲ್ಲಿ ನಿತ್ಯವೂ ಆದಿನಾಥಸ್ವಾಮಿಗೆ ಪೂಜೆ ನಡೆಯುತ್ತಿದೆ.

ಜೈನಮತ, ಕಾಲದೇಶ ಪರಿಸ್ಥಿತಿಗಳಿಗೆ ಅನುಗುಣವಾಗಿ ಪ್ರಚಲಿತವಾಗಿದ್ದ ಮೂರ್ತಿಶಿಲ್ಪ ಶೈಲಿಯನ್ನೇ ಕೆಲವು ವೈಶಿಷ್ಟ್ಯಗಳೊಡನೆ ಅಳವಡಿಸಿಕೊಂಡಿದೆ. ಭಾರತೀಯ ಕಲಾವೈಭವಕ್ಕೆ ಮಹತ್ತರವಾದ ಕಾಣಿಕೆಯನ್ನು ನೀಡಿದೆ. ಚಾಮರಾಜನಗರ ತಾಲ್ಲೂಕಿನ ಜೈನಕ್ಷೇತ್ರಗಳಲ್ಲಿರುವ ಬಸದಿಗಳು ಬಹುಪ್ರಾಚೀನವಾದವು. ಸುಂದರ ಶಿಲ್ಪಗಳನ್ನು ಒಳಗೊಂಡಿರುವಂಥವು. ಅವನ್ನು ಉಳಿಸಿಕೊಳ್ಳುವತ್ತ ಜನರ ಗಮನ ಹರಿಯಬೇಕು.

ಡಾ. ಎನ್. ಎಸ್. ತಾರಾನಾಥ

ಕನ್ನಡ ಗ್ರಂಥೋದ್ಯಮದ ಸಮಸ್ಯೆಗಳು : ಓದುಗರ ಅಪೇಕ್ಷೆಗಳು

ಯಾವುದೇ ಪ್ರಕಟಣರಂಗದಲ್ಲಿ ಕಂಡುಬರುವ ನಾಲ್ಕು ವರ್ಗಗಳು ಲೇಖಕ, ಪ್ರಕಾಶಕ, ಮಾರಾಟಗಾರ ಮತ್ತು ಓದುಗರವು. ಪ್ರಕಟಣರಂಗದ ಸಾಧನೆ, ಶುಭ್ರ ವ್ಯವಹಾರ, ಪ್ರಗತಿ ಮತ್ತು ಪರಿಣಾಮಗಳಲ್ಲಿ ಈ ನಾಲ್ವರ ಪಾತ್ರವೂ ತುಂಬ ಮುಖ್ಯ ವಾದದ್ದು. ಆದರೆ ಕನ್ನಡ ಪ್ರಕಟಣರಂಗವನ್ನು ಗಮನಿಸಿದಾಗ ಎಷ್ಟೋಬಾರಿ ಲೇಖಕನೇ ಪ್ರಕಾಶಕ–ಮಾರಾಟಗಾರನಾಗಿರುವುದು, ಪ್ರಕಾಶಕನೂ ಮಾರಾಟಗಾರ ನಾಗಿರುವುದು ಕಂಡುಬರುತ್ತದೆ. ಜೊತೆಗೆ ನಮ್ಮ ಅನೇಕ ಕನ್ನಡ ಪುಸ್ತಕಗಳು ಹೆಚ್ಚಾಗಿ ಶುದ್ಧ ಮಾರಾಟಗಾರರ ಮೂಲಕ ವಿತರಣೆಯಾಗುವುದು, ಮಾರಲ್ಪಡುವುದು ಕಾಣುವುದೇ ಇಲ್ಲ! ಹೀಗಾಗಿ ನಮ್ಮ ಪ್ರಕಟಣ ರಂಗಕ್ಕೆ ಮಾರಾಟಗಾರರೆಂಬ ಪ್ರತ್ಯೇಕವರ್ಗ ಅತ್ಯಂತ ಅನಿವಾರ್ಯವೂ ಅವಶ್ಯಕವೂ ಆಗಿದೆಯೇ ಎಂಬ ಅನಿಸಿಕೆ ನನ್ನ ಮನಸ್ಸಿನಲ್ಲಿ ಆಗೀಗ ಸುಳಿದಿದೆ. ಇದೇನಿದ್ದರೂ ಲೇಖಕ, ಪ್ರಕಾಶಕ ಮತ್ತು ಓದುಗರ ಅಗತ್ಯ ಅಸ್ತಿತ್ವಗಳು ಪ್ರಶ್ನಿತವಾಗುವಂಥವಲ್ಲ ಎನ್ನಿಸುತ್ತದೆ. ಲೇಖಕ ಮೂಲತಃ ತನ್ನ ಸ್ವಸಂತೋಷಕ್ಕಾಗಿ ಪುಸ್ತಕ ಬರೆಯುತ್ತೇನೆ ಎಂದು ಹೇಳಿಕೊಂಡರೂ, ಅಂತಿಮ ವಾಗಿ ಅದನ್ನು ಜನ ಓದಲಿ, ಮೆಚ್ಚಲಿ ಎಂದೇ ಬಯಸುತ್ತಾನೆ. ಓದುಗರ ಅಪೇಕ್ಷೆ, ಅಗತ್ಯಗಳಿಗನುಗುಣವಾಗಿ ಬರೆಯುವ ಲೇಖಕರ ವರ್ಗವೂ ನಮ್ಮಲ್ಲಿದೆ! ಒಟ್ಟಿನಲ್ಲಿ ಲೇಖಕ ತನ್ನ ಪುಸ್ತಕದ ಪರಿಣಾಮವನ್ನು ಓದುಗರಲ್ಲಿ ಕಾಣಲು ಇಚ್ಛಿಸುತ್ತಾನೆ. ಅವರು ಓದದಿದ್ದಾಗ ವ್ಯಥೆಗೊಳ್ಳುತ್ತಾನೆ ; ವ್ಯಗ್ರನಾಗುತ್ತಾನೆ. ಪ್ರಕಾಶಕ ಪುಸ್ತಕ ಪ್ರಕಟಿಸುವುದು ಓದುಗರು ಕೊಳ್ಳಲಿ, ಇಷ್ಟಪಡಲಿ ಎಂದೇ. ಪ್ರಕಟಣೆಯು ಹಣ ಮತ್ತು ವೃತ್ತಿ ವಿಷಯವಾದ್ದರಿಂದ ಪ್ರಕಾಶಕ ಪುಸ್ತಕ ಹೊರತರುವಾಗಲೆಲ್ಲ ಓದುಗನನ್ನು ಲಕ್ಷ್ಯದಲ್ಲಿರಿಸಿಕೊಂಡೇ ಇರುತ್ತಾನೆ. ಇವುಗಳಿಂದ ಲೇಖಕ, ಪ್ರಕಾಶಕರಿಬ್ಬರೂ ಪುಸ್ತಕ ವಿಷಯದಲ್ಲಿ ಓದುಗನನ್ನು ಗಮನದಲ್ಲಿರಿಸಿಕೊಂಡಿರುತ್ತಾರೆಂಬುದು ಸ್ಪಷ್ಟವಾಗುವ ಅಂಶ ವಾಗಿದೆ. ಪ್ರಕಟಣರಂಗದ ತ್ರಿಕೋನದಲ್ಲಿ ಲೇಖಕ, ಪ್ರಕಾಶಕರು ತಲಬಿಂದುಗಳಾದರೆ, ಓದುಗ ಅದರ ಶಿಖರಬಿಂದು. ಅವನು ಈ ರಂಗದ ಕೇಂದ್ರ ಹಾಗೂ ಆಕರ್ಷಕ

ಬಿಂದುವೂ ಹೌದು. ಹೀಗೆ ಮುಖ್ಯವಾದ ಓದುಗ ಈ ರಂಗದಲ್ಲಿ ಯಾವ ಸಮಸ್ಯೆಗಳನ್ನು ಎದುರಿಸುತ್ತಿದ್ದಾನೆ, ಏನನ್ನು ಅಪೇಕ್ಷಿಸುತ್ತಿದ್ದಾನೆ ಎಂಬುದನ್ನು ಈ ಮುಂದೆ ವಿವರಿಸಲು ಪ್ರಯತ್ನಿಸಿದೆ. ಇದನ್ನು ಓದುಗ-ಲೇಖಕ, ಅಭಿರುಚಿ-ಅಪೇಕ್ಷೆ; ಓದುಗ-ಪ್ರಕಾಶಕ-ಪುಸ್ತಕದ ಬೆಲೆ, ಪ್ರಚಾರ, ಉತ್ಪಾದನೆ; ಓದುಗ-ಮಾರಾಟಗಾರ-ಪುಸ್ತಕಲಭ್ಯತೆ ಎಂಬ ಮೂರು ಸ್ಥೂಲ ವಿಭಾಗಗಳಲ್ಲಿ ನೋಡಬಹುದಾಗಿದೆ.

* * * *

ಕನ್ನಡ ಲೇಖಕರನ್ನು ಭೇಟಿಯಾದಾಗ, ಮಾತು ಪುಸ್ತಕ, ಅವರ ರಚನೆ, ಪ್ರಕಟಣ ಪ್ರಪಂಚಗಳೆಡೆ ಹೊರಳಿದಾಗ "ಯಾರು ಓದುತ್ತಾರೆ ಪುಸ್ತಕ? ಅದರಲ್ಲೂ ನಮ್ಮ ಪುಸ್ತಕ?" ಎಂಬ ಮಾತು ಕೇಳಿಬರುವುದು ಸಾಮಾನ್ಯ. ಸೃಜನ ಸಾಹಿತ್ಯೇತರ ಲೇಖಕರಿರಲಿ, ಕಾವ್ಯ ಬರೆದ ಕವಿಗಳು, ಹೊಸ ಸಂವೇದನೆಗಳನ್ನನುಸರಿಸಿ ಬರೆಯುವ ಸಣ್ಣಕತೆಗಾರರೂ ಈ ಮಾತನ್ನು ಹೇಳುವುದುಂಟು. ಕೆಲವು ತರುಣ ಲೇಖಕರು, ಮೊದಲರಚನೆ ಮಾಡಿದವರು ಗ್ರಂಥಾಲಯಗಳಿಗೆ ಹೋದಾಗ ತಮ್ಮ ಪುಸ್ತಕಗಳನ್ನು ಯಾರಾದರೂ ಓದಿದ್ದಾರೆಯೇ ಎಂದು ತಾವು ಬರೆದ ಪುಸ್ತಕಗಳ 'ಎರವಲು ಚೀಟಿ'ಗಳನ್ನು ಪರೀಕ್ಷಿಸುವುದೂ ಉಂಟಂತೆ; ಇದು ಸಹಜ. ಲೇಖಕರು ತಾವು ಬರೆದ ದೊಡ್ಡ ಕೃತಿಗಳನ್ನಿರಲಿ, ಸಣ್ಣ ವಿಮರ್ಶೆ ಮತ್ತು ಕಿರುಬರಹಗಳನ್ನೆ ಎಲ್ಲರೂ ಓದಲಿ ಎಂದು ಅಪೇಕ್ಷಿಸುತ್ತಾರೆ. ಆದರೆ ಎಲ್ಲ ಲೇಖಕರ ಕೃತಿಗಳನ್ನು ಎಲ್ಲ ಓದುಗರೂ ಓದುವುದು, ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ; ಹಾಗೆ ಬಯಸುವುದು ಸರಿಯೂ ಅಲ್ಲ. ಸಾಹಿತ್ಯಾಸಕ್ತನಿಗೆ ಭೌತಶಾಸ್ತ್ರದ ಹೊತ್ತಗೆಗಳು ರುಚಿಸುವುದಿಲ್ಲ; ರಸಾಯನಶಾಸ್ತ್ರ ತಜ್ಞನಿಗೆ ತಾಂತ್ರಿಕಶಾಸ್ತ್ರ, ಸಂಗೀತಶಾಸ್ತ್ರಗಳಲ್ಲಿ ಆಸಕ್ತಿ ಇರದಿರಬಹುದು. ಬೇರೆ ವಿಷಯಗಳಲ್ಲಿರಲಿ, ಸಾಹಿತ್ಯದಲ್ಲೇ ಕಾದಂಬರಿ, ಸಣ್ಣಕತೆಗಳನ್ನು ಓದುವ ಎಷ್ಟೋ ಜನ ಕವನ ಓದುವುದಿಲ್ಲ; ಕಾವ್ಯಾಸಕ್ತರು ಹಲವರು ಸಂಶೋಧನೆಯ ಹೊತ್ತಗೆಗಳ ಸಾಲುಗಳ ಮೇಲೆ ಕಣ್ಣಾಡಿಸುವುದಿಲ್ಲ. ಆದ್ದರಿಂದ ವೈಯಕ್ತಿಕ ಆಸಕ್ತಿ, ಅಭಿರುಚಿಗಳಿಗನುಗುಣವಾಗಿ ಓದುಗರಲ್ಲೆ ಅನೇಕ ವರ್ಗಗಳಿವೆ ಎಂಬುದು ಮನವರಿಕೆಯಾಗುವ ಸಂಗತಿ. ಈ ವರ್ಗಗಳ ಒಳವಿಭಾಗಗಳೇನೇ ಇರಲಿ ಸ್ಥೂಲವಾಗಿ ಇವರನ್ನು (೧) ಆಸಕ್ತಿಗಾಗಿ ಓದುವವರು ಮತ್ತು (೨) ಅನಿವಾರ್ಯವಾಗಿ ಓದುವವರು ಎಂದು ಎರಡು ಗುಂಪು ಮಾಡಬಹುದು. ಮೊದಲ ಗುಂಪಿನಲ್ಲಿ ಸಾಹಿತ್ಯೇತರ ಮತ್ತು ಶಿಕ್ಷಣೇತರ ರಂಗಗಳಲ್ಲಿರುವವರೂ, ಎರಡನೆಯದರಲ್ಲಿ ಸಾಹಿತ್ಯ ಮತ್ತು ಶಿಕ್ಷಣರಂಗಗಳಿಗೆ ಸಂಬಂಧಿಸಿದ ಸಾಹಿತಿಗಳು, ಅಧ್ಯಾಪಕರು, ವಿದ್ಯಾರ್ಥಿಗಳೇ ಮುಂತಾದವರು ಬರುತ್ತಾರೆ. ಎರಡನೆಯ ಗುಂಪಿನವರು, ಮೊದಲ ಗುಂಪಿನಲ್ಲಿ ಬರಬಾರದೆಂದೇನೂ ಇಲ್ಲ. ಇವರು ಲೇಖಕನಿಂದ ಬಯಸುವ ಕೊಡುಗೆ ಮತ್ತು ರಚನೆಗಳೇನು, ಲೇಖಕ ಅವನ್ನು ಪೂರೈಸುತ್ತಿದ್ದಾನೆಯೆ ಎಂಬುದನ್ನು ಇನ್ನು ಮುಂದೆ ನೋಡಬಹುದು.

ಯಾವುದೇ ಸಾಹಿತ್ಯಾಸಕ್ತ ಓದುಗ ತಾನು ಓದುವ ಎಲ್ಲ ಪುಸ್ತಕಗಳೂ ಲೇಖಕನ ಶ್ರೇಷ್ಠ ಕೃತಿಗಳಾಗಿರಬೇಕು ಎಂದು ನಿರೀಕ್ಷಿಸುತ್ತಾನೆ. ಪುಸ್ತಕದ ಓದಿನಿಂದ

ಆನಂದ, ತೃಪ್ತಿ ಮತ್ತು ತನ್ನ ಅನುಭವ ಹಾಗೂ ಪರಿಚಯಗಳ ಹಿಗ್ಗಲಿಕೆ ಆಗಬೇಕು ಎಂದು ಆಶಿಸುತ್ತಾನೆ; ಒಂದು ಪುಸ್ತಕದಿಂದ ಇನ್ನೊಂದು ಪುಸ್ತಕಕ್ಕೆ ಬರುವ ಲೇಖಕನಲ್ಲಿ ಬೆಳವಣಿಗೆ ಮತ್ತು ಹೊಸತನ್ನು ಬಯಸುತ್ತಾನೆ. ಓದುಗನ ಈ ಅಪೇಕ್ಷೆಗಳು ಶುಚಿ ರುಚಿಯಾದವು; ಸಹಜವಾದವು. ಆದರೆ ಇಂದು ಜನಪ್ರಿಯರಾಗಿ ಚಲಾವಣೆಯಲ್ಲಿರುವ ಎಷ್ಟು ಕಾದಂಬರಿಕಾರರು, ಕವಿಗಳು, ಸಣ್ಣಕತೆಗಾರರು ಇದನ್ನು ಪೂರೈಸುತ್ತಿದ್ದಾರೆ ? ಆರಂಭದಲ್ಲಿ ಉತ್ತಮ ಕೃತಿಗಳನ್ನು ಬರೆದು, ಪ್ರಸಿದ್ಧರಾದ ಮೇಲೆ, ಹಲವರು ತೀರ ಸಾಧಾರಣ ಕೃತಿಗಳನ್ನು ರಚಿಸುತ್ತಿರುವುದು ಏಕೆ ? ಪ್ರಗತಿಶೀಲ ಕಾಲದ ಲೇಖಕರ, ಇಂದಿನ ಅನೇಕ ಕಾದಂಬರಿಕಾರ್ತಿಯರ ಹಲವಾರು ಕಾದಂಬರಿಗಳು ನಮ್ಮಲ್ಲಿ ಗಣ್ಯಸ್ಥಾನವನ್ನು ಏಕೆ ಪಡೆದುಕೊಂಡಿಲ್ಲ ? ಇದಕ್ಕೆ ಕಾರಣ ಸ್ಪಷ್ಟ: ಇವರಲ್ಲಿ ಹಲವರು ಆರಂಭದಲ್ಲಿ ಸಾಹಿತ್ಯ ರಚನೆಯನ್ನು ಮೌಲಿಕವಾದದ್ದು ಎಂದು ಭಾವಿಸಿ ಕೃತಿರಚನೆಗೆ ತೊಡಗುತ್ತಾರೆ. ಆ ಕೃತಿಗಳು ನಿಜವಾಗಿಯೂ ಚೆನ್ನಾಗಿರುತ್ತವೆ. ಅವರ ಹೆಸರು ಹಬ್ಬುತ್ತದೆ; ಓದುಗರು ಮೆಚ್ಚಿ ತಲೆದೂಗುತ್ತಾರೆ; ಜನಪ್ರಿಯತೆ ಹೆಚ್ಚಾಗುತ್ತದೆ. ತಮ್ಮ ಹೆಸರಿನ ಮಹಿಮೆಯನ್ನರಿತ ಇವರು, ಮುಂದೆ ಸಾಹಿತ್ಯವನ್ನು ಗಂಭೀರ ವಿಷಯವನ್ನಾಗಿ ಪರಿಗಣಿಸದೆ, ಅದನ್ನೇ ವೃತ್ತಿ ಅಥವಾ ಹಣಗಳಿಕೆಯ ಮಾಧ್ಯಮವಾಗಿಸಿಕೊಂಡು ಪಕ್ವತೆ, ಸಿದ್ಧತೆಗಳಿಲ್ಲದೆ ಬರೆಯತೊಡಗುತ್ತಾರೆ. ತಾವು ಎಂಥದೇ ಪುಸ್ತಕಗಳನ್ನು ಹೇಗೇ ಬರೆದರೂ ಜನ ಓದುತ್ತಾರೆ ಎಂಬ ಹುಸಿಯಾಗದ ನಂಬಿಕೆಯೂ ಇವರಿಗಿರುತ್ತದೆ. ಫಲವಾಗಿ ಸತ್ವಹೀನವೂ ಕಳಪೆಯವೂ ಆದ ಕೃತಿಗಳು ಹೊರಬರುತ್ತವೆ. ಇವನ್ನು ಓದುಗರು ಓದುತ್ತಾರಲ್ಲ; ಇವಲ್ಲಿ ಕೆಲವಾದರೂ ಎರಡನೆಯ ಮುದ್ರಣಕ್ಕೆ ಬಂದಿವೆಯಲ್ಲ ಎಂದು ಯಾರಾದರೂ ಕೇಳಬಹುದು. ಓದುಗರು ಓದಿರಬಹುದು; ಕೊಂಡಿರಬಹುದು. ಆ ಮಾತ್ರಕ್ಕೆ ಅವರು ಇದರಿಂದ ತೃಪ್ತರಾಗಿರುತ್ತಾರೆ ಎಂದು ಭಾವಿಸಬಾರದು. ನಮ್ಮಲ್ಲಿ ನೇತ್ಯಾತ್ಮಕ ಪ್ರತಿಕ್ರಿಯೆ ತೋರದ ಓದುಗರೇ ಹೆಚ್ಚುಮಂದಿ. ಎಂದೋ ಬರೆದ, ತನಗೆ ತೃಪ್ತಿಯಾಗದೆ ಹಲಕಾಲ ಪ್ರಕಟಿಸದಿದ್ದ ಕೆಲವು ರಚನೆಗಳನ್ನು ಇಂದು ತಮ್ಮ ಹೆಸರಿನ ಬಲದಿಂದ ಹೊರತರುವವರೂ ನಮ್ಮಲ್ಲಿದ್ದಾರೆ! ನಾವಾಗಲಿ, ಜನರಾಗಲಿ ಆ ಹೆಸರಿಗೇ ಮಾರುಹೋಗಿ ಅವನ್ನು ಕೊಳ್ಳುವುದು. ಇಂಥ ಸಂದರ್ಭಗಳಲ್ಲೆಲ್ಲ ಲೇಖಕ ಓದುಗರ ಬಯಕೆ, ಭರವಸೆಗಳನ್ನು ಹುಸಿಗೊಳಿಸುವಂಥಾಗುವುದಿಲ್ಲವೇ ಎನ್ನಿಸುತ್ತದೆ. ಇನ್ನೇನಿಲ್ಲದಿದ್ದರೂ ಓದುಗ ಅದಕ್ಕಾಗಿ ವ್ಯಯಿಸುವ ಸಮಯವನ್ನು ಆ ಲೇಖಕರು ಖಂಡಿತ ವ್ಯರ್ಥಮಾಡಿಸಿದಂತಾಗುತ್ತದೆ.

ಮತ್ತೆ ಕೆಲವರು ಲೇಖಕರು ಓದುಗರನ್ನು ತಾವು ವಂಚಿಸುತ್ತಿದ್ದೇವೆ ಎಂದು ಅರಿತೂ ವಂಚಿಸುತ್ತಾರೆ. ಇದು ನಮ್ಮ ದುರ್ದೈವ. ಹಿಂದೆಯೇ ಪ್ರಕಟವಾದ ತಮ್ಮ ಕಥಾಸಂಕಲನಕ್ಕೆ ಒಂದು ಹೊಸಕಥೆ ಸೇರಿಸಿ, ಹೆಸರು ಬದಲಿಸಿ ಕೆಲವು ಲೇಖಕರು ಪುಸ್ತಕ ಹೊರತರುವುದುಂಟು. ಹೊಸ ಹೆಸರು ಕಂಡು ಓದುಗ ಇದು ಆ ಲೇಖಕನ

ಹೊಸಪುಸ್ತಕವೆಂದೇ ಭ್ರಮಿಸುತ್ತಾನೆ. ಹಣಕೊಟ್ಟು ಕೊಳ್ಳುತ್ತಾನೆ. ಕಾರಣಗಳೇನೇ ಇರಲಿ, ತನ್ನ ಹಿಂದಿನ ಸಂಕಲನಗಳಿಂದ ಕೆಲವು ರಚನೆಗಳನ್ನು ಆಯ್ದು ಮತ್ತೊಂದು ಹೆಸರಿಟ್ಟು ಪುಸ್ತಕವನ್ನು ಲೇಖಕ ಸಿದ್ಧಪಡಿಸಿದಾಗಲೂ ಓದುಗ ಹೀಗೆ ಭ್ರಮೆಗೊಳಗಾಗುವುದುಂಟು. ಇಂಥ ಪ್ರಸಂಗಗಳ ಪರಾಕಾಷ್ಠೆ ನಡೆದದ್ದು ಮಕ್ಕಳ ವರ್ಷದಲ್ಲಿ. ಆಗ ಹಲವರು, ಅವರಿವರು ಹಿಂದೆ ಬರೆದಿದ್ದ ಕಥೆಗಳನ್ನೇ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಬೇರೆ ಶೀರ್ಷಿಕೆಗಳಲ್ಲಿ ಹೊರತಂದರು; ವಡ್ಡಾರಾಧನೆಯ ಕಥೆಗಳನ್ನು ಜನಪದ ಕಥೆಗಳಾಗಿ ಮಾರ್ಪಡಿಸಿದ್ದರು; ಮೂವತ್ತೆರಡು ಪುಟಕ್ಕೆ ಮೀರಕೂಡದೆಂಬ ನಿಯಮವನ್ನಿಟ್ಟುಕೊಂಡು ತೋಚಿದ್ದು ಬರೆದರು. ಕೆಲವು ಪುಸ್ತಕಗಳು ಪಠ್ಯಪುಸ್ತಕಗಳ ಕೆಲಭಾಗಗಳನ್ನೊಳಕೊಂಡಿದ್ದು ಇರಲಿ, ಅಭ್ಯಾಸ ವಿವರಗಳನ್ನೂ ಸೇರಿಸಿಕೊಂಡು ಅಚ್ಚಾಗಿದ್ದುವೆಂದು ಒಂದು ಸಮೀಕ್ಷೆ ಹೇಳುತ್ತದೆ! ಇಂಥ ಲೇಖಕರು ಸಿಗ್ಗುಪಡಬೇಕು. ಶಾಲಾಕಾಲೇಜುಗಳ ವಿದ್ಯಾರ್ಥಿಗಳಿಗೆಂದೇ ವ್ಯಾಕರಣ, ಛಂದಸ್ಸುಗಳ ಮೇಲೆ ಪುಸ್ತಕ ಬರೆಯುವ ನಮ್ಮ ಕೆಲವು ಲೇಖಕರಾದರೂ ಇಷ್ಟೆ. "ವಿದ್ಯಾರ್ಥಿಗಳು ತಾನೆ! ಅವರಿಗೇನು ಗೊತ್ತು!" ಎಂದೂ, ಏನು ಬರೆದರೂ ನಡೆಯುತ್ತದೆ, ತಡೆಯುತ್ತದೆ ಎಂದೂ ತಪ್ಪು ತಪ್ಪು ಬರಹವನ್ನೇ ಮಾಡುತ್ತಾರೆ. ಇಂಥ ಲೇಖಕರು ಆತ್ಮಶೋಧನೆ ಮಾಡಿಕೊಳ್ಳುವ ಅಗತ್ಯ ತುಂಬ ಇದೆ. ಇಂಥ ಸಮಸ್ಯೆಗಳನ್ನು ಓದುಗ ಪರಿಹರಿಸಿಕೊಳ್ಳುವುದು ಸಾಧ್ಯವೇ ಇಲ್ಲ; ಇದರ ಸೃಷ್ಟಿಯೇ ಆಗದಂತೆ ಎಚ್ಚರಿಕೆ ವಹಿಸಬಹುದಾದವರು ಲೇಖಕರು ಮಾತ್ರವೇ.

ಸಾಹಿತ್ಯಾಸಕ್ತ ಓದುಗರಿಗಿಂತ ಸಂಶೋಧನೆ, ಅಧ್ಯಾಪನಗಳಲ್ಲಿ ತೊಡಗಿರುವ ಓದುಗರ ಅಪೇಕ್ಷೆಗಳೇ ಸಾಮಾನ್ಯವಾಗಿ ಹೆಚ್ಚು. ಇವು ವೈವಿಧ್ಯ ವೈಶಿಷ್ಟ್ಯಗಳನ್ನೊಳಗೊಂಡಿರುತ್ತವೆ. ಇಂಥ ಓದುಗರು ಬಗೆಬಗೆಯ ಪುಸ್ತಕಗಳನ್ನು ಬಯಸುತ್ತಾರೆ. ಅವರ ಈ ಬಗೆಯ ಬಯಕೆಗಳಿಗೆ ಬೇಲಿಯೇ ಇಲ್ಲವೆನ್ನಬಹುದು. ಭೌತಶಾಸ್ತ್ರ, ಅರ್ಥಶಾಸ್ತ್ರ, ಅಭಿವೃದ್ಧಿ ಅಧ್ಯಯನ, ಪರಿಸರ ವಿಜ್ಞಾನಗಳಿಗೆ ಸಂಬಂಧಿಸಿದವರು ಕನ್ನಡದಲ್ಲಿ ಅಗತ್ಯವಾದ, ಮೇಲು ಮಟ್ಟದ ಅಧ್ಯಯನಕ್ಕೆ ಬೇಕಾಗುವ ಪುಸ್ತಕಗಳು ದೊರೆಯುವುದಿಲ್ಲವೆನ್ನುತ್ತಾರೆ. ಕನ್ನಡ ಛಂದಸ್ಸಿನ ಅಭ್ಯಾಸಿಗೆ ಛಂದೋಮೀಮಾಂಸೆಗೆ ಮತ್ತು ಛಂದಃಶಬ್ದಗಳಿಗೆ ಸಂಬಂಧಿಸಿದಂತೆ ಪುಸ್ತಕ ಬೇಕಾಗಿದೆ. ಇದೇ ತಾನೆ ವಿಷಯ ಆರಿಸಿಕೊಂಡು ಸಂಶೋಧನೆಗೆ ತೊಡಗುತ್ತಿರುವ ಒಬ್ಬ ಜಾನಪದ ವಿದ್ಯಾರ್ಥಿಗೆ ಜಾನಪದ ಲೇಖನಗಳ ಸೂಚಿಯೊಂದು ಕಾಣುತ್ತಿಲ್ಲ. ಕನ್ನಡ ಭಾಷೆಗೆ ಸಂಬಂಧಿಸಿದಂತೆ ಅಧ್ಯಯನ ಕೈಗೊಂಡಿರುವ ಒಬ್ಬನಿಗೆ ಕನ್ನಡ ಭಾಷೆ ಕುರಿತು ಇಂಗ್ಲಿಷ್‌ನಲ್ಲಿ ಬಂದಿರುವ ಒಂದು ಲೇಖನ ಪತ್ತೆಹಚ್ಚಲು ಬೇಕಾದ ಆಕರ ಸಾಹಿತ್ಯ ದೊರೆಯುತ್ತಿಲ್ಲ. ಕಾರು, ಬಸ್ಸು, ಸ್ಕೂಟರು ಕೆಟ್ಟರೆ ಸರಿಮಾಡುವುದರ ಬಗ್ಗೆ, ಕನ್ನಡಕ ಗಡಿಯಾರ ಟೇಪ್ ರೇಕಾರ್ಡ್‌ರುಗಳ ಉತ್ಪಾದನೆಯ ಬಗ್ಗೆ ಅರಿಯಬೇಕೆನ್ನುವ ಆಸಕ್ತರಿಗೆ ನಮ್ಮ ಭಾಷೆಯಲ್ಲಿ ಹೆಚ್ಚು ಪುಸ್ತಕಗಳಿಲ್ಲ. ಇಂಥವು ಹತ್ತಲ್ಲ, ನೂರಲ್ಲ, ಸಾವಿರ.

ಇವುಗಳಲ್ಲಿ ಕೆಲವು ತುಂಬ ಶ್ರಮಸಹಿಷ್ಣು ಕೆಲಸಗಳು ; ಇವನ್ನು ಬಳಸುವ ಓದುಗರ ಸಂಖ್ಯೆ ತೀರ ಕಡಮೆ. ಆದರೂ ಈ ಬಯಕೆಗಳನ್ನು ಈಡೇರಿಸಬೇಕಾದ ಹೊಣೆ ನಮ್ಮ ಲೇಖಕ ವರ್ಗದ್ದೇ ಎಂಬುದನ್ನು ನಾವು ಮರೆಯಬಾರದು.

* * * *

ವಿರಳವಾಗಿ ಒಂದಿಬ್ಬರು ಪ್ರಕಾಶಕರನ್ನುಳಿದು ಕನ್ನಡದಲ್ಲಿ ಸಾಮಾನ್ಯವಾಗಿ ಇತರ ಎಲ್ಲ ಪ್ರಕಾಶಕರೂ "ಯಾರು ಕೊಳ್ಳುತಾರ್‍ರೀ ಕನ್ನಡ ಪುಸ್ತಕ? ಯಾರಿಗೆ ಬೇಕಾಗಿದೆ ಇವು ?" ಎನ್ನುವುದು ನಮ್ಮ ಕಿವಿಗಳಿಗೆ ಕೇಳಿಬರುವ ದಿನನಿತ್ಯದ ಪಲ್ಲವಿಯಾಗಿದೆ. ಕನ್ನಡಜನ ಪುಸ್ತಕಗಳನ್ನು ಕೊಂಡು ಓದುವುದಿಲ್ಲ ಎಂಬುದು ಇವರ ದೂರು, ಆಕ್ಷೇಪ ಮತ್ತು ಕೊರಗು. ಈ ಆಕ್ಷೇಪಣೆಯಲ್ಲಿ ಹುರುಳಿಲ್ಲದಿಲ್ಲ. ಆದರೆ ಯಾಕೆ ಪುಸ್ತಕಗಳನ್ನು ಕೊಳ್ಳುವುದಿಲ್ಲ ಎಂಬುದು ಚಿಂತನೀಯ. ಕರ್ನಾಟಕದಲ್ಲಿರಲಿ ಭಾರತದಲ್ಲೇ ಒಂದು ಜನಗಣತಿಯ ಪ್ರಕಾರ ಸಾಕ್ಷರತೆ ಸುಮಾರು ಶೇಕಡಾ ೩೦. ಇವರಲ್ಲೂ ಎಸ್.ಎಸ್.ಎಲ್.ಸಿ. ಮತ್ತು ಅದರ ಮೇಲಿನ ಮಟ್ಟದವರು ಸುಮಾರು ಶೇಕಡಾ ೫. ಎಂದರೆ ಪುಸ್ತಕ ಓದಿ ಅದನ್ನು ಅರ್ಥಮಾಡಿಕೊಳ್ಳುವ ಜನಸಂಖ್ಯೆಯೆ ನಮ್ಮ ದೇಶದಲ್ಲಿ ತೀರ ಕಡಮೆ. ಹೀಗಾಗಿ ಪುಸ್ತಕ ಕೊಳ್ಳುವವರು, ಓದುವವರೂ ಸಹಜವಾಗಿ ಕರ್ನಾಟಕದಲ್ಲಿಯೂ ಕಡಿಮೆಯೇ. ಜೊತೆಗೆ ನಮ್ಮ ದೇಶದ ಆರ್ಥಿಕ ಸ್ಥಿತಿ ತುಂಬ ಕೆಳಮಟ್ಟದ್ದಾಗಿದ್ದು ಅನೇಕರು ಆಸಕ್ತಿಯಿದ್ದರೂ ಖಂಡಿತವಾಗಿಯೂ ಕೊಳ್ಳುವ ಸ್ಥಿತಿಯಲ್ಲಿಲ್ಲ. ಮಧ್ಯಮದರ್ಜೆ ಸಂಸಾರದ ಅನೇಕ ಆಸಕ್ತರನ್ನು ಈ ಕಷ್ಟ ಕಾಡುತ್ತಿರುವುದು ನನಗೆ ಚೆನ್ನಾಗಿ ಗೊತ್ತಿದೆ. ಅಲ್ಲದೆ ಪುಸ್ತಕಗಳು 'ನಾನ್ ಎಸೆನ್ಷಿಯಲ್' ಮತ್ತು 'ನಾನ್ ಯುಟಿಲಿಟೇರಿಯನ್' ಗುಂಪಿಗೆ ಸೇರುತ್ತವೆ ಎಂಬುದನ್ನು ನಾವು ಮರೆಯುವಂತಿಲ್ಲ. ಪುಸ್ತಕದ ತತ್‍ಕ್ಷಣದ ಅಲಭ್ಯತೆ, ಮತ್ತು ಪ್ರಚಾರದ ಕೊರತೆ ಕೂಡ ಕೆಲಮಟ್ಟಿಗೆ ಈ ಕೊಳ್ಳದಿರುವಿಕೆಗೆ ಕಾರಣವಾಗಿರಬಹುದು. ಹೀಗಾಗಿ ಕೊಳ್ಳುವವರ ವರ್ತುಲ ತೆಳ್ಳಗಾಗುವುದು ಅನಿವಾರ್ಯವೆನಿಸುತ್ತದೆ.

ಕೊಳ್ಳುವ ಆಸಕ್ತಿಯುಳ್ಳ ಕನ್ನಡ ಓದುಗರು ಸಾಮಾನ್ಯವಾಗಿ ಹೇಳುವುದು "ಪುಸ್ತಕಗಳ ಬೆಲೆ ದುಬಾರಿಯಾಗಿದೆ, ನಮ್ಮ ಜೇಬು ಅವನ್ನು ತಡೆಯುವಂಥದಲ್ಲ" ಎಂದು. ಪುಸ್ತಕ ಕೊಳ್ಳುವ ಹವ್ಯಾಸವುಳ್ಳ ನನಗೇ ಈಚೆಗೆ ಅನೇಕ ಬಾರಿ ಹೀಗೆನಿಸಿದೆ. ಪುಸ್ತಕವನ್ನು ಎತ್ತಿಕೊಂಡ ಕೈಗಳಿಗಿಂತ ವೇಗವಾಗಿ ನನ್ನ ಕಣ್ಣುಗಳು ಹಿಂಬದಿಯ ರಕ್ಷಾಪತ್ರದ ಕೆಳಮೂಲೆಯ ಬೆಲೆಯ ನಮೂದಿನೆಡೆ ಅಯಾಚಿತವಾಗಿ, ಅನಿವಾರ್ಯವಾಗಿ ಓಡುತ್ತವೆ. ಎಲ್ಲ ವಸ್ತುಗಳ ಬೆಲೆ ಏರುತ್ತಿರುವ ಈ ಕಾಲದಲ್ಲಿ ಪುಸ್ತಕದ ಬೆಲೆ ಹೆಚ್ಚಾಗುವುದು ಅಸಹಜವೇನಲ್ಲ. ಆದರೆ ಕೆಲವು ಕನ್ನಡ ಪುಸ್ತಕಗಳ ಬೆಲೆ "ಯದ್ವಾತದ್ವಾ ಹೆಚ್ಚಾಗಿರುವುದು" ಆಶ್ಚರ್ಯಕರವಾಗಿದೆ. ಹೀಗೇಕೆ ಎಂದು ಪ್ರಕಾಶಕರನ್ನು ಪ್ರಶ್ನಿಸಿದರೆ ಕೆಲವರು ಏರುತ್ತಿರುವ ಕಾಗದ, ಮುದ್ರಣಗಳ ವೆಚ್ಚ ಕುರಿತು ಹೇಳುತ್ತಾರೆ ; ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ. ಈ ಸಮಸ್ಯೆ ಕರ್ನಾಟಕದ್ದು ಷ್ಟೇ

5

ಅಲ್ಲ ವಿಶ್ವದ ಸಮಸ್ಯೆ ಎಂಬುದನ್ನು ಅವರು ತಿಳಿದಂತಿಲ್ಲ. ಮತ್ತೆ ಕೆಲವರು ಹಾರಿಕೆಯ ಉತ್ತರವಿತ್ತರೆ, ಇನ್ನು ಕೆಲವರು ಮೌನ ತೋರುತ್ತಾರೆ. ಇವರು ಬೆಲೆಯನ್ನು ಯಾವ ತತ್ವದ ಮೇಲೆ ನಿರ್ಧರಿಸುತ್ತಾರೆ ಎಂಬುದೇ ತಿಳಿಯುವುದಿಲ್ಲ. ಈಚೆಗೆ 'ಗ್ರಂಥಲೋಕ'ದ ಸಂಪಾದಕರು ಈ ಪ್ರಶ್ನೆಯೂ ಇದ್ದ ಪ್ರಶ್ನಾವಳಿಯನ್ನು ಕಳಿಸಿದಾಗ ಇಬ್ಬರನ್ನುಳಿದು ಇತರ ಹಲವರು ಪ್ರಕಾಶಕರು ಉತ್ತರಿಸಲೇ ಇಲ್ಲ! ಈ ಕೆಲವು ಸ್ವಾರಸ್ಯಗಳನ್ನು ನೋಡಿ : ಛಂದಸ್ಸಿನಂಥ, ಶಾಸ್ತ್ರವಿಷಯಕ್ಕೆ ಸಂಬಂಧಿಸಿದ, ಸೃಜನ ಸಾಹಿತ್ಯದ ಕೃತಿಗಳಂತೆ ಮಾರಾಟವಾಗದ ಡೆಮ್ಮಿ ಅಷ್ಟದಳಾಕಾರದ ೭೧೨ ಪುಟಗಳ ಒಂದು ಪುಸ್ತಕದ ಬೆಲೆ ೨೦ ರೂಪಾಯಿ ; ತಕ್ಕಮಟ್ಟಿಗೆ ಜನಪ್ರಿಯವಾಗಿರುವ ಕಾದಂಬರಿಕಾರರ ಎರಡನೆಯ ಮುದ್ರಣದ ಕಿರೀಟ ಅಷ್ಟದಳಾಕಾರದ ೩೮೨ ಪುಟಗಳ ಒಂದು ಕಾದಂಬರಿಯ ಬೆಲೆ ೨೫ ರೂಪಾಯಿ ; ೭೧೮ ಪುಟಗಳ ತುಂಬ ಜನಪ್ರಿಯ ಪ್ರಸಿದ್ಧ ಐತಿಹಾಸಿಕ ಕಾದಂಬರಿಕಾರರ ಈಚಿನ ಕಾದಂಬರಿಯ ಬೆಲೆ ೫೦ ರೂಪಾಯಿ ಗಳಾದರೆ, ಮತ್ತೊಂದು ೭೭೦ ಪುಟಗಳ ಸಾಮಾಜಿಕ ಕಾದಂಬರಿಯ ಬೆಲೆ ೩೫ ರೂಪಾಯಿ ; ಅದೇ ವಾರದ ಹಿಂದೆ ಸಾದರಸ್ವೀಕಾರದಲ್ಲಿ ಕಾಣಿಸಿಕೊಂಡ ಸಾಮಾನ್ಯರಿರಲಿ, ಸಂಶೋಧಕರೂ ಹೆಚ್ಚುಕೊಳ್ಳದ ೧೦೫೬ ಪುಟಗಳ 'ಅಲ್ಲಮನ ವಚನ ಪ್ರಕೋಶ'ದ ಬೆಲೆ ೩೬ ರೂಪಾಯಿ ಇಷ್ಟೊಂದು ವ್ಯತ್ಯಾಸ ಹೇಗೆ ಸಾಧ್ಯ? ಈ ವಿಷಯದಲ್ಲಿ ನನಗನ್ನಿಸುವುದಿಷ್ಟು ; ನಮ್ಮ ಎಷ್ಟೋ ಖಾಸಗಿ ಪ್ರಕಾಶಕರು ಪುಸ್ತಕದ ಬೆಲೆ ನಿರ್ಧರಿಸುವಾಗ ಗ್ರಂಥಾಲಯದ ಮಾರಾಟ ವ್ಯವಹಾರವನ್ನೋ, ಸಗಟು ಖರೀದಿಯ ಹಲವು ಯೋಜನೆಗಳನ್ನೋ ಗಮನದಲ್ಲಿರಿಸಿಕೊಂಡಿರುತ್ತಾರೆ. ಅತ್ಯಂತ ಕಡಮೆ ಪ್ರತಿಗಳ ಮಾರಾಟದಲ್ಲಿ ತಾವು ಹೂಡಿದ ಬಂಡವಾಳ ಮತ್ತು ಲಾಭಗಳು ಬರುವಂತೆ ಅವರು ಬೆಲೆ ಯೋಜಿಸುತ್ತಾರೆ. ಅವರು ಕ್ಯಾಲಿಕೊ ಪ್ರತಿಗಳಿಗಿಡುವ ಅನಿರ್ದಿಷ್ಟ ಏರುಬೆಲೆ, ಅವನ್ನು ಗ್ರಂಥಾಲಯಗಳಿಗೇ ತುಂಬುವ ಪ್ರಯತ್ನ ಇವನ್ನು ಲಕ್ಷಿಸಿದರೆ ಈ ಅಂಶ ಇನ್ನೂ ದೃಢವಾಗುತ್ತದೆ. ಪ್ರಕಾಶಕರ ದಿಕ್ಕಿನಿಂದ ಇದಕ್ಕೆ ಕಾರಣ ಮತ್ತು ವಿವರಣೆಗಳೇನೆ ಇರಲಿ ಇದಕ್ಕೆ ಬಲಿಯಾಗುವವನು ನಿಜವಾದ ಆಸಕ್ತನಾದ ಓದುಗ. ಅವನು ಒಬ್ಬನೇ ಇರಬಹುದು ; ಇಬ್ಬರಿರಬಹುದು. ಒಬ್ಬನಿಗಾಗುವ ಅನ್ಯಾಯವೂ ಅನ್ಯಾಯವೇ. ಇದು ಅಮಾನವೀಯ, ಅಕ್ರಮ, ಎಂಥದೆ ಸಂದರ್ಭದಲ್ಲೂ, ಯಾವುದೇ ಕಾರಣಕ್ಕಾಗಿಯೂ ಹೀಗಾಗಬಾರದು ಎಂದು ಎಲ್ಲ ಓದುಗರೂ ಅಪೇಕ್ಷಿಸುತ್ತಾರೆ.

ಎಲ್ಲ ಬಗೆಯ ಓದುಗರ ಸಾಮಾನ್ಯವಾದ, ತಹತಹಿಕೆಯ ಇನ್ನೊಂದು ಅಪೇಕ್ಷೆ ಕನ್ನಡ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯಬೇಕೆಂಬುದು. ಒಳ್ಳೆಯ ಸಾಹಿತ್ಯವನ್ನು ಕಡಿಮೆಯ ಬೆಲೆಗೆ ಕೊಟ್ಟರೆ ನಮ್ಮ ಜನ ಮೇಲೆ ಬಿದ್ದುಕೊಳ್ಳುತ್ತಾರೆ. ಈ ವಿಷಯದಲ್ಲಿ ನಮ್ಮ ಜನ ಪ್ರಕಾಶಕರನ್ನು ಎಂದೂ ನಿರಾಸೆಗೊಳಿಸಿಲ್ಲ ; ವಂಚಿಸಿಲ್ಲ. ಕೇವಲ ಕತೆ ಕಾದಂಬರಿಗಳನ್ನಷ್ಟೇ ಅಲ್ಲ, ಕಾವ್ಯಗಳನ್ನೂ ಕೊಳ್ಳುತ್ತಾರೆ. ಈವರೆಗೆ

'ಮಂಕುತಿಮ್ಮನ ಕಗ್ಗ'ದ ೩೦,೦೦೦ ಪ್ರತಿಗಳು, 'ಮೈಸೂರು ಮಲ್ಲಿಗೆ'ಯ ಒಂದು ಲಕ್ಷ ಪ್ರತಿಗಳು ಮಾರಾಟವಾಗಿವೆ ಎಂದು ಒಂದು ವರದಿ ತಿಳಿಸುತ್ತದೆ. ಎರಡೂ ಒಳ್ಳೆಯ ಪುಸ್ತಕಗಳು; ಬೆಲೆಯೂ ಓದುಗರ ಕೈಗೆಟುಕುವಂತಿದೆ. ಸಹಜವಾಗಿಯೇ ಬೇಗ ಮಾರಾಟವಾಗಿವೆ. ಆರು ರೂಪಾಯಿ ಬೆಲೆಯ 'ಶ್ರೀರಾಮಾಯಣದರ್ಶನಂ'ದ ೫೫,೦೦೦ ಪ್ರತಿಗಳು, ಏಳು ರೂಪಾಯಿ ಬೆಲೆಯ 'ಕರ್ಣಾಟ ಭಾರತ ಕಥಾ ಮಂಜರಿ'ಯ ೫೫,೦೦೦ ಪ್ರತಿಗಳು ಹೆಚ್ಚು ಪ್ರಚಾರವಿಲ್ಲದೆ ಮೂರ್‍ನಾಲ್ಕು ವರ್ಷಗಳಲ್ಲಿ ಮಾರಾಟವಾಗುತ್ತವೆ. ಮೂರು ತಿಂಗಳಲ್ಲಿ 'ಶ್ರೀ ಸಾಹಿತ್ಯ'ದ ೨,೫೦೦ ಪ್ರತಿಗಳು ಖರ್ಚಾಗುತ್ತವೆ. ೨೦೦ ರೂಪಾಯಿ ವೆಚ್ಚದ 'ವಿಶ್ವಕಥಾಕೋಶ'ದ ಸಂಪುಟಗಳ ಅರ್ಧಭಾಗ ಈಗಾಗಲೇ ತೀರಿವೆಯಂತೆ! ಕತೆ, ಕಾದಂಬರಿ, ಕಾವ್ಯವಲ್ಲದ 'ಸೂಲಂಗಿ'ಯಂಥ ವಿಚಾರಸಾಹಿತ್ಯದ ೬೦೦ ಪ್ರತಿಗಳು ಕೇವಲ ೯೦ ದಿನಗಳಲ್ಲಿ ಖಾಲಿಯಾಗುತ್ತವೆ. ವಿಶ್ವಕನ್ನಡ ಸಮ್ಮೇಲನದ ನಿಮಿತ್ತವಾಗಿ ಪ್ರಕಟವಾದ ಅನೇಕ ಪುಸ್ತಕ ಕೊಳ್ಳಲು ಜನ ಸಾಲುಗಟ್ಟಿ ನಿಂತಿದ್ದರಂತೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಮೂರು ಸಂಕಲನಗಳ ಪ್ರತಿಗಳಲ್ಲಿ ಕೆಲವೇ ಕೆಲವು ಉಳಿದಿವೆ ಎಂದು ಅದರ ಅಧ್ಯಕ್ಷರು ಹೇಳುತ್ತಾರೆ. ಸುದ್ದಿಯ ಮೇಲೆ ಸುದ್ದಿ ಇಂಥವಕ್ಕೆ ನಮ್ಮ ಪ್ರಕಾಶಕವರ್ಗ ಹೆಚ್ಚು ಪ್ರಾಮುಖ್ಯ ಕೊಡಬೇಕು. ಸರಕಾರಿ ಮತ್ತು ಅರೆಸರಕಾರಿ ಪ್ರಕಟಣ ಸಂಸ್ಥೆಗಳು ಇಂಥ ಪ್ರಕಟಣೆಗಳನ್ನು ಮೇಲಿಂದಮೇಲೆ ತರಬೇಕು. ಸಾಹಿತಿಗಳಿಗೆ ಪ್ರಶಸ್ತಿ ಬಹುಮಾನಗಳು ಬಂದಾಗ, ಕೃತಿಕರ್ತರ ಶತಮಾನೋತ್ಸವ ಸಮಾರಂಭಗಳು ಜರುಗುವಾಗ ಅವರ ಕೃತಿಗಳನ್ನೂ ಸಮಗ್ರಸಾಹಿತ್ಯ ಸಂಪುಟಗಳನ್ನೂ ಸುಲಭ ಬೆಲೆಯಲ್ಲಿ ಪ್ರಕಟಿಸುವುದು, ನಾಡಹಬ್ಬ ನಡೆಯುವಾಗ ಮುಖ್ಯ ಕೃತಿಗಳನ್ನು ಕಡಿಮೆದರದಲ್ಲಿ ತರುವುದು–ಮುಂತಾದ ಯೋಜನೆಗಳನ್ನು ಈ ಸಂಸ್ಥೆಗಳು ಕೈಗೆತ್ತಿಕೊಳ್ಳಬೇಕು. ಇಂಥವನ್ನು ಓದುಗರು ತುಂಬ ಇಷ್ಟಪಡುತ್ತಾರೆ; ನಿರೀಕ್ಷಿಸುತ್ತಾರೆ. ನಮ್ಮ ಖಾಸಗಿ ಪ್ರಕಾಶಕರಾದರೂ ಇಂಥ ಯೋಜನೆಗಳನ್ನು ಸಿದ್ಧಗೊಳಿಸಿ, ಸರಕಾರದ ನೆರವನ್ನು ಪಡೆದು ಏಕೆ ಹೊಸ ಪರಂಪರೆ ಆರಂಭಿಸಬಾರದು? ಆದರೆ ಸರ್ಕಾರ ಒದಗಿಸುವ ರಿಯಾಯಿತಿ ದರದ ಕಾಗದವನ್ನೇ ದುರುಪಯೋಗಮಾಡಿಕೊಳ್ಳುವ, ಓದುಗನ ನೆರವಿಗೆ ಒದಗದ ನಮ್ಮ ಪ್ರಕಾಶಕರು ಇಂಥ ಯೋಜನೆಗಳನ್ನು ಶುದ್ಧ ಪ್ರಾಮಾಣಿಕತೆಯಿಂದ ನಿರ್ವಹಿಸುವರೆ ಎಂಬ ಕೊಂಕುಮಾತನ್ನು ಯಾರಾದರೂ ಆಡಿಯಾರು ಎಂಬ ಅಂಜಿಕೆ ನನಗಿದೆ.

ಓದುಗರಿಗೆ ಎದುರಾಗುವ ಮತ್ತೊಂದು ಸಮಸ್ಯೆಯೆಂದರೆ ಪ್ರಕಟವಾದ ಪುಸ್ತಕ ದೊರೆಯದಿರುವುದು; ಅವರ ಗಮನಕ್ಕೇ ಬಾರದಿರುವುದು. ಸೃಜನೇತರ ಸಾಹಿತ್ಯಾಭ್ಯಾಸಿಗಳಿಗೆ ಈ ಸಮಸ್ಯೆ ಪದೇ ಪದೇ ಎದುರಾಗುತ್ತದೆ. ಒಬ್ಬ ವ್ಯಾಪಕ ಓದುಗರ ಹೇಳಿಕೆಯ ಪ್ರಕಾರ ಪ್ರತಿವರ್ಷ ಕನ್ನಡದಲ್ಲಿ ಪ್ರಕಟವಾಗುವ $\frac{1}{8}$ನೆಯ ಭಾಗದ ಪುಸ್ತಕಗಳು ಓದುಗರ ಗಮನಕ್ಕೇ ಬರುವುದಿಲ್ಲವಂತೆ! ಇನ್ನು ಅವು ದೊರೆಯುವುದಾ

ದರೂ ಹೇಗೆ? ಅವನ್ನು ಓದುವುದಾದರೂ ಹೇಗೆ? ನಮ್ಮ ಪ್ರಕಾಶಕರು ಪುಸ್ತಕಗಳನ್ನು ಪ್ರಕಟಿಸುವುದು ಓದುಗರಿಗೆಂದೇ ಆದರೂ, ಅದನ್ನು ಅವರಿಗೆ ತಲಪಿಸುವಲ್ಲಿ ಇವರು ಅಷ್ಟಾಗಿ ಉತ್ಸಾಹ, ಆಸಕ್ತಿಗಳನ್ನು ತೋರುವಂತೆ ಕಾಣಿಸುವುದಿಲ್ಲ. ಕನ್ನಡದಲ್ಲಿ ತಿಂಗಳಿಗೆ ಸುಮಾರು ನೂರು ಪುಸ್ತಕಗಳಿಗೂ ಹೆಚ್ಚು ಪ್ರಕಟವಾಗುತ್ತವೆ. ಆದರೆ ಈ ಪುಸ್ತಕಗಳ ಪ್ರಕಟಣೆ, ವಿವರ, ವಸ್ತು ಮತ್ತು ಪ್ರಾಮುಖ್ಯಗಳನ್ನು ಕುರಿತಂತೆ ನಮ್ಮ ಪ್ರಕಾಶಕರು ಯಾವುದೇ ಪ್ರಚಾರವನ್ನಾಗಲಿ, ಜಾಹೀರಾತನ್ನಾಗಲಿ ಕೊಡುವುದಿಲ್ಲ. ನಮ್ಮ ದೈನಂದಿನ ಪತ್ರಿಕೆಗಳಲ್ಲಿ ನೂರಾರು ಬಗೆಯ ಆಕರ್ಷಕ ಜಾಹೀರಾತುಗಳಿರುತ್ತವೆ. ಅಲ್ಲಿ ಪುಸ್ತಕದ ಜಾಹೀರಾತು ಕಂಡುಬರುವುದೇ ತುಂಬ ಅಪರೂಪ. ವಾರಕ್ಕೊಮ್ಮೆ ಬರುವ ಸಾದರ ಸ್ವೀಕಾರ ಪಟ್ಟಿಯೇ ಆಸಕ್ತರಿಗೆ ಪುಸ್ತಕದ ಜಾಹೀರಾತು! ಈ ಸಾದರ ಸ್ವೀಕಾರಕ್ಕೂ ಪುಸ್ತಕ ಕಳಿಸುವುದು ವ್ಯರ್ಥ ; ಹಾಗೆ ಕಳಿಸುವುದು ಒಂದು ಪ್ರತಿಯ ಹಣವನ್ನು ನಷ್ಟಮಾಡಿಕೊಂಡಂತೆ ಎಂದು ಎಷ್ಟೋ ಪ್ರಕಾಶಕರು ಕಳಿಸುವುದೇ ಇಲ್ಲ. ಪ್ರತಿ ಕಳಿಸುವುದಿರಲಿ ಇಂಥದಕ್ಕೆ ಮೀಸಲಾದ 'ಗ್ರಂಥಲೋಕ' ಮತ್ತು 'ಪುಸ್ತಕ ಪುರವಣಿ'ಯಂಥ ಪತ್ರಿಕೆಗಳಿಗೆ ಸುದ್ದಿ ಮತ್ತು ವಿವರಗಳನ್ನು ಕೊಡಲು ಇಷ್ಟವಿಲ್ಲದಷ್ಟು ಸೋಮಾರಿತನ ಅನೇಕರಿಗೆ. ಪರಿಸ್ಥಿತಿ ಹೀಗಿರಬೇಕಾದರೆ ಓದುಗ ಅಪೇಕ್ಷಿಸಿದ ಪುಸ್ತಕ ಹೇಗೆ ತಾನೆ ದೊರೆಯುತ್ತದೆ?

ಪುಸ್ತಕವನ್ನು ಪ್ರಕಟಿಸಿದ ಮಾತ್ರಕ್ಕೆ ಪ್ರಕಾಶಕರ ಜವಾಬ್ದಾರಿ ಮುಗಿಯುವುದಿಲ್ಲ. ಅದು ಓದುಗನ ಕೈಸೇರಲು, ಹೆಚ್ಚು ಹೆಚ್ಚಾಗಿ ಅವನನ್ನು ತಲುಪಲು ಅವರು ಪ್ರಯತ್ನಿಸಬೇಕು. ಮೈಸೂರಿನಲ್ಲಿ ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯದ ಪುಸ್ತಕಗಳು ದೊರೆಯದೆ ಹೋಗುವುದು ತುಂಬ ಖೇದದ ಸಂಗತಿ ಇವನ್ನು ಕೊಳ್ಳಲು ಓದುಗ ಬೆಂಗಳೂರು ಮತ್ತು ಧಾರವಾಡಗಳಿಗೆ ಹೋಗುವುದು ಅಸಾಧ್ಯ. ಸಂಬಂಧಿಸಿದವರಿಗೆ ಕಾಗದ ಬರೆದರೆ ಉತ್ತರ ಬರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಓದುಗನ ಆಸೆಯ ಗುಳ್ಳೆ ಒಡೆಯದೆ ಇನ್ನೇನಾದೀತು? ಪುಸ್ತಕ ಪ್ರದರ್ಶನಗಳಾದಾಗ ಹೆಚ್ಚು ಮಾರಾಟವಾಯಿತು ಎನ್ನುವ ಆಡಳಿತವರ್ಗ ಅವನ್ನೇ ಏಕೆ ತಿಂಗಳಿಗೆರಡುಬಾರಿ ಏರ್ಪಡಿಸುವುದಿಲ್ಲ? ನಮ್ಮ ಹಲವು ಸರಕಾರಿ ಮತ್ತು ಅರೆ ಸರಕಾರಿ ಪ್ರಕಾಶನ ಸಂಸ್ಥೆಗಳು ತಮ್ಮ ಕಾರ್ಯರಂಗದ ಜಾಗಬಿಟ್ಟು ಬೇರೆಡೆ ಪ್ರಚಾರಕ್ಕೆ ಹೋದಂತಿಲ್ಲ. ನಮ್ಮ ವಿಶ್ವವಿದ್ಯಾನಿಲಯಗಳು ತಾವಿರುವ ಊರುಗಳನ್ನುಳಿದು ಎಷ್ಟು ಬೇರೆ ಜಿಲ್ಲೆಗಳಲ್ಲಿ ತಮ್ಮ ಮಾರಾಟದ ಕೇಂದ್ರಗಳನ್ನು ತೆರೆದಿವೆ? ಎಷ್ಟು ಸಂಚಾರಿ ಪ್ರಚಾರ ಘಟಕಗಳನ್ನು ಹೊಂದಿವೆ? ಹೀಗಿರುವುದರಿಂದಲೆ ಕೋಟಿಗಟ್ಟಲೆ ರೂಪಾಯಿ ಮೌಲ್ಯದ ಪುಸ್ತಕಗಳು ಉಳಿದುಕೊಳ್ಳುವುದು.

ಇನ್ನು ಕೆಲವು ಪ್ರಕಾಶಕರು ಓದುಗನಿಗಾಗಿ ಎಂದು ಪುಸ್ತಕಗಳನ್ನು ಪ್ರಕಟಿಸುವುದಿಲ್ಲ : ಪ್ರಚಾರ ಮಾಡುವುದಿಲ್ಲ. ಪುಸ್ತಕ ಪ್ರಕಟಿಸುವಾಗಲೆ ಗ್ರಂಥಾಲಯ ಬೇಡಿಕೆ ಮತ್ತು ಸಗಟು ಖರೀದಿಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಅದರ ಉತ್ಪಾದನೆಗೆ

ತೊಡಗುತ್ತಾರೆ. ಲೇಖಕನ ಮೇಲಿನ ದಾಕ್ಷಿಣ್ಯದಿಂದ ಸಾಧಾರಣ ಪುಸ್ತಕ ಪ್ರಕಟಿಸಿದ್ದರೆ ಇದು ಸರಿ. ಆದರೆ ಒಳ್ಳೆಯ ಪುಸ್ತಕಗಳಿಗೂ ಇದೇ ಗತಿಯೇ ? ಪ್ರಕಟಿಸಿದ ಮೇಲೆ ಗ್ರಂಥಾಲಯ, ಸಗಟು ಖರೀದಿ ಬೇಡಿಕೆಗಳಿಗೆ ಕಳುಹಿಸಿದ ಅನಂತರ ಉಳಿದ ಅನೇಕ ನೂರು ಪ್ರತಿಗಳು ಮುದ್ರಣಾಲಯಗಳ ಅಟ್ಟದ ಮೇಲೆಯೇ ಉಳಿದಿರುತ್ತವೆ. ಇವರು ಬೇರೆ ಮಾರಾಟಗಾರರ ಕಡೆಗೆ ಅವನ್ನು ಕಳುಹಿಸುವುದೇ ಇಲ್ಲ. ಇವರಿಗೆ ಪುಸ್ತಕಗಳು ತೊಟ್ಟುತೊಟ್ಟಾಗಿ ಮಾರಾಟವಾಗುವುದು ಲಾಭಕರವಲ್ಲ ಎನಿಸುತ್ತದೆ. ಎರಡು ಮೂರು ವರ್ಷಗಳ ಹಿಂದೆ ಕನ್ನಡದಲ್ಲಿ ಪ್ರಕಟವಾದ ಒಂದು ಪುಸ್ತಕ ಕೆಲವು ವಲಯಗಳಲ್ಲಿ ತುಂಬ ಆಸಕ್ತಿ ಹುಟ್ಟಿಸಿತು. ಕೆಲವರಿಂದಲಾದರೂ ಅದಕ್ಕೆ ಕಾತರದ ಬೇಡಿಕೆಗಳು ಬಂದವು; ಅವು ಈಗಲೂ ಇವೆ. ಆದರೆ ಆ ಪುಸ್ತಕ ಆಗಿರಲಿ, ಈಗಲೂ ಸುಲಭವಾಗಿ ದೊರೆಯುತ್ತಿಲ್ಲ. ಮಿತ್ರರೊಬ್ಬರು ಹೇಳಿದ ಪ್ರಕಾರ ಅದರ ಪ್ರಕಾಶಕರು ಗ್ರಂಥಾಲಯದ ಅಪೇಕ್ಷೆಗನುಗುಣವಾಗಿ ೨೫೦ ಪ್ರತಿಗಳನ್ನು ಮಾತ್ರ ರಟ್ಟುಕಟ್ಟಿಸಿ, ಅಲ್ಲಿಗೆ ತುಂಬಿದ್ದಾರಂತೆ. ಉಳಿದಂತೆ ಲೇಖಕರು ತುಂಬ ಒತ್ತಾಯ ಮಾಡಿದಾಗ ಮೂರ್‍ನಾಲ್ಕು ಪ್ರತಿಗಳನ್ನು ರಟ್ಟುಕಟ್ಟಿಸಿಕೊಡುತ್ತಾರಂತೆ. ಪುಸ್ತಕಕ್ಕೆ ಬೇಡಿಕೆಯಿದ್ದರೂ ಏಕೆ ಹೀಗೆ ? ಶ್ರೀನಿವಾಸ ಹಾವನೂರ ಅವರು 'ಪುಸ್ತಕ ಕೊಳ್ಳುವವರ ಗೋಳು' ಎಂಬ ಎರಡು ಲೇಖನಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಅನೇಕ ಸ್ವಾರಸ್ಯ ಪ್ರಸಂಗಗಳಿವೆ. ಲೇಖಕರೇ ಪ್ರಕಾಶಕರಾಗಿದ್ದಾಗ ಅವರ ಒಂದು ಪುಸ್ತಕವನ್ನು ನಾವು ಕೇಳಿದರೆ ಮಾರಾಟವಾಗದ ತಮ್ಮ ಮತ್ತೊಂದು ಪುಸ್ತಕವನ್ನೂ ನಮಗಿಷ್ಟವಿರಲಿ, ಇಲ್ಲದಿರಲಿ ನಾವು ಕೊಳ್ಳಬೇಕೆಂದು ಬಲಾತ್ಕರಿಸುವ ಒಂದೆರಡು ಘಟನೆಗಳನ್ನು ಅವರು ಉಲ್ಲೇಖಿಸಿದ್ದಾರೆ. ನನ್ನ ಅನುಭವವಾದರೂ ಇದೇ. ಈಚೆಗೆ ಸುಂದರಮೂರ್ತಿಯ 'ತಿರುತ್ತೊಂಡತ್ತೊಗೈ' ಪುಸ್ತಕದ ಕನ್ನಡ ಅನುವಾದ, ವರ್ಷಗಳ ಹಿಂದೆ ಪ್ರಕಟವಾಗಿರುವ, ಬೆಲೆ ನಮೂದಾಗದ ಪುಸ್ತಕ ನನಗೆ ಬೇಕಾಯಿತು; ಸಂಬಂಧಿಸಿದ ಲೇಖಕ–ಪ್ರಕಾಶಕರಿಗೆ ಕಾಗದ ಬರೆದೆ. ಪ್ರತಿಗಳು ಉಳಿದಿವೆಯೆಂದೂ, ಆದರೆ ಐವತ್ತು ರೂಪಾಯಿಗಳ ಮೌಲ್ಯದ ಅವರ ಇತರ ಬರಹಗಳನ್ನು ನಾನು ಕೊಂಡರೆ ಪುಸ್ತಕ ಕಳುಹಿಸಿಕೊಡುತ್ತೇನೆಂದೂ ಅರ್ಥ ಬರುವ ಮಾತುಗಳನ್ನು ಅವರು ಬರೆದಿದ್ದರು. ಇದು ರೇಷನ್ ಡಿಪೋನವರು ಅಕ್ಕಿ ಬೇಕಾದರೆ ಮುಗ್ಗಲು ಜೋಳ, ಹುಳುಬಂದ ರವೆಗಳನ್ನು ಅದರೊಂದಿಗೆ ಕೊಳ್ಳಲೇಬೇಕು ಎಂದು ಬಲಾತ್ಕರಿಸಿದಂತೆ! ಪಠ್ಯಪುಸ್ತಕದ ಆವೃತ್ತಿಗೆಂದು ಸಾಧಾರಣ ರೀತಿಯಲ್ಲಿ ಉತ್ಪಾದಿಸಿದ ಕೃತಿಗೆ ಆ ವರ್ಷ ಕಳೆದೊಡನೆಯೆ ಹೆಚ್ಚಿನ ಹೊಸ ಬೆಲೆಯಿಡುವ ಪ್ರಕಾಶಕರ ಸಣ್ಣತನಕ್ಕೂ ನಮ್ಮಲ್ಲಿ ಕೊರತೆ ಏನಿಲ್ಲ. ಇಂಥ ಪ್ರಸಂಗಗಳಿಂದ ಓದುಗರು ಪ್ರಕಾಶಕರ ಬಗ್ಗೆ ಅಸಹ್ಯಭಾವ ತಾಳುತ್ತಾರೆ.

ಓದುಗರು ತಾವು ದುಬಾರಿಬೆಲೆ ಕೊಟ್ಟು, ಕೊಳ್ಳುವ ಪುಸ್ತಕಗಳು ಗುಣಮಟ್ಟದ ದೃಷ್ಟಿಯಿಂದ, ಚೆಲುವಿನ ವಿನ್ಯಾಸದ ದೃಷ್ಟಿಯಿಂದ ತುಂಬ ಚೆನ್ನಾಗಿರಬೇಕು

ಎಂದು ಅಪೇಕ್ಷಿಸುತ್ತಾರೆ. ಆದರೆ ನಮ್ಮ ಪ್ರಕಾಶಕರು ಓದುಗರ ಈ ಆಸೆಯ ಕೊಳ್ಳವನ್ನು ತುಂಬುತ್ತಿದ್ದಾರೆಯೇ? ನಮ್ಮ ಎಷ್ಟೋ ಪ್ರಕಾಶಕರಿಗೆ ತಾವು ಪ್ರಕಟಿಸುವ ಸೃಜನಸಾಹಿತ್ಯದ ಕೃತಿಗಳು ಏನೇನೂ ಚೆನ್ನಾಗಿಲ್ಲವೆಂದು ಗೊತ್ತು. ಆದರೂ ಪ್ರಕಟಿಸುತ್ತಾರೆ. 'ಏಕೆ ಹೀಗೆ' ಎಂದು ಕೇಳಿದರೆ "ಓದುಗರು ಏನನ್ನು ಕೇಳಿದರೆ ನಾವು ಅದನ್ನು ಕೊಡುತ್ತೇವೆ" ಎನ್ನುತ್ತಾರೆ. ಓದುಗರು ಕೇಳಿದ್ದನ್ನೆಲ್ಲ ಕೊಡುವುದಾದರೆ, ಅವರು ಬೆತ್ತಲೆ ಸಾಹಿತ್ಯ ಕೇಳುತ್ತಾರೆ. ಅದನ್ನೂ ಇವರು ಕೊಡಲು ಸಿದ್ಧರೆ? ಓದುಗರ ಓದಿನಕ್ರಮ, ಅಭಿರುಚಿ ಇವನ್ನು ತಿದ್ದುವುದರಲ್ಲಿ ಪ್ರಕಾಶಕರ ಪಾಲು ತುಂಬ ಇದೆ ಎಂಬುದನ್ನು ಅವರು ಮರೆಯಬಾರದು. ಪರಿಶುದ್ಧ ಮತ್ತು ಆದರ್ಶ ಓದಿನ ಕಡೆ ಓದುಗನನ್ನು ತಿರುಗಿಸುವ ಕೆಲಸವನ್ನು ಪ್ರಕಾಶಕರು ಮಾಡಬೇಕು. ಕನ್ನಡದ ಕೆಲವಾದರೂ ಪ್ರಕಾಶಕರು ಇದನ್ನು ಕೈಗೊಂಡಿದ್ದಾರೆ. ತುಂಬ ನಿಧಾನವಾಗಿ ಆಗುತ್ತಿರುವ ಈ ಕೆಲಸ ಇನ್ನಾದರೂ ಚುರುಕಾಗಬೇಕಾಗಿದೆ.

ಪುಸ್ತಕದ ಚೆಲುವು, ವಿನ್ಯಾಸ, ರಕ್ಷಣೆಗಳೆಡೆ ನಮ್ಮ ಪ್ರಕಾಶಕರು ಗಮನ ಹರಿಸುವ ಅಗತ್ಯವಾದರೂ ತುಂಬ ಇದೆ. ತುಂಬ ಬೆಲೆಯ ಎಷ್ಟೋ ಪುಸ್ತಕಗಳ ಹೊರಹೊದಿಕೆಗಳು ಏನೇನೂ ಚೆನ್ನಾಗಿರುವುದಿಲ್ಲ; ಅವುಗಳ ರಟ್ಟು ಬಾಳಿಕೆ ಬರುವಂಥವಲ್ಲ. ಪ್ರಕಾಶಕರು ನಮ್ಮ ಕಾದಂಬರಿಗಳನ್ನು ಮೂರುಬಣ್ಣದ ಒಂದು ಚಿತ್ರದ ಹೊದಿಕೆಯಲ್ಲೇ ತೃಪ್ತರಾಗಿಸುತ್ತಾರೆ! ಪುಸ್ತಕವನ್ನು ಉತ್ಪಾದಿಸುವುದು ಒಂದು ಕಲೆ ಎಂಬುದು ಅನೇಕ ಪ್ರಕಾಶಕರಿಗೆ ತಿಳಿದಂತಿಲ್ಲ. ಪುಸ್ತಕ ನೋಡಿದ ಕೂಡಲೆ, ಓದುಗ ಆ ಕಡೆ ಆಕರ್ಷಿತನಾಗುವಂತೆ, ಅದರ ಷೋಕಾದ ಉತ್ಪಾದನೆಗೆ ಅದನ್ನು ಕೊಳ್ಳುವಂತೆ ಪ್ರಕಾಶಕರು ಪುಸ್ತಕೋತ್ಪಾದನೆ ಮಾಡಬೇಕು ಎಂಬುದು ಓದುಗರ ಬಯಕೆ. ಯಾವುದೇ ಪುಸ್ತಕವನ್ನು ಸ್ಪರ್ಶಿಸಿ, ಕೈಯಲ್ಲಿ ಹಿಡಿದಾಗ ಚೆಲುವೆಯ ಕೆನ್ನೆ ಸೋಕಿದ ಅನುಭವವಾಗಬೇಕು ಎಂಬ ರಸಿಕ ಬಯಕೆಯನ್ನು ಓದುಗ ಇಟ್ಟುಕೊಳ್ಳುವುದು ತಪ್ಪೆ? ಇದನ್ನು ನಿಯತವಾಗಿ ಪೂರೈಸುತ್ತಿರುವ ಪ್ರಕಾಶಕರು ಕನ್ನಡದಲ್ಲಿ ಇಲ್ಲವೆನ್ನುವಷ್ಟು ವಿರಳ. ಇವು ಹಾಗಿರಲಿ ಮಾಟವಾದ ವೈಕಟ್ಟಿನ ಹುಡುಗಿಯ ಮೊಗದಲ್ಲಿ ಕಾಣುವ ಸಿಡುಬಿನ ಕಲೆಗಳಂತೆ, ಪುಸ್ತಕದ ಪುಟಗಳಲ್ಲಿ ಕಾಣುವ ಮುದ್ರಣ ದೋಷಗಳನ್ನು ಮೊದಲು ನಿವಾರಿಸಿ, ಪ್ರಕಾಶಕರು ಪುಸ್ತಕಗಳನ್ನು ಹೊರತಂದರೆ, ಓದುಗರಿಗೆ ಎಷ್ಟೋ ಹಾಯೆನಿಸೀತು.

* * * *

ಕನ್ನಡ ಪುಸ್ತಕ ಮಾರುವ ಅಂಗಡಿಯಲ್ಲಿ ಸಲುಗೆಯಿರುವ ಹಿರಿಯರೊಬ್ಬರು ಗಲ್ಲಾದ ಮೇಲಣ ಮಾಲೀಕರನ್ನು "ಹೇಗಿದೆ ಸಾರ್ ಬಿಜಿನೆಸ್ಸು?" ಎಂದು ಪ್ರಶ್ನಿಸುತ್ತಾರೆ. "ಕನ್ನಡ ಪುಸ್ತಕ ಮಾರಿ ಜೀವನ ನಿರ್ವಹಿಸುವುದಕ್ಕಾಗುತ್ತದೆಯೇ, ಸಾರ್" ಎಂಬ ಉತ್ತರವನ್ನು ವಿಷಾದ ವ್ಯಂಗ್ಯಗಳ ನಗೆಚೆಲ್ಲುತ್ತ ಮಾಲೀಕರು ಕೊಡುತ್ತಾರೆ. ನಮ್ಮ ಜನ ಕನ್ನಡ ಪುಸ್ತಕ ಓದುವುದಿಲ್ಲ, ಸಿನಿಮಾ ನೋಡುತ್ತಾರೆ; ಪುಸ್ತಕದಂಗಡಿಗಳಿಗೆ ಬರುವುದಿಲ್ಲ, ಹೋಟೆಲುಗಳಿಗೆ ನುಗ್ಗುತ್ತಾರೆ; ಪುಸ್ತಕ

ಕೊಳ್ಳುವುದಿಲ್ಲ, ಸ್ಟಿರಿಯೋ ತರುತ್ತಾರೆ. ಇವೇ ಮೊದಲಾದುವು ಇವರ ಆಕ್ಷೇಪ ಗಳು. ನಿಜವಾಗಿಯೂ ಇವಕ್ಕೆ ಉತ್ತರ ಕೊಡುವುದು ಸ್ವಲ್ಪ ಕಷ್ಟ. ಆದರೆ ನಮ್ಮ ಜನ ಹೆಚ್ಚು ಹೆಚ್ಚು ಓದುವ ಮತ್ತು ಕೊಳ್ಳುವ ಹಾಗೆ ಮಾಡುವುದರಲ್ಲಿ, ಓದುಗರ ಅಭಿರುಚಿ ಅಪೇಕ್ಷೆಗಳನ್ನು ಪೂರೈಸುವುದರಲ್ಲಿ ಇವರ ಪಾತ್ರವೇನೂ ಇಲ್ಲವೆ? ಇದು ಪರಿಶೀಲನೆಗೆ ಯೋಗ್ಯವಾದದ್ದು.

ಓದುಗರು ಕೇಳಿದ ಪುಸ್ತಕಗಳನ್ನೆಲ್ಲ ಒಡನೆಯೆ ಒದಗಿಸಿಕೊಡುವುದು ಮಾರಾಟ ಗಾರರ ಆದ್ಯಕರ್ತವ್ಯ. ಆದರೆ ನಾಡಿನ ಯಾವುದೋ ಮೂಲೆಯಲ್ಲಿ ಎಂದೋ ಪ್ರಕಟವಾಗಿರುವ ಓದುಗ ಕೇಳುವ ಪುಸ್ತಕವನ್ನು ತರಿಸಿ ಅವನ ಅಪೇಕ್ಷೆ ಪೂರೈಸುವ ಮಾರಾಟಗಾರರು ನಮ್ಮಲ್ಲಿ ವಿರಳ. ಮೈಸೂರಿನಂಥ ನಗರದಲ್ಲಿ ಅಂಥವರಿರುವುದು ಒಬ್ಬರೊ ಇಬ್ಬರೋ. ಕೇಳಿದ ಪುಸ್ತಕವನ್ನು ಇಲ್ಲವೆಂದೋ ತರಿಸಲಸಾಧ್ಯವೆಂದೋ ಹೇಳುವುದು, ಅದರ ಬದಲಿಗೆ ಮತ್ತೊಂದನ್ನು ತೋರುವುದು ಶಿಫಾರಸು ಮಾಡುವುದು, "ಇಲ್ಲದಿರುವುದನ್ನು ಕೇಳುತ್ತೀರಲ್ಲ ಇರುವುದನ್ನು ಕೊಳ್ಳಿ" ಎಂದು ಅಣಕವಾಡುವುದು ನಮ್ಮ ಮಾರಾಟಗಾರರಿಗೆ ಒಗ್ಗಿದೆ. ಇಂಥ ಅನುಭವಗಳಾದಾಗ ಗ್ರಾಹಕ ಓದುಗ ಹೇಗೆ ತಾನೆ ಮತ್ತೊಮ್ಮೆ ಆ ಅಂಗಡಿಯ ಮೆಟ್ಟಲು ತುಳಿಯುತ್ತಾನೆ? ಇನ್ನು ಕೆಲವರು ಮಾರಾಟಗಾರರು, ತಾವೇ ಪ್ರಕಾಶಕರಾಗಿರುತ್ತಾರೆ. ಅವರು ತಾವು ಪುಸ್ತಕ ಮಾರುವಾಗಲೆಲ್ಲ, ತಾವು ಪ್ರಕಟಿಸಿದ ಪುಸ್ತಕವನ್ನು ಮುಂದುಮಾಡಿ ಮಾರುತ್ತಾರೆ. ಈ ಮಾರಾಟ ಬಿಡಿ ಓದುಗನಿಂದ ಗ್ರಂಥಾಲಯದವರೆಗೆ ವ್ಯಾಪಿಸಿರು ತ್ತದೆ. ಅವರು ಇತರ ಪ್ರಕಾಶಕರ ಪುಸ್ತಕ ಮಾರಾಟಕ್ಕೆ ತಮ್ಮಲ್ಲಿ ಸರಿಯಾದ ಅವಕಾಶ ಮಾಡಿಕೊಡುವುದಿಲ್ಲ. ಓದುಗರ ಅಪೇಕ್ಷೆ ನಿರೀಕ್ಷೆಗಳನ್ನು ಅರಿಯುವ ತಾಳ್ಮೆಯೂ ಅವರಿಗಿರುವುದಿಲ್ಲ. ಇಂಥ ಸಂದರ್ಭಗಳಲ್ಲಿ ಸಹಜವಾಗಿಯೇ ಓದುಗ ಅವನಿಗರಿಯದಂತೆ ಮಾರಾಟಗಾರನಿಂದ ದೂರವಾಗುತ್ತ ಹೋಗುತ್ತಾನೆ.

ಮಾರಾಟಗಾರರಿಂದ ಓದುಗರು ಸಾಮಾನ್ಯವಾಗಿ ಅಪೇಕ್ಷಿಸುವ ಮತ್ತೊಂದು ಅಂಶ ಸೋಡಿಯ ಸವಲತ್ತು. ಒಂದು ಪುಸ್ತಕದ ಅಂಗಡಿಗೆ ಪದೇ ಪದೇ ಹೋಗುವ ಓದುಗನಿಗೆ ಈ ರಿಯಾಯಿತಿಯನ್ನು ಕೆಲವು ಮಾರಾಟಗಾರರು ತೋರುತ್ತಾರೆ. ಇದರಿಂದ ಓದುಗರಿಗೆ ಸಂತೋಷವಾಗುತ್ತದೆ; ಒಂದು ಪುಸ್ತಕ ಕೊಳ್ಳುವೆಡೆ ಎರಡು ಕೊಳ್ಳಬೇಕೆಂಬ ಬುದ್ಧಿ ಹುಟ್ಟುತ್ತದೆ. ಮೈಸೂರಿನಲ್ಲಿ ಒಂದು ಪುಸ್ತಕದಂಗಡಿ ಯವರು ದಸರೆ, ನಾಡಹಬ್ಬ ಮತ್ತು ದೀಪಾವಳಿಯ ಸಂದರ್ಭಗಳಲ್ಲಿ ಕೆಲವು ಪುಸ್ತಕ ಗಳಿಗೆ ಶೇಕಡಾ ೧೦ ರಿಂದ ೨೫ರ ವರೆಗೆ ಹೀಗೆ ರಿಯಾಯಿತಿ ಘೋಷಿಸಿ ತಕ್ಕಮಟ್ಟಿಗೆ ಜನರನ್ನು ಆಕರ್ಷಿಸಿರುವುದನ್ನು ನಾನು ಬಲ್ಲೆ. ಇದನ್ನು ನಮ್ಮ ಎಲ್ಲ ಮಾರಾಟ ಗಾರರೂ ಅನುಸರಿಸಿದರೆ ಓದುಗರು ಪುಸ್ತಕದಂಗಡಿಗಳಿಗೆ ಹೆಚ್ಚು ಭೇಟಿಯಿತ್ತಾರು! ನಮ್ಮ ಕೆಲವು ಮಾರಾಟಗಾರರು ತಮ್ಮ ಸಣ್ಣತನಗಳಿಂದ ಮತ್ತು ಕುಟಿಲ ವ್ಯವಹಾರ ಗಳಿಂದಲೂ ದೂರವಾಗಬೇಕು. ಮೊದಲ ಆವೃತ್ತಿಯ ಪುಸ್ತಕಕ್ಕೆ, ಎರಡು

ಮೂರನೆಯ ಆವೃತ್ತಿಗಳ ಬೆಲೆಯನ್ನು ತಿದ್ದಿ ಹಾಕುವುದು; ಪ್ರಕಟಣ ಪೂರ್ವಬೆಲೆಗೆ ಪುಸ್ತಕಗಳನ್ನು ಕೊಂಡ ಪ್ರಕಟಣೋತ್ತರ ಬೆಲೆಗೆ ಅವನ್ನು ಮಾರುವುದು, ಗ್ರಂಥಾಲಯಗಳಿಗೆ ತುಂಬುವುದು—ಇಂಥವು ಕೆಲವು ನಿದರ್ಶನಗಳು. ಇವುಗಳಿಂದ ಮುಕ್ತನಾಗಿ ಮಾರಾಟಗಾರ ಓದುಗನ ಪ್ರೀತಿ, ಭರವಸೆಗಳನ್ನು ಇನ್ನೂ ಗಳಿಸಬೇಕಾಗಿದೆ.

* * * *

"ಯಾರು ಓದುತ್ತಾರೆ ಪುಸ್ತಕ?" ಎಂದು ಗೊಣಗುವ ಲೇಖಕರೆ ಒಂದರ ಬೆನ್ನಹಿಂದೆ ಮತ್ತೊಂದು ಪುಸ್ತಕ ಬರೆಯುತ್ತಾರೆ; ತಮ್ಮ ಪುಸ್ತಕಗಳ ಕೊನೆಯಲ್ಲಿ ಓದುಗರ ಅಭಿಪ್ರಾಯಗಳನ್ನು ಹಾಕಿಕೊಳ್ಳುತ್ತಾರೆ. "ಯಾರು ಕೊಳ್ಳುತಾರ್ರೀ ಕನ್ನಡ ಪುಸ್ತಕ?" ಎಂದು ಸಿಡುಕುವ ಪ್ರಕಾಶಕರು ತಮ್ಮ ಪ್ರಕಟಣೆಯ ಬೆಳೆದ ಯಾದಿಯನ್ನು ಕೊಡುತ್ತಾರೆ; ಕೃತಿಗಳ ಎರಡನೆಯ ಮೂರನೆಯ ಮುದ್ರಣಗಳನ್ನು ಹೊರತರುತ್ತಾರೆ "ಕನ್ನಡ ಪುಸ್ತಕಮಾರಿ ಜೀವನ ನಿರ್ವಹಿಸುವುದಕ್ಕಾಗುತ್ತದೆಯೆ?" ಎಂದು ಭೀತರಂತೆ ಪ್ರಶ್ನಿಸುವ ಮಾರಾಟಗಾರರು ಮನೆ ಕಟ್ಟುತ್ತಾರೆ; ತಮ್ಮ ಅಂಗಡಿಗಳಲ್ಲಿ ಖಾಲಿಯಾದ ಖಾನೆಗಳನ್ನು ಹೊಸ ಪುಸ್ತಕಗಳಿಂದ ಭರ್ತಿ ಮಾಡುತ್ತಾರೆ. ಇವೆಲ್ಲ ಓದುಗರು ಓದದೆ, ಕೊಳ್ಳದೆ ಆಗುವ ಕಾರ್ಯಗಳೇನಲ್ಲ. ೩೦ ರೂಪಾಯಿ ಬೆಲೆಯ 'ಭುಗಿಲು' ಕೃತಿಯ ೩೦,೦೦೦ ಪ್ರತಿಗಳು ಪ್ರಕಟಣೆಗೆ ಮೊದಲೇ ಎರಡನೆಯ ಮುದ್ರಣಕ್ಕೆ ಬರುತ್ತದೆ. ೩೫ ರೂಪಾಯಿ ಬೆಲೆಯ 'ಪರ್ವ' ಕಾದಂಬರಿಯ ೩೦೦೦ ಪ್ರತಿಗಳು ೧೨ ತಿಂಗಳಲ್ಲಿ ಮಾರಾಟವಾಗುತ್ತದೆ. ೫೭-೬೦ ಪೈಸೆಯ ನಾಲ್ಕು ಸಂಪುಟಗಳ 'ವಿಜ್ಞಾನ ಪ್ರಪಂಚ'ದ ೧೭,೪೦೦ ಪ್ರತಿಗಳನ್ನು ಮೂರು ತಿಂಗಳಲ್ಲಿ ಕನ್ನಡ ಜನ ಕೊಳ್ಳುತ್ತಾರೆ. ಅದರ ಮತ್ತೊಂದು ಮುದ್ರಣದ ೫೦,೦೦೦ ಪ್ರತಿಗಳನ್ನು ಹಾಕುತ್ತೇವೆಂದು ಪ್ರಕಾಶಕರು ಜಾಹೀರಾತು ಕೊಡುತ್ತಾರೆ. ೫೦ ರೂಪಾಯಿ ಬೆಲೆಯ 'ದುರ್ಗಾಸ್ತಮಾನ' ಕಾದಂಬರಿಯ ೩೦೦ ಪ್ರತಿಗಳನ್ನು ಬಿಡುಗಡೆಯಾದ ಗಳಿಗೆಯಲ್ಲಿಯೇ ಬಿಸಿದೋಸೆಗಳಂತೆ ಜನ ಕೈಗೆತ್ತಿಕೊಳ್ಳುತ್ತಾರೆ. ಇಂಥ ಪಟ್ಟಿಯನ್ನು ಬೆಳೆಸಬಹುದು. ಇವೆಲ್ಲ ಕಡಿಮೆ ಬೆಲೆಯ ಪುಸ್ತಕಗಳಲ್ಲ, ಸಗಟು ಖರೀದಿಯಿಂದ ಮಾರಾಟವಾದುವಲ್ಲ. ಕನ್ನಡಜನ ಇಚ್ಛಿಸಿ, ತವಕಿಸಿ, ಕೈಯಾರೆ ದುಡ್ಡುಕೊಟ್ಟು ಕೊಂಡ ಪುಸ್ತಕಗಳು. ಕನ್ನಡ ಜನ ಏನೇನೂ ಓದುವುದಿಲ್ಲ, ಕೊಳ್ಳುವುದಿಲ್ಲ ಎಂದು ಕಟುವಾಗಿ ಆಕ್ಷೇಪಿಸುವುದು ಸರಿಯಲ್ಲ. ತಕ್ಕಮಟ್ಟಿಗಾದರೂ ನಮ್ಮ ಜನರ ಓದಿನ ಹವ್ಯಾಸ ಹೆಚ್ಚುತ್ತಿದೆ, ಕೊಳ್ಳುವ ಆಸಕ್ತಿ ಏರುತ್ತಿದೆ. ಈ ಹವ್ಯಾಸವನ್ನು ಹುಚ್ಚಾಗಿಸುವುದರಲ್ಲಿ, ಆಸಕ್ತಿಯನ್ನು ಅಮಲಿಗೇರಿಸುವುದರಲ್ಲಿ ತಮ್ಮ ಪಾಲಿನ ಕರ್ತವ್ಯವೇನು ಎಂಬುದನ್ನು ಕನ್ನಡ ಲೇಖಕರು, ಪ್ರಕಾಶಕರು ಮತ್ತು ಮಾರಾಟಗಾರರು ಓದುಗರ ಆಸೆ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತಾ ಗಂಭೀರವಾಗಿ ಯೋಚಿಸಬೇಕಾದ ಹೊತ್ತು ಇದು.

ಎಂ. ಎಸ್. ಪುಟ್ಟಣ್ಣ
ಸಂಗ್ರಹ: ಡಾ. ಎಚ್. ಎಸ್. ಸುಜಾತಾ

ಹಾತಿಂ ತಾಯ್

(ಕಳೆದ ಸಂಚಿಕೆಯಿಂದ ಮುಂದುವರೆದಿದೆ)

೪ನೇ ಅಧ್ಯಾಯ

ಹತೀಮನು ಕೆಂಪುಕಾಡಿನ ಕಡೆಗೆ ಪ್ರಯಾಣಮಾಡಿದನು. ಕೆಲವು ತಿಂಗಳಲ್ಲಿ ಒಂದು ಕಾಡಿಗೆ ಹೋದನು. ಅಲ್ಲಿ ನೀರು ಸಿಕ್ಕುವುದಿಲ್ಲ. ಜನಸಂಚಾರವಿಲ್ಲವೇ ಇಲ್ಲ. ಹಸಿದು ಬಾಯಾರಿಕೆಯಾಗಿದ್ದಾಗ್ಯೂ ಅವನು ಪ್ರಯಾಣವನ್ನೇನೋ ಬಿಡಲಿಲ್ಲ. ಕಾಡಹಂಣು ಕಾಡಸಪ್ಪು ಇದೇ ಅವನ ಆಹಾರವಾಗಿತ್ತು. ಹೀಗೆ ಕೆಲವು ಕಾಲ ಪ್ರಯಾಣಮಾಡಿದನು. ಹೀಗೆಯೇ ಹೋಗುತಿರುವಾಗ ಒಂದು ಸ್ಥಳ ಸಿಕ್ಕಿತು. ಅಲ್ಲಿ ಆಕಾಶವೂ ಭೂಮಿಯೂ ಏಕವಾದ ಹಾಗೆ ಕರ್‍ರಗೆ ಕಾಣಿಸಿತು. ಕಂಣಿಗೆ ಕಾಣುವ ಪದಾರ್ಥವೆಲ್ಲಾ ಕರ್‍ರಗೆ ಕಾಣುತಾ ಬಂತು. ಈ ಪ್ರದೇಶವು ಕೃಷ್ಣಸರ್ಪಗಳು ವಾಸ ಮಾಡುವ ಸ್ಥಳವಾಗಿತ್ತು. ಆ ಜಂತುಗಳು ಹತೀಮನ ವಾಸನೆಯನ್ನು ಕಂಡು ಅವನನ್ನು ನುಂಗಿಕೊಳ್ಳುವುದಕ್ಕಾಗಿ ಎಲ್ಲಾ ದಿಕ್ಕಿನಿಂದಲೂ ನುಗ್ಗಿದವು. ಮಾಹ್ಯೊರನು ಕೊಟ್ಟಿದ್ದ ಯಂತ್ರದ ದೊಂಣೆಯನ್ನು ಹತೀಮನು ಕೆಳಗೆ ಹಾಕಿ ಅದರ ಮೇಲೆ ಕೂತುಕೊಂಡನು. ಆ ಮಂತ್ರದ ಸಾಮರ್ಥ್ಯದಿಂದ ಎಲ್ಲಾ ಕ್ಷೇಮವಾಗಿತ್ತು, ಹಾವುಗಳು ಹೆಡೆಯನ್ನು ಎತ್ತಿಕೊಂಡು ಬುಸಗುಟ್ಟುತಾ ಕೊನೆಮಿತಿ ಇಲ್ಲದೆ ತಿರುವಿಕೊಂಡು ತಿರುವಿಕೊಂಡು ರಾತ್ರಿಯೆಲ್ಲಾ ಅವನ (ಹತೀಮನ) ಸುತ್ತಲೂ ಸುತ್ತುತಿದ್ದವು. ಬೆಳಗಾದ ಮೇಲೆ ಅವನು ಆ ದೊಂಣೆಯನ್ನು ಕೈಗೆ ತೆಗೆದುಕೊಂಡು ಸರ್ಪಗಳ ವಿಷಭೀತಿ ಇಲ್ಲದೆ ಹೊರಟನು. ಹಾಗೆ ಕತ್ತಲೆ ಪ್ರದೇಶದ ಮೇರೆಯುವರೆಗೂ ಹೋದನು. ಇದಕ್ಕೆ ಸೇರಿದ ಹಾಗೆಯೇ ಬಿಳೀ ಪ್ರದೇಶವನ್ನು ಹತೀಮನು ಹುಡುಕುತಾ ಹೋದನು. ಅಲ್ಲಿ ಪ್ರತಿ ಪದಾರ್ಥವೂ ಬೆಳ್ಳಗೆ ಹೊಳೆಯುತಾ ಎಲ್ಲವೂ ಬಿಳಿ ಬಳಪದ ಕಲ್ಲಿನಲ್ಲಿ ಮಾಡಿದ ಹಾಗೆ ಕಾಣುತಿತ್ತು. ಅದೇ ಸಮಯದಲ್ಲಿ ದೊಡ್ಡ ಬಿಳೀಹಾವುಗಳು ಸಿಕ್ಕಿದವು. ಅವು ಸ್ವಲ್ಪ ದೂರದಿಂದ ತಮ್ಮ ವಿಷದ ಉಸಿರಿನ ಮೂಲಕ ಅವನನ್ನು ಒಳಕ್ಕೆ ಎಳೆದುಕೊಳ್ಳಲು ಯತ್ನ ಮಾಡಿದವು. ಆದರೆ ಹತೀಮನಲ್ಲಿದ್ದ ಮಂತ್ರದ ದೊಂಣೆಯ ಮಹತ್ತಿನಿಂದ ಅವುಗಳ ಪ್ರಯತ್ನ ಸಫಲವಾಗಲಿಲ್ಲ ; ಅವನ ಸಮೀಪಕ್ಕೆ

ಹೋಗುವುದಕ್ಕೆ ಕೂಡ ಅವುಗಳಿಗೆ ಸಾಮರ್ಥ್ಯವಿರಲಿಲ್ಲ. ಕೆಲವು ದಿವಸದಲ್ಲಿ ಅಪಾಯ ಕರವಾದ ಆ ಪ್ರಾಂತದಿಂದ ಹತೀಮನು ಹೊರಟುಹೋದನು. ಮುಂದಕ್ಕೆ ಹೋಗಲು ಹಸರು ಪ್ರದೇಶ ಸಿಕ್ಕಿತು. ಅಲ್ಲಿ ಎಲ್ಲಾ ಪಚ್ಚೆಯ ಹಾಗೆ ಕಾಣುತಿತ್ತು. ಅಲ್ಲಿ ಹಸರು ಹಾವುಗಳಿದ್ದವು. ಅವು ಹತೀಮನನ್ನು ಕಂಡ ಕ್ಷಣವೇ ಜಾಗ್ರತೆಯಾಗಿ ಅವನನ್ನು ಸುತ್ತಹರಿದವು. ಅವನ ಯಂತ್ರದ ಮಹತ್ತು ಇಲ್ಲದಿದ್ದರೆ ಅವನ ಆಯುಸ್ಸೆಲ್ಲಾ ಸ್ವಲ್ಪದರಲ್ಲಿಯೇ ಇತ್ತು. ಮತ್ತು ಹತೀಮನು ಹಸರು ಪ್ರದೇಶದಲ್ಲಿ ಹೋಗುತಾ ತನಗೆ ಅಪಾಯವಿಲ್ಲದೆ ಸಾವಿರಾರು ಕಷ್ಟಗಳನ್ನೂ ಅಪಾಯಗಳನ್ನೂ ಜಯಿಸಿಕೊಂಡನು. ಕಡೆಗೆ ಒಂದು ವಿಸ್ತಾರವಾದ ಪ್ರದೇಶಕ್ಕೆ ಬಂದನು. ಅದರಲ್ಲೆಲ್ಲಾ ಉರಿಮುಚ್ಚಿಕೊಂಡಿದೆಯೋ ಎನ್ನುವ ಹಾಗೆ ಕಾಣುತಿತ್ತು. ಇದೇ ಕೆಂಪುಕಾಡು ಎಂದು ತಿಳಿದುಕೊಂಡನು.

ಅಲ್ಲಿ ಪ್ರತಿ ಪದಾರ್ಥವೂ ಕುಂಕುಮದ ಹಾಗೆ ಕೆಂಪಗಿತ್ತು. ಹತೀಮನು ಹಲವು ಹೆಜ್ಜೆ ಮುಂದಕ್ಕೆ ಹೋದನೋ ಇಲ್ಲವೋ ಸೆಕೆಯು ಸಹಿಸುವುದಕ್ಕೆ ಅಸಾಧ್ಯವಾಯಿತು. ಅವನಿಗೆ ನಡೆಯುವುದಕ್ಕೆ ಕೂಡ ತ್ರಾಣವಿಲ್ಲದ ಹಾಗಾಯಿತು. ಆಗ ತನ್ನ ಮನಸ್ಸಿನಲ್ಲಿ ಇನ್ನೂ ಮುಂದಕ್ಕೆ ಹೋಗುವುದು ಅಸಾಧ್ಯವೆನ್ನಿಸಿಹೋಯಿತು. ಆದರೆ ಅವನು ಆತ್ಮಗತವಾಗಿ—ಎಲ ಹತೀಮ ಸತ್ಕಾರ್ಯ ಮಾಡುವುದರಲ್ಲಿ ಬಂದದ್ದೆಲ್ಲಾ ಬರಲಿ, ಈಗ ಸಂಭವಿಸಿರುವ ಕಷ್ಟಕ್ಕೆ ಸಾವಿರದಷ್ಟು ಹೆಚ್ಚಾಗಲಿ, (ಚಿಂತಿಸಬೇಡ) ಎಂದು ಕೊಂಡನು. ಸುಮಾರು ಒಂದು ಹರದಾರಿ ಹೋಗುವಷ್ಟರಲ್ಲಿ ಅವನ ಕಾಲೆಲ್ಲಾ ಹೊಪ್ಪಳಿಯಾಯಿತು. ಬಾಯಾರಿಕೆಯು ವಿಪರೀತವಾಗಿ ಹೆಜ್ಜೆ ಹೆಜ್ಜೆಗೂ ನಿಂತು ಕೊಳ್ಳುತಾ ಬಂದನು. ಆಗ ಹತೀಮನು—ನನಗೆ ಮರಣಕಾಲ ಪ್ರಾಪ್ತವಾಯಿತು. ಹಿಂದಕ್ಕೆ ಹೋಗಲು ಶಕ್ತಿ ಇಲ್ಲ. ಮುಂದಕ್ಕೆ ಹೋದರೆ ನಾಶವಾಗುವುದು ಖಂಡಿತ, ಇಲ್ಲಿರುವುದಕ್ಕೂ ಆಗುವುದಿಲ್ಲ. ಅದಕ್ಕಿಂತಲೂ ಸಾಯುವುದು ಮೇಲು, ಎಂದು ನಿಷ್ಕರ್ಷೆ ಮಾಡಿಕೊಂಡು ಮೆಲ್ಲಗೆ ಮುಂದಕ್ಕೆ ಹೋದನು. ಹೀಗೆ ಇನ್ನೊಂದು ಹರದಾರಿ ಮುಂದೆ ಹೋಗುವಷ್ಟರಲ್ಲಿ ಅವನಿಗೆ ಬಹಳ ನಿತ್ರಾಣವಾಯಿತು. ಬಾಯಾರಿಕೆಯೋ ಅತ್ಯಧಿಕವಾಯಿತು ; ಕೊನೆಗೆ ಕುಸಿದುಬಿದ್ದು ಸತ್ತವನ ಹಾಗೆ ಮಲಗಿಬಿಟ್ಟನು. ಅವನ ಮೈತುಂಬಾ ಹೊಪ್ಪಳಿಯಾಯಿತು.

ಹೀಗೆ ಜ್ಞಾನತಪ್ಪಿ ಹತೀಮನು ಬಿದ್ದಿರುವಾಗ ಒಬ್ಬ ಮುಪ್ಪಿನ ಮುದುಕನು ಹತ್ತಿರಕ್ಕೆ ಬಂದು ಅವನ ಕೈ ಹಿಡಿದು ಮೇಲಕ್ಕೆ ಎಬ್ಬಿಸಿ

ಮುದುಕ—ಓ ಹತೀಮ, ನೀನು ನಿರಾಶೆಯಾಗಿರಲು ಕಾರಣವಿಲ್ಲ. ಭಲ್ಲೂಕ ಪುತ್ರಿಯು ನಿನಗೆ ಕೊಟ್ಟಿರುವ ಯಂತ್ರವನ್ನು ನೀನು ಯಾಕೆ ಉಪಯೋಗಿಸ ಬಾರದು ?

ಆಗ ಹತೀಮನು ಚದರಿಹೋಗಿದ್ದ ಅವನ ಬುದ್ಧಿಯನ್ನೆಲ್ಲಾ ಸ್ವಾಧೀನಕ್ಕೆ ತೆಗೆದುಕೊಂಡು ಆ ಯಂತ್ರವನ್ನು ಜಾಗ್ರತೆಯಾಗಿ ತೆಗೆದು ಬಾಯಲ್ಲಿ ಇರಿಸಿ

ಕೊಂಡನು. ಅದನ್ನು ಹಾಗೆ ಇರಿಸಿಕೊಂಡನೋ ಇಲ್ಲವೋ ಆ ಕೆಂಪು ಕಾಡಿನ ಬಾಧೆಯು ಅವನಿಗೆ ಇಲ್ಲದ ಹಾಗಾಯಿತು. ಮೈಮೇಲಾಗಿದ್ದ ಹೊಪ್ಪಳೆ ಎಲ್ಲಾ ಕ್ಷಣಮಾತ್ರದಲ್ಲಿ ವಾಸಿಯಾಯಿತು. ಹತೀಮನು ಕೂಡಲೇ ಬುದ್ಧಿಯನ್ನು ಹೇಳಿದ ಆ ಮುದುಕನ ಕಾಲಿಗೆ ನಮಸ್ಕಾರಮಾಡಿ ಅವನನ್ನು ಕುರಿತು,

ಹತೀಮ—ಮಹಾವೃದ್ಧರೆ, ಇಲ್ಲಿ ಶಾಖವು ಇಷ್ಟು ಅತಿಯಾಗಲು ಕಾರಣವೇನು?

ವೃದ್ಧ— ಈ ಕಾಡಿನಲ್ಲಿರತಕ್ಕ ಕೆಂಪು ಸರ್ಪಗಳಿಂದ ಇಷ್ಟು ಶಾಖ ಉಂಟಾಗುವುದು. ಅವು ಬಹಳ ಗಾತ್ರವಾಗಿವೆ. ಬಾಯಿಯಿಂದ ವಿಪರೀತವಾಗಿ ಉರಿಯನ್ನೂ ಹೊಗೆಯನ್ನೂ ಊದುತಿವೆ. ಆದ್ದರಿಂದಲೇ ನಿನಗೆ ಕಾಣುವ ಅಗ್ನಿವರ್ಣ ಹುಟ್ಟತಕ್ಕದ್ದು.

ಹತೀಮನು ಬಾಯಿಯಲ್ಲಿ ಇರಿಸಿಕೊಂಡಿದ್ದ ಯಂತ್ರದ ಫಲದಿಂದ ಭಯವಿಲ್ಲದೆ ಮುಂದಕ್ಕೆ ಹೋದನು. ಹಾಗೆ ಸುಡುತಾ ಇರುವ ಶಾಖದಿಂದ ಇವನಿಗೆ ಲೇಶವೂ ತೊಂದರೆಯಾಗಲಿಲ್ಲ.

ಆ ಕಾಡಿನ ಮಧ್ಯಪ್ರದೇಶಕ್ಕೆ ಇವನು ಹೋದಕೂಡಲೆ ಬೆಂಕಿ ಉಸಿರು ಬಿಡತಕ್ಕ ಹಾವುಗಳು ಇವನನ್ನು ಕಂಡು ತಮ್ಮ ತಲೆಯನ್ನೂ ಹೆಡೆಯನ್ನೂ ಉದ್ದವಾದ ಮರದ ಹಾಗೆ ಮೇಲಕ್ಕೆ ಎತ್ತಲು ಆರಂಭಿಸಿದವು. ಕುಲುಮೆಯಿಂದ ಹೊರಡುವ ಹಾಗೆ ಅವುಗಳ ಮೂಗಿನಿಂದ ಉರಿ ಹೊರಡುತಿತ್ತು. ಅವನನ್ನು ಸುಟ್ಟು ಅವನ ಮೂಳೆಗಳನ್ನು ಬೂದಿ ಮಾಡಿಬಿಡಬೇಕೆಂದು, ಅವುಗಳು ಬುಸುಗುಟ್ಟುತಾ ಎಲ್ಲಾ ದಿಕ್ಕಿನಿಂದಲೂ ಅವನನ್ನು ಮುಸುಗಿದವು. ಆದರೆ ಭಲ್ಲೂಕಪುತ್ರಿಯ ಯಂತ್ರದ ಮಹತ್ತಿನಿಂದ ಆ ಸರ್ಪಗಳು ಬಂದು ಆವರಿಸಿದ್ದು ತಂಣಗಿರುವ ನೀರಿನ ತೆರೆ ಬಿದ್ದಂತಾಯಿತು. ಈ ಮಧ್ಯೆ ಹಾವುಗಳ ಸಂಖ್ಯೆ ಹೆಚ್ಚುತಾ ಬಂತು. ಅವುಗಳ ಸುಡತಕ್ಕಂಥಾ ಮತ್ತು ಬಾಧೆಕರವಾದಂಥಾ ಉಸಿರನ್ನು ಸಹಿಸುವುದು ಕಷ್ಟವಾಯಿತು. ಅದೆಲ್ಲಾ ಮಿಂಚಿನ ಪ್ರವಾಹದ ಹಾಗೆ ಇವನ ಮೇಲೆ ಬೀಳುತಾ ಬಂತು. ಕೊನೆಗೆ ಹತೀಮನು ಭೂತರಾಜನಾದ ಮಾಹ್ಯೂರನ ಮಂತ್ರದ ದೊಂಣೆಯನ್ನು ನೆಲದ ಮೇಲೆ ಹಾಕಿದನು. ಅದರ ಮಹತ್ತಿನ ಆಶ್ಚರ್ಯವು ಎಂಥಾದ್ದು ಎಂದರೆ, ಆ ದೊಂಣೆಯ ಮೇಲೆ ಅವನು ನಿಂತಕೂಡಲೆ ಅವನ ಸಮೀಪಕ್ಕೆ ಒಂದು ಹಾವೂ ಬರಲಿಲ್ಲ. ಹಾವುಗಳು ಭಯದಿಂದ ದೂರದಲ್ಲಿ ನಿಂತುಕೊಂಡವು. ಆ ರಾತ್ರಿಯೆಲ್ಲಾ ಅವು ಯೇನು ಮಾಡಿದಾಗ್ಯೂ ಅವನಿಗೆ ಸ್ವಲ್ಪವೂ ಬಾಧೆಯಾಗಲಿಲ್ಲ. ಬೆಳಗಾಯಿತು, ಆ ಸರ್ಪಗಳಲ್ಲೆ ಅತ್ಯಂತ ದೊಡ್ಡದಾಗಿದ್ದುದರ ಬಾಯಿಯಲ್ಲಿ ಮುಹ್ರ ಎಂಬ ಮೌಕ್ತಿಕವು ಕಾಣಿಸಿತು. ಅದನ್ನು ಆ ಮೃಗವು ಯಾವಾಗಲೂ ನೆಲಕ್ಕೆ ಬೀಳಿಸುತ್ತಿರಲಿಲ್ಲ. ಇದನ್ನೇ ಹತೀಮನು ಹೊಂದಬೇಕೆಂದು ಅಪೇಕ್ಷಿಸುತಿದ್ದುದು. ಆಗ ಅವನು ತನ್ನ ಮಂತ್ರದ ದೊಂಣೆಯಿಂದ ಆ ಹಾವಿನ ತಲೆಗೆ ಸರಿಯಾಗಿ ಗುರಿಕಟ್ಟಿ

ಒಂದೇಟನ್ನು ಹೊಡೆದನು. ಆ ಏಟು ಹಾವಿಗೆ ತಗಲಿ ಮಣ್ಣಿನಲ್ಲಿ ಅದು ಹೊರಳಾಡಿತು. ಸೂರ್ಯೋದಯವಾಗುವವರೆಗೆ ಅದು ಜ್ಞಾನ ತಪ್ಪಿಬಿದ್ದಿತು. ಆಗ ಅದು ಚೇತರಿಸಿಕೊಂಡು ಎದ್ದು ಮುಹ್ರ ಎಂಬ ಮಹೌಕ್ತಿಕವನ್ನು ಕೆಳಗೆ ಉಗುಳಿ ಮೆಲ್ಲಗೆ ಮೈಯನ್ನು ಎಳೆದುಕೊಂಡು ತನ್ನ ಗುಹೆಗೆ ಹೋಯಿತು. ಹತೀಮನು ಆ ರತ್ನವನ್ನು ತೆಗೆದುಕೊಳ್ಳಲು ಜಾಗ್ರತೆಯಿಂದ ಓಡಿದನು. ಆದರೆ ಅದರ ಪ್ರಕಾಶದಿಂದ ಅದು ಬೆಂಕಿಯೇ ಆಗಿರಬೇಕೆಂದು ಯೋಚಿಸಿ ಅದನ್ನು ಮುಟ್ಟುವುದಕ್ಕೆ ಅನುಮಾನಪಟ್ಟನು. ಆ ಮುಹ್ರಾರತ್ನವನ್ನು ನೋಡುತಾ ಸ್ವಲ್ಪಹೊತ್ತು ನಿಂತುಕೊಂಡನು. ಕೊನೆಗೆ ತನ್ನ ರುಮಾಲಿನಲ್ಲಿ ಒಂದು (ಅಂತನ್ನು) ಹರಿದು ಪರೀಕ್ಷಿಸುವುದಕ್ಕಾಗಿ ಪ್ರಕಾಶಮಾನವಾದ ಆ ರತ್ನದ ಮೇಲೆ ಹಾಕಿದನು. ಆ ಬಟ್ಟೆ ಸುಡಲಿಲ್ಲ. ಅದನ್ನು ಕಂಡು ಆ ರತ್ನವನ್ನು ತನ್ನ ಕೈಗೆ ತೆಗೆದುಕೊಳ್ಳಲು ಧೈರ್ಯಮಾಡಿ ಜಾಗರೂಕತೆಯಿಂದ ತನ್ನ ರುಮಾಲಿನ ಮಡಿಕೆಯಲ್ಲಿ ಸುತ್ತುಕೊಂಡುಬಿಟ್ಟನು.

ಹತೀಮನು ಮುಹ್ರರತ್ನವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ ಕ್ಷಣದಲ್ಲಿಯೇ ಒಂದು ಆಶ್ಚರ್ಯಕರವಾದ ಸಂಗತಿ ನಡೆಯಿತು. ಆ ಮರಳಕಾಡಿನಲ್ಲಿದ್ದ ಶಖೆಯು ಹೋಗಿಬಿಟ್ಟಿತು. ಸುತ್ತಲೂ ಇದ್ದದ್ದೆಲ್ಲಾ ಹಸರಾಗಿ ಕಾಣಿಸಿತು. ಈ ಮುಹ್ರ ರತ್ನದಲ್ಲಿ ಸಾವಿರದ ಒಂದು ಗುಣಗಳಿವೆ. ಅದರಲ್ಲಿ ಕೆಲವನ್ನು ಮಾತ್ರ ಈ ಕೆಳಗೆ ಸೂಚಿಸಿದೆ.

(೧) ಆ ರತ್ನವನ್ನು ಸ್ವಾಧೀನದಲ್ಲಿರಿಸಿಕೊಂಡಿರತಕ್ಕವನು ಎಂದಿಗೂ (ನೀರಿನಲ್ಲಿ) ಮುಳುಗಿ ಹೋಗುವುದಿಲ್ಲ.

(೨) ಬೆಂಕಿಯಿಂದ ಅಂಥಹವನಿಗೆ ಯಾವ ಕೇಡೂ ತಟ್ಟುವುದಿಲ್ಲ.

(೩) ಈ ರತ್ನದಲ್ಲಿ ಹುಟ್ಟುಗುಣವಾಗಿರುವುದು ಇನ್ನೊಂದೇನೆಂದರೆ, ಕುರುಡರಿಗೆ ಕಣ್ಣು ಬರುವುದು.

(೪) ಹಾವು ಅಥವಾ ಇತರ ವಿಷಮಯವಾದ ಜಂತುಗಳು ಕಡಿದರೆ (ಈ ರತ್ನ) ವಾಸಿಮಾಡುವುದು.

(೫) ಯುದ್ಧಕಾಲದಲ್ಲಿ ಇದನ್ನು ತನ್ನ ಸ್ವಾಧೀನದಲ್ಲಿರಿಸಿಕೊಂಡಿರತಕ್ಕವನು ಜೈಶೀಲನಾಗುವನು.

(೬) ಅಂಥವನನ್ನು ಮಿತ್ರರೂ ಶತ್ರುಗಳೂ ಎಲ್ಲರೂ ಪ್ರೀತಿಸುವರು.

(೭) ಎಲ್ಲಾ ಚತುಷ್ಪಾದ ಜಂತುಗಳೂ ರಕ್ಕೆಯುಳ್ಳ ಜಂತುಗಳೂ ಅಂಥವನ ಅಪ್ಪಣೆಗೆ ವಿಧೇಯವಾಗಿರುವವು.

(೮) ಅಂಥವನು ವಿವೇಕದಲ್ಲಿ (ಎಲ್ಲರನ್ನೂ) ಮೀರಿಸುವನು.

(೯) ಅವನಿಗೆ ಅಪರಿಮಿತವಾದ ಐಶ್ವರ್ಯವಿರುವುದು.

ಹೀಗೆ ಅದರ ಗುಣಗಳೆಲ್ಲವನ್ನೂ ವಿವರಿಸುವುದು (ವಾಚಕರಿಗೆ) ಆಯಾಸವನ್ನು ಹುಟ್ಟಿಸುವುದು.

೫ನೆಯ ಅಧ್ಯಾಯ

ಕಡೆಗೆ ಹತೀಮನು ಮುಹ್ರವನ್ನು ತೆಗೆದುಕೊಂಡು ದಿನಕ್ರಮೇಣ ಬಂದು ಆ ಸಿಪಾಯಿ ಇದ್ದ ಸ್ಥಳವನ್ನು ತಲಪಿ, ಅವನಿಗೆ ಸಲಾಂಮಾಡಿ ಆ ರತ್ನವನ್ನು ಅವನ ಕೈಗೆ ಕೊಟ್ಟು ಈಗ ಹೋಗು ಆ ಮಂತ್ರವಾದಿಗೆ ಇದನ್ನು ಕೊಡು ಎಂದನು. ಆ ಯೌವನಸ್ಥನು ಹತೀಮನಿಗೆ ಅಡ್ಡ ಬಿದ್ದನು. ಹತೀಮನು ಅವನನ್ನು ಎತ್ತಿ ಕೂರಿಸಿ ಕೊಂಡು, ತಾನು ಮಾಡಿದ ದೇಶಾಟನೆಯಲ್ಲಿ ನಡೆದದ್ದನ್ನೆಲ್ಲಾ ಹೇಳಿ ಅವನಿಗೆ ಸರ್ಪ ರಾಜ್ಯದ ವಿಚಾರವನ್ನು ವಿವರಿಸಿದನು. ಈ ಇಬ್ಬರು ಸ್ನೇಹಿತರೂ ಒಟ್ಟಿಗೆ ಮಂತ್ರ ವಾದಿಯ ರಾಜಧಾನಿಗೆ ಹೋದರು. ಆ ತರುಣನಾಗಿದ್ದ ಸಿಪಾಯಿಯು ದೊರೆಯನ್ನು ಕಂಡು ಮುಹ್ರಾವನ್ನು ಅವನಿಗೆ ಒಪ್ಪಿಸಿ, ಅದನ್ನು ಪಡೆಯಲು ತಾನು ಸಾವಿರಾರು ಕಷ್ಟಗಳನ್ನು ಅನುಭವಿಸಿದೆ, ಲೆಕ್ಕವಿಲ್ಲದಷ್ಟು ಅಪಾಯಗಳಿಗೆ ತಾನು ಸಿಕ್ಕಿಕೊಂಡಿದ್ದೆ, ಎಂದು ಅರಿಕೆ ಮಾಡಿದನು. ಅದಕ್ಕೆ ಆ ಮಂತ್ರವಾದಿಯು—ಅದನ್ನು ನಾನು ಜಾಗ್ರತೆಯಾಗಿ ಪರೀಕ್ಷಿಸುತೇನೆ, ಎಂದನು. ಅದಕ್ಕೆ ಆ ತರುಣನು—ಅಗತ್ಯವಾಗಿ ಆಗಲಿ ಎಂದನು. ಅದರಂತೆ ಮಂತ್ರವಾದಿಯು ಕೆಂಗಾಡನ್ನೂ ಸರ್ಪಗಳನ್ನೂ ಕುರಿತು ವಿಶೇಷವಾಗಿ ವಿಚಾರಿಸಿದನು. ಅದೆಲ್ಲಕ್ಕೂ ಆ ಸಿಪಾಯಿಯು ತೃಪ್ತಿಕರವಾದ ಉತ್ತರವನ್ನೇ ಹೇಳಿದನು.

ಆ ಮಂತ್ರವಾದಿಯು ತನಗೆ ದೊರೆತ ಭಂಡಾರಕ್ಕೆ ವಿಶೇಷವಾಗಿ ಆನಂದಭರಿತ ನಾಗಿ ಆ ತರುಣನಿಗೆ ಹೇಳಿದ್ದೇನೆಂದರೆ, "ಇನ್ನು ಒಂದೇ ಒಂದು ಕಾರ್ಯ ನೆರವೇರ ಬೇಕಾಗಿದೆ, ಅದು ಯಾವುದೆಂದರೆ, ಕೊಪ್ಪರಿಗೆಯಲ್ಲಿ ಎಂಣೆ ತುಂಬಿ ಅದು ಕುದಿಯುತಾ ಇರುವಾಗ ಅದರೊಳಗೆ ಬರೀಮೈಯಲ್ಲಿ ನೀನು ಮುಳುಗಬೇಕು ; ಹೀಗೆ ಮಾಡುವುದಕ್ಕೆ ಸಿದ್ಧನಾಗಿದ್ದೀಯೋ ?" ಇದಕ್ಕೆ ಆ ತರುಣನು ಆಗಲಿ ಎಂದು ಒಪ್ಪಿಕೊಂಡನು. ಆಗ ಮಂತ್ರವಾದಿಯು ದೊಡ್ಡ ಕಬ್ಬಿಣದ ಕೊಪ್ಪರಿಗೆಯನ್ನು ಕುಲುಮೆಯ ಮೇಲೆ ಇರಿಸಿ ಅದಕ್ಕೆ ಎಂಣೆ ತುಂಬಿಸಿ ಅದಕ್ಕೆ ಬಲವಾಗಿ ಬೆಂಕಿಹಾಕಿಸಿ ಆ ಎಂಣೆ ಕುದಿಯುವ ಹಾಗೆ ಕಾಸಬೇಕೆಂದು ಅಪ್ಪಣೇ ಮಾಡಿದನು. ಅವನ ಚಾರರು ಅದರಂತೆ ಒಡನೆಯೇ ನಡಿಸಿದರು, ಮತ್ತು ಆ ಎಂಣೆಯೊಳಕ್ಕೆ ಒಂದು ಕಲ್ಲನ್ನು ಹಾಕಿ ಅದು ಕೂಡ ಆ ಕ್ಷಣದಲ್ಲಿಯೇ ಕರಗಿ ಹೋಗಬೇಕು, ಅಷ್ಟರಮಟ್ಟಿಗೆ ಅದನ್ನು ಕಾಸಿದರು. ಈ ಮಧ್ಯೆ ಆ ಸಿಪಾಯಿಯು ಹತೀಮನ ಬಳಿಗೆ ಹೋಗಿ ಹತೀಮನ ಸಂಗಡ—ಅಯ್ಯಾ ನನ್ನನ್ನು ಕಾಪಾಡತಕ್ಕ ಪ್ರಭುವೆ, ಆ ದೊರೆಯು ಹೇಳುವ ಪ್ರಕಾರ ಇನ್ನೊಂದು ಅತ್ಯಂತ ಕಠಿನವಾದ ಕಾರ್ಯವನ್ನು ನಾನು ಇನ್ನೂ ಮಾಡ ಬೇಕಾಗಿದೆ. ಮರಳುವ ಎಂಣೆ ತುಂಬಿರತಕ್ಕ ಕೊಪ್ಪರಿಗೆಗೆ ನಾನು ಬೀಳಬೇಕೆಂತಲೂ, ಸ್ವಲ್ಪವೂ ಬಾಧೆಯಾಗದೆ ನಾನು ಈಚೆಗೆ ಬಂದರೆ ಅವನ ಮಗಳ ಪಾಣಿಗ್ರಹಣ ಮಾಡುವ ಘನತೆ ನನಗೆ ಪ್ರಾಪ್ತವಾಗುವುದೆಂತಲೂ ಅವನು ಹೇಳಿದಾನೆ. ಮರ್ತ್ಯರಾದ

ಮನುಷ್ಯರ ಕೈಯಿಂದ ಇಂಥಾ ಕೆಲಸ ಜರಗಿ ಪ್ರಾಣ ಉಳಿಸಿಕೊಂಡು ಬರಬಹುದೆ? ಎಂದು ಕೇಳಿದನು ಅದಕ್ಕೆ

ಹತೀಮ—ಧೈರ್ಯಗೆಡಬೇಡ. ಇದರಲ್ಲಿಯೂ ನೀನು ಜಯಶೀಲನಾಗುತೀಯೆ ಎಂದು ನಾನು ಮಾತಕೊಡಬಲ್ಲೆ. (ಹಾಗೆ ಹೇಳಿ ಕರಡಿಕೊಟ್ಟ ಯಂತ್ರವನ್ನು ತೆಗೆದು ಆ ಪೂರ್ವವಯಸ್ಸಿನ ಸಿಪಾಯಿಗೆ ಕೊಟ್ಟು) ಈ ಮುಹ್ರಾವನ್ನು ನಿನ್ನ ಬಾಯಿ ಯಲ್ಲಿರಿಸಿಕೊ; ಆಗ ನೀನು ಲೇಶವೂ ಭಯವೂ ಸಂದೇಹವೂ ಇಲ್ಲದೆ ಆ ಕುದಿಯುವ ಎಂಣೆಗೆ ಬೀಳಬಹುದು.

ಆ ತರುಣನು ಇನ್ನೂ ನಂಬಿಕೆ ಇಲ್ಲದೆ ಆ ಕೃತ್ಯವನ್ನು ನೆನೆಯಿಸಿಕೊಳ್ಳುತಾ ನಡಗಿಹೋದನು. ಆದರೆ ಹತೀಮನು ಆ ಹುಡುಗನಿಗೆ ಯಾವ ಹಿಂಸೆಯೂ ಆಗುವುದಿಲ್ಲ ಎಂದು ಪ್ರಮಾಣ ಮಾಡಿ ಹೇಳಿದನು. ಆ ಸಿಪಾಯಿಯು ಕಡೆಗೆ ಹೇಳಿದ ಬುದ್ಧಿವಾದದ ಪ್ರಕಾರ ಆ ಯಂತ್ರವನ್ನು ತೆಗೆದುಕೊಂಡು ಕೊಪ್ಪರಿಗೆ ಇರಿಸಿದ್ದ ಕಡೆಗೆ ಮಾಡಿದ್ದ ಮೆಟ್ಟಲುಗಳನ್ನು ಹತ್ತಿ ಕಾಯುತಾ ಸಮುದ್ರದಲ್ಲಿ ಏಳುವ ಹಾಗೆ ನೊರೆ ಯೇಳುತಾ ಇರುವ ಆ ಕುದಿಯುವ ಎಂಣೆಯನ್ನು ನೋಡಿದನು. ಸ್ಥೈರ್ಯ ಕೆಟ್ಟಿತು. ಆಗ ಹತೀಮನು, ಹೀಗೆ ನಡುಗತಕ್ಕವನು ನೀನು ಪುರುಷನೆ. ನಿನ್ನಲ್ಲಿ ಪ್ರಜ್ವಲಿಸುತಾ ಇರುವ ಪ್ರೀತಿಗೆ ನಿನ್ನ ಪ್ರಾಣಕ್ಕಾಗಿ ಪಡುವ ಭಯವು ಸಮಂಜಸವಾಗಿದೆಯೆ?" ಎಂದು ಗಟ್ಟಿಯಾಗಿ ಕೂಗಿದನು. ಈ ಪೂರ್ವ ವಯಸ್ಸಿನ ಸಿಪಾಯಿಯು ಹತೀಮನಿಂದ (ಹೊರಟ ಈ ಮಾತನ್ನು) ಕೇಳಿ, ಮುಂದಕ್ಕೆ ಯಾವ ಸಂಶಯವೂ ಇಲ್ಲದೆ ಕಂಣನ್ನು ಮುಚ್ಚಿಕೊಂಡು ಆ ಕೊಪ್ಪರಿಗೆಯೊಳಕ್ಕೆ ಬಿದ್ದನು. ಅವನ ಆಶ್ಚರ್ಯಕ್ಕೆ, ಎಂಣೆ ಎಷ್ಟರಮಟ್ಟಿಗೆ ಕಾಯುವುದೋ ಅಷ್ಟರ ಮಟ್ಟಿಗೆ ಕಾದು (ಕುದಿಯುತಾ ಇದ್ದ) ಆ ಎಂಣೆಯು ಅವನಿಗೆ ತಂಣೀರಿನ ಹಾಗಿತ್ತು. ಅವನು ನಿಧಾನವಾಗಿ ಕೊಪ್ಪರಿಗೆಯೊಳಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ನಡೆಯುತಾ ಆ ಮಂತ್ರವಾದಿಯ ಎದುರಿಗೆ ಆ ಎಂಣೆಯನ್ನು (ಬೊಗಸೆ)ಯಲ್ಲಿ ತೆಗೆದುಕೊಂಡು ತನ್ನ ಮೈಮೇಲೆ ಚಿಮುಕಿಸಿ ಕೊಂಡನು. ಸ್ವಲ್ಪ ಹೊತ್ತಾದ ಮೇಲೆ ಆ ಸಿಪಾಯಿಯು ಆ ಮಂತ್ರವಾದಿಯನ್ನು ಕುರಿತು—ಅತ್ಯಂತ ಪರಾಕ್ರಮಶಾಲಿಯಾದ ದೊರೆಯೆ, ಈಗ ಏನು ಹೇಳುತೀಯೆ? ನಾನು ಹೊರಕ್ಕೆ ಬರಲೆ ಅಥವಾ ಇನ್ನೂ ಇಲ್ಲಿಯೇ ಕೆಲವು ಕಾಲ ಇರಲೆ? ಎಂದು ಕೇಳಿದನು. ಅವಜೀವಂತನಾಗಿದಾನೆಂದು ತಿಳಿದು ಕೂಡಲೆ ಆ ದೊರೆಯು ಏನೋ ಯೋಚನೆ ಮಾಡುತಾ ತಲೆಯನ್ನು ಬಗ್ಗಿಸಿಕೊಂಡು ನಡುಕ ಬಂದು—ಎಲೆ, ಹುಡುಗ, ನನಗೆ ತೃಪ್ತಿಯಾಯಿತು, ಜಾಗ್ರತೆಯಿಂದ ಈಚೆಗೆ ಬಾ, ಎಂದನು. ಈ ಮೂರನೇ ಸಾಹಸವನ್ನು ಆ ಸಿಪಾಯಿ ಮಾಡಿದನೋ ಇಲ್ಲವೊ, ಆ ಮಂತ್ರವಾದಿಯು ತನ್ನ ಮಾತಿನ ಪ್ರಕಾರ ನಡೆಯಲು ಇಷ್ಟವಿಲ್ಲದೆ ಅವನನ್ನು ಮಂತ್ರದಿಂದ ಕಟ್ಟುವುದಕ್ಕೆ ಯತ್ನಮಾಡಿದನು. ಆಗ ಹತೀಮನು ಸಿಪಾಯಿಯ ಸಹಾಯಕ್ಕೆ ಬಂದು ಆ ಮಂತ್ರವಾದಿಗಳ ದೊರೆಗೆ ಸೂಚನೆ ಹೇಳಿದ್ದೇನೆಂದರೆ "ಈ ತರುಣನ ಮೇಲೆ ನಿನ್ನ

ತಂತ್ರವೇನೂ ನಡೆಯುವುದಿಲ್ಲ. ಅವನಲ್ಲಿ ಒಂದು ಯಂತ್ರವಿದೆ. ಅದು ಕೆಂಪುಹಾವಿನ ಮುಹ್ರಿಗಿಂತಲೂ ಬಲವಾದ್ದು. ಆದ್ದರಿಂದ ನೀನು ಅವನಿಗೆ ಮಾಡಿರುವ ವಾಗ್ದಾನದಂತೆ ನಡೆಯಲೇಬೇಕು" ಎಂದು ನುಡಿದನು. ಈ ಮಂತ್ರವಾದಿಯು ತನ್ನ ವಿದ್ಯೆದಲ್ಲಿ ಮೀರಿಸಲ್ಪಟ್ಟನಾದ ಕಾರಣ ಅವನು ಆ ಸಿಪಾಯಿಯನ್ನು ಸ್ನೇಹದ ಗುರುತಿಗಾಗಿ ತಬ್ಬಿಕೊಂಡು, ತರುವಾಯ ಅಗತ್ಯವಾದ ಎಲ್ಲವನ್ನೂ ಸಿದ್ಧಮಾಡಿಕೊಂಡು ತನ್ನ ಮಗಳನ್ನು ಅವನಿಗೆ ಕೊಟ್ಟು, ಮದುವೆಮಾಡಿ ಅತ್ಯಂತ ವಿನಯದಿಂದ ಅವನೊಡನೆ ಹೇಳಿದ್ದೇನೆಂದರೆ—ಅಯ್ಯಾ ನನ್ನ ಐಶ್ವರ್ಯವೆಲ್ಲಾ ನಿನ್ನದು ಎಂದು ತಿಳಿ, ಇದನ್ನೆಲ್ಲಾ ಕೊಡುವುದಕ್ಕೆ ನನಗೆ ಇನ್ನು ಯಾವ ಗಂಡು ಸಂತತಿಯೂ ಇಲ್ಲ" ಎಂದನು.

ಹತೀಮನು ಅವರಿಬ್ಬರಿಗೂ ವಿವಾಹ ಜೆಳೆದದ್ದನ್ನು ಕಂಡು, ತರುವಾಯ ಆ ಸುಖಿಯಾದ ವರನ ಅನುಮತಿಯನ್ನು ಹೊಂದಿ ತನ್ನ ಮುಂದಿನ ಪ್ರಯಾಣದ ಮೇಲೆ ಹೊರಟನು. ಕ್ರಮೇಣ ಕೆಲವು ದಿವಸದಲ್ಲಿ ಅವನು ಅಲ್ಕಾಪರ್ವತದ ಕಿಬ್ಬಿಗೆ ಬಂದನು. ಅದು ಬಹಳ ಎತ್ತರವಾಗಿತ್ತು. ಯಾವ ಪಕ್ಷಿಗೂ ಅದರ ಕುಂಭಿಯವರೆಗೂ ಹಾರಿ ಹೋಗುವಷ್ಟು ಬಲವಾದ ರೆಕ್ಕೆ ಇರಲಿಲ್ಲ ಹತೀಮನು ಅಲ್ಲಿ ಸ್ವಲ್ಪ ಹೊತ್ತು ಮುಂದೆ ಯಾವ ದಾರಿಯನ್ನು ಹಿಡಿಯಬೇಕೆಂದು ಯೋಚಿಸುತಾ ನಿಂತನು. ಮತ್ತು ತನ್ನ ಮನಸ್ಸಿನಲ್ಲಿ ಈ "ವಿಚಿತ್ರವಾದ ಸ್ಥಳವನ್ನು ಕುರಿತು ನಾನು ಯಾರನ್ನು ಕೇಳಲಿ ? ನನಗೆ ಮಾರ್ಗದರ್ಶಿ ಯಾರು ? " ಎಂದುಕೊಂಡನು. ಈ ಯೋಚನೆಯು ಇವನ ಮನಸ್ಸಿನಲ್ಲಿ ಹೊಳೆಯುತಿರುವಾಗ ಸುಂದರಿಯರಾದ ಖಚರಿಯರ (ಪರಿಗಳ) ಗುಂಪು ಆ ಪರ್ವತದ ಮೇಲುಗಡೆ ಹಾರಿಹೋಯಿತು. ತಡಮಾಡದೆ ಇವನೂ ಅವರ ಹಿಂದೆಯೇ ಹೋದನು. ಬೆಟ್ಟದ ಮೇಲುಗಡೆ ಸ್ವಲ್ಪ ದೂರ ಅವರನ್ನು ನೋಡುತಾ ಇರುವಾಗ ಅವರು ಥಟ್ಟನೆ ಮಾಯವಾದರು. ಆ ನಿರ್ಮಾನುಷ್ಯ ಪ್ರದೇಶದಲ್ಲಿ ಇವನೊಬ್ಬನೇ ನಿಂತನು. ಆಶ್ಚರ್ಯದಿಂದ ಹತೀಮನು ಸುತ್ತಲೂ ನೋಡಿದನು. ಆ ಪರ್ವತದ ಪಕ್ಕದಲ್ಲಿ ಒಂದು ಗುಹೆ ಕಾಣಿಸಿತು. ಅದು ಸಪ್ಪಿಂಡವಾದ ಬಿಳೀಶಿಲೆಯಿಂದ ಮಾಡಿದ್ದಾಗಿತ್ತು. ಅದರ ಬಾಗಿಲು ಗಾಜಿನ ಹಾಗೆ ನುಣ್ಣಗಿರುವ ಬಿಳೀಶಿಲೆಯ ಮಾರ್ಗವಾಗಿ ಕಡಿದಾಗಿ ಭೂಮಿಯೊಳಕ್ಕೆ ಇಳಿಯುವ ಹಾಗಿತ್ತು. ಹತೀಮನು ಅದರೊಳಕ್ಕೆ ಹೋಗೋಣವೇ ಬೇಡವೇ ಎಂದು ಯೋಚನೆಮಾಡಿದನು. ಹೊರಕ್ಕೆ ಬರುವುದು ಅಸಾಧ್ಯವಾಗಿತ್ತು. ಯಾಕೆಂದರೆ ಅಷ್ಟು ಕಡಿದಾಗಿಯೂ ಜಾರಿಕೆಯಾಗಿಯೂ ಇರುವ ದಾರಿಯಲ್ಲಿ ಮನುಷ್ಯರ ಪಾದ ಯಾವುದೂ ನಿಲ್ಲಲಾರದು.

ಮುಂದೆ ಇನ್ನೂ ಆಲೋಚಿಸಿ ಹತೀಮನು ಅದರೊಳಕ್ಕೆ ತಾನು ಹೋಗುವುದೇ ಖಂಡಿತವೆಂದು ನಿಷ್ಕರ್ಷೆ ಮಾಡಿಕೊಂಡನು. ಆ ನುಣುಪಾದ ಕಲ್ಲಿನ ಮೇಲೆ ಮಲಗಿಕೊಂಡು ಕೈಬಿಟ್ಟನು. ಕೆಳಕ್ಕೆ ಜಾಗ್ರತೆಯಾಗಿ ಜಾರುವುದಕ್ಕೆ ಮೊದಲಾಯಿತು. ಆ ದಿವಸವೆಲ್ಲಾ ಜಾರುತ್ತಲೇ ಇದ್ದನು. ಆ ದಿನ ಸಾಯಂಕಾಲಕ್ಕೆ ಕೆಳಗೆ ಸಮನಾದ ನೆಲ ಸಿಕ್ಕಿದಂತೆ ತೋರಿತು. ಅಲ್ಲಿ ಕಂಣಬಿಟ್ಟು ನೋಡಲಾಗಿ ಕಂಣಿಗೆ ಆನಂದ

ವಾಗುವಂಥಾ ವಿಸ್ತಾರವಾದ ಬೈಲು ಸುತ್ತಲೂ ಕಾಣಿಸಿತು. ಮೇಲಕ್ಕೆ ಎದ್ದು ಬೆಳಗಾಗುವವರೆಗೆ ತಾನು ಮಲಗಿಕೊಳ್ಳಲು ಒಂದು ಸ್ಥಳವನ್ನು ಹುಡುಕಿಕೊಂಡ. ತರುವಾಯ ಆ ಗುಹೆಯೊಳಕ್ಕೆ ಖಚರಿಯರೂ ಇಳಿದರೆಂದು ಊಹಿಸಲು ಕಾರಣ ವಿದ್ದದರಿಂದ ಅವರನ್ನು ಹುಡುಕಿಕೊಂಡು ಹೋಗಬೇಕೆಂದು ಗೊತ್ತುಮಾಡಿ ಕೊಂಡನು. ರಾತ್ರಿಯ ಕತ್ತಲೆಯು ಹೋದಮೇಲೆ ಹತೀಮನು ಆ ಹೊಸದಾದ ಪ್ರಾಂತದಲ್ಲಿ ಓಡಿಯಾಡಲು ಆರಂಭ ಮಾಡಿದನು. ಸ್ವಲ್ಪ ದೂರ ಹೋದಮೇಲೆ ಡಂಭವಾದ ಒಂದು ಕಟ್ಟಡ ಕಾಣಿಸಿತು. ಅದು ಪರಿಗಳ (ಖಚರರ) ಅರಮನೆ ಯಾಗಿತ್ತು. ಹತೀಮನು ಅದರ ಸಮೀಪಕ್ಕೆ ಹೋದನು. ಪರಿಗಳು ಇದನ್ನು ನೋಡಿ

ಖಚರರು—ಅಯ್ಯಾ ಆದಿಪುರುಷನ ಸಂತತಿಯವನೆ, ನೀನು ಬಲ್ಲೆಯ, ಇದು ನಮ್ಮ ಪ್ರದೇಶ, ನಿಮ್ಮದಲ್ಲ, ನೀನು ಇಲ್ಲಿಗೆ ಹೇಗೆ ಬಂದೆ? ನಿನ್ನನ್ನು ಕರೆದು ತಂದವರು ಯಾರು?

ಹತೀಮ—ಯಾವಾಗಲೂ ನನ್ನನ್ನು ಯಾರು ಕರೆದು ತರುತಿದ್ದರೋ ಅವರೇ ನನ್ನನ್ನು ಇಲ್ಲಿಗೆ ಕರೆತಂದರು.

ಖಚರರು—ಈ ಭೂಗರ್ಭದ ವಾಸಸ್ಥಳಕ್ಕೆ ನೀನು ದಾರಿಯನ್ನು ಹೇಗೆ ಕಂಡು ಕೊಂಡೆ?

ಹತೀಮ—ನೀವು ಈ ಪರ್ವತ ಹೋದ ಹಾಗೆ ಉದ್ದಕ್ಕೂ ಹೋದ್ದನ್ನು ಕಂಡೆ. ನೀವು ನನ್ನ ದೃಷ್ಟಿಗೆ ಕಾಣಿಸದೇ ಹೋಗುವವರೆಗೂ ನೋಡಿದೆ. ಸುತ್ತಲೂ ಹುಡುಕಲಾಗಿ ಈ ಗುಹೆಗೆ ದಾರಿ ಕಾಣಿಸಿತು. ನುಣ್ಣಗೆ ಕೆಳಗಡೆಗೆ ಇಳಿಜಾರಾಗಿರುವ ಕಲ್ಲಿನ ಮೇಲೆ ಮಲಗಿಕೊಂಡೆ, ನಾನು ಇಳಿದು ಬಂದದ್ದು ಜಾಗ್ರತೆಯಾಯಿತು. ನಾನು ಈಗ ನಿಮ್ಮನ್ನು ಕಂಡೆನಷ್ಟೆ. ಈ ಪ್ರದೇಶಕ್ಕೆ ಹೆಸರೇನು? ಇದರ ದೊರೆ ಯಾರು?

ಖಚರರು—ಇದು ಅಲ್ಬ್ಯಾಪರ್ವತ; ಅಲ್‌ಕಾನ್‌ಪರಿಯು ಇದಕ್ಕೆ ದೊರೆ. ನಾವು ಈ ಸ್ವರ್ಗವನ್ನು ನೋಡಿಕೊಳ್ಳತಕ್ಕವರು. ಇಲ್ಲಿ ವಸಂತಋತುವಿನಲ್ಲಿ ನಮ್ಮ ಖಚರರ ರಾಣಿಯು ವಾಸವಾಗಿರುತಾಳೆ. ಈ ವನದ ಆನಂದವನ್ನು ಅನುಭವಿಸಲು ನಾಳೆ ಅವಳು ಬರುವುದನ್ನು ನಾವು ನಿರೀಕ್ಷಿಸುತಿದೇವೆ. ಅಲ್ಲಿನವರೆಗೂ ನೀನು ಇಲ್ಲಿರಲು ನಾವು ಅಪ್ಪಣೆ ಕೊಡತಕ್ಕದ್ದು ಅಸಾಧ್ಯ. ಹಾಗಲ್ಲದಿದ್ದರೆ ನಮಗೂ ನಿನಗೂ ಮರಣವೇ ಪ್ರಾಪ್ತಿ. ನೀನು ಇಲ್ಲಿರು ವುದರಿಂದ ನಮ್ಮ ಕಟ್ಟಿಗೆ ನೀನು ಒಳಪಡಬೇಕು. ನಿನ್ನ ಪ್ರಾಣವನ್ನು ನಾವು ಉಳಿಸುತೇವೆ. ನಿನ್ನ ಮೇಲೆ ನಮಗೇನೂ ದ್ವೇಷವಿಲ್ಲ.

ಹತೀಮ—ಅವಿತುಕೊಳ್ಳುವುದಕ್ಕೆ ನಾನು ಯಾವ ಕಡೆಗೆ ಓಡಿಹೋಗಲಿ; ತಪ್ಪಿಸಿ ಕೊಳ್ಳುವುದಕ್ಕೆ ನಿಜವಾಗಿ ಮಾರ್ಗವೇ ಇಲ್ಲ. ನಿಮ್ಮ ರಾಣಿಯ ಭೇಟಿ

ಮಾಡಿಕೊಳ್ಳುವುದಕ್ಕಾಗಿ ಪ್ರಯಾಣದ ಕಷ್ಟವನ್ನೆಲ್ಲಾ ಅನುಭವಿಸಿದೆ. ಈ ಸಮಯಕ್ಕೆ ಸರಿಯಾಗಿ ಆಕೆ ಈ ವನವನ್ನು ನೋಡಲು ಬರುತಾಳೆ. ಬೇಕಾದ್ದಾಗಲಿ ನಾನು ಇಲ್ಲಿರುತೇನೆ.

ಖಚರರು—ನಮ್ಮ ರಾಣಿಯ ಹತ್ತಿರ ನಿನಗೇನು ಕೆಲಸ? ನೀನು ಬಡವ ಆಕೆ ಪರಿರಾಜ್ಯಕ್ಕೆ ಪ್ರಭು.

ಹಶೀಮ—ಮನುಷ್ಯವರ್ಗದಲ್ಲಿ ಪರಿಗಳು ಪ್ರೇಮವನ್ನು ತೋರಿಸಿದ್ದನ್ನೂ ಮನುಷ್ಯರು ಪರಿಗಳನ್ನು ಕಂಡು ಮೋಹಿಸಿದ್ದನ್ನೂ ನೀವು ಕೇಳಿಲ್ಲವೆ?

ಖಚರರು—ನಮ್ಮೆದುರಿಗೆ ಇಂಥಾ ಮಾತನ್ನು ಮಾತನಾಡುತೀಯೆ; ನಿಜವಾಗಿ ನಿನಗೆ ಈ ಜನ್ಮ ಸಾಕು ಎಂದು ತೋರುವುದೊ?

ಹಶೀಮ—ನಾನು ಇಲ್ಲಿಗೆ ಬರಲು ಧೈರ್ಯಮಾಡಿದ ಸಂಗತಿಯಿಂದಲೇ ಈ ಪ್ರಾಣವನ್ನು ನಾನು ಎಷ್ಟು ಅಲ್ಪವಾಗಿ ಕಾಣುತೇನೆಂಬುವುದನ್ನು ನೀವೇ ವ್ಯವಸ್ಥೆ ಮಾಡಿಕೊಳ್ಳಬಹುದು.

ಈ ಮಾತನ್ನು ಕೇಳಿ ಪರಿಗಳೆಲ್ಲಾ ಹಶೀಮನ ಮೇಲೆ ನುಗ್ಗಿ ಅವನನ್ನು ಹೊಡೆಯಲು ಆರಂಭಿಸಿದರು. ಆದರೆ ಅವನು ದೃಢವಾಗಿ ನಿಂತುಕೊಂಡನು; ಬೀಳುವ ಏಟನ್ನು ತಪ್ಪಿಸಿಕೊಳ್ಳಲೂ ಇಲ್ಲ, ಏಟಿಗೆ ಏಟನ್ನು ಕೊಡಲೂ ಇಲ್ಲ. ಅವನನ್ನು ಹೊಡೆಯುತಾ ಇದ್ದವರು ಆಗ ಕೈ ನಿಲ್ಲಿಸಿ ತಮ್ಮ ಮನಸ್ಸಿನಲ್ಲಿ ಜಗಳವನ್ನೂ ಕಾದಲೊಲ್ಲ ಓಡಿಯೂ ಹೋಗಬಲ್ಲನಲ್ಲ ಇವ ಎಂಥಾ ಮನುಷ್ಯ, ಎಂದು ಆಶ್ಚರ್ಯಪಟ್ಟರು. ಆದಕಾರಣ ಅವರು ಕನಿಕರದಿಂದ

ಖಚರರು—ಅಯ್ಯಾ ವಿಚಿತ್ರವಾದ ಯೌವನಶಾಲಿಯೆ, ಪಶ್ಚಾತ್ತಾಪದಿಂದ ನಿನಗೆ ಸೂಚಿಸುತೇವೆ, ನೀನು ಇಲ್ಲಿ ನಿಲ್ಲಬೇಡ. ನೀನು ವಾಸವಾಗಿರುವುದಕ್ಕೆ ಇದು ಯೋಗ್ಯವಾದ ಸ್ಥಳವಲ್ಲ. ನಾವು ಹೇಳುವ ಬುದ್ಧಿವಾದವನ್ನು ನೀನು ಅಲಕ್ಷ್ಯವಾಗಿ ಕಂಡರೆ, ಅದರಿಂದ ನಿನ್ನ ಪ್ರಾಣಕ್ಕೆ ಅಪಾಯ ಉಂಟು.

ಹಶೀಮ—ನಾನು ಮರಣಕ್ಕೆ ಭೀತಿಪಡುವುದಿಲ್ಲ. ನಿಮ್ಮ ರಾಜ್ಯಕ್ಕೆ ಬರುವುದಕ್ಕೆ ಮುಂಚೆ (ಪ್ರಾಣದ) ಹಂಬಲನ್ನೇ ಬಿಟ್ಟು ಕೈತೊಳೆದುಕೊಂಡು ಆ ಸೃಷ್ಟಿಕರ್ತನಲ್ಲಿ ನಂಬಿಕೆಯನ್ನಿಟ್ಟೆ.

ಅವನ ಧೈರ್ಯಕ್ಕೆ ಆ ಪರಿಗಳು ಸಂತೋಷಪಟ್ಟು ಹಶೀಮನನ್ನು ಕುರಿತು ಮಿತ್ರಭಾವದ ಧ್ವನಿಯಲ್ಲಿ ಅವನನ್ನು ಸಂಭೋಧಿಸಿ

ಖಚರರು—ಅಯ್ಯಾ ತರುಣನೆ, ವಾಗ್ದೋರಣೆಯುಳ್ಳವನೆ, ನಮ್ಮ ಸಂಗಡ ಬಾ, ರಹಸ್ಯವಾದ ಗಿಡದ ಸಾಲಿನಲ್ಲಿ ನಿನ್ನನ್ನು ಅವಿಸಿಟ್ಟು, ಅಲ್ಮಾಸ್ ಪರಿಯನ್ನು ನೋಡಬೇಕೆಂಬ ಕುತೂಹಲ ನಿನಗಿದ್ದರೆ, ದೂರದಲ್ಲಿ ಅವಳನ್ನು ನಿನಗೆ ತೋರಿಸುತೇವೆ.

ಹತೀಮನು ಇದಕ್ಕೆ ಒಪ್ಪಿದ. ಅವನನ್ನು ಆ ವನದಲ್ಲಿ ವಿಶೇಷವಾಗಿ ಜನ ಸಂಚಾರವಿಲ್ಲದ ಕಡೆಗೆ ಪರಿಗಳು ಕರೆದುಕೊಂಡು ಹೋದರು. ಅಲ್ಲಿ ಅವನಿಗೆ ಕ್ಷುತ್ತೃನಿವಾರಣೆಯಾಗಲು ಆಹಾರವನ್ನೂ ಹಂಣುಗಳನ್ನೂ ಕುಡಿಯುವುದಕ್ಕೆ ನೀರನ್ನೂ ತಂದುಕೊಟ್ಟರು. ಅವನ ಸಾಮೀಪ್ಯವೆಂಬ ಮಂತ್ರಶಕ್ತಿಯಿಂದ ಜಿತರಾಗಿ, ಅವನ ಸುತ್ತಲೂ ಸುತ್ತಿಕೊಂಡು ವಿಧವಿಧವಾದ ಮಾತುಗಳನ್ನಾಡಿದ ತರುವಾಯ

ಖಚರರು—ಧೈರ್ಯಶಾಲಿಯಾದ ತರುಣನೆ, ಇಲ್ಲಿಗೆ ನೀನು ಬರಲು ನಿನ್ನ ಉದ್ದೇಶ ವೇನು ?

ಹತೀಮ—ನಿಮ್ಮ ರಾಣಿಯಲ್ಲಿ ನನಗೆ ಇರುವ ಕೆಲಸವೇನೆಂದರೆ: ಚಿಕ್ಕವಯಸ್ಸಿನವ ನಾದ ನನ್ನ ಸ್ನೇಹಿತನೊಬ್ಬನನ್ನು ಈಕೆ ಒಂದಾನೊಂದು ಸಾರಿ ಭೇಟಿ ಮಾಡಿದ್ದಳು. ಏಳು ದಿವಸದೊಳಗಾಗಿ ತಾನು ಹಿಂದಿರುಗಿ ಬರುತೇನೆಂದು ಮಾತುಕೊಟ್ಟು ಅವನನ್ನು ಒಂದು ಮರದ ಬಳಿಯಲ್ಲಿ ಬಿಟ್ಟು (ಹೊರಟು ಹೋದಳು). ಆಕೆ ತನ್ನ ವಾಗ್ದಾನವನ್ನು ನೆರವೇರಿಸಿಯಾಳು ಎಂದು ನಿರೀಕ್ಷಿಸುತಾ ಆ ತರುಣನು ಈಗ ಏಳು ವರುಷಕ್ಕೆ ಮೇಲ್ಪಟ್ಟಕಾಲದಿಂದ ಕಾದಿದಾನೆ ಅವನ ಪ್ರಾಣವು ಅವನ ದೇಹವನ್ನು ಬಿಡುವ ಸಮಯವಾಗಿದೆ. ಮರಣವು ಅವನ ಕುತ್ತಿಗೆಯನ್ನು ಹಿಡಿದು ಕಿವಿಚುತಾ ಇದೆ. ಸ್ವಲ್ಪ ಹೊತ್ತಿಗೊಂದು ಸಾರಿ "ಬಾ, ಬಾ, ನಿನ್ನ ಸನ್ನಿಧಿ ಇಲ್ಲದಿರುವುದನ್ನು ನಾನು ಇನ್ನೂ ಹೆಚ್ಚಾಗಿ ಸಹಿಸಲಾರೆ" ಎಂದು ಅವನು ಗಟ್ಟಿಯಾಗಿ ಕೂಗಿಕೊಳ್ಳು ತ್ತಾನೆ. ಅವನ ಕಷ್ಟವಾದ ಸ್ಥಿತಿಯನ್ನು ನಾನು ಕಂಡೆ. ಅವನ ದುಃಖಕ್ಕೆ ಕಾರಣವೇನೆಂದು ನಿಷ್ಪ್ರಯೋಜನವಾಗಿ ನಾನು ಎರಡು ಸಾರಿ ಕೇಳಿದೆ. ಕೊನೆಗೆ ನಾನು ವಿಚಾರಿಸುವುದನ್ನು ಬಿಡುವುದಿಲ್ಲವೆಂದು ತಿಳಿದು ಅವನು ನಡೆದ ಸಂಗತಿ ಯನ್ನೆಲ್ಲಾ ಹೇಳಿದನು. ಅವನ ಕಥೆಯನ್ನು ಕೇಳಿ ನನ್ನ ಹೃದಯದಲ್ಲಿ ಕನಿಕರ ಹುಟ್ಟಿತು. ಅವನಿಗೆ ಆಪ್ಯಾಯನವನ್ನುಂಟುಮಾಡೋಣವೆಂದು ನಾನು ಈ ಕಡೆಗೆ ಪ್ರಯಾಣ ಮಾಡಿಬಂದೆ. ನಿಮ್ಮ ರಾಣಿಯು ಇದಕ್ಕೆ ಮುಂಚೆ ತನ್ನ ವಾಗ್ದಾನವನ್ನು ಮರೆತಿರಬಹುದಾದ ಸಂಭವ ಉಂಟಾದ್ದರಿಂದ ಅದನ್ನು ಅವಳಿಗೆ ಜ್ಞಾಪಿಸುವುದೇ ನನ್ನ ಉದ್ದೇಶ್ಯ.

ಖಚರರು ಈ ಮಾತನ್ನು ಕೇಳಿ ಹತೀಮನನ್ನು ಕುರಿತು ಹೇಳಿದ್ದೇನೆಂದರೆ:

ಖಚರರು—ಅಯ್ಯಾ ಉದಾರಿಯಾದ ಪುರುಷನೆ, ನಮ್ಮ ರಾಣಿಯಲ್ಲಿ ನಿನ್ನ ವಿಚಾರವನ್ನೆತ್ತಿ ಮಾತನಾಡಲು ನಮಗೆ ಧೈರ್ಯವಿಲ್ಲ. ಆದರೆ ನಿನ್ನನ್ನು ಕಟ್ಟಿ ಖೈದಿ ಎಂದು ಅವಳ ಮುಂದೆ ಕರೆದುಕೊಂಡು ಹೋಗಬಲ್ಲೆವು. ಆಗ ನೀನು ಅಲ್ಲಿ ನಿನ್ನ ಮಿತ್ರನ ಪರವಾಗಿ ನಿನ್ನ ವಾಗ್ಝರಿಯನ್ನೆಲ್ಲಾ ತೋರಿಸಬಹುದು. ನಮ್ಮ ರಾಣಿಯು ಮುಂದೆ ಬೇಕೆಂದು ನಿನ್ನನ್ನು ಕರೆದುಕೊಂಡು ಹೋಗಿ

ಭೇಟಿ ಮಾಡಿಸಿದರೆ ಅವಳಿಗೆ ಪ್ರಾಯೇಣ ಕೋಪಬಂದರೂ ಬರಬಹುದು, ನಾವು ರಾಣಿಯ ಆಗ್ರಹಕ್ಕೆ ಪಾತ್ರರಾಗಬೇಕಾಗುವುದು.

ಹಶೀಮ—ನಿಮಗೆ ಯಾವ ರೀತಿ ಅನುಕೂಲವೋ ಆ ರೀತಿಯಲ್ಲಿ ನೀವು ನನ್ನನ್ನು ಕರೆದುಕೊಂಡು ಅವಳ ಭೇಟಿ ಮಾಡಿಸಿ. ಒಂದು ಸಾರಿ ಅವಳ ಮುಂದೆ ಹೋದ ಮೇಲೆ, ಆಚೆಗೆ ಏನು ಮಾಡಬೇಕೆಂಬುದನ್ನು ನಾನು ಬಲ್ಲೆ. ನಿಸ್ಸಹಾಯನಾಗಿ ಭಗ್ನಮನೋರಥನಾಗಿರುವ ನನ್ನ ಮಿತ್ರನಿಗೆ ಸಹಾಯವಾದರೆ ನನಗೆ ನಿಜವಾಗಿ ಆನಂದ ಉಂಟಾಗುವದು.

ಆಮೇಲೆ ಮೂರುದಿವಸದಲ್ಲಿ ರಾಣಿಯು ಅವಳ ಖಚರ ಪರಿವಾರದೊಡಗೂಡಿ ಅರಮನೆಯಿಂದ ಹೊರಟಳು ಮತ್ತು ಹಶೀಮ ಅವಿತುಕೊಂಡಿದ್ದ ವನಕ್ಕೆ ವಿಹಾರಾರ್ಥವಾಗಿ ಬಂದಳು. ಆ ವನಕ್ಕೆ ಬಂದು ಸ್ವಲ್ಪ ವಿಶ್ರಮಿಸಿಕೊಂಡ ತರುವಾಯ ತನ್ನ ಪ್ರಜೆಗಳಿಂದ ಮರ್ಯಾದೆಯನ್ನು ಹೊಂದಿದಳು. ಆಗ ಹಶೀಮನಿಗೆ ಸಹಾಯಕಳಾಗಿದ್ದ ಒಬ್ಬ ಖಚರಿಯು ಗುಟ್ಟಾಗಿ ಹೋಗಿ, ಅವನನ್ನು ಕುರಿತು—ನನ್ನ ಸಂಗಡ ಬಾ, ನಾನು ನಮ್ಮ ರಾಣಿಯನ್ನು ತೋರಿಸುತೇನೆ, ನೀನು ಅವಳಿಗೆ ಕಾಣಿಸಿಕೊಳ್ಳದಹಾಗೆ ಅವಳನ್ನು ನೋಡಬಹುದು ಎಂದಳು. ಹಶೀಮನು ಅವಳ ಸಂಗಡ ಹೋದನು. ಚಿನ್ನದ ಸಿಂಹಾಸನವನ್ನು ಹಾಕಿಸಿಕೊಂಡು ರಾಣಿ ಕೂತಿದ್ದ ಕಡೆಗೆ ಬಂದು ಒಳದಾರಿಯ ಮೂಲಕ ಖಚರಿಯು ಹಶೀಮನನ್ನು ಒಂದು ಗುಹಾ ದ್ವಾರದ ಮಾರ್ಗವಾಗಿ ಕರೆದುಕೊಂಡು ಹೋದಳು. ಹಶೀಮನು ಆ ರಾಣಿಯ ದೇವಲೋಕದ ಸೌಂದರ್ಯವನ್ನು ಕಂಡನು. ಯುಕ್ತಾಯುಕ್ತ ವಿವೇಚನಾಜ್ಞಾನವನ್ನು ಅವನ ಬುದ್ಧಿಮೀರಿಹೋಯಿತು. ಅವನು ಸ್ವಲ್ಪಹೊತ್ತು ಮೂರ್ಛೆ ಹೋಗಿ ಬಿದ್ದು ಬಿಟ್ಟನು, ಪ್ರಜ್ಞೆ ಬಂದ ಮೇಲೆ ದೇವರನ್ನು ಸ್ತುತಿಗೈಯುವುದಕ್ಕೆ ಹೊರಟನು, ಪ್ರಯೋಜನವಿಲ್ಲ. ದೇವರು ತನ್ನನ್ನು ಕಾಪಾಡಲೆಂದು ಬೇಡಿಕೊಂಡ. ಪ್ರಯೋಜನ ವಿಲ್ಲ. ಯಾವ ತರುಣನಿಗೋಸ್ಕರ ಇವನು ಇಷ್ಟು ಶ್ರಮಪಡುತಿದ್ದಾನೆಯೊ ಅಂಥ ವನಿಗಿಂತಲೂ ಎಷ್ಟೋಭಾಗ ಹೆಚ್ಚಾಗಿ ಆ ಸುಂದರಿಯನ್ನು ಕಂಡು ಮೋಹಗೊಂಡು ಮರಳುಹಿಡಿದಂತವನಾದನು. ಹೀಗೆ ಹಶೀಮನು ಸ್ನೇಹಿತನ ಜ್ಞಾಪಕವಿಲ್ಲದೆ ಅನ್ನ ನೀರು ಲಕ್ಷ್ಯವಿಲ್ಲದೆ ಮೂರು ಹಗಲು ಮೂರು ರಾತ್ರಿಯನ್ನು ಕಳೆದನು. ನಾಲ್ಕನೇ ರಾತ್ರಿ (ಕಾಮ)ಜ್ವರ ಬಂದು ಅವನ ಕಂಣನ್ನು ಮುಚ್ಚಿಸಿತು, ನಿದ್ರೆಬಂತು. ಆಗ ಅರ್ಧನಿದ್ರೆಯಲ್ಲಿ ಗಟ್ಟಿಯಾಗಿ ಕೇಳಿಸಿದ ಒಂದು ಧ್ವನಿ ಏನೆಂದರೆ, ಎಲ ಹಶೀಮ, ಏಳು, ನೀನು ಯಾರು ಎನ್ನುವುದನ್ನು ತಿಳಿದುಕೊ, ಆ ಸೃಷ್ಟಿಕರ್ತನ ಕಾರ್ಯಕ್ಕಾಗಿ ನಿನ್ನ ಪ್ರಾಣವನ್ನೇ ನೀನು ಒಪ್ಪಿಸಿಲ್ಲವೆ? ನಿನ್ನಲ್ಲಿಟ್ಟ ನಂಬಿಕೆಗೆ ಎರಡನ್ನು ಬಗೆದು ಅಪರಾಧವನ್ನು ಹೊತ್ತುಕೊಳ್ಳುತೀಯ?

ಇಂಥಾ ಎಚ್ಚರಿಕೆಯ ಧ್ವನಿಯನ್ನು ಕೇಳಿ ಹಶೀಮನಿಗೆ ಜಾಗೃತಾವಸ್ಥೆ ಬಂತು. ಹತ್ತಿರ ಯಾರೂ ಇರಲಿಲ್ಲ. ಆಗ ಅವನು ಮೇಲಕ್ಕೆ ಎದ್ದು ಈ ಅಪರಾಧವನ್ನು

ಕ್ಷಮಿಸಿ ವಿಷಯಸಾನ್ನಿಧ್ಯದಿಂದುಂಟಾದ ದುರಾಶೆಯ ಬಾಧೆಯಿಂದ ಕಾಪಾಡು, ಸ್ವಾಮಿ, ಎಂದು ನಡುಗುತಾ ಭಯದಿಂದ ದೇವರನ್ನು—ಸ್ತುತಿಗೈದು ಕೆಲವು ಖಚರಿಯರನ್ನು ನೋಡಿ ರಾಣಿಯ ಸನ್ನಿಧಿಗೆ ಕರೆದುಕೊಂಡು ಹೋಗಿ ಎಂದು ಬೇಡಿಕೊಂಡನು. ಅವರು—ಬಹಿರಂಗವಾಗಿ ಅವನ ಮಾತಿನಂತೆ ನಡಿಸಲು ತಮಗೆ ಧೈರ್ಯವಿಲ್ಲ, ಆದರೆ ಖೈದಿಯ ಹಾಗೆ ನಿನ್ನ ಕೈಯನ್ನು ಕಟ್ಟಿ ಅರಸಿಯ ಸಮ್ಮುಖಕ್ಕೆ ಬೇಕಾದರೆ ಹೊತ್ತುಕೊಂಡು ಹೋಗುತೇವೆ, ಎಂದುಸುರಿದರು. ಅದಕ್ಕೆ ಹತೀಮನು—ಆಶಾಭಂಗವಾಗಿ (ನರಳು)ವ ನನ್ನ ಮಿತ್ರನ ಸ್ಥಿತಿಯನ್ನು ನಾನು ವಿವರಿಸಿ ಅರಿಕೆ ಮಾಡುವಹಾಗೆ ಯಾವ ರೀತಿಯಲ್ಲಿಯಾದರೂ ನನ್ನನ್ನು ಕರೆದುಕೊಂಡು ನಡೆಯಿರಿ, ಎಂದನು. ಖಚರಿಯರು ತಮ್ಮ ಏರ್ಪಾಡನ್ನು ಮಾಡಿಕೊಂಡು, ರಾಣಿಯು ಸಂತೋಷಚಿತ್ತಳಾಗಿರುವ ಸಮಯವನ್ನು ನೋಡಿ ಉದ್ಯಾನವನದ ಬಾಗಿಲ ಕಡೆಯಿಂದ ರಾಣಿಯ ಸಮೀಪಕ್ಕೆ ಹೋದರು. ಅವರಲ್ಲಿ ಒಬ್ಬಳು ಕ್ರಮವಾಗಿ ನಮಸ್ಕರಿಸಿ, "ರಾಣಿ, ಆದಂನ ಸಂತತಿಯ ಒಬ್ಬ ಪುರುಷನು ಹೇಗೆಯೋ ನಮ್ಮ ಉದ್ಯಾನವನದ ಬಾಗಿಲಿಗೆ ಬಂದನು. ನಾವು ಅವನನ್ನು ಬಲವಾಗಿ ಕಟ್ಟಿ ಹಾಕಿದೇವೆ, ಮುಂದಕ್ಕೆ ಅವನನ್ನು ಏನು ಮಾಡಬೇಕೆಂಬ ವಿಚಾರದಲ್ಲಿ ಸನ್ನಿಧಾನದ ಅಪ್ಪಣೆಗಾಗಿ ಕಾದಿದೇವೆ," ಎಂದು ಅರಿಕೆ ಮಾಡಿದಳು.

ಇದನ್ನು ಕೇಳಿ ಆ ರಾಣಿಯು ತನ್ನ ಇನಯನನ್ನು ಮರದ ಕೆಳಗೆ ತಾನು ಬಿಟ್ಟುಬಂದ ಸಂಗತಿ ನೆನಸಿಕೊಂಡು ಅವನೇ ತನ್ನ ಸ್ಥಳವನ್ನು ಗೊತ್ತುಮಾಡಿಕೊಂಡು ಬಂದಿರಬಹುದೆಂದು ಯೋಚಿಸುತಾ ತನ್ನ ಪರಿವಾರದವರನ್ನು ಕುರಿತು ಆ ಖೈದಿಯನ್ನು ತನ್ನ ಮುಂದೆ ಕರೆದುತರುವಂತೆ ಅಪ್ಪಣೆ ಕೊಟ್ಟಳು. ಖಚರಿಯರು ಆ ಪ್ರಕಾರ ಹತೀಮನನ್ನು ಹಿಡಿದುಕೊಂಡು ಸಿಂಹಾಸನದ ಬಳಿಗೆ ಕರೆದು ತರುತ್ತಿದ್ದರು. ರಾಣಿಯು ಅವನ ಗಂಭೀರವಾದ ರೀತಿಯನ್ನು ನೋಡಿದ ಕೂಡಲೆ ಅವಳ ಮೊದಲ ಇನಯನ ಯೋಚನೆ ಎಲ್ಲಾ ಮಾಯವಾಯಿತು. ಅವಳು ಹತೀಮನನ್ನು ಸಮೀಪಕ್ಕೆ ಕರೆದು ಥಳಥಳನೆ ಹೊಳೆಯುವ ಚಿನ್ನದ ಆಸನವನ್ನು ತರಿಸಿ ಕೈಹಿಡಿದು ಅವನನ್ನು ಅದರ ಮೇಲೆ ತನ್ನ ಸಮೀಪದಲ್ಲಿ ಕೂರಿಸಿಕೊಂಡು, "ಗಂಭೀರವಾದ ಯೌವನಸ್ಥನೆ, ನೀನು ಎಲ್ಲಿಂದ ಬಂದೆ, ನಿನ್ನ ಹೆಸರೇನು, ಇಲ್ಲಿಗೆ ಯಾವ ಕೋರಿಕೆಯಿಂದ ಬಂದೆ, ಇಂಥಾ ಪ್ರಯಾಣವನ್ನು ನೀನು ಮಾಡಿದ ಬಗೆ ಹೇಗೆ?" ಎಂದು ಕೇಳಿದಳು.

ಆ ಮಹಾಸುಂದರಿಯ ಎದುರಿಗೆ ಕೂತಿದ್ದ ಹತೀಮನಿಗೆ ವಾಕ್‌ಸ್ತಂಭವಾಯಿತು. ಉತ್ತರ ಹೇಳಲು ಆಗಲಿಲ್ಲ. ರಾಣಿಯು ಆತನಿಗೆ ಕಕಮಕ ಹಿಡಿದದ್ದನ್ನು ಕಂಡು, ತನ್ನ ಅಪಾಂಗವೀಕ್ಷಣೆ ಎಂಬ ಬಾಣವು ಅವನ ಹೃದಯಕ್ಕೆ ನಾಟಿಕೊಂಡಿತೆಂದು ಸಂತೋಷಪಡುತಾ ವಿಶೇಷವಾದ ಪ್ರೀತಿಯ ಇನಿದಾದ ಧ್ವನಿಯಿಂದ, ಪುನಃ ಅವನನ್ನು ಕುರಿತು—"ಧೈರ್ಯಶಾಲಿಯೆ, ಯಾಕೆ ಸುಮ್ಮನಿದ್ದೀಯೆ? ಉತ್ತರ ಹೇಳತಕ್ಕದ್ದು ಏನೂ ಇಲ್ಲವೆ?" ಎಂದು ಕೇಳಿದಳು. ಆಗ ಹತೀಮನು ಕಡೆಗೆ ತನ್ನ

ಅಭಿಪ್ರಾಯವನ್ನು ಒಟ್ಟಿಗೆ ಸೇರಿಸಿಕೊಂಡು— ರಾಣಿಯೆ, ನಾನು ಹೇಳುವ ಉತ್ತರ ಬಹಳ ಸಂಕ್ಷೇಪವಾದ್ದು, ನಾನು ಯೇಮನ್ ದೇಶದಿಂದ ಬಂದೆ, ನನ್ನ ಹೆಸರು ಹತೀಮು, ಎಂದನು.

ಈ ಮಾತನ್ನು ಕೇಳಿದ ಕ್ಷಣದಲ್ಲಿಯೇ ರಾಣಿಯು ಮರ್ಯ್ಯಾದೆವಾಗಿ ಎದ್ದು ಹತೀಮನ ಕೈಹಿಡಿದುಕೊಂಡು ತನ್ನ ಸಿಂಹಾಸನದ ಮೇಲೆ ಕೂರಿಸಿಕೊಂಡು— ಇದಕ್ಕೆ ಮುಂಚೆ ಯೇಮನ್ ದೇಶದ ರಾಜಪುತ್ರನಾದ ಹತೀಮನ ವಿಚಾರವನ್ನು ಕೇಳಿದೇನೆ ; ಲೋಕೋಪಕಾರಾರ್ಥವಾಗಿ ದಯವನ್ನೂ ಔದಾರ್ಯವನ್ನೂ ತೋರಿಸು ವಂಥಾ ನಿನ್ನ ಕಾರ್ಯಗಳು ಅನೇಕವಾಗಿವೆ. ಆದರೆ ಈಗ ನೀನು ಇಲ್ಲಿಗೆ ಬರಲು ಕಾರಣವೇನು ? ಹೇಳು. ಇಷ್ಟು ಕಷ್ಟಕ್ಕೆ ನೀನು ಯಾಕೆ ಗುರಿಯಾದೆ ? ನಿನ್ನ ವಿಚಾರದಲ್ಲಿ ನನಗೆ ತುಂಬಾ ಗೌರವವೂ ಮೆಚ್ಚಿಗೆಯೂ ಉಂಟೆಂದು ಖಂಡಿತವಾಗಿ ತಿಳಿ. ಕೋಪ ಬಂದೀತು ಎಂಬದಾಗಿ ಲೇಶವೂ ಭಯಪಡದೆ ನಿನ್ನ ಮನಸ್ಸಿನಲ್ಲಿರುವು ದನ್ನು ಧಾರಾಳವಾಗಿ ಹೇಳು, ಎಂಬದಾಗಿ ಹೇಳಿದಳು.

ಈ ಪ್ರಕಾರ (ರಾಣಿಯು ಹೇಳಿದ ಮಾತಿನಿಂದ) ಧೈರ್ಯಗೊಂಡು ಮುಂದೆ ಮಾತನಾಡಿದ್ದು ಹೇಗೆಂದರೆ :–

ಓ ಖಚರಲೋಕದ ರಾಣಿಯೇ, ನಿನ್ನ ದಯಾರಸವು ಎಣಿಕೆಯ ಮೇರೆ ಯನ್ನು ಮೀರಿದೆ. ನನಗೆ ಒಂದು ಸಾವಿರ ನಾಲಿಗೆ ಇದ್ದಾಗ್ಯೂ ನಿನ್ನ ಗಾಂಭೀರ್ಯಾದಿ ಸದ್ಗುಣಗಳನ್ನು ಹೊಗಳಲು ನನಗೆ ಸಾಮರ್ಥ್ಯವಿರಲಾರದು. ಆದರೂ ಹೇಳುತ್ತೇನೆ, ಕೇಳು. ಕಾಮಪೀಡಿತನಾದ ಒಬ್ಬ ಪುರುಷನಿಗೆ ನೀನು ಕೊಟ್ಟ ವಾಗ್ದಾನವನ್ನು ಪೂರ್ತಿಮಾಡಿಕೊಳ್ಳಲು ನಾನು ನಿನ್ನ ಸನ್ನಿಧಾನಕ್ಕೆ ಬಂದಿದೇನೆ. ಹಿಮಯಾರ್ ಎಂಬ ಕಾಡಿಗೆ ನಾನು ಹೋಗುತಿರುವಾಗ ದಾರಿಯಲ್ಲಿ ಒಬ್ಬ ತರುಣ ಸಿಕ್ಕಿದ. ವಸಂತಋತುವಿನಲ್ಲಿ ಮಳೆಸುರಿದ ಹಾಗೆ ಅವನ ಕಣ್ಣಿನಲ್ಲಿ ನೀರು ಸುರಿಯುತಿತ್ತು. ಅತ್ಯಂತ ವ್ಯಸನದಿಂದಲೂ ದುಃಖದಿಂದಲೂ ಅವನ ಪ್ರಾಣವು ಅವನ ಶರೀರವನ್ನು ಬಿಟ್ಟು ಇನ್ನೇನು ಹೋಯಿತು ಎನ್ನುವ ಹಾಗಿತ್ತು. ಅವ ಈಗ ಬದುಕಿದಾನೆಯೆ ಎನ್ನುವದು ಕೂಡ ಸಂಶಯವಾಗಿದೆ. ಅವನು ಕಂಣನ್ನು ಮುಚ್ಚಿಕೊಂಡು ಮಲಗಿ ಕೊಂಡಿದ್ದ. ಅವ ನಿಟ್ಟುಸಿರುಗಳಿಗೆ ಮಧ್ಯೆ ಮಧ್ಯೆ ' ಬಾ, ಬಾ, ನೀನು ಇಲ್ಲದಿರುವು ದನ್ನು ನಾನು ಇನ್ನೂ ಹೆಚ್ಚಾಗಿ ಸಹಿಸಲಾರೆ ' ಎಂದು ಕೂಗಿಕೊಳ್ಳುತಿದ್ದ. ನಿನ್ನ ದುಃಖಕ್ಕೆ ಕಾರಣವೇನೆಂದು ಕೇಳಿದೆ. ಇಂಥಾ ಕಷ್ಟವು ಅವನಿಗೆ ಹೇಗೆ ಪ್ರಾಪ್ತ ವಾಯಿತೆಂದು ಕೇಳಿದೆ. ಸ್ವಲ್ಪ ಸಂದೇಹಪಟ್ಟ ; ಆಮೇಲೆ ವಿಶಿಷ್ಟವನ್ನೂ ಹೇಳಿದ. ತಾವು ಅವನನ್ನು ಕಂಡು ಪ್ರೀತಿಯನ್ನು ದಯವನ್ನೂ ಹೇಗೆ ತೋರಿಸಿದಿರಿ ಎಂಬುವು ದನ್ನು ಹೇಳಿದ. ದುಃಖಪಡುತಾ ಆ ತರುಣ ಹೇಳಿದ್ದೇನೆಂದರೆ_ ಅಲ್‌ಕಾಸ್ ಪರಿಯು ಹೊರಟು ಹೋಗುವಾಗ್ಗೆ ಏಳು ದಿವಸದಲ್ಲಿ ಹಿಂದಕ್ಕೆ ಬರುತೇನೆಂದು ಹೇಳಿದಳು. ಅವಳು ಬರಬಹುದು ಎಂದು ತಿಳಿದುಕೊಂಡು ದುಃಖಪಡುತಾ ಏಳ

ವರುಷ ಕಾದೆ. ನಾನು ಇಲ್ಲಿರಲೂ ಆರೆ ಹೊರಟುಹೋಗಲೂ ಆರೆ. ನನ್ನ ದೇವಕರ್ಣಿಕೆ ನನ್ನನ್ನು ಬಿಟ್ಟು ಹೊರಟುಹೋದಾಗ, ಈ ಸ್ಥಳಬಿಟ್ಟುಹೋಗಕೂಡದೆಂದು ಖಂಡಿತವಾಗಿ ಹೇಳಿದ್ದಳು. ಅವಳ ಅಪ್ಪಣೆಯನ್ನು ನಾನು ಮೀರಿ ಅವಳನ್ನು ಹುಡುಕಿಕೊಂಡು ಹೋಗಲಾರೆ. ನಾವು ಪುನಃ ಸಂಧಿಸಬೇಕೆಂಬ ವಿಧಿ ಇದ್ದರೆ, ಅದು ಇದೇ ಸ್ಥಳದಲ್ಲಿಯೇ ಆಗಬೇಕು, ಹೀಗೆಂದು ಆ ದುಃಖಿಯು ಹೇಳಿದನು. ಆ ಹೀನಸ್ಥಿತಿಯಲ್ಲಿರತಕ್ಕ ಪುರುಷನ ದುರವಸ್ಥೆಯನ್ನು ನೋಡಿದೆ. ಅವನ ಪ್ರೇಮವು ನಿಜವಾದ್ದು. ಇದನ್ನು ತಿಳಿದು ನನ್ನ ಪ್ರಯಾಣವನ್ನು ನಿಲ್ಲಿಸಿ ಈ ಕಡೆಗೆ ಜಾಗ್ರತೆಯಾಗಿ ಬಂದೆ. ಆಶಾಭಂಗವಾಗಿರತಕ್ಕ ಆ ಇನಯನನ್ನು ದಯದಿಂದಲೂ ಅನುರಾಗದಿಂದಲೂ ಕಾಣಬೇಕು. ಇದರಿಂದ ತಮ್ಮ ಗುಲಾಮರಲ್ಲಿ ಅತಿ ದೀನವಾದ ನನಗೆ ಮಹೋಪಕಾರ ಮಾಡಿದಂತಾಗುವುದು.

ಈ ಪ್ರಕಾರ ಹಶೀಮ ಅರಿಕೆಮಾಡಿದ ಕೂಡಲೆ ಅಲ್ಮ್ಯಾನ್ ಪರಿಯು ಉತ್ತರ ಕೊಟ್ಟದ್ದೇನೆಂದರೆ :—

ಉದಾರವಾದ ಮನಸ್ಸುಳ್ಳ ದೊರೆಮಗನೆ, ನೀನು ಇಲ್ಲಿಗೆ ಬಂದಿದಾನೆಂದು ನನ್ನ ಜನರು ಬಂದು ಹೇಳುವ ತನಕ ನೀನು ಹೇಳುವ ಸಂದರ್ಭವೆಲ್ಲಾ ನನಗೆ ಮರೆತೇಹೋಗಿತ್ತು: ನನ್ನ ಮೊದಲ ಇನಯನು ಪ್ರಾಯೇಣ ನೀನೇ ಆಗಿದ್ದರೂ ಆಗಿರಬಹುದು ಎಂದು ನಾನು ಯೋಚಿಸಿದೆ. ಅದು ಹೇಗಾದರೂ ಆಗಲಿ, ನಾನು ನಿನ್ನನ್ನು ಕಂಡಕ್ಷಣವೇ ನೀನು ಆ ಮನುಷ್ಯನಲ್ಲವೆಂದು ಕಂಡುಕೊಂಡೆ, ಈಗ ನಾನು ನಿನ್ನ ಮುಂದೆ ಒಪ್ಪಿಕೊಳ್ಳುತೇನೆ. ನನ್ನ ಗೌರವವನ್ನು ಹೊಂದಲು ಅವನು ಅನರ್ಹ. ನನ್ನಲ್ಲಿ ಅವನಿಗಿರುವ ಪ್ರೀತಿಯು ಕೇವಲ ಸಾಧಾರಣವಾಗಿರಬೇಕು. ಯಾಕೆಂದರೆ ಬರಿಪುಕ್ಕಲತನದಿಂದ ಏಳು ವರುಷ ಒಂದೇಕಡೆ ಇದ್ದನಲ್ಲ! ನನ್ನನ್ನು ಹುಡುಕಿಕೊಂಡು ಇಲ್ಲಿಗೆ ಬರುವಷ್ಟು ಧೈರ್ಯ ಅವನಿಗೆ ಇಲ್ಲದೆ ಹೋಯಿತು. ನಾನು ಅವನಿಗೆ ದಾರಿಯನ್ನು ತೋರಿಸಿದೆ. ನನ್ನ ಹೆಸರನ್ನೂ ನಾನು ವಾಸವಾಗಿರುವ ಪರ್ವತದ ಹೆಸರನ್ನೂ ಅವನಿಗೆ ಹೇಳಿದ್ದೆ. ಅವನು ನಿಜವಾದ ಇನಯನಾಗಿದ್ದರೆ, ಪ್ರಾಣ ಹೋದಾಗ್ಯೂ ನನ್ನ ಹಿಂದೆಯೇ ಬರಬೇಕಾಗಿತ್ತು.

ಆಗ ಹಶೀಮನು ಆ ತರುಣನ ಪಕ್ಷವನ್ನು ಹಿಡಿದು ನುಡಿದ ರೀತಿ ಹೇಗೆಂದರೆ :-

“ ಅವನ ಪ್ರೀತಿಯು ಶುದ್ಧವಾಗಿ ನಿಜವಾದ್ದಲ್ಲದೇ ಇದ್ದ ಪಕ್ಷದಲ್ಲಿ ಆ ಪ್ರೀತಿ ರಸವನ್ನು ಅವನು ಅಷ್ಟೊಂದು ಪಾನಮಾಡುತಿರಲಿಲ್ಲ; ನಿನ್ನನ್ನು ಜ್ಞಾಪಿಸಿಕೊಂಡು ಅಷ್ಟೊಂದು ದುಃಖವನ್ನೂ ಅನುಭವಿಸುತಿರಲಿಲ್ಲ. ನೀನು ಹೊರಟು ಬರುವಾಗ ಅವನಿಂದ ಪ್ರಮಾಣ ಮಾಡಿಸಿಕೊಂಡೆ. ತನ್ನ ಪ್ರಿಯಳು ಹೇಳಿದ್ದಕ್ಕೆ ಆ ಬಡ ಇನಿಯನು ವಿರೋಧವಾಗಿ ಹೇಗೆ ನಡೆದಾನು. ಆ ಮೋಹಪೀಡಿತನಾದ ತರುಣನು ತನ್ನ ಪ್ರಾಮಾಣಿಕತೆಯ (ಜೀವಾಳ)ವನ್ನು ಬಲ್ಲವನು. ನೀನು ಬರುವವರೆಗೂ ಅವನು ಆ ಮಠದ ಕೆಳಗೆ ಇರಬೇಕೆಂದು ನೀನು ಖಂಡಿತವಾದ ಅಪ್ಪಣೆಯನ್ನು

ಮಾಡಿದ್ದೆ. ಅವನು ಇಲ್ಲದಿರುವಾಗ ನೀನು ಬಂದು ನೋಡಿದರೆ ತಾನು ಸಿಕ್ಕದೇ ಹೋದೇನಲ್ಲಾ ಎಂಬ ಭಯದಿಂದ ಇದುವರೆಗೂ ಆ ಸ್ಥಳವನ್ನು ಬಿಟ್ಟು ಅವನು ಅಲುಗಲಿಲ್ಲ. ಹಾಗೆ (ನೀನು ಬಂದು ಅವನು ಸಿಕ್ಕದೇ ಹೋಗಿದ್ದರೆ) ನಿನ್ನ ಅಪ್ಪಣೆಯಂತೆ ಅವನು ನಡೆಯಲಿಲ್ಲವೆಂಬ ತಪ್ಪು ಅವನ ಮೇಲೆ ಹೊರುತಿತ್ತು, ಅವನು ನಿನ್ನ ಆಗ್ರಹಕ್ಕೆ ಪಾತ್ರನಾಗುತಿದ್ದನು" ಎಂಬದಾಗಿ ಹತೀಮು ವಾದಿಸಿದನು.

ಆ ಪರಿಗಳ ರಾಣಿಯು ಆವ ಆಡಿದ ಮಾತಿಗೆಲ್ಲಾ ಕಿವಡರ ಹಾಗಿದ್ದು ತನ್ನ ಪೂರ್ವದ ಇನಯನನ್ನು ಪೂರ್ತಿಯಾಗಿ ಅನಂಗೀಕಾರ ಮಾಡಿದಳು.

ಹತೀಮು—ನಾನು ಪಟ್ಟ ಕಷ್ಟ ದೇವರೇ, ವ್ಯರ್ಥವಾಗದೆ ಇರಲಿ. ನಾನು ಇಲ್ಲಿಗೆ ಬರುವುದರಲ್ಲಿ ಎಷ್ಟು ಕಷ್ಟಪಟ್ಟೆ ಎನ್ನುವುದನ್ನು ಯೋಚಿಸು.

ರಾಣಿ—(ಪೇಚಾಡುತಾ) ನೀನು ಕೇಳಿಕೊಳ್ಳತಕ್ಕದ್ದನ್ನು ನಾನು ಇಲ್ಲ ಎನಲಾರೆ. ಆ ತರುಣನು ನನ್ನ ಸನ್ನಿಧಿಗೆ ಬರಬಹುದೆಂದು ನಾನು ಅಪ್ಪಣೆ ಕೊಡಬಲ್ಲೆ. ಆದರೆ ಅವನ ಸ್ನೇಹವನ್ನು ಇನ್ನು ಮಾಡುವುದಿಲ್ಲ. ಅವನನ್ನು ನನ್ನ ಸಾನಿಯಾಗಿ ಭಾವಿಸುವುದೂ ಇಲ್ಲ.

ಹತೀಮು—ಆತನನ್ನು ನಿನ್ನ ಇನಿಯನಾಗಿ ಯಾಕೆ ಅಂಗೀಕರಿಸಕೂಡದು? ಹೀಗೆ ಮನಸ್ಸು ಬದಲಾಯಿಸುವುದಕ್ಕೆ ಕಾರಣವೇನು?

ರಾಣಿ—ಅದು ನನ್ನ ಇಷ್ಟ. ಅನ್ಯಥಾ ಆಗಲಾರದು.

ಹತೀಮು—ಹೀಗೆಯೇ ನೀನು ನಿರ್ಧಾರ ಮಾಡಿಕೊಂಡಿದ್ದರೆ, ನಿನ್ನ ಮನೆಯ ಬಾಗಿಲಲ್ಲಿ ಉಪವಾಸವಾಗಿ ನಿಂತು, ಮೃತ್ಯುವಿನ ಕೈಯು ನನ್ನನ್ನು ಹಿಡಿಯುವ ವರೆಗೂ ನಾನು ರಾತ್ರಿ ಹಗಲೂ ಸಹಾ ನಿನ್ನ ಕ್ರೂರವಾದ (ಹಿಂಸೆ)ಯನ್ನು ಕುರಿತು ದೇವರಲ್ಲಿ ದೂರು ಹೇಳಿಕೊಳ್ಳುತೇನೆ.

ಹತೀಮನು ಈ ರೀತಿಯಾಗಿ ಮಾತನಾಡಿ ಆ ರಾಣಿಯ ಸಮ್ಮುಖವನ್ನು ಬಿಟ್ಟು ಒಂದು ಮರದ ನೆರಳಲ್ಲಿ ನಿಂತುಕೊಂಡು ಏಳು ದಿವಸ ಅನ್ನ ನೀರುಗಳನ್ನು ಬಿಟ್ಟು ಬಿಟ್ಟನು. ಎಂಟನೇ ದಿವಸ ರಾತ್ರಿ ಅವನು ನಿದ್ರೆ ಬಂದು ಮಲಗಿಕೊಂಡನು. ಒಬ್ಬ ಮುದುಕನು ಇವನ ಸ್ವಪ್ನದಲ್ಲಿ ಬಂದು "ಧೀರನಾದ ಹತೀಮು, ಸಂತೋಷವಾಗಿರು. ಈ ಸುಂದರಿಯಾದ ಖಚರಿಯು ಮಾಡಿದ ದ್ರೋಹಕ್ಕಾಗಿ ದುಃಖಪಡತಕ್ಕ ಇನಿಯರು ಒಬ್ಬರೆ ಅಲ್ಲ, ಹೆಚ್ಚಾಗಿದಾರೆ. ಆದರೆ ಮೊದಲು ನಿನ್ನ ಮಿತ್ರನನ್ನು ಇಲ್ಲಿಗೆ ಕರೆದು ಕೊಂಡು ಬಾ; ಭಲ್ಲೂಕ ಪುತ್ರಿಯು ನಿನಗೆ ಕೊಟ್ಟಿರುವ ಯಂತ್ರವನ್ನು ಅವನು ತೆಗೆದುಕೊಳ್ಳಲಿ, ಒಂದು ಪಾತ್ರೆಯ ತುಂಬ ಇರುವ ನಿರ್ಮಲವಾದ ನೀರಿನಲ್ಲಿ ಅದನ್ನು ಅದ್ದಲಿ. ಈ ನೀರು ಷರಬತ್ತಾಗುವುದು. ರಾಣಿಯು ಅದನ್ನು ಕುಡಿಯುವ ಹಾಗೆ ಉಪಾಯವನ್ನು ಮಾಡಬೇಕು. ದೇವರದಯದಿಂದ ಹಾಗಾದರೆ, ಆ ಮೂಲಕ ಅವಳಿಗೆ ಪೂರ್ವದ ಅಭಿಮಾನ ಪುನಃ ಬರುವುದು" ಹೀಗೆ ಹೇಳಿದನು.

ಹತೀಮನಿಗೆ ಎಚ್ಚರವಾಯಿತು (ನಿದ್ರೆಯಲ್ಲಿ) ನಡೆದ ಸಂಗತಿಯನ್ನು ಕುರಿತು ಯೋಚಿಸುತಿರುವಾಗ ಬೆಳಗಾಯಿತು. ಈ ಮಧ್ಯೆ ಖಚರರ ರಾಣಿಯಲ್ಲದೆ ಇನ್ನು ಯಾರು ಅವನ ಸಮೀಪಪ್ರವೃತ್ತಿಗೆ ಬಂದಾರು ? ಅವಳು ಬಂದು ನಿಂತುಕೊಂಡು, " ಓ ಹತೀಮ, ನನ್ನ ಆತಿಥ್ಯವನ್ನು ಯಾಕೆ ಪಟ್ಟುಹಿಡಿದು ತಿರಸ್ಕರಿಸುತೀಯೆ ? ಅನ್ನವಿಲ್ಲದೆ ನನ್ನ ಮನೆಯ ಬಾಗಿಲಲ್ಲಿ ನೀನು ನಾಶವಾದರೆ, ದೇವರ ಸನ್ನಿಧಿಯಲ್ಲಿ ವಿಚಾರಣೆ ಯಾಗುವಾಗ, ನಾನು ನಿನ್ನ ಮರಣಕ್ಕೆ ಕಾರಣಭೂತಳೆಂದು ನನ್ನನ್ನು ಶಿಕ್ಷಿಸರೆ ? ಆ ಮಹಾ ನ್ಯಾಯಾಧಿಪತಿಯ ಬಳಿಯಲ್ಲಿ ನನ್ನ ಉತ್ತರ ಏನಾಗಿರಬೇಕು ?" ಎಂದು ಕೇಳಿದಳು.

ಹತೀಮ—ಮನ್ಮಥಬಾಧೆಯಿಂದ ಸಂಕಟಪಡುತಿರುವ ನನ್ನ ಮಿತ್ರನನ್ನು ಕರೆಯಿಸ ಬೇಕೆಂದು ನಿನ್ನನ್ನು ನಾನು ಬಲವಂತ ಮಾಡುತೇನೆ. ಅದರಿಂದ ನಿನ್ನ ಮುಖದರ್ಶನವನ್ನಾದರೂ ಮಾಡಿ ಅವನು ಧನ್ಯನಾಗಲಿ.

ರಾಣಿ—ಅಗತ್ಯವಾಗಿ ಆಗಬಹುದು. ನನ್ನ ಸಮೀಪದಲ್ಲಿ ಅವನು ಬರಲು ನನ್ನ ಆಕ್ಷೇಪಣೆ ಏನೂ ಇಲ್ಲ.

ಹತೀಮನು ಈ ಮಾತನ್ನು ಕೇಳಿ ತನ್ನ ಮಿತ್ರನನ್ನು ಕರೆದು ತರಲು ಹಿಂತಿರುಗಿ ಹೋಗಿ ಬರುವುದಕ್ಕೆ ಸಿದ್ಧಮಾಡಿಕೊಂಡನು. ಆಗ ರಾಣಿ—ಹತೀಮ, ಅಷ್ಟು ದೊಡ್ಡ ಪ್ರಯಾಣದ ಕಷ್ಟಕ್ಕೆ ನೀನು ಪುನಃ ಗುರಿಯಾಗಬೇಕಾದ್ದಿಲ್ಲ. ನಮ್ಮ ಖಚರರು ಇನ್ನೂ ಜಾಗ್ರತೆಯಾಗಿ ಕೆಲಸ ಮಾಡುವರು.

ಆಗ ಆ ರಾಣಿಯು ತನ್ನ ಪ್ರಜೆಗಳಲ್ಲಿ ಕೆಲವರಿಗೆ ತನ್ನ ಇನಯನನ್ನು ಹುಡುಕಿ ಕೊಂಡು ಬರುವಂತೆ ಹೇಳಿ,—ಒಂದು ಪರ್ವತದ ಮುಂದುಗಡೆ ಒಂದು ಮರದ ಕೆಳಗೆ ಮಲಗಿಕೊಂಡಿರುವ ಒಬ್ಬ ಮನುಷ್ಯನು ತನ್ನಿನಿಯಳ ದೆಸೆಯಿಂದ ಉಂಟಾದ ಕ್ರೌರ್ಯಕ್ಕೆ ದುಃಖಪಡುತಾ ಇದಾನೆ. ಅಲ್‌ಕಾನ್‌ಪರಿಯು ಜಾಗ್ರತೆಯಾಗಿ ಬರ ಬೇಕೆಂದು ಹೇಳಿದಳೆಂಬದಾಗಿ ಅವನಿಗೆ ತಿಳಿಸಿ ; ಯೇಮನ್ ದೇಶದ ದೊರೆಮಗನಾದ ಹತೀಮನಿಂದ ಆ ರಾಣಿ ಕೊಟ್ಟದ್ದ ವಾಗ್ದಾನವು ಅವಳ ಜ್ಞಾಪಕಕ್ಕೆ ತರಲ್ಪಟ್ಟಿತು ಎಂದು ಹೇಳಿ, ಎಂಬದಾಗಿ ಅವನಿಗೆ ತಿಳಿಸುವ ಹಾಗೆ ಅಪ್ಪಣೆ ಮಾಡಿದಳು.

ಆ ಖಚರರು ವಾಯುವೇಗದಿಂದ ಆ ಮನುಷ್ಯ ಮಲಗಿರುವ ಸ್ಥಳಕ್ಕೆ ಹೋಗಿ ತಮ್ಮೊಡತಿ ಹೇಳಿದ್ದ ಮಾತನ್ನು ಅವನಿಗೆ ತಿಳಿಸಿದರು. ಸಂತೋಷವಾಗಿ ಅವನು ಈ ವರ್ತಮಾನವನ್ನು ಕೇಳಿ ಆ ಉದಾರಿಯಾದ ಹತೀಮನಿಂದ ತಾನು ಉಪಕೃತನಾದೆ ನೆಂದು ಹೇಳಿದನು. ಆ ಖಚರರು ಅವನನ್ನು ಹೊತ್ತುಕೊಂಡು ಹೋಗಿ ಅದೇ ದಿವಸ ಅವನನ್ನು ತಮ್ಮ ರಾಣಿಯಾದ ಅಲ್ಕಾನ್‌ಪರಿಯ ಮುಂದೆ ನಿಲ್ಲಿಸಿದರು. ಅಲ್ಲಿಗೆ ಅವನ ಆನಂದ ಪೂರ್ತಿಯಾಯಿತು. ಕೆಲವು ನಿಮಿಷಗಳವರೆಗೂ ಅವನ ಕಣ್ಣು ಆ ಸುಂದರಿಯಾದ ರಾಣಿಯ ಮೇಲೆ ನೆಟ್ಟುಹೋಗಿದ್ದು ಕಡೆಗೆ ಜ್ಞಾನತಪ್ಪಿ ಕೆಳಕ್ಕೆ ಮೂರ್ಛೆಹೋಗಿ ಬಿದ್ದುಬಿಟ್ಟನು. ರಾಣಿಯು ಸುವಾಸನೆಯಾದ ಗುಲಾಬಿ ಅತ್ತರನ್ನು

ಅವನ ಮುಖದ ಮೇಲೆ ಎರಚಿದಳು. ಅವನು ಚೇತರಿಸಿಕೊಂಡು ಎದ್ದಮೇಲೆ ಅವಳು ಕೇವಲ ದಯುವುಳ್ಳ ಧ್ವನಿಯಿಂದ ಅವನೊಡನೆ—ಮೋಹಯುಕ್ತನಾದ ತರುಣನೆ, ನೀನು ನನ್ನ ಸಮೀಪದಲ್ಲಿರುವುದಕ್ಕೆ ಅಪ್ಪಣೆ ಕೊಟ್ಟಿದೇನೆ. ನೀನು ಎಷ್ಟು ಹೊತ್ತು ಬೇಕಾದರೂ ನನ್ನ ಸೊಗಸನ್ನು ನೋಡಿ ನಿನ್ನ ಕಂಣಿಗೆ ಹಬ್ಬವನ್ನು ಮಾಡಿಕೊಳ್ಳಬಹುದು, ಎಂದು ನುಡಿದಳು. ಆ ದಿವಸವೆಲ್ಲಾ ಆ ಇನಿಯನು ಆ ಸುಂದರಿಯನ್ನು ಹೊರತು ಮತ್ತೆ ಯಾವುದನ್ನೂ ನೋಡಲಿಲ್ಲ. ಅವಳ ಕಂಣಿನ ಕಾಂತಿಯು ಅವನ ಹೃದಯವನ್ನು ಆವರಿಸಿಕೊಂಡುಬಿಟ್ಟಿತು. ರಾತ್ರಿಯ ಹೊದಿಕೆ ಅವರ ಮೇಲೆ ಹೊದಿಸಲ್ಪಟ್ಟಾಗ, ರಾಣಿಯು ಸೂಚನೆಯನ್ನು ಕೊಟ್ಟಳು. ಖಚರಿಯರ ಗುಂಪು ಹೊರಟಿತು. ಅವರಲ್ಲಿ ಕೆಲವರು ದೀಪವನ್ನು ಹಿಡಿದುಕೊಂಡು ಕೆಲವರು ಗಾನ ಮಾಡುತಾ ಇನ್ನು ಉಳಿದವರು ಆ ಗಾನಕ್ಕೆ ತಕ್ಕ ಹಾಗೆ ನರ್ತನ ಮಾಡುತಾ ಇದ್ದರು. ಈ ಆನಂದದಲ್ಲಿ ತನ್ನ ಮಿತ್ರನ ಕಷ್ಟದೆಶೆಯನ್ನು ಆ ರಾಣಿಯು ಸ್ವಲ್ಪವೂ ಲಕ್ಷ್ಯ ಮಾಡಲಿಲ್ಲವೆಂದು ಹತೀಮನು ತಿಳಿದುಕೊಂಡು, ಆ ತರುಣನ ಸಮೀಪಕ್ಕೆ ಹೋಗಿ—ನಿರಾಶೆಯಾಗಬೇಡ, ಈ ಮುಹ್ರವನ್ನು ಹಿಡಿ, ಅದನ್ನು ನಿರ್ಮಲವಾದ ನೀರಿನಲ್ಲಿ ಸ್ವಲ್ಪಹೊತ್ತು ಹಾಕಿದ್ದು, ಆ ನೀರನ್ನು ರಾಣಿಯು ಕುಡಿಯುವ ಪಾತ್ರೆಗೆ ಹಾಕಿ ತರುವಾಯ ಇಲ್ಲಿ ಬಂದಿರು, ಎಂದು ಹೇಳಿಕೊಟ್ಟನು. ಆ ತರುಣನು ಹತೀಮ ಹೇಳಿದ ಹಾಗೆ ಮಾಡಿ ಅಮೃತವನ್ನು ಅದಕ್ಕೆ ಹಾಕಿ, ರಾಣಿಯು ನೀರು ಕುಡಿಯುವ ಪಾತ್ರೆಗೆ ಹಾಕಿದನು. ಆ ಖಚರಿಯರಲ್ಲಿ ಒಬ್ಬಳು ಇದನ್ನು ಕಂಡು—ಎಲ ನೀಚನಾದ ಮರ್ತ್ಯ, ರಾಣಿಯು ನೀರು ಕುಡಿಯುವ ಪಾತ್ರೆಯನ್ನು ಮುಟ್ಟುವುದಕ್ಕೆ ನಿನಗೆಷ್ಟು ಧೈರ್ಯ ? ಎಂದು ಗರ್ಜಿಸಿದಳು. ಅದಕ್ಕೆ ಆ ತರುಣನು ತನಗೆ ಬಹಳವಾಗಿ ಬಾಯಾರಿಕೆಯಾದ್ದರಿಂದ ನೀರು ಕುಡಿಯಬೇಕಾಯಿತು ಎಂದು ಆ ಖಚರಿಗೆ ಭರವಸೆಯನ್ನು ಹೇಳಿದನು. ಕೂಡಲೆ ಆ ಖಚರಿಯು ಇನ್ನೊಂದು ಪಾತ್ರೆಯಲ್ಲಿ ಕುಡಿಯುವ ನೀರನ್ನು ಕೊಟ್ಟು, ಅವನನ್ನು ಮೊದಲಿದ್ದ ಕಡೆಗೆ ಕಳುಹಿಸಿದಳು. ಹತೀಮನು ಕೇವಲ ಚಿಂತಾಕ್ರಾಂತನಾಗಿ ಇದನ್ನು ನೋಡುತಿದ್ದು ತನ್ನ ಮಿತ್ರನು ತನ್ನ ಇಷ್ಟದ ಪ್ರಕಾರ ಮಾಡಿದ ಕಾರ್ಯ ಸಾಗಿತೆಂದು ತಿಳಿದು, ರಾಣಿಯ ಸಿಂಹಾಸನದ ಬಳಿಗೆ ಬಂದು ಅವಳನ್ನು ಕುರಿತು—ಸೆಕೆ ಬಹಳವಾಗಿದೆ, ಸ್ವಲ್ಪ ಷರಬತ್ತನ್ನು ಒಪ್ಪಿಸಿಕೊಳ್ಳೋಣವಾದೀತೆ ? ಎಂದು ಕೇಳಿದನು. ರಾಣಿಯು ಆಗಲಿ ಎಂದು ಒಪ್ಪಿ ಅದನ್ನು ತರುವಂತೆ ತನ್ನ ಪರಿವಾರದವರಿಗೆ ಹೇಳಿದಳು. ಅಷ್ಟರಲ್ಲಿಯೇ ಹತೀಮನು ತನ್ನ ಕೈಯಿಂದಲೇ ಷರಬತ್ತನ್ನು ಮಾಡಿ ಆ ಪಾತ್ರೆಯನ್ನು ರಾಣಿಯ ಬಳಿಗೆ ತಾನೇ ತಂದನು. ಆಗ ರಾಣಿಯು ತನ್ನ ಸಮೀಪದಲ್ಲಿದ್ದ ಮಿತ್ರರಿಗೆ ಆ ಷರಬತ್ತನ್ನು ಕೊಡುವುದಕ್ಕೆ ಹೋದಳು. ಆ ಸಮಯದಲ್ಲಿ ಹತೀಮನು—ರಾಣಿಯು ಮೊದಲು ಅದನ್ನು ಕುಡಿಯಬೇಕಾದ್ದು ತರುವಾಯ ತನಗೆ ಯುಕ್ತವೆಂದು ತೋರುವ ಇತರ ಮಿತ್ರರಿಗೆ ಅದನ್ನು

ಕೊಟ್ಟು ಗೌರವವನ್ನು ತೋರಿಸಬೇಕಾದ್ದು ಸಹಾ ಮರ್ಯಾದೆಯು ನಿಬಂಧನೆಯಾಗಿದೆ, ಎಂದು ಹೇಳಿದನು.

ರಾಣಿಯು ಆ ಷರಬತ್ತನ್ನು ಬೇಕಾದಷ್ಟು ಕುಡಿದಳು ಮತ್ತು ತನ್ನ ಸ್ನೇಹಿತರಿಗೂ ರುಚಿನೋಡಲು ಸ್ವಲ್ಪ ಕೊಟ್ಟಳು. ಒಂದು ನಿಮಿಷವಾದ ಮೇಲೆ ಅವಳ ಮನಸ್ಸಿನ ಬಿಗಿಯು ಸಡಿಲವಾಯಿತು. (ಆಗ) ಸಾಯುತಾ ಬಿದ್ದಿದ್ದ ಇನಯುನ ಮೇಲೆ ವಿಶೇಷವಾಗಿ ಮೋಹ ಹುಟ್ಟಿತು. ಮನ್ಮಥನ ಬಾಣದ ಏಟಿನಿಂದ ಅವಳು ಅವನ ಪಕ್ಕಕ್ಕೆ ಹಾರಿಹೋಗಬೇಕೆಂದು ತಟ್ಟನೆ ಎದ್ದಳು. ಆಗ ಹಕೀಮನು ಅವಳ ಪ್ರೇಮವು ಮೊದಲಿನ ಹಾಗೆ (ಆ ತರುಣನಲ್ಲಿ) ಉಂಟಾದ್ದನ್ನು ಕಂಡು ರಹಸ್ಯವಾಗಿ ಸಂತೋಷಪಡುತಿದ್ದನು. ಆಗ

ಹಕೀಮ—(ತಾನೂ ನಿಂತುಕೊಂಡು) ಖಚರ ಸಂಸ್ಥಾನದ ಮಹಾರಾಣಿಯೆ, ನೀನು ಬಹುಕಾಲ ಇಲ್ಲದೇ ಹೋದ್ದರಿಂದ ನಿನ್ನ ಕ್ರೌರ್ಯಕ್ಕೆ ಬಲಿಯಾಗುವ ಹಾಗಿದ್ದಂಥಾ ನಿನ್ನ ಇನಿಯನಿಗೆ ನೀನು ಇಷ್ಟು ದಯ ಉಳ್ಳವಳಾಗಿ ಆದ್ದು ಹೇಗಾಯಿತು?

ರಾಣಿ—ಓ ಹಕೀಮ್, ಇದೆಲ್ಲಾ ನೀನು ಮಾಡಿದ ಮಾಟ ಹೇಗಾಗರೂ ಆಗಲಿ, ನಾನು ನಿನ್ನನ್ನು ಕ್ಷಮಿಸಿಬಿಡುತೇನೆ. ಈ ತರುಣನನ್ನು ನನ್ನ ಪತಿಯಾಗಿ ಅಂಗೀಕರಿಸುತೇನೆ. ಆದರೆ ನಮ್ಮ ತಂದೆತಾಯಿಗಳ ಸಮ್ಮತಿ ಇಲ್ಲದೆ ಇಂಥಾ ದೊಡ್ಡ ಕಾರ್ಯಕ್ಕೆ ಪ್ರವೇಶಿಸಲು ನನಗೆ ಧೈರ್ಯವಿಲ್ಲ.

ಈ ಪ್ರಕಾರ ಹೇಳಿ ಆ ಖಚರರ ರಾಣಿಯು ಕೆಲವು ಕಾವಲುಗಾರರನ್ನು ಆರಿಸಿಕೊಂಡು ಅಲ್ಕಾಪರ್ವತದ ಮೇಲಿರುವ ತನ್ನ ಗೃಹಕ್ಕೆ ಮನೋವೇಗದಲ್ಲಿ ಹಾರಿದಳು. ಅಲ್ಲಿ ಮೊದಲು ಅವಳ ತಾಯಿಯನ್ನು ಕಾಣಲು ಹೋದಳು. ಅವಳ ತಾಯಿಯು— ನೀನು ವನದಲ್ಲಿದ್ದು ಬರುತೇನೆಂದು ಹೇಳಿದ ಗಡಬದಲ್ಲಿ ಇನ್ನೂ ಆರುತಿಂಗಳು ಕಳೆಯಬೇಕು; (ಹಾಗಿರುವಲ್ಲಿ) ಇಂಥಾ ಅರ್ಧರಾತ್ರಿ ಅಕಾಲದಲ್ಲಿ ಯಾಕೆ ಬಂದೆ? ಎಂದು ಕೇಳಿದಳು. ಸುಂದರಿಯಾದ ಅಲ್ಕಾನ್ ಪರಿಯು ಮೌನವಾಗಿ ನಿಂತುಕೊಂಡು, ತಾನು ಬರುವುದಕ್ಕೆ ಕಾರಣವನ್ನು ವಿವರಿಸಿ ಎಂದು ತನ್ನ ಪರಿವಾರದ* ಜನರಿಗೆ ಸನ್ನೆ ಮಾಡಿದಳು. ಆದಂ ಸಂತತಿಯವನಾದ ಒಬ್ಬ ಯೌವನಸ್ಥನನ್ನು ಕಂಡು ರಾಣಿಯು ಮೋಹಿಸಿದ್ದಾಳೆ. ಪ್ರೇಮಶಿಖಿಯು (ಒಬ್ಬರಲ್ಲಿ ಒಬ್ಬರಿಗೆ) ಪರಸ್ಪರವಾಗಿದೆ; ಆ ವಧೂವರರು ಒಬ್ಬರನ್ನೊಬ್ಬರು ಸಂಧಿಸಿ ಏಳುವರುಷವಾಯಿತು; ಆದರೆ ರಾಣಿಯು ಆ ಪುರುಷನನ್ನು ಕಂಣುಮರೆಯಾಗಿ ಆಶಾಭಂಗವಾಗುವುದರ ಯಾತನೆಯನ್ನು ಅನುಭವಿಸಲೆಂದು ದೀರ್ಘಕಾಲ ಬಿಟ್ಟುಬಿಟ್ಟಿದ್ದಳು; ಕಡೆಗೆ ಆ ವಧು ಇರುವ ಸ್ಥಳವನ್ನು ಅವನು ಗೊತ್ತುಮಾಡಿಕೊಂಡನು; ತನ್ನ ಮಾತಾ

* ಹಸ್ತಪ್ರತಿಯಲ್ಲಿ 'ಪರಿವಾದ' ಎಂದಿದೆ.

ಪಿತೃಗಳು ಸಮ್ಮತಿಸಿದರೆ ಆ ಪುರುಷನನ್ನು ತನ್ನ ಪತಿಯಾಗಿ ಅಂಗೀಕರಿಸಲು ಅವಳು ಈಗ ಇಷ್ಟ ಉಳ್ಳವಳಾಗಿದಾಳೆ, ಎಂದು ಅವರು ಹೇಳಿದರು.

ತಾಯಿಯು ಇದನ್ನು ಕೇಳಿದ ಕೂಡಲೆ ತನ್ನ ಗಂಡ ಇದ್ದ ಸ್ಥಳಕ್ಕೆ ಹೋಗಿ ಈ ವಿಚಾರವನ್ನು ಅವನಿಗೆ ತಿಳಿಸಿದಳು. ಅದಕ್ಕೆ ಅವನು—ಇದು ನಮ್ಮ ಮಗಳ ಇಷ್ಟವಾಗಿದ್ದರೆ, ನಾನು ಸಮ್ಮತಿಸುತೇನೆ, ನಾವು ಯಾಕೆ ಅಡ್ಡಿಮಾಡಬೇಕು? ಎಂಬದಾಗಿ ಹೇಳಿದನು. ರಾಣಿಯು ತನ್ನ ಮಾತಾಪಿತೃಗಳ ಸಮ್ಮತಿಯನ್ನು ಹೊಂದಿ ತನ್ನ ಪ್ರಿಯನನ್ನು ಹತೀಮನನ್ನು ಚಾರರ ಮುಖೇನ ಆಗಲೇ ಕರೆಯಿಸಿದಳು. ಅವರು ಜಾಗ್ರತೆಯಾಗಿ ಬಂದರು. ಅರಮನೆಗೆ ಬಂದಮೇಲೆ ಆ ಸುಲಕ್ಷಣವಾದ ರಾಣಿಯು ಆ ತರುಣನನ್ನು ತಮ್ಮ ತಾಯಿಗೆ ತೋರಿಸಿದಳು. ಆ ತಾಯಿಯು ತನ್ನ ಗಂಡನಿಗೆ ತೋರಿಸಿದಳು. ರಾಣಿಯ ತಂದೆಯು ಸಾವಕಾಶ ಮಾಡದೆ ವಿವಾಹಕ್ಕೆ ಸಿದ್ಧಮಾಡಿದನು, ಮತ್ತು ಪರಿಗಳು ಎಂಬ ಖಚರರ ಪದ್ಧತೀ ಪ್ರಕಾರ ತನ್ನ ಮಗಳ ಕೈಯನ್ನು ಹತೀಮನ ಮಿತ್ರ(ನ ಕೈ)ಗೆ ಕೊಟ್ಟನು.

ಹೀಗೆ ಪರಸ್ಪರ ಮೋಹಗೊಂಡಿದ್ದ ದಂಪತಿಗಳು ವಿವಾಹದ ಬಂಧದಿಂದ ಸೇರಿಸಲ್ಪಟ್ಟಾಗ, ಆ ತರುಣನು ಹತೀಮ ಮಾಡಿದ ಉಪಕಾರಕ್ಕೆ ಕೃತಜ್ಞತೆಯನ್ನು ತೋರಿಸುವ ಮಾತುಗಳನ್ನಾಡಿದನು. ಹತೀಮನು ಅಲ್ಲಿ ಏಳು ದಿವಸ ಇದ್ದು ಮುಂದೆ ಪ್ರಯಾಣ ಮಾಡಹೊರಟನು. ಹೊರಡುವ ಸಮಯದಲ್ಲಿ ಪ್ರಪಂಚದ ಯಾವ ಭಾಗದಲ್ಲಿ ಸಂಚಾರ ಮಾಡಬೇಕೆಂಬ ಇಷ್ಟವಿದೆಯೆಂದು ರಾಣಿ ಕೇಳಲಾಗಿ, ಹತೀಮನು ಹಿಮಯಾರ್ ಪರ್ವತಕ್ಕೆ ಹೋಗುತೇನೆಂದು ಹೇಳಿದನು. ಅದಕ್ಕೆ ರಾಣಿಯು—ಗಂಭೀರವಾದ ಹತೀಮನೆ, ನಿನ್ನ ಪ್ರಯಾಣದ ವಿಷಯದಲ್ಲಿ ಯಾವ *ಚಿಂತೆಯನ್ನೂ ಮಾಡಬೇಡ; ಹಿಮಯಾರ್ (ಪರ್ವತವು) ಬಹಳ ದೂರ ಇದೆ. ನನ್ನ ಖಚರರು ಅತ್ಯಂತ ವೇಗದಿಂದ ನಿನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗುತಾರೆ, ಎಂದಳು. (ಹೀಗೆ ಹೇಳಿ) ರಾಣಿಯು ತನ್ನ ಪ್ರಜೆಗಳಲ್ಲಿ ಕೆಲವರನ್ನು ಕರೆಯಿಸಿ ಹಿಮಯಾರ್ ಪರ್ವತವನ್ನು ಕುರಿತು ತಿಳುವಳಿಕೆಯನ್ನು ಹೇಳಿದಳು. ಆಗ ಅವರು ಹತೀಮನನ್ನು ಒಂದು ಅಂಬಾರಿಯಲ್ಲಿ ಕೂರಿಸಿ ಅದನ್ನು ಅತಿಜಾಗ್ರತೆಯಾಗಿ ಎಂದರೆ ಇಪ್ಪತ್ತುನಾಲ್ಕು ಗಂಟೆಯಲ್ಲಿ ಅವನು ಅಪೇಕ್ಷಿಸಿದ ಕಡೆ ಇಳಿಸಿದರು.

೬ ನೇ ಅಧ್ಯಾಯ

ಹಾಗೆ ಹತೀಮನು ಇಳಿದ ಕೂಡಲೆ "ಯಾರಿಗೂ ಕೇಡ ಮಾಡದಿರು, ಕೇಡ ಮಾಡಿದರೆ ನಿನಗೆ ಕೇಡು ಪ್ರಾಪ್ತವಾಗುವುದು" ಎಂದು ಕೂಗುತಾ ಇರುವ ಒಬ್ಬ ಮನುಷ್ಯನ ಧ್ವನಿ ಕೇಳಿಸಿತು. ಹತೀಮನು ತನಗೆ ಬೇಕಾದ ಈ ಧ್ವನಿಯನ್ನು ಕೇಳಿ,

* ಹಸ್ತಪ್ರತಿಯಲ್ಲಿ 'ಚಿತೆ' ಎಂದಿದೆ.

ತನ್ನ ಪ್ರಯಾಣ ಅಲ್ಲಿಗೆ ಮುಗಿಯಿತೆಂದು ತೋರುವುದೆಂತಲೂ ಆ ಪ್ರಾಂತದಲ್ಲಿ ಕೆಲವು ಕಾಲ ತಾನು ಇನ್ನೂ ಇರಬೇಕಾಗಿದೆ ಎಂತಲೂ ಹೇಳಿ ತನ್ನನ್ನು ಅಲ್ಲಿ ಬಿಟ್ಟು ಬಿಡಬೇಕೆಂದು ಖಚರರನ್ನು ಕೇಳಿಕೊಂಡನು. ಖಚರರು ಅದರಂತೆ ಅವನನ್ನು ಅಲ್ಲಿ ಬಿಟ್ಟು ಅಪ್ಪಣೆ ಪಡೆದು ಹೊರಟುಹೋದರು. ಆಗ ಹಶೀಮನು ತನ್ನ ಕಿವಿಗೆ ಆಗ ತಾನೆ ಬಿದ್ದಿದ್ದ ಸದ್ದು ಯಾವ ದಿಕ್ಕಿನಿಂದ ಬಂತೋ ಅದನ್ನು ಹಿಡಿದುಹೋದನು. ಅವನು ಬಹಳ ದೂರ ಹೋಗಲಿಲ್ಲ. ಅಷ್ಟರಲ್ಲಿಯೇ ಒಬ್ಬ ಮುದುಕನನ್ನು ಒಂದು ಪಂಜರದಲ್ಲಿ ಹಾಕಿ ಅದನ್ನು ಒಂದು ಮರಕ್ಕೆ ತಗಲಹಾಕಿದ್ದದನ್ನು ಕಂಡನು. ಆ ಪಂಜರದೊಳಗಿದ್ದವನನ್ನು ಬೆರಗಾಗಿ ನೋಡುತಾ ಹಶೀಮನು ಸ್ವಲ್ಪ ಹೊತ್ತು ನಿಂತು ಕೊಂಡನು. (ಆ ಪಂಜರಸ್ಥನಾದ ಮುದುಕನು) ಪುನಃ "ಯಾರಿಗೂ ಕೇಡ ಮಾಡದಿರು, ಕೇಡ ಮಾಡಿದರೆ ನಿನಗೆ ಕೇಡು ಪ್ರಾಪ್ತವಾಗುವುದು" ಎಂದು ಕೂಗಿದನು.

ಹಶೀಮನು ಆ ಸೆರೆಯಲ್ಲಿದ್ದವನ ಸಮೀಪಕ್ಕೆ ಹೋಗಿ ಅವನನ್ನು ಕುರಿತು

ಹಶೀಮ—ಭಾಗ್ಯಹೀನನೆ, ಹೇಳು, ಈ ಮಾತುಗಳಿಗೆ ಅರ್ಥವೇನು? ಈ ಪಂಜರದಲ್ಲಿ ನಿನ್ನನ್ನು ಯಾಕೆ ಕೂಡಿದಾರೆ? ಅದನ್ನು ಈ ಮರದ ಕೊಂಬೆಗೆ ಯಾಕೆ ತಗಲ ಹಾಕಿದಾರೆ?

ವೃದ್ಧ—ನನ್ನ ಸ್ಥಿತಿಯನ್ನು ಸರಿಮಾಡಿ ನನ್ನ ಕಷ್ಟವನ್ನು ನಿವಾರಣೆ ಮಾಡಲು ನಿನಗೆ ಇಷ್ಟವಿಲ್ಲದಿದ್ದರೆ, ಯಾವ ಪ್ರಶ್ನೆಯನ್ನೂ ನನಗೆ ಹಾಕಬೇಡ. ನನ್ನ ಗುಟ್ಟು ಗಳನ್ನು ತಿಳಿದುಕೊಳ್ಳಲು ನಿನಗೆ ಇಷ್ಟವಿದ್ದರೆ, ಅದನ್ನು ನೀನು ಇನ್ನು ಯಾರಿಗೂ ಹೇಳುವುದಿಲ್ಲವೆಂದು ನನಗೆ ಪ್ರಮಾಣಮಾಡಿ ಮಾತುಕೊಡು.

ಹಶೀಮ—(ಅದಕ್ಕೆ ಒಪ್ಪಿ) ಈ ರೀತಿ ನಾನು ವಾಗ್ದಾನಮಾಡುತೇನೆ. ಅದನ್ನು ಪ್ರಮಾಣಮಾಡಿ ಸ್ಥಿರಪಡಿಸುತೇನೆ.

ವೃದ್ಧ—ನಾನು ಒಬ್ಬ ವರ್ತಕ. ನನ್ನ ಹೆಸರು ಹಮೀದ ಎಂತ. ನನಗೆ ವಯಸ್ಸು ಬಂದಾಗ ನಮ್ಮ ತಂದೆಯು ಈ ಪಟ್ಟಣವನ್ನು ಕಟ್ಟಿ ಮುಗಿಸಿದನು. ಅದಕ್ಕೆ ನನ್ನ ಹೆಸರಿಟ್ಟರು. ಸ್ವಲ್ಪ ದಿವಸಕ್ಕೆ ನಮ್ಮ ತಂದೆಯು ಸಮುದ್ರದ ಮೇಲೆ ಪ್ರಯಾಣ ಮಾಡಿಹೋದನು. (ಹೋಗುವಾಗ) ಈ ಪಟ್ಟಣವನ್ನು ನನ ವಶದಲ್ಲಿ ಬಿಟ್ಟನು. ನಾನು ನಿಷ್ಕಲ್ಮಷ ಹೃದಯನಾಗಿ ಎಲ್ಲರಲ್ಲಿಯೂ ಸೌಜನ್ಯ ಉಳ್ಳವನಾಗಿದ್ದೆ. ಸ್ವಲ್ಪ ದಿವಸದಲ್ಲಿ ನಮ್ಮ ತಂದೆಯು ನನ್ನ ವಶದಲ್ಲಿ ಬಿಟ್ಟಿದ್ದ ಆಸ್ತಿಯನ್ನೆಲ್ಲಾ ಕಳೆದೆ. ನನಗೆ ಬಡತನ ಪ್ರಾಪ್ತವಾಯಿತು. ನಮ್ಮ ತಂದೆಯು ಮನೆಯಲ್ಲಿ ಎಲ್ಲಿಯೋ ನಿಕ್ಷೇಪವನ್ನಿಟ್ಟಿದ್ದನೆಂದು ನನಗೆ ಗೊತ್ತಿತ್ತು. ಸಾಧ್ಯವಾದರೆ ಅದನ್ನು ಈಚೆಗೆ ತೆಗೆಯಬೇಕೆಂದು ಗೊತ್ತುಮಾಡಿಕೊಂಡೆ. ನಾನು ಎಲ್ಲಾ ಕಡೆಯಲ್ಲಿಯೂ ಹುಡುಕಿದೆ. ಏನೂ ಸಿಕ್ಕಲಿಲ್ಲ. ನನ್ನ ದುಃಖ ಪೂರ್ತಿಯಾಗುವುದಕ್ಕೆ ನಮ್ಮ ತಂದೆ ಸತ್ತುಹೋದನೆಂತಲೂ, ಅವನು ಕೊತ್ತು

ಪ್ರಯಾಣ ಮಾಡಿದ ಹಡಗು ಮುಳುಗಿಹೋಯಿತೆಂತಲೂ ನನಗೆ ವರ್ತಮಾನ ತಿಳಿಯಿತು. ಒಂದು ದಿವಸ ನಾನು ಪೇಟೆಯಲ್ಲಿ ದುಃಖದಿಂದ ಖಿನ್ನನಾಗಿ ಸಾಧಾರಣವಾಗಿ ತಿರುಗಾಡಿಕೊಂಡು ಹೋಗುತಾ ಇದ್ದೆ. ಅಲ್ಲಿ ಒಬ್ಬ ವಿದ್ಯಾವಂತನಾದ ಮನುಷ್ಯನನ್ನು ಕಂಡೆ. ಅವನು "ಯಾರಾದರೂ ಹಣವನ್ನು ಕಳವಿನಿಂದಾಗಲಿ ಇತರ ವಿಧವಾಗಿಯಾಗಲಿ ಕಳೆದುಕೊಂಡಿದ್ದರೆ, ನಾನು ರಹಸ್ಯವಾದ ಶಾಸ್ತ್ರಶಕ್ತಿಯಿಂದ ಅದನ್ನು ಬರಮಾಡಿ ಕೊಡಬಲ್ಲೆ. ಅದರೆ ನಾಲ್ಕರಲ್ಲಿ ಒಂದು ಭಾಗವನ್ನು ನನಗೆ ಕೊಡಬೇಕು" ಹೀಗೆ ಕೂಗಿಕೊಂಡ. ಈ ಪ್ರಕಟಣೆಯು ಸಮಯದಲ್ಲಿ ನನಗೆ ತಿಳಿಯಿತು. ಕೂಡಲೆ ನಾನು ಆ ಶಾಸ್ತ್ರಜ್ಞನ ಬಳಿಗೆ ಹೋಗಿ ನನಗೆ ಬಂದಿದ್ದ ದುಃಖವನ್ನು ಹೇಳಿಕೊಂಡೆ. ಹೇಗೆ ನನ್ನ ಐಶ್ವರ್ಯವೆಲ್ಲಾ ಹೋಗಿ ಬಡತನ ಪ್ರಾಪ್ತವಾಯಿತೋ ಅದನ್ನು ಹೇಳಿದೆ. ಆ ಪಂಡಿತನು ನನ್ನ ಭಾಗ್ಯ ಹಿಂದಕ್ಕೆ ಬರುವ ಹಾಗೆ ಮಾಡುವುದಲ್ಲದೆ, ನಮ್ಮ ತಂದೆಯ ಮನೆಯಲ್ಲಿ ರಹಸ್ಯವಾಗಿ ಇಟ್ಟಿದ್ದ ನಿಕ್ಷೇಪವನ್ನು ಈಚೆಗೆ ತೆಗೆದುಕೊಡುವುದಾಗಿ ಹೇಳಿದನು. ಅವನನ್ನು ನನ್ನ ಮನೆಗೆ ಕರೆದುಕೊಂಡುಹೋಗಿ ಪ್ರತಿಯೊಂದು ಸ್ಥಳವನ್ನೂ ತೋರಿಸಿದೆ. ಅವನು ಅಲ್ಲೆಲ್ಲಾ ಚೆನ್ನಾಗಿ ಪರೀಕ್ಷಿಸಿ ಒಂದೊಂದು ಸ್ಥಳವಾಗಿ ನೋಡಿದ. ಕೊನೆಗೆ ಅವನ ಶಾಸ್ತ್ರಜ್ಞಾನದಿಂದ ನಾವು ಹುಡುಕುತಾ ಇದ್ದ ನಿಕ್ಷೇಪವನ್ನು ಹುಡುಕಿ ತೆಗೆದ. ಅಗಣಿತವಾಗಿದ್ದ ಚಿನ್ನಬೆಳ್ಳಿ ಇತರ ಪದಾರ್ಥಗಳು ಇವುಗಳನ್ನು ಕಂಡ ಮೇಲೆ ಮೋಸವೆಂಬ ಪಿಶಾಚಿಯು ನನ್ನ ಹೃದಯಕ್ಕೆ ಹೊಕ್ಕಿತು. ನಾಲ್ಕರಲ್ಲಿ ಒಂದು ಭಾಗವನ್ನು ಆ ಶಾಸ್ತ್ರಜ್ಞನಿಗೆ ಕೊಡುವುದಿಲ್ಲವೆಂದು ತಿರಸ್ಕರಿಸಿದೆ. ಅವನಿಗೆ ಕೆಲವು ಬೆಳ್ಳಿ ಚೂರುಗಳನ್ನು ಕೊಡಲು ಹೋದೆ. ಅವನು ಅದನ್ನು ತೆಗೆದುಕೊಳ್ಳದೆ, ಸ್ವಲ್ಪ ಹೊತ್ತು ಏನೋ ಯೋಚಿಸುತಾ ನಿಂತುಕೊಂಡು, ಮಹಾ ತಿರಸ್ಕಾರವನ್ನು ತೋರಿಸುವ ಮುಖಭಾವದಿಂದ—ನಿನ್ನ ನಿಧಿಯಲ್ಲಿ ನೀನು ಕೊಡುತೇನೆಂದು ಒಪ್ಪಿದ್ದ ಚಾತುರ್ಭಾಗ ಇದೇಯೇ, ನೀಚಮನುಷ್ಯ? ಎಂಥ ಸುಳ್ಳು ಪ್ರಮಾಣವನ್ನು ಮಾಡಿದೆ! ಎಂದನು.

ಇದನ್ನು ಕೇಳಿ ನನಗೆ ಕೋಪ ಬಂತು. ಅವನ ಮುಖದ ಮೇಲೆ ಅನೇಕ ಏಟುಗಳನ್ನು ಹೊಡೆದು ನನ್ನ ಮನೆಯಿಂದ ಆಚೆ ತಳ್ಳಿಸಿಬಿಟ್ಟೆ. ಕೆಲವು ದಿವಸದ ಮೇಲೆ ಅವನು ನಮ್ಮ ಮನೆಗೆ ಬಂದ. (ನನ್ನನ್ನು ಅನುಸರಿಸಿ) ನನ್ನ ನಂಬಿಕೆಗೆ ವಿಶೇಷವಾಗಿ ಪಾತ್ರನಾದ. ನಾವಿಬ್ಬರೂ ಪರಮಮಿತ್ರರಾದೆವು. ಹಗಲು ರಾತ್ರೆಯೂ ಅವನು ಭೂಮಿಯೊಳಗೆ ಬಚ್ಚಿಟ್ಟಿದ್ದ ಅನೇಕ ವಿಧವಿಧವಾದ ನಿಕ್ಷೇಪಗಳನ್ನು ತೋರಿಸಿದ. ಒಂದು ದಿವಸ ಆ ಶಾಸ್ತ್ರವನ್ನು ತನಗೆ ಹೇಳಿಕೊಡಬೇಕೆಂದು ಕೇಳಿಕೊಂಡೆ. ಅದಕ್ಕೆ ಅವನು ಹೇಳಿಕೊಡತಕ್ಕ ಅಗತ್ಯವೇನೂ ಇಲ್ಲವೆಂದು ಹೇಳಿದ. ಮತ್ತು ಅವನು—ಇಲ್ಲಿ ಒಂದು ಸುರ್ಮ (ಎಂಬ ಕಂಣಿಗೆ ಎಚ್ಚಿಕೊಳ್ಳುವ ಕಪ್ಪು) ಇದೆ,

ಯಾರಾದರೂ ಇದನ್ನು ಕಂಣಿಗೆ ಎಚ್ಚಿಕೊಂಡರೆ, ಅಂಥವರಿಗೆ ಪ್ರಪಂಚದಲ್ಲಿರುವ ನಿಕ್ಷೇಪನೆಲ್ಲಾ ಕಾಣುವುದು ಎಂದ. ಆಗ ನಾನು, ಸ್ವಾಮಿ, ಮಹಾ ಪಂಡಿತರೆ ಈ ಪದಾರ್ಥವನ್ನು ನನ್ನ ಕಂಣಿಗೆ ಎಚ್ಚಿದರೆ, ನಾನು ಕಂಡು ತೆಗೆಯಬಹುದಾದ ನಿಕ್ಷೇಪದಲ್ಲಿ ಅರ್ಧವನ್ನು ನಿನಗೆ ಕೊಡುತೇನೆ, ಎಂದು ವಾಗ್ದಾನ ಮಾಡಿದೆ. ಆಗ ಆ ಮಿತ್ರನು—ನಾನು ಒಪ್ಪುತೇನೆ, ಈ ಮಧ್ಯ ನಾವು ಕಾಡಿಗೆ ಹೋಗೋಣ, ಅಲ್ಲಿ ನಮಗೆ ಯಾವ ವಿಘ್ನಗಳೂ ಇರುವುದಿಲ್ಲ, ಎಂದು ಹೇಳಿದ.

ನಾವಿಬ್ಬರೂ ಹೊರಟೆವು. ಇಲ್ಲಿಗೆ ಬಂದೆವು. ಈ ಪಂಜರವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇದು ಯಾರದು ಎಂದು (ಆ ಪಂಡಿತನನ್ನು) ಕೇಳಿದೆ. ಅದು ಯಾರದೂ ಅಲ್ಲವೆಂದು ಅವ ನುಡಿದ. ನಾವಿಬ್ಬರೂ ಈ ಮರದ ಕೆಳಗೆ ಕೂತುಕೊಂಡೆವು. ಆ ಪಂಡಿತನು ಆ ಸುರ್ಮವನ್ನು ತನ್ನ ಅಂಗಿಯ ಬೊಕ್ಕಸದಿಂದ ತೆಗೆದು ನನ್ನ ಕಂಣಿಗೆ ಎಚ್ಚಿದ. ಆ ಕ್ಷಣದಲ್ಲಿ ಶುದ್ಧವಾಗಿ ನನಗೆ ಕಂಣುಹೋಯಿತು. ಶೋಕದ ಧ್ವನಿಯಲ್ಲಿ ಯಾಕೆ ಹೀಗೆ ಮಾಡಿದೆ ಎಂದು ಕೇಳಿದೆ. ಅದಕ್ಕೆ ಅವನು—ದ್ರೋಹಿತನಕ್ಕೆ ಇಂಥಾದ್ದೆ ಬಹುಮಾನ. ನಿನಗೆ ಪುನಃ ನೇತ್ರಪಾಟವ ಬರಬೇಕಾದರೆ, ನೀನು ಈ ಪಂಜರದೊಳಗಿದ್ದು ಕಾಯಕ್ಲೇಶ ಪಡಬೇಕು ಎಂದು ಉತ್ತರ ಹೇಳಿದ. ನೀನು ಯಾವ ದೂರನ್ನೂ ಯಾರಲ್ಲಿಯೂ ಹೇಳಕೂಡದು, ನೀನು ಆಗಾಗ್ಗೆ "ಯಾರಿಗೂ ಕೆಟ್ಟದನ್ನು ಮಾಡಬೇಡ, ಹಾಗೆ ಕೆಟ್ಟದ್ದು ಮಾಡಿದರೆ ನಿನಗೆ ಕೆಟ್ಟದಾಗುವುದು" ಎಂಬುದಾಗಿ ಕೂಗುತಾ ಇರಬೇಕು, ಎಂಬುದಾಗಿ ಹೇಳಿದ.

ಆ ವಿದ್ವಾಂಸನನ್ನು ಕುರಿತು ನನ್ನನ್ನು ಬಿಡುಗಡೆ ಮಾಡೈಯ್ಯಾ ಎಂದು ವಿನಯವಾಗಿ ಕೇಳಿಕೊಂಡು ನಾನು ಅವನಿಗೆ ಹೇಳಿದ್ದೇನೆಂದರೆ—ನನ್ನ ಹಾಗೆಯೇ ನೀನೂ ಒಬ್ಬ ಮನುಷ್ಯ, ಸಜಾತೀಯನಾದ ನನ್ನನ್ನು ಹೀಗೆ ಹಿಂಸೆ ಮಾಡಬಹುದೆ? ಈ ನಿನ್ನ ಕೃತ್ಯಕ್ಕೆ ದೇವರಲ್ಲಿ ಏನು ಉದಾಹರಣೆ ಕೊಡುತೀಯೆ? ಹೀಗೆ ನಾನು ಹೇಳಿದೆ. ಇದಕ್ಕೆ ಅವನು—ನಿನ್ನ ದ್ರೋಹಕ್ಕೆ ಇದೇ ಬಹುಮಾನ, ಎಂದ. ನನಗೆ ಕಂಣದೃಷ್ಟಿ ಯಾವಾಗ ಹೇಗೆ ಬರುವುದು? ಎಂದು ಕೇಳಿದೆ. ಇದಕ್ಕೆ ಅವನು—ಒಬ್ಬ ಉತ್ತಮ ಪುರುಷನಾದ ಯೌವನಸ್ಥನು ಒಂದಾನೊಂದು ದಿವಸ ಬಂದು ಕಾಣುತಾನೆ. ಅವನಿಗೆ ನಿನ್ನ ಸ್ಥಿತಿಯನ್ನೆಲ್ಲಾ ಹೇಳಿಕೊ. ಹಿಮಯಾರ್ ಕಾಡಿನಲ್ಲಿ ಪ್ರಕಾಶ ಪುಷ್ಪವೆಂದು ಇದೆ. ಅದನ್ನು ಆ ತರುಣನು ತಂದು ನಿನ್ನ ಕಂಣಿಗೆ ಹಾಕಿದರೆ, ಕಂಣು ಬರುವುದು, ಎಂದು ಹೇಳಿದ. ಈ ಸೆರೆಗೆ ಅವನು ನನ್ನನ್ನು ತಂದುಬಿಟ್ಟು ಸುಮಾರು ಮೂರು ವರುಷವಾಯಿತು. ಇದು ತೆರೆದಿದ್ದಾಗ್ಯೂ ನಾನು ಇದನ್ನು ಬಿಟ್ಟುಹೋಗಲಾರೆ. ನನ್ನ ಅಂಗಗಳಲ್ಲಿ ಅದ್ಯಂತವಾಗಿ ಯಮಯಾತನೆ ಉಂಟಾಗುತಾ ಇದೆ. ಅಳ್ಳಾಡುವುದಕ್ಕೂ ಶಕ್ತಿ ಇಲ್ಲ. ನಾನು ಇಲ್ಲಿಯೇ ಇರಬೇಕಾಗಿದೆ. ಒಂದು ದಿವಸ ನನ್ನ ಸಂಗಡ ಇದ್ದ ಮನುಷ್ಯ ಹೊರಟುಹೋದಮೇಲೆ—ಈ ಪಂಜರದಲ್ಲಿ ಪಕ್ಷಿಯ ಹಾಗೆ ನಾನಿರುವವರೆಗೂ ನನಗೋಸ್ಕರ ನಾನು ಏನೂ ಮಾಡಿಕೊಳ್ಳುವುದ

ಕ್ಕಾಗುವುದಿಲ್ಲ, ಎಂದು ನನ್ನ ಮನಸ್ಸಿನಲ್ಲಿ ನಾನೇ ಯೋಚಿಸಿ ಯಾವ ಅಪಾಯ ಬಂದರೂ ಬರಲಿ, ನಾನು ಅದನ್ನು ತಪ್ಪಿಸಿಕೊಂಡು ಹೋಗಬೇಕೆಂದು ನಿಷ್ಕರ್ಷೆ ಮಾಡಿಕೊಂಡೆ. ಅದನ್ನು ಬಿಟ್ಟು ಆಚೆಗೆ ಹೋದ ಕ್ಷಣದಲ್ಲಿಯೇ ನನ್ನ ಶರೀರದಲ್ಲೆಲ್ಲಾ ವ್ಯಾಪನೆಯಾಗಿದ್ದ ಯಾತನೆಯಿಂದ ನನ್ನ ಪ್ರಾಣವೇ ಹೋಗುವ ಹಾಗಾಯಿತು. ಕೂಡಲೇ ನನ್ನ ಕಾರಾಗೃಹದೊಳಕ್ಕೆ ಹೋದೆ. ಆಗಿನಿಂದ, ನನ್ನ ಅದೃಷ್ಟ ಹೀಗಾಯಿತೇ ಎಂದುಕೊಳ್ಳುತಾ ಮೊದಲೇ ನಿನ್ನ ಗಮನವನ್ನು ಆಕರ್ಷಣೆಮಾಡಿದ ಮಾತನ್ನು ಹೇಳಿಕೊಳ್ಳುತಾ ಇದೇನೆ. ಅನೇಕ ಜನರು ನನ್ನ ಪಕ್ಕದಲ್ಲಿಯೇ ಹೋದರು. ನನ್ನ ಸ್ಥಿತಿಯನ್ನು ಕೇಳಿ, ನಾನು ಹೇಗಿದ್ದೇನೊ ಹಾಗೆ ಬಿಟ್ಟು ನನ್ನ (ಕಷ್ಟ) ನಿವಾರಣೆಗೆ ಯೇನೂ ಮಾಡದೇ ಹೋದರು. ನನ್ನನ್ನು ಬಂದು ನೋಡಿದವರ ಸಂಖ್ಯೆಗೆ ನೀನು ಒಂದನ್ನು ಹೆಚ್ಚಾಗಿ ಸೇರಿಸಿದೆ. ನೀನು ನನಗೆ ಸಹಾಯಮಾಡಲು ಇಷ್ಟವಿದೆಯೆ ? ”

ಪಂಜರಸ್ಥನಾದ ಆ ಪುರುಷನಿಂದ ಹತೀಮನು ಈ ವಿಚಾರವನ್ನು ಕೇಳಿ— ಅಯ್ಯಾ ಮಿತ್ರ, ಸಂತೋಷವಾಗಿರು; ನಿನಗೆ ಕೂಡಲೆ ಸೆರೆಬಿಡಿಸಲು ಯತ್ನ ಮಾಡುತೇನೆ, ಎಂದು ಹೇಳಿ ಸಾವಕಾಶ ಮಾಡದೆ, ಪ್ರಕಾಶ ಪುಷ್ಪ ಇರುವ ಕಾಡಿಗೆ ಅದನ್ನು ಆರಸಿಕೊಂಡು ಹೋದ, ಈ ಕಡೆಗೆ ಹತೀಮನನ್ನು ಕರೆದು ತಂದು ಖಚರರು ಅವನ ಮಾತಿನ ಪ್ರಕಾರವೇ ಪರೀ ರಾಜ್ಯಕ್ಕೆ ಹೊರಟುಹೋಗಿದ್ದರಷ್ಟೆ. ಅವರು ಹೋಗಿ ಅಲ್ಮಾನಪರಿಯನ್ನು ಕಂಡಾಗ, ಹತೀಮನು ಹಿಮಯಾರ್ ಕಾಡಿನಲ್ಲಿರುವ ವರೆಗೂ ಅವನ ಸಂಗಡ ಇದ್ದು ತರುವಾಯ ಅವನನ್ನು ಷಹಾಬಾದಿಗೆ ಕರೆದುಕೊಂಡು ಹೋಗಿ ಬಿಟ್ಟುಬನ್ನಿ ಎಂದು ಹೇಳಿ ಆ ರಾಣಿಯು (ಅದೇ) ಖಚರರನ್ನು ಕಳುಹಿಸಿದಳು. ಹತೀಮನು ಪ್ರಕಾಶ ಪುಷ್ಪವನ್ನು ಆರಸಿಕೊಂಡು ಕಾಡಿಗೆ ಬಂದಾಗ ಮೊದಲು ತನ್ನನ್ನು ಕರೆದು ತಂದ ಪರಿಖಚರರನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ಆ ಖಚರರು ಹತೀಮನನ್ನು ಬಲ್ಲವರಾದ್ದರಿಂದ ಮರ್ಯಾದೆಯಿಂದ ಅವನ ಸಮೀಪಕ್ಕೆ ಬಂದು ನಡೆದ ಸಂಗತಿಯನ್ನೆಲ್ಲಾ ಹೇಳಿ, ಅವನ ಸೇವೆಗೆ ಸಿದ್ಧವಾಗಿದೇವೆಂದು ತಿಳಿಸಿ, ಯಾವ ಕಡೆಗೆ ಹೋಗಬೇಕು, ಎಂದು ಕೇಳಿದರು.

ಹತೀಮ—ಈ ಕಾಡಿನಲ್ಲಿ ಎಲ್ಲಿಯೋ ಬಿಡತಕ್ಕ ಪ್ರಕಾಶಪುಷ್ಪವನ್ನು ತರಲು ಹೋಗುತೇನೆ.

ಖಚರರು—ಆ ಸ್ಥಳಕ್ಕೆ ನಿನ್ನನ್ನು ಜಾಗ್ರತೆಯಾಗಿ ಎತ್ತಿಕೊಂಡು ಹೋಗುತೇವೆ. ಕೊನೆಗೆ ಆ ಗಿಡ ಯಾವ ಹೊಲದಲ್ಲಿ ಬೆಳೆಯುವುದೋ ಅದನ್ನು ದೂರದಿಂದ ನಿನಗೆ ತೋರಿಸುತೇವೆ. ನೀನು ಅಲ್ಲಿಂದ ಜೀವಂತನಾಗಿ ಬಂದರೆ, ನಾವು ನಿನ್ನನ್ನು ನಿಮ್ಮ ದೇಶಕ್ಕೆ ಕರೆದುಕೊಂಡು ಹೋಗಲು ಸಿದ್ಧವಾಗಿರುತೇವೆ ಈ ಸಾಹಸಕರವಾದ ಕಾರ್ಯದಲ್ಲಿ ನಿನಗೇನಾದರೂ ಕೇಡು ಸಂಭವಿಸುವುದಾಗಿದ್ದರೆ ಆ ವರ್ತಮಾನವನ್ನು ಕೊಂಡುಹೋಗಿ ನಮ್ಮೊಡತಿಗೆ ತಿಳಿಸುತೇವೆ.

ಹತೀಮ—ಯಾಕೆ ನೀವು ಉದ್ದಕ್ಕೂ ನನ್ನ ಸಂಗಡ ಬರುವುದಿಲ್ಲವೆ ?

ಖಚರರು—ನಾವು ಆ ಸ್ಥಳದ ಹತ್ತಿರಕ್ಕೆ ಬರುವುದು ಉಪಯೋಗವಿಲ್ಲ, (ಹಾಗೆ ಮಾಡುವುದರಿಂದ, ಅಪಾಯವಾಗಬಹುದು. ಆ ಗಿಡವು ಹೂ ಬಿಡುವಾಗ ಅದು ಬೆಳೆಯತಕ್ಕ ಹೊಲವು ಅಷ್ಟೊಂದು ದೀಪ ಹತ್ತಿಸಿದ ಹಾಗೆ ಪ್ರಕಾಶಮಾನವಾಗಿರುವುದು. ಅದು ಕೊಡತಕ್ಕ ಸೊಗಸಾದ ಬೆಳಕು ಎಂಥಾದ್ದೆಂದರೆ, ನೀನು ಹುಡುಕತಕ್ಕ ಪದಾರ್ಥ ಸುಲಭವಾಗಿ ಕಂಣಿಗೆ ಕಾಣುವುದು. ಆದರೆ ಇನ್ನೂ ಒತ್ತಟ್ಟಿ (ವಿಚಾರ ಮಾಡಲಾಗಿ), ಆ ಹುವ್ವಿನ ಸುತ್ತಲೂ ಸಾವಿರಾರು ಭಯಂಕರವಾದ ಸರ್ಪಗಳೂ, ವಿಷದ ಚೇಳುಗಳೂ, ಗೊತ್ತಿಲ್ಲದಷ್ಟು ಇತರ ಪ್ರಬಲವಾದ ಜಂತುಗಳೂ ಇವೆ. ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಕೂಡ ಆ ವಿಷಮಯವಾದ ಸ್ಥಳದ ಸಮೀಪಕ್ಕೆ ಬರಲಾರವು.

ಹತೀಮ—ನೀವು ನನ್ನನ್ನು ಒಂದು ಸಾರಿ ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟು ಬಿಡಿ, ಉಳಿದದ್ದನ್ನೆಲ್ಲಾ ನೋಡಿಕೊಳ್ಳುವ ಕೆಲಸ ನನ್ನದು.

ಆಗ ಆ ಪರಿಖಚರರು ಹತೀಮನನ್ನು ಎತ್ತಿಕೊಂಡು ಆಕಾಶ ಮಾರ್ಗದಲ್ಲಿ ಏಳು ದಿವಸ ಪ್ರಯಾಣಮಾಡಿ ಸುಮಾರು ಅರ್ಧ ರಾತ್ರಿಯಲ್ಲಿ ಒಂದು ವಿಸ್ತಾರವಾದ ಮೈದಾನದೊಳು ಇಳಿದರು. ತಾನು ಆತುರವಾಗಿ ಕಿತ್ತುಕೊಳ್ಳಬೇಕೆಂದಿರುವ ಹೂವನ್ನು ತೋರಿಸಿ ಎಂದು ಅವರನ್ನು ಹತೀಮ ಕೇಳಿದನು. ಅದು ಹೂಬಿಡುವ ಕಾಲವಿನ್ನೂ ಇಲ್ಲವೆಂದು ಖಚರರು ಹೇಳಿದರು. ಆಗ ಅವನು ಆ ಕಾಲ ಬರುವವರೆಗೂ ತಾನು ಅಲ್ಲಿಯೇ ಇರುತೇನೆಂದು ಗೊತ್ತುಮಾಡಿಕೊಂಡನು. ಈ ಮಧ್ಯೆ ಆ ಖಚರರು ತಿನ್ನುವುದಕ್ಕೆ ಎಲ್ಲಾ ದಿಕ್ಕಿನಿಂದಲೂ ಆಹಾರವನ್ನೂ, ದಾಹವನ್ನು ಹಿಂಗಿಸಿಕೊಳ್ಳುವುದಕ್ಕೆ ಹಂಣುಗಳನ್ನೂ ನೀರನ್ನೂ ಒದಗಿಸಿ ತಂದುಕೊಟ್ಟರು. ಇದರಿಂದ ಅವನು ಆ ದೂರವಾದ ಕಾಡಿನಲ್ಲಿ ದೊರೆಮಗನ ಹಾಗೆ (ಸುಖವಾಗಿ) ಇದ್ದ. ಕಾಲಕ್ರಮದಲ್ಲಿ ಪ್ರಕಾಶಪುಷ್ಪವು ಹೊಲದಲ್ಲಿ ಅರಳುವುದಕ್ಕೆ ಆರಂಭವಾಯಿತು, ಒಂದೊಂದೂ ಒಂದು ದೀಪದ ಹಾಗಿತ್ತು. ಬೈಲೆಲ್ಲಾ ಜಗಂಜ್ಯೋತಿಯಾಗಿ ಕಾಣುತಿತ್ತು. ಆ ಮರಳ ಕಾಡಿನಲ್ಲಿ ಬೀಸುವ ಗಾಳಿಯೆಲ್ಲಾ ಅತ್ಯಂತ ಸುವಾಸನೆಯಿಂದ ತುಂಬಿಕೊಂಡು ಬಿಟ್ಟಿತು. ಈ ಮಧ್ಯೆ ಲೆಕ್ಕವಿಲ್ಲದಷ್ಟು ಹಾವುಗಳೂ ಚೇಳುಗಳೂ ಮಾಂಸಹಾರಿಗಳಾದ ಇತರ ಮೃಗಗಳೂ ಭೂಮಿಯೊಳಗಿನಿಂದ ಈಚೆಗೆ ಹೊರಟು ಆ ಪ್ರಕಾಶಮಾನವಾದ ಹೂಗಳನ್ನು ಮುತ್ತಿಕೊಂಡವು. ಪರಿ ಖಚರರು ಇದನ್ನು ಕಂಡು ಭಯಚಕಿತರಾಗಿ ನಿಂತುಕೊಂಡರು. ಹತೀಮನು ಭೀತಿಪಟ್ಟ ಅವರನ್ನು ಕಂಡು–ಅಪಾಯ ಸಂಭವಿಸದ ಹಾಗೆ ನೀವು ದೂರ ಇರಿ. ನಾನು ದೇವರಲ್ಲಿ ನಂಬಿಕೆ ಇಟ್ಟಿದೇನೆ. ಏನು ಸಂಭವಿಸಿದಾಗ್ಯೂ ನನ್ನ ಸಾಹಸದ ಕೆಲಸ ಬಿಟ್ಟು ನಾನು ಹಿಂತೆಗೆಯುವುದಿಲ್ಲ, ಎಂದು ನುಡಿದನು. ಹತೀಮನು ಈ ಪ್ರಕಾರ ನಿಷ್ಕರ್ಷೆ ಮಾಡಿಕೊಂಡು ಭಲ್ಲೂಕ ಪುತ್ರಿ ಕೊಟ್ಟಿದ್ದ ಯಂತ್ರವನ್ನು ಕೈಗೆ ತೆಗೆದುಕೊಂಡು ಭಯವಿಲ್ಲದೆ ಆ ಹೊಲದ

ಮಧ್ಯ ಭಾಗಕ್ಕೆ ನುಗ್ಗಿ ಹೋಗಿ ಅಲ್ಲಿ ಅತ್ಯಂತ ದೊಡ್ಡದಾಗಿಯೂ ಅತ್ಯಂತ ಪ್ರಕಾಶಮಾನವಾಗಿಯೂ ಇದ್ದ ಮೂರು ಪುಷ್ಪಗಳನ್ನು ಕಿತ್ತುಕೊಂಡು ಯಾವ ಅಪಾಯವೂ ಇಲ್ಲದೆ ಖಚರರಿದ್ದ ಕಡೆಗೆ ಬಂದನು. ಈ ಧೈರ್ಯವನ್ನೂ ಸಾಹಸವನ್ನೂ ಕಂಡ ಆಶ್ಚರ್ಯಪಟ್ಟು, ಈ ಹತೀಮನ ವಿಚಾರವು ತಮ್ಮ ತಿಳುವಳಿಕೆಯ ಮೇರೆಯನ್ನು ಮೀರಿದೆ ಎಂದುಕೊಂಡರು. ಅವನು ಮಾಡಿದ ಸನ್ನೆಯಂತೆ ಅವನನ್ನು ತಮ್ಮ ಹೆಗಲಮೇಲೆ ಕೂರಿಸಿಕೊಂಡು ಜಾಗ್ರತೆಯಿಂದ ಆಕಾಶದಲ್ಲಿ ಹಾರಿ ಹಮೀದನನ್ನು ಸೆರೆಹಾಕಿದ್ದ ಕಾಡಿಗೆ ಬಂದರು.

ಆಗ ಹತೀಮನು ಹಮೀದನ ಸಮೀಪಕ್ಕೆ ಹೋಗಿ

ಹತೀಮ—(ಹಮೀದನನ್ನು ಕುರಿತು) ಮಿತ್ರನೆ, ದುಃಖ ಪಡಬೇಡ. ಪುನಃ ನಿನಗೆ ದೃಷ್ಟಿಯನ್ನುಂಟುಮಾಡುವುದೆಂದು ನೀನು ಹೇಳಿದ ಹೂವನ್ನು ನೋಡು.

ಕುರುಡ—(ದೇವರಿಗೆ ತನ್ನ ಕೃತಜ್ಞತೆಯನ್ನು ಜಪಿಸಿ) ಅಯ್ಯಾ ಧೀರ, ಆ ಹೂವಿನ ರಸವು ನನ್ನ ಕಂಣಿಗೆ ಬೀಳುವ ಹಾಗೆ ಆ ಹೂವಿನ ಅಡಿ ಹಿಡಿದು ನಿನ್ನ ಕೈಯಿಂದಲೇ ಹಿಂಡು.

ಆಗ ಹತೀಮನು ಮರದ ಕೊಂಬೆಯಿಂದ ಆ ಪಂಜರವನ್ನು ಬಿಚ್ಚಿ ಅದರೊಳಗಿದ್ದವನನ್ನು ಈಚೆಗೆ ಬಿಟ್ಟು ಅವನ ಕಂಣಿಗೆ ಆ ರಸವನ್ನು ಹಿಂಡಿದನು. ಮೂರು ಸಾರಿ ಹೀಗೆ ಮಾಡಲು ಕುರುಡನಾದ ಹಮೀದನು ಕಡೆಗೆ ಕಂಣನ್ನು ಬಿಟ್ಟನು, ಮತ್ತು ಹತೀಮನನ್ನು ನೋಡಿ ಅವನ ಕಾಲಿಗೆ ನಮಸ್ಕಾರ ಮಾಡಿ ವಂದಿಸಿದನು. ಹತೀಮನು ಅವನನ್ನು ಮೇಲಕ್ಕೆ ಎತ್ತಿಕೊಂಡು ಅವನೊಡನೆ—ಅಯ್ಯಾ ಸನ್ಮಿತ್ರ ಯಾಕೆ ಇಷ್ಟೊಂದು ಉಪಚಾರ? ಆ ಸೃಷ್ಟಿಕರ್ತನ ಸೇವೆ ಮಾಡುವುದಕ್ಕೇ ನಾನಿರುವುದು. ಧರ್ಮಕಾರ್ಯಗಳನ್ನು ಮಾಡತಕ್ಕದ್ದು ಶಾಶ್ವತವಾದ ಆನಂದವೆಂದು ನಾನು ತಿಳಿಯುತೇನೆ, ಎಂದು ಹೇಳಿದನು. ಅದಕ್ಕೆ

ಹಮೀದ—ಉದಾರನಾದ ಮನಸ್ಸುಳ್ಳ ರಾಜಕುಮಾರನೆ, ನನ್ನ ಮನೆಯಲ್ಲಿ ಚಿನ್ನಬೆಳ್ಳಿ ಪ್ರಾಪಂಚಿಕ ಸಂಬಂಧವಾದ ಐಶ್ವರ್ಯವೆಲ್ಲಾ ಇದೆ. ನಿನಗೆ ಯುಕ್ತ ತೋರುವಷ್ಟು ಭಾಗವನ್ನು ತೆಗೆದುಕೊ.

ಹತೀಮ—ನಿಜವಾಗಿ ಹೇಳುತೇನೆ, ಪ್ರಾಪಂಚಿಕ ಸಂಬಂಧವಾದ ಐಶ್ವರ್ಯ ನನಗೆ ಉಪಯೋಗವಿಲ್ಲ. ನನಗೆ ಬೇಕಾಗುವುದಕ್ಕಿಂತಲೂ ಹೆಚ್ಚಾಗಿ ನನ್ನಲ್ಲಿ ಮೊದಲಿನಿಂದ ಇದೆ. ನಿನ್ನಲ್ಲಿರುವ ಹಣವನ್ನು ದೇವರು ಸುಪ್ರೀತನಾಗುವ ಹಾಗೆ ಯೆಂದರೆ ಹಸಿದವರಿಗೆ ಅನ್ನ ಹಾಕುವುದರಲ್ಲಿಯೂ ಬಟ್ಟೆ ಇಲ್ಲದವರಿಗೆ ಬಟ್ಟೆ ಕೊಡುವುದರಲ್ಲಿಯೂ ವೆಚ್ಚಮಾಡೆಂದು ನಾನು ಹೇಳುತೇನೆ.

ತರುವಾಯ ಹತೀಮನು ಕಾಡಿನಲ್ಲಿ ಸಿಕ್ಕಿದ ಮನುಷ್ಯನ ಅನುಮತಿಯನ್ನು ಹೊಂದಿ ಅಂಬಾರಿಯಲ್ಲಿ ಕೂತುಕೊಂಡನು. ಆಗ ಖಚರರು ಆಕಾಶಮಾರ್ಗದಲ್ಲಿ ಜಾಗ್ರತೆಯಾಗಿ ಹೊರಟು ಕೆಲವು ದಿವಸದಲ್ಲಿ ಷಹಾಬಾದಿಗೆ ಬಂದು ಮುಟ್ಟಿದರು.

ಆ ವೂರ ಬಾಗಿಲಲ್ಲಿ ಅವನು ಇಳಿದನು. ಖಚರರು ಹಿಂತಿರುಗಿ ಹೊರಡುವ ಸಂದರ್ಭದಲ್ಲಿ ಸುರಕ್ಷಿತವಾಗಿ ಬಂದು ತಲಪಿದೆನೆಂದು ತಮ್ಮ ರಾಣಿಗೆ ಒಂದು ಕಾಗದವನ್ನು ದಯಪಾಲಿಸಬೇಕೆಂದು ಕೇಳಿಕೊಂಡರು. ಹತೀಮನು ಇದಕ್ಕೆ ಒಪ್ಪಿದನು. ಆಗ ಖಚರರು ಅಪ್ಪಣೆ ಪಡೆದು ಹೊರಟರು. ಹತೀಮನು ಊರಿಗೆ ಬಂದ ಕೂಡಲೆ ಹಸನ್‌ಬನುವಿನ ಕಡೆಯವರು ಇವನ ಗುರುತನ್ನು ಕಂಡುಹಿಡಿದು ಅವನನ್ನು ತಮ್ಮ ಒಡತಿಯ ಸಮೀಪಕ್ಕೆ ಕರೆದುಕೊಂಡು ಹೋದರು. ಹಸನ್‌ಬನುವು ಅತ್ಯಂತ ದಯೆ (ಮರ್ಯಾದೆ) ಯಿಂದ ಅವನನ್ನು ಕಂಡು ಅವನ ಸಾಹಸವನ್ನು ಕುರಿತು ಅನೇಕ ಪ್ರಶ್ನೆಗಳನ್ನು ಕೇಳಿದಳು. ಹತೀಮನು ತನ್ನ ಪ್ರಯಾಣದಲ್ಲಿ ತಾನು ನೋಡಿದ್ದನ್ನೂ ತಾನು ನಿರ್ವಹಿಸಿದ ಕಾರ್ಯಗಳನ್ನೂ ವಿವರಿಸಿದನು. ಹಸನ್‌ಬನುವು ಅನ್ನವನ್ನೂ ನೀರನ್ನೂ ಅವನಿಗೆ ತರಿಸಿಕೊಟ್ಟಳು. ಅವನು ಅದನ್ನು ಮುಟ್ಟದೆ ಆಸ್ಸಿರಿಯ ದೇಶದ ರಾಜಪುತ್ರನನ್ನು ಭೋಜನಕ್ಕೆ ಕರೆಯಬೇಕೆಂದು ಕೇಳಿಕೊಂಡನು. ಕೂಡಲೆ ಮುನೀರನನ್ನು ಕರೆಯಿಸಿದರು. ಅವನು ಬಂದು ಹತೀಮನಿಗೆ ವಿಶೇಷವಾದ ಮರ್ಯಾದೆಯನ್ನು ತೋರಿಸಿದ ತರುವಾಯ ಅವರಿಬ್ಬರೂ ಒಟ್ಟಿಗೇ ಕೂತು ಭೋಜನ ಮಾಡಿದರು. ಭೋಜನವಾದ ಮೇಲೆ ಹಸನ್‌ಬನುವನ್ನು ಕುರಿತು

ಹತೀಮ—ಅಮ್ಮ, ನಿನ್ನ ಮುಂದಿನ ಒಗಟೆ ಯಾವುದು ?

ಹಸನ್‌ಬನು - ಒಬ್ಬ ಮನುಷ್ಯನಿದಾನೆ, ಅವನು “ಯಾರು ನಿಶ್ಚಯ ಹೇಳುತಾರೋ ಅವರು ಸದಾ ಸಮಾಧಾನವಾಗಿರುತಾರೆ” ಎಂದು ಕೂಗುತಾನೆ. ಹೋಗಿ ಆ ಮನುಷ್ಯನನ್ನು ಕಂಡುಹಿಡಿ, ಅವನು ಯಾವಾಗ ನಿಶ್ಚಯ ಹೇಳಿದಾನೆ, ಅದರ ಫಲವಾಗಿ ಎಷ್ಟರಮಟ್ಟಿಗೆ ಸಮಾಧಾನವಾಗಿದಾನೆ ? ಎಂಬುದನ್ನು ನನಗೆ ತಿಳಿಸು.

ಹತೀಮ—ಪ್ರಪಂಚದ ಯಾವ ಭಾಗದಲ್ಲಿ ಈ ಮನುಷ್ಯ ವಾಸವಾಗಿದಾನೆ ಎಂದು ನಾನು ಕೇಳಬಹುದೆ ?

ಹಸನ್‌ಬನು—ಅದು ನನಗೆ ತಿಳಿಯದು, ಆದರೆ ಆ ಪಟ್ಟಣದ ಹೆಸರು ಕರಂಪ ಎಂದು ನನ್ನ ದಾದಿ ಹೇಳಿದಳು.

ಹತೀಮ—ಸಾಕು, ಇದರಲ್ಲಿಯೂ ದೇವರು ನನಗೆ ಮಾರ್ಗವನ್ನು ತೋರಿಸುತಾನೆ. ತರುವಾಯ ಹಸನ್‌ಬನುವಿನ ಅನುಮತಿ ಹೊಂದಿ ಹತೀಮನು ತನ್ನ ಸ್ನೇಹಿತನಾದ ಮುನೀರ್‌ನೊಡನೆ ಕಾರವಾನ್‌ಸಿರೈಗೆ ಹೋದನು.

(ಮುಂದುವರೆಯುವುದು)

ರಾಳ್ಲಪಲ್ಲಿ ಅನಂತಕೃಷ್ಣಶರ್ಮ
ಅನು: ಡಿ. ಆರ್. ವೆಂಕಟರಮಣನ್

ವೇಮನ

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ವೇಮನನ ಕವಿತ್ವ, ಹಾಸ್ಯ, ನೀತಿಗಳು

ವೇಮನನು ಕವಿಯೆಂದು ಹೆಸರು ಸಂಪಾದಿಸಿದ ಕವಿಗಳಲ್ಲಿ ಸೇರಿದವನೆಂದು ಆಗಲೆ ಹೇಳಿದೆ. ಹೆಸರು ಬರುವುದಕ್ಕೆ ಕಾರಣಗಳು ಎರಡು. ಜನದ ಅಭಿರುಚಿಯನ್ನು ತಿಳಿದು ಅವರಿಗೆ ತೃಪ್ತಿಯಾಗುವಂತೆ ಬರೆದಾಗ ಅವನಿಗೆ ಹೆಸರು ಬರುತ್ತದೆ. ಕವಿಯ ಶ್ರೇಷ್ಠತೆಯನ್ನು ತಿಳಿಯುವ ಜನರಿದ್ದರೂ ಅದು ಬರುತ್ತದೆ. ವೇಮನನ ವಿಷಯದಲ್ಲಿ ಇವೆರಡೂ ಇಲ್ಲದೆ ಹೋಯಿತು.

ಈತನು ಇತರರಿಗೆ ಹಿತವುಂಟಾಗಬೇಕೆಂಬ ಉದ್ದೇಶದಿಂದ ಬರೆದನೇ ಹೊರತು, ಅವರು ತೃಪ್ತಿ ಪಡಬೇಕೆಂದು ಬರೆದವನಲ್ಲ. ಅವರು ತನ್ನನ್ನು ಹೊಗಳಬೇಕೆಂದು ಆಶೆಪಟ್ಟೋ, ತಿರಸ್ಕರಿಸುವರೆಂದು ಹೆದರಿಕೊಂಡೋ ಅವನು ತನ್ನ ದಾರಿಯನ್ನು ಬಿಟ್ಟವನಲ್ಲ. ನಮ್ಮಲ್ಲಿ ಬಹಳ ಕಾಲದಿಂದ "ಕಾವ್ಯಂಯಶಸೇ ಅರ್ಥಕೃತೇ" ಎಂಬ ಸಿದ್ಧಾಂತವು ಮುಖ್ಯವಾಗಿ ನೆಲೆಸಿಬಿಟ್ಟಿದೆ. ಕಾವ್ಯವನ್ನು ಬರೆದದ್ದಕ್ಕೆ ಎದುರುನೋಡುವ ಮೊದಲನೆಯ ಫಲ ಕೀರ್ತಿ, ಹಣ. ಆದ್ದರಿಂದ ಕೀರ್ತಿಯನ್ನು ಕೊಡುವ ಪಂಡಿತರಿಗೂ ದ್ರವ್ಯವನ್ನು ಕೊಡುವ ರಾಜರಿಗೂ ಸಂತೋಷವನ್ನುಂಟುಮಾಡಿದರೆ ಕೃತಾರ್ಥರಾದೆವೆಂದು ಅನೇಕ ಕವಿಗಳು ಭಾವಿಸಿದರು. ಅದಕ್ಕೆ ತಕ್ಕಂತೆ "ಕವಿ ಸಾರ್ವಭೌಮ" ಮುಂತಾದ ಬಿರುದುಗಳೂ, ಎಕರೆಗಟ್ಟಲೆ ಜಮೀನೂ-ಇನಾಮುಗಳೂ ಅಗ್ರಹಾರಗಳೂ ಅವರಿಗೆ ಬರುತ್ತಿದ್ದುವು. ತಮ್ಮ ಮನಸ್ಸಿಗೆ ತೃಪ್ತಿ ಕೊಡುತ್ತಿದ್ದವರ ವಿಷಯದಲ್ಲಿ ಪ್ರಾಚೀನರು ತೋರಿಸಿದ ಮರ್ಯಾದೆ, ಔದಾರ್ಯ ಅದ್ಭುತವಾದದ್ದು. ಆದರೆ ಅದರಿಂದ ಕವಿಗೆ ಸ್ವಾತಂತ್ರ್ಯ ಹೋಯಿತು. ಈತನು ಇತರರ ಕೈಗೊಂಬೆಯಾದ. ಕೃಷ್ಣದೇವರಾಯನಂಥ ದೊರೆಯ ಆಜ್ಞೆಯನ್ನು ತಿರಸ್ಕರಿಸಿ "ಸುಮ್ಮನೆ ಕೃತಿಗಳನ್ನು ರಚಿಸುವುದು ಅವಶ್ಯಕ" ಎಂದ ಪೆದ್ದನನಂತೆ, ಧೀರತನದಿಂದ ಹೇಳಬಲ್ಲ ಗಂಡುಕವಿ

ಇಲ್ಲದೆ ಹೋದ. ಇದ್ದ ಅಭಿರುಚಿಗೆ ಉದಾಹರಣೆ ಕೊಡುವವರೇ ಹೊರತು ಅದನ್ನು ಸರಿಯಾದ ದಾರಿಗೆ ತಿರುಗಿಸಿ ತಿದ್ದುವಂಥ ಧೀರರು ಇಲ್ಲವಾದರು. ಕಾಲಕ್ರಮದಲ್ಲಿ ಜೀವಿಕೆಯನ್ನು ಸಂಪಾದಿಸಿಕೊಳ್ಳುವುದು ಕವಿತ್ವಕ್ಕೆ ಒಂದು ಆನುಷಂಗಿಕ ಫಲವಾಗದೆ, ಪ್ರಧಾನ ಫಲವಾಗಿಯೇ ಹೋಯಿತು ಹಣವಂತರು ಯಾವ ವಿಷಯವನ್ನು ಕುರಿತು ಪದ್ಯಗಳನ್ನು ಬರೆಯಬೇಕೆಂದು ಹೇಳಿದರೂ, "ಸರಿ" ಎಂದು ಕವಿ ಸೊಂಟ ಕಟ್ಟಿಕೊಂಡು ಸಿದ್ಧವಾಗಿರಬೇಕಾಗಿ ಬಂತು. ಯಾವ ದೊಡ್ಡ ಮನುಷ್ಯನು ಊರಿಗೆ ಬಂದರೂ ಯಾವ ಗುಮಾಸ್ತೆಯನ್ನು ಬೇರೆ ಊರಿಗೆ ವರ್ಗಮಾಡಿದರೂ ಯಾವ ಎಲ್ಲಯ್ಯನಿಗೆ ದೊರೆಗಳಿಂದ ಬಿರುದು ಲಭಿಸಿದರೂ, ಆ ಸಂದರ್ಭದಲ್ಲೆಲ್ಲ, ತಪ್ಪದೆ, ಯಾವ ಮೂಲೆಯಲ್ಲೋ ಇದ್ದ ಕವಿಯನ್ನು ಜುಟ್ಟು ಹಿಡಿದು ಎಳೆದುಕೊಂಡು ಬಂದು ಎಲ್ಲರ ಮುಂದೆಯೂ ತಳ್ಳುವುದು ವಿಧಿಯಿಲ್ಲದ ಕೆಲಸವಾಯಿತು. ಕವಿಯೆಂಬ ಹೆಸರುಳ್ಳವನು ಯಾರನ್ನು ಕಾಣಲು ಹೋದರೂ ಅವನ ಊರು ಹೆಸರುಗಳನ್ನು ತಿಳಿದುಕೊಂಡು ಅವನ್ನು ಕಲಸಿ ಹೊಸೆದು, ಪದ್ಯಗಳನ್ನು ಬರೆದು ಹೊಗಳುವುದೇ ಮೊದಲ ಕೆಲಸವಾಯಿತು. ಕವಿಗೆ ಸ್ನೇಹ, ದ್ವೇಷ, ಭಕ್ತಿ ಅಭಿಮಾನ ಅಸಹ್ಯ ಮೊದಲಾದ ಸ್ವಂತ ಭಾವಗಳಿದ್ದರೂ ಅವು ಇಲ್ಲದಂತೆಯೇ. ಬಯ್ಯಲು ಅಧಿಕಾರವಿಲ್ಲ. ಹೊಗಳಿಕೆಯಲ್ಲಿ ಬೆಲೆಯಿಲ್ಲ. ಏಕೆಂದರೆ ತಾನು ಬಯ್ಯಬೇಕೆಂಬ ಮನಸ್ಸಾದರೂ ಒಬ್ಬರು ಹೊಗಳಬೇಕು ಎಂದು ಹೇಳಿದರೆ ಅವರನ್ನು ಹೊಗಳಬೇಕಾದದ್ದೇ ಹೊರತು ತನ್ನ ಇಚ್ಛಾನುಸಾರ ಬೇರೆ ಏನೂ ಮಾಡಲಾರದ ಕಾರಣ.

ಇಂಥ ಕವಿತ್ವವನ್ನು ಬರೆದು ಪ್ರಖ್ಯಾತಿಯನ್ನು ಸಂಪಾದಿಸುವುದು ವೇಮನನಂಥವನಿಗೆ ರುಚಿಸುವುದೋ? ನೋಡಿದ ವಸ್ತುಗಳಲ್ಲೆಲ್ಲ ತಪ್ಪುಗಳನ್ನು ಹುಡುಕುವ ಸ್ವಭಾವವುಳ್ಳವನು, ಕಂಡ ತಪ್ಪುಗಳನ್ನು ಸ್ಪಷ್ಟವಾಗಿ ಮುಖಕ್ಕೇ ಹೇಳದೆ ಇರಲಾರದವನು, ಇತರರನ್ನು ಕೀರ್ತಿಗಾಗಿಯೋ ದ್ರವ್ಯಕ್ಕಾಗಿಯೋ ಸುಮ್ಮನೆ ಹೇಗೆ ಹೊಗಳಬಲ್ಲ? ಒಬ್ಬನಲ್ಲಿಯ ಗುಣಗಳು ತನ್ನ ಮನಸ್ಸಿಗೆ ಒಪ್ಪಿದ ಪಕ್ಷಕ್ಕೆ ಸಂತೋಷಪಟ್ಟು ಪದ್ಯಗಳನ್ನು ಬರೆಯುವ ಸ್ವಭಾವ ವೇಮನನಿಗೆ ಇದೆಯೆಂದು ಗುಂಟುಪಲ್ಲಿ ಮುತ್ತುಮಂತ್ರಿಯ ವಿಷಯದ ಪದ್ಯ ತೋರಿಸುತ್ತದೆ. ಆದರೆ ಅದು "ನಮ್ಮವನು ಬುದ್ಧಿವಂತ" ಎಂದು ವಾತ್ಸಲ್ಯದಿಂದ ಹೇಳುವ ಅಭಿಮಾನದ ಮಾತಿನಂತಿದೆಯೇ ಹೊರತು, ಅದರಲ್ಲಿ ಪ್ರಪಂಚದಲ್ಲಿಯ ಎಲ್ಲರ ತಲೆಗೂದಲನ್ನು ಬೆಳ್ಳಗೆ ಮಾಡುವಷ್ಟು ಮುತ್ತುಮಂತ್ರಿಯ ಕೀರ್ತಿ ವರ್ಣಿಸಲ್ಪಟ್ಟಿದೆಯೇ? ಪ್ರಪಂಚದಲ್ಲಿ ಯಾರಿಗೂ ಕುಡಿಯಲು ನೀರಿಲ್ಲದಂತೆ ತಂದು ಸುರಿದಂತೆ ಆತನ ದಾನಧಾರೆ ವರ್ಣಿಸಲ್ಪಟ್ಟಿದೆಯೆ? ಆದ್ದರಿಂದ ಈ ಪದ್ಯವನ್ನು ದಾತನಾದ ಗುಂಟುಪಲ್ಲಿ ಮುತ್ತುಮಂತ್ರಿಯೇ ಕೇಳಿದ್ದರೂ, ವೇಮನನಿಗೆ ಒಂದು ಗೋಟಡಕೆಯನ್ನೂ ಕೊಡುತ್ತಿರಲಿಲ್ಲ. ತನ್ನ ದರಿದ್ರಾವಸ್ಥೆಯಲ್ಲಿ ದ್ರವ್ಯಾರ್ಜನೆಗಾಗಿ ಹೊರಟಾಗ ಹೀಗೆ ಧನಿಕರನ್ನು ಹೊಗಳಿ ವೇಮನನೂ ಪದ್ಯಗಳನ್ನು ಬರೆದನೇನೋ ಎಂಬ ಸಂದೇಹವನ್ನು ಉಂಟುಮಾಡುವ ಪದ್ಯವೊಂದುಂಟು :

ಪಡುಚು ನಿಚ್ಚು ವಾನಿ ಪದ್ಯಮಿಚ್ಚಿನ ವಾನಿ	ಹೆಣ್ಣು ಮಗಳನ್ನು ಕೊಡುವವನಿಗೂ ಪದ್ಯ ಕೊಡುವವನಿಗೂ
ಕಡುಪು ಚಲ್ಲ ಚೇಸಿ ಗೌರವಮುನ ನಡಪಲೇನಿ ವಾಡು......(೨೩೭೫)	ಹೊಟ್ಟೆಯನ್ನು ತಣ್ಣಗೆ ಮಾಡಿ ಗೌರವದಿಂದ ನಡೆಸಲಾಗದವನು...

ಮಿಕ್ಕದ್ದನ್ನು ನೀವು ಪುಸ್ತಕದಲ್ಲೇ ಓದಿಕೊಳ್ಳಿ. ಆದರೆ ಈ ಪದ್ಯವೂ ಕೂಡ, ಹೀಗೆ ದ್ರವ್ಯಕ್ಕಾಗಿ ತನ್ನ ಆತ್ಮವನ್ನು ಸಾಯಿಸಿಯಾದರೂ ಮುಖಸ್ತುತಿಮಾಡಿ, ಪದ್ಯಗಳನ್ನು ಬರೆದವನನ್ನು ಕಂಡು ಅಯ್ಯೋ ಪಾಪವೆಂಬುದಿಲ್ಲದೆ, ಬರಿ ಕೈಯ್ಯಲ್ಲಿ ಕಳುಹಿಸಿಬಿಡುವ ಗೊಡ್ಡ ಹಸುಗಳನ್ನು ಬೈದು ಬರದದ್ದೇ ಎಂದೂ ಹೇಳಬಹುದು. ಹೀಗಿರುವುದರಿಂದ ಈತನು ಇತರರಿಗೆ ಯಾವುದು ರುಚಿಸುತ್ತದೆ ಎಂದು ಗಮನಿಸಿ ಆ ಪ್ರಕಾರವಾಗಿ ಹೊಂದಿಕೊಂಡು ಬರೆಯುವುದು ಅಸಂಭವ.

ಇದು ಅಲ್ಲದೆ ಈತನು ಸಹಜವಾಗಿ ಬಹಿರಂಗ ವಸ್ತು ಸಂದರ್ಭ ದ್ವೇಷಿ. ಅಂದರೆ ಯಾವುದರಲ್ಲಾದರೂ ನಾವು ಮುಖ್ಯವಾಗಿ ಗಮನಿಸಬೇಕಾದದ್ದು ಸಾರಭೂತವಾದ ಒಳಗಿನ ತತ್ತ್ವವನ್ನೇ ಹೊರತು, ಹೊರ ಆಕಾರ, ವೇಷ ಕೆಲಸ ಮುಂತಾದವು ಅಲ್ಲವೆಂದು ಆತನ ಸಾಮಾನ್ಯ ದೃಷ್ಟಿ. ಮನಸ್ಸು ಶುದ್ಧವಾಗಿದ್ದರೆ ಸಾಕು, ಹೊರಗಿನ ಸ್ನಾನ ಪಾನಾದಿಗಳ ಅಗತ್ಯವಿಲ್ಲವೆಂದೆನ್ನುವವನು ಅವನು. ತಾನು ಕಟ್ಟಿಕೊಂಡಿದ್ದ "ಚಿಂದಿ ಬಟ್ಟೆ"ಯನ್ನು "ಚೀನಾಂಬರ"ವೆಂದೂ ತನ್ನ "ಕೊಳಕು ಮೈ"ಯನ್ನು "ಮುಕ್ತಿ"ಯೆಂದೂ ಹೇಳುತ್ತ, ಆಕ್ಷೇಪಿಸಿದವರನ್ನು ಸದೆ ಬಡಿದವನು. 'ಭಕ್ತಿಯಿಲ್ಲದ ಪೂಜೆ ಫಲವಿಲ್ಲದ್ದು' ಆದ್ದರಿಂದ, ಅದನ್ನು ಉಳ್ಳವನು ಗುಡಿಗೆ ಹೋಗಿ ಪತ್ರೆ ತುಲಸಿಗೆ ಖರ್ಚು ಮಾಡಬೇಕಾದ ಅಗತ್ಯವಿಲ್ಲದೆ 'ಮಂಚದ ಮೇಲಿಂದಲೆ ನಮಿಸು' (೨೩.೨೮) ಎಂದು ಹೇಳಿದವನು. ಆದ್ದರಿಂದ ಮಂಚದಿಂದಲಾದರೂ ನಮಿಸುವುದು ತಪ್ಪದು ಅಲ್ಲವೆ? ಅದು ಬಹಿರಂಗವೇ ಅಲ್ಲವೇ, ಬಹಿರಂಗ, ಅಂತರಂಗ ಎರಡೂ ಒಂದಕ್ಕೊಂದು ಅನುಕೂಲಗಳೇ ಹೊರತು ಪ್ರತಿಕೂಲಗಳಲ್ಲ. ಬಲವಂತವಾಗಿ ಅವುಗಳನ್ನು ಬೇರೆ ಮಾಡಬಹುದೇ ಹೊರತು ಸಹಜವಾಗಿ ಅವೆರಡೂ ಅನ್ಯೋನ್ಯಾಶ್ರಯಗಳು. ಒಂದನ್ನು ಇನ್ನೊಂದು ಬಿಡದವು. ಭಕ್ತಿಯಿಲ್ಲದೆ ಪೂಜೆ ಮಾಡಬಹುದು. ಪೂಜೆಯಿಲ್ಲದೆ ಭಕ್ತಿಯೂ ಸಾಧ್ಯವೇ. ಆದರೆ ಸಹಜವಲ್ಲ. ಅಂತರಂಗ ತನಗೆ ಸಂಬಂಧಪಟ್ಟದ್ದು. ಬಹಿರಂಗ ಬೇರೆಯವರಿಗೆ ಹೆಚ್ಚಾಗಿ ಸೇರಿದ್ದು. ಆದರೆ ತನಗೂ ಅದರೊಡನೆ ಸಂಬಂಧವಿಲ್ಲದೆ ಇಲ್ಲ. ದಾನಮಾಡಬೇಕೆಂದು ಅಂತರಂಗದಲ್ಲಿ ಬುದ್ಧಿಯಿದ್ದರೆ ಸಾಕೆ? ಬಹಿರಂಗವಾಗಿ ಮಾಡದಿದ್ದರೆ ಇತರರಿಗೆ ಫಲವಿಲ್ಲ ಎಂಬ ಮಾತು ಹಾಗಿರಲಿ, ಮುಖ್ಯವಾಗಿ ತನಗೆ ತೃಪ್ತಿಯಾಗುತ್ತದೆಯೋ? ಹೃದಯವು ನಿರ್ಮಲವಾಗಿರಬೇಕಾದದ್ದೇ. ಹೊಟ್ಟೆಯಲ್ಲಿ ಅಜೀರ್ಣಾದಿ ಮಲಗಳಿಲ್ಲದಂತೆ ಮಾಡಿಕೊಳ್ಳಬೇಕಾದದ್ದೇ. ಆದರೆ ಅಷ್ಟು ಮಾತ್ರದಿಂದ ದೇಹದ ಹೊರಭಾಗವು ಕೊಳೆಯ ಮುದ್ದೆಯಾಗಿ ಹೇನುಗಳು ಹೊರಬಂದು ಕೊಳೆಯುತ್ತಿದ್ದರೆ ಏನೂ ತೊಂದರೆಯಿಲ್ಲ

ವೆನ್ನಬಹುದೇ? ಇತರರಿಗೆ ಅಸಹ್ಯವಾಗುವುದೆಂಬುದನ್ನು ಮರೆತುಬಿಡೋಣ. ನಮ್ಮ ಮೂಗಿಗೇ ಅದನ್ನು ತಡೆಯಲು ಸಾಧ್ಯವೋ? ಒಂದು ವೇಳೆ ಹಾಗೆ ಸಹಿಸಿಕೊಳ್ಳುವುದನ್ನು ಬಲಾತ್ಕಾರವಾಗಿ ರೂಢಿಮಾಡಿಕೊಂಡು ಬಹಿರಿಂದ್ರಿಯಗಳನ್ನು ಕೊಂದು ಹಾಕಿಕೊಳ್ಳಬಹುದೇ ಹೊರತು ನಿಜವಾಗಿ ಅದನ್ನು ಯುಕ್ತವೆನ್ನಬಹುದೋ? ಆದ್ದರಿಂದ ಈ ಎರಡನ್ನೂ ಪರಸ್ಪರ ಸಹಾಯಗಳೆಂದು ತಿಳಿದುಕೊಳ್ಳುವುದು ಬುದ್ಧಿವಂತನ ಲಕ್ಷಣ ಮಾತ್ರವಲ್ಲ ಸಮರ್ಥನ ಲಕ್ಷಣವೂ ಹೌದು.

ವೇಮನ ಇಂಥ ತಪ್ಪು ಸಿದ್ಧಾಂತವನ್ನು ಸ್ವಲ್ಪಮಟ್ಟಿಗೆ ಕವಿತ್ವದಲ್ಲಿಯೂ ಉಪಯೋಗಿಸಿದನು ಕವಿತ್ವಕ್ಕೆ ಭಾಷೆ ಛಂದಸ್ಸು ಮೊದಲಾದವು ಬಹಿರಂಗಗಳು. ಅರ್ಥ ಭಾವಗಳು ಅಂತರಂಗಗಳು, ಅವು ಒಂದು ವಿಶಿಷ್ಟ ವಿಧವಾಗಿ ತೀವ್ರವಾಗಿದ್ದ ಹೊರತು ಕವಿತ್ವವೆಂಬ ಹೆಸರು ಬರದು. ನೋಡಿ:

ಆ॥ ಪೈರು ನಿಡಿನವಾನಿ ಫಲಮೋ ಸಫಲಮಗು	ಪೈರು ಹಾಕಿದವನ ಫಲ ಸಫಲವಾಗುವುದು
ಪೈರು ನಿಡನಿವಾಡು ಫಲಮು ಗನುನೆ	ಪೈರು ಹಾಕದವನಿಗೆ ಫಲಸಿಗುವುದೇ
ಪೈರು ನಿಡನಿವಾಡು ಬಹುಸೌಖ್ಯವಂತು ಡೌ	ಪೈರು ಹಾಕಿದವನೇ ಬಹುಸೌಖ್ಯವಂತನು

(೨೮೧೩)

ಈ ಪದ್ಯದಲ್ಲಿ ಕವಿತ್ವವಿಲ್ಲ. ವೇಮನ ಅದನ್ನು ಬರೆಯದೆ ಇದ್ದಿದ್ದರೆ ನಷ್ಟವಾಗುತ್ತಿರಲಿಲ್ಲ. ಹಾಗೆಯೇ ಬಹಿರಂಗಗಳಾದ ಭಾಷೆ ಛಂದಸ್ಸುಗಳು ಒಂದು ವಿಶಿಷ್ಟವಿಧವಾಗಿ ಇಲ್ಲದಿದ್ದರೆ ಕವಿತ್ವವೆಂಬ ಹೆಸರು ಬರದು. ಒಳ್ಳೆಯ ಭಾಷೆ, ಕುಂಟದ ಛಂದಸ್ಸು ಇವುಗಳಿದ್ದರೂ 'ಆಂಧ್ರನಾಮ ಸಂಗ್ರಹ'ದಲ್ಲಿ ಕವಿತ್ವ ಹೇಗಿಲ್ಲವೋ ಹಾಗೆಯೇ ಅರ್ಥ ಭಾವಗಳು ಒಳ್ಳೆಯವಾದರೂ ಭಾಷೆ ಮತ್ತು ಛಂದಸ್ಸುಗಳೆಂಬ ನಾಗರಿಕತೆಯನ್ನು ತಪ್ಪಿರುವುದರಿಂದ ಈ ಕೆಳಗಿನ ಪದ್ಯದಲ್ಲೂ ಕವಿತ್ವವಿಲ್ಲ.

ವುಕ್ಕುತಂಡಮುಲ್ಲೈನ ವೂದಿಂಚಿನಲಗೊಟ್ಟಿ	ಉಕ್ಕುಮುದ್ದೆಗಳನ್ನು ಕರಗಿಸಿ, ಒಡೆದು
ವಕಟಿಗಾ ಚೇಯೊಚ್ಚು ವಸುಧಲೋನ	ಒಂದಾಗಿ ಮಾಡಬಹುದು. ಆದರೆ ಲೋಕದಲ್ಲಿ
ಆತ್ಮವೇರೈನ ವೆನುಕ ಅಂಟಿಂಚುಟರುದುರಾ	ಆತ್ಮಗಳು ಬೇಕಾದರೆ ಅವುಗಳನ್ನು ಸೇರಿಸುವುದ–
(ವಿಶ್ವ ೨೨೬)	ಸಾಧ್ಯ

(ಲಕ್ಷ್ಮಣ ಮೊದಲ್ಯಾರು ಅವರ ವೇಮನ ಪದ್ಯಗಳು)

ವೇಮನ ಈ ಪದ್ಯವನ್ನು ಹೀಗೆಯೇ ಬರೆದನೋ ಬರೆಯಲಿಲ್ಲವೋ ಎಂಬ ಮಾತುಬೇರೆ. ಆತನ ಅನೇಕ ಪದ್ಯಗಳು ಹಸ್ತಪ್ರತಿಗಳಲ್ಲೂ ಅಚ್ಚು ಪ್ರತಿಗಳಲ್ಲೂ ಹೀಗೆಯೇ ಇವೆ. ಅನೇಕ ಪದ್ಯಗಳಲ್ಲಿ ಆಟವೆಂದಿ ನಡೆಗೂ ಸೀಸ ಪದ್ಯದ ನಡೆಗೂ ಭೇದವನ್ನೇ ಈತನು ಗಮನಿಸಿದಂತೆ ಕಾಣುವುದಿಲ್ಲ. ಭಾಷೆಯ ವಿಷಯದಲ್ಲಿಯೂ ಶುದ್ಧವಾದ ಪದ ಪ್ರಯೋಗದಲ್ಲೂ ಸಂಧಿಗಳನ್ನು ಸರಿಯಾಗಿ ಸೇರಿಸುವುದರಲ್ಲಾಗಲೀ ಈತನು ಪ್ರತ್ಯೇಕವಾಗಿ ಪರಿಶ್ರಮಿಸಿದಂತೆ ತೋರದು. ಅಚ್‌ಗಳಿಗೂ ವಕಾರ ಯಕಾರ

ಗಳಿಗೂ ಇರುವ ಭೇದವನ್ನು ಹಲವು ಬಾರಿ ಈತ ಗಮನಿಸಿಲ್ಲ. “ ನಮಶಿವಯನವಚ್ಚು ನಾರಾಯಣನವಚ್ಚು (೨೧೫೯) ” ಇತ್ಯಾದಿ ನಿರರ್ಗಳ ಪ್ರಯೋಗಗಳು ಹಲವು ಇವೆ. ಇನ್ನು ಅಸಭ್ಯವಾದ ಪದಗಳು ಅರ್ಥಗಳು ಲೆಕ್ಕವಿಲ್ಲದಷ್ಟು ಇನ್ನು ಸಾಮಾನ್ಯ ಜನರಿಗೆ ಬಹಿರಂಗ ಮುಖ್ಯ ದೇವಸ್ಥಾನದ ಗೋಪುರದ ಎತ್ತರ, ದೇವರಿಗೆ ಇಡುವ ನವರತ್ನಗಳ ಒಡವೆಗಳು, ಪೂಜಾರಿಯ ಕತ್ತಿನಲ್ಲಿ ಸರಗಳ ಸಂಖ್ಯೆ ಮೊದಲಾದವನ್ನು ಕಂಡು ಅವುಗಳ ಮಹಾತ್ಮ್ಯವನ್ನೂ ಇವನ ಭಕ್ತಿಯನ್ನೂ ನಿರ್ಣಯಿಸುವವರು ಅವರು. ಹೀಗೆಯೇ ಕವಿ ಬರೆದ ಪದ್ಯಗಳು ಕೂಡ, ಶುದ್ಧವಾದ ಭಾಷೆ, ಜೂಜಿನ ಕುದುರೆಯ ನಡೆಯಂತಿರುವ ಛಂದಸ್ಸನ್ನು ಹೊಂದಿ, ಅನುಪ್ರಾಸ, ಯಮಕಗಳೊಂದಿಗೆ ಸಭಾಮಂದಿರವನ್ನು ಗಡಗಡಾಯಿಸುವಂತಿದ್ದರೆ ಅದನ್ನು ‘ ಭಲೆ ’ ಎಂದು ಮೆಚ್ಚಿಕೊಳ್ಳುವರು. ವೇಮನ ಕವಿತ್ವದಲ್ಲಿ ಇದೆಲ್ಲಿದೆ?

ಮತ್ತು, ಕವಿತ್ವವನ್ನು ಕೇಳಿ ಸಂತೋಷಪಡುವ ಜನ ಸಾಮಾನ್ಯವಾಗಿ ಎರಡು ವಿಧವಾಗಿರುತ್ತಾರೆ ಪರರಿಗೆ ದಾಸರು, ಸ್ವಯಂದಾಸರು. ಮೊದಲನೆಯ ಗುಂಪಿನವರು ಪಾಮರರು. ಇವರಿಗೆ ಹೆಚ್ಚಿನ ಓದು ಬರಹವಿಲ್ಲದ್ದರಿಂದ ಮನಸ್ಸನ್ನು ಸಾಮಾನ್ಯವಾಗಿ ತಟ್ಟನೆ ಹಿಡಿದು ಎಳೆಯುವ ವೇಮನನಂಥವನ ಕವಿತ್ವಕ್ಕೆ ಮನಸೋತು, ಒಳಗೊಳಗೇ ಸಂತೋಷಪಟ್ಟರೂ, ರಾಜಸಭೆಯಲ್ಲಿ ಪದ್ಯಗಳ ಪಂದ್ಯದಲ್ಲಿ ಎದುರಾಳಿಯನ್ನು ಸೋಲಿಸಿ, ಗಂಡಪೆಂಡೇರವನ್ನು ಬಹುಮಾನವನ್ನಾಗಿ ಪಡೆದ ಬಿರುದು ಕವಿಗಳನ್ನು ನೋಡಿ ಬೆರಗಾಗಿ, ಅವರನ್ನೇ ಸರಸ್ವತಿಯ ಅಪರಾವತಾರವೆಂದು ಹೊಗಳಿ ತಪ್ಪಿಸಿಕೊಳ್ಳುತ್ತಾರೆಯೇ ಹೊರತು ಅವರೊಡನೆ ವೇಮನನನ್ನು ಹೋಲಿಸಿ ನೋಡೋಣವೆಂಬ ಧೈರ್ಯವೇ ಅವರಿಗೆ ಇರದು. ಸಭೆಯಲ್ಲಿ ಅಷ್ಟುಜನ ಮಹಾವಿದ್ವಾಂಸರು ಅಂಗೀಕರಿಸಿದ್ದನ್ನು ಇಲ್ಲವೆನ್ನುವುದಕ್ಕೆ ಈ ನಿರಕ್ಷರಕುಕ್ಷಿಗೆ ಅಧಿಕಾರವೇನಿದೆ ? ಆ ವಿದ್ವಾಂಸರೇ ಎರಡನೆಯ ತರದವರಾದ ಸ್ವಯಂ ದಾಸರು. ಯಾವುದೋ ಕಾಲದಲ್ಲಿ ಯಾವುದೋ ಕಾರಣದಿಂದ ಮನಸ್ಸಿನಲ್ಲಿ ನಿಂತ ಸಿದ್ಧಾಂತವನ್ನು, ಯುಕ್ತವೇ ಅಲ್ಲವೇ ಎಂದು ಚರ್ಚಿಸದೆ, ಅದೇ ಸತ್ಯವೆಂದೂ, ಮಿಕ್ಕೆಲ್ಲವೂ ಅಸಮಂಜಸವೆಂದೂ ನಿರ್ಣಯಿಸುವವರು ಅವರು. ಕವಿತ್ವದಲ್ಲಿ ದೋಷಗಳು, ಗುಣಗಳು, ಅಲಂಕಾರಗಳು, ರಸಗಳು, ಕಥೆಗಳು, ಪಾತ್ರಗಳು, ವರ್ಣನೆಗಳು, ಮೊದಲಾದವೆಲ್ಲ ಇಂಥವೆಂದೂ ಇಷ್ಟೆಂದೂ ನಿಸ್ಸಂಶಯವಾಗಿ ಏರ್ಪಡಿಸಿಕೊಂಡವರಾದ್ದರಿಂದ ಆ ನಿಯಮಗಳನ್ನು ಸ್ವಲ್ಪ ಮೀರಿದ್ದರೂ ಗ್ರಂಥಕರ್ತ ತಲೆಬಗ್ಗಿಸಿಕೊಂಡು ತಿದ್ದಿಕೊಳ್ಳಬೇಕು. ಇಲ್ಲವೇ ಸಭೆಯನ್ನು ಬಿಟ್ಟು ನಿರಾಶನಾಗಿ ಹೋಗಬೇಕು. ಇಷ್ಟೇ ಹೊರತು ಇವರು ಒಂದು ಮೆಟ್ಟಿಲಷ್ಟೂ ಕೆಳಗಿಳಿಯರು ಹಾಗಿಳಿಯುವುದು ಅವರ ಅಭಿಪ್ರಾಯದಲ್ಲಿ ಶಾಸ್ತ್ರಪ್ರಕಾರ ತಪ್ಪು ಮಾತ್ರವೇ ಅಲ್ಲ, ಕೆಳಗಿಳಿಯಬೇಕೆಂಬ ಅಗತ್ಯವೇ ಅವರಿಗೆ ತೋರದು. ಇನ್ನು ಈ ಮೇಲಿನ ವಿಷಯಗಳಲ್ಲಿ, ಕಿತ್ತುಹೋದ ಗಾಳಿಪಟದಂಥ ವೇಮನನನ್ನು, ಇವರು ಕವಿಯೆಂದು ಹೇಗೆ ಕರೆದು ಗೌರವಿಸಿಯಾರು ?

ಹೀಗೆ 'ಶೃಂಗೇರೀ ಬಹಿರಸ್ಮಾಕಂ, ವಯಂಶೃಂಗೇರಿಣೋ ಬಹಿಃ' ಎಂದರೆ ವಿದ್ವಾಂಸರು ವೇಮನನನ್ನು ಗಮನಿಸಲಿಲ್ಲ. ವೇಮನ ವಿದ್ವಾಂಸರನ್ನು ಗಮನಿಸಲಿಲ್ಲ. ವೇಮನ ಪ್ರಾಚೀನ ಪುರಾಣ ಕವಿಗಳ ರಚನೆಗಳನ್ನು ಓದಕೊಂಡಿದ್ದವನೇ ಹೊರತು ತರುವಾಯುದ ಪ್ರಬಂಧಕವಿಗಳ ದಾರಿ ಅವನಿಗೆ ತಿಳಿಯದೆಂದು ಮೊದಲೇ ಬಿನ್ನವಿಸಿದ್ದೇನೆ. ವಿದ್ವಾಂಸರಾದರೋ ಅಕ್ಷರಾಭ್ಯಾಸಕ್ಕೆ ತರುವಾಯ ಕೆಲವು ದಿನ ರಘುವಂಶ, ಭಾರತ ಮೊದಲಾದ ಮೃದುಕಾವ್ಯಗಳನ್ನು ಓದಿದ ಶಾಸ್ತ್ರಮಾಡಿ, ನಂತರ ನೈಷಧ, ವಸು ಚರಿತ್ರ ಮೊದಲಾದ ಪ್ರೌಢಗ್ರಂಥಗಳಲ್ಲಿ ಬಿದ್ದು ಮೆತ್ತಗಾದವರು. ಹೀಗೆ ನಿನ್ನೆ ಮೊನ್ನೆಯವರ ಕವಿತ್ವವನ್ನೇ ಓದಿಕೊಂಡು ಪ್ರಾಚೀನ ಕವಿಗಳ ಮಾರ್ಗವನ್ನು ತಿಳಿಯದೇ ತನ್ನ ಕವಿತ್ವದಲ್ಲಿ ತಪ್ಪುಗಳನ್ನು ಕಂಡುಹಿಡಿಯುವ ವಿದ್ವಾಂಸರನ್ನು ಲಕ್ಷ್ಯ ಮಾಡಬೇಕಾದ ಅಗತ್ಯ ವೇಮನನಿಗೆ ಕಾಣಲಿಲ್ಲ. ಆತನು ಸುಖವಾಗಿ ಮನೆಯಲ್ಲಿಯೋ, ಇಲ್ಲ ಮರದ ಕೆಳಗೋ ಕಾಲು ಮೇಲೆ ಕಾಲು ಹಾಕಿಕೊಂಡು ಕೂತು ಹೀಗೆಂದನು :

ಆ॥ ಆದಿಮ ಕವುಲವಲೆ ಅಲ್ಪುಂಡು ತಾನೆರಿಗಿ	ಆದಿಕವಿಗಳಂತೆ ಅಲ್ಪನು ತಾನು ತಿಳಿದು
ಚೆಪ್ಪಲೇಡುಗಾನಿ ತಪ್ಪು ಬಟ್ಟು	ಹೇಳಲಾರನಾದರೂ ತಪ್ಪು ಹಿಡಿಯುವನು
ತ್ರೋಯನೇರ್ಚುಕುಕ್ಕ ದೊಂಕುಲು ಬೆಟ್ಟುನಾ	ಮಡಕೆಗಳನ್ನು ಬೀಳಿಸುವುದೇ ಹೊರತು
(ಓಲೈ ೧೩–೩–೧೯)	ನಾಯಿ ಅಡಕಲಾರದು

ಆದರೆ ಇಂದಿಗೂ ತನ್ನ ಮಾತುಗಳ ಬೆಲೆಯನ್ನು ಅರ್ಥಮಾಡಿಕೊಂಡು ಅಂಗೀಕರಿಸಬೇಕಾದವರು ಪಂಡಿತರೇ ಆದದ್ದರಿಂದ, ಪಾಮರರಿಗೆ ಅಷ್ಟು ಸಾಧ್ಯವಾಗದು ಎಂದು ವೇಮನನಿಗೆ ತಿಳಿಯದೆ ಹೋಗಲಿಲ್ಲ. ನೋಡಿ.

ಆ। ವೇಮುಡಿಟ್ಲು ಚೆಪ್ಪು ವಿವರಪುವಾಕ್ಯಮುಲ್	ವೇಮನನು ಹೀಗೆ ಹೇಳುವನು ವಿವರವಾಕ್ಯಗಳನು
ವೇಮುಡಿಟ್ಲು ಪೋವು ವೆರ್ರಿಪೋಕ	ವೇಮನ ಹೀಗೆ ಹುಚ್ಚುದಾರಿ ಹಿಡಿಯುವನು
ಪಾಮರುಲಕುನೆಲ್ಲ ಪ್ರತಿಪಕ್ಷ ಮೈಯುಂಡು	ಪಾಮರರಿಗೆ ಆ ಅವನು ಪ್ರತಿಪಕ್ಷ
ಪಂಡಿತಂಲು ನೆಲ್ಲ ಪರಮುವೇಮ	ಪಂಡಿತರಿಗೆ ಪರ ಅವನು
(ಓಲೈ ೧೨–೧–೩೦)	

ಓದಿದವರೆಲ್ಲ ಪಾಮರರೆಂದೂ, ಓದದವರೆಲ್ಲ ಪಂಡಿತರೆಂದೂ ವೇಮನನು ತಿಳಿದಿದ್ದನೆಂದು ಊಹಿಸಲು ಸಾಧ್ಯವಿಲ್ಲವಲ್ಲವೇ. ಹಾಗೆಯೇ ಅಂದಿಗೂ ಇಂದಿಗೂ ಓದಿಕೊಂಡವರೆಲ್ಲ ಅವನ ಕವಿತ್ವದ ಬೆಲೆಯನ್ನು ಒಪ್ಪಿಕೊಂಡೇ ಇದ್ದಾರೆ. ತನ್ನ ಜೀವಿತ ಕಾಲದಲ್ಲಿ ಈತನ ಪದ್ಯಗಳನ್ನು ಉಪಯೋಗಿಸದ ಪಂಡಿತನು ಆಂಧ್ರ ದೇಶದಲ್ಲಿದ್ದಾನೆಯೇ? ವೇಮನನು ಕವಿಯೆಂದು ಘೋಷಿಸಿ ಹೇಳದೆ ಇರಬಹುದು, ತಿಳಿಯದೆಯೂ ಇರಬಹುದು. ಅದರಿಂದ ಅವನಿಗೆ ಬಿರುದು ಬಹುಮಾನಗಳನ್ನು ಕೊಡದೆ

ಹೋಗಿರಬಹುದು. ಅದಕ್ಕೆ ಕಾರಣ ಬೇರೆ. ಕಷ್ಟಪಟ್ಟವರು ಕಷ್ಟಕ್ಕೆ ಬೆಲೆ ಕೊಡುತ್ತಾರೆ. "ನೈಷಧದಂಥ 'ಔಷಧಿ' ಕವಿತ್ವವನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ತಲೆ ಚಚ್ಚಿಕೊಳ್ಳುವ ತಾಳ್ಮೆಯನ್ನು ಸಂಪಾದಿಸಿಕೊಂಡವರು ಮೆದುಳಿಗೆ ಸ್ವಲ್ಪ ಮಾತ್ರವೂ ಶ್ರಮ ಕೊಡದ ಮೆತ್ತನೆಯ ವೇಮನ ಪದ್ಯದಂಥವುಗಳ ಮೇಲೆ ಹೆಚ್ಚಿನ ಶ್ರದ್ಧೆಯನ್ನು ತೋರಿಸುವುದು ಸಹಜವಲ್ಲ. ಮೆಣಸಿನಕಾಯಿ ಮುದ್ದೆಯಾದ 'ಗೋಂಗೂರ ಪಚ್ಚಡಿ'ಯನ್ನು ಜೀರ್ಣಿಸಿಕೊಳ್ಳಬಲ್ಲ ಗುಂಟೂರಿನವರಿಗೆ ಅದನ್ನು ಬಡಿಸುತ್ತಿರುವಾಗಲೇ ಬಾಯಲ್ಲಿ ನೀರೂರುತ್ತದೆ. ಆದರೆ ಅವರಿಗೆ ಹಾಲೂ ಮೊಸರು ರುಚಿಸುವುದಿಲ್ಲವೋ? ಅವುಗಳನ್ನು ಅವರು ಬಿಟ್ಟುಬಿಟ್ಟರೇ? ಮತ್ತು ಪದಾರ್ಥವು ಎಷ್ಟು ಬೆಲೆಯುಳ್ಳದ್ದೋ ಅದು ಅಷ್ಟು ಸುಲಭವಾಗಿ ಸಿಕ್ಕಬೇಕೆಂಬುದು ಸೃಷ್ಟಿ ಧರ್ಮ. ಎಷ್ಟು ಸುಲಭವೋ ಅಷ್ಟು ಅದಕ್ಕೆ ಬೆಲೆ ಕಡಿಮೆಯೆಂದು ಅರ್ಥಶಾಸ್ತ್ರದ ಸಿದ್ಧಾಂತ. ಗಾಳಿಯಂಥ ಅಮೂಲ್ಯ ಪದಾರ್ಥವು ನಮಗೆ ಸುಲಭವಾಗಿ ಸಿಕ್ಕದಿದ್ದರೆ ನಮ್ಮ ಗತಿಯೇನು? ಸುಲಭವಾದದ್ದರಿಂದಲೇ ಅದಕ್ಕೆ ಬೆಲೆ ಕೊಡುವವರು ಯಾರು? ವೇಮನನ ಕವಿತ್ವ ಗಾಳಿಯಂಥಾದ್ದು. ಅದು ಹೊಗದ ಸ್ಥಳವಿಲ್ಲ. ದೊರಕದ ಜಾಗವಿಲ್ಲ. ಆದ್ದರಿಂದಲೇ ಎಲ್ಲರೂ ಅದನ್ನು ಉಪಯೋಗಸದೇ ಇರಲಾಗದಿದ್ದರೂ, ಆತನನ್ನು ಕರೆದು ಮಹಾಕವಿಯೆಂದು ಮರ್ಯಾದೆ ಮಾಡಲು ಯಾರಿಗೂ ತೋರದೆ ಹೋಯಿತು.

ಇಂಥ ಸರ್ವವ್ಯಾಪಿತ್ವವನ್ನು ವೇಮನ ಪದ್ಯಗಳಿಗೆ ಸಂಪಾದಿಸಿ ಕೊಟ್ಟಿರುವ ಕವಿತಾಗುಣವೇನು? ಈ ಪ್ರಶ್ನೆಯನ್ನು ಎತ್ತಿಕೊಳ್ಳುವುದಕ್ಕೆ ಮುಂಚೆ "ಕವಿತ್ವವೆಂದರೆ ಏನು" ಎಂದು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಆದರೆ ಕವಿತ್ವ ಪರಬ್ರಹ್ಮನಂತೆ ಮಾಯೆಯಿಂದ ತುಂಬಿದ ವಸ್ತು ಇದೆಯೆಂದು ಭಾವಿಸಬಹುದೇ ಹೊರತು ಅದು ಕೈಗೆ ಸ್ಪಷ್ಟವಾಗಿ ಸಿಕ್ಕುವಂಥಾದ್ದಲ್ಲ. ಎಷ್ಟೋ ಮಹಾಮಹಿಮರು ಎಷ್ಟೋ ವಿಧವಾಗಿ ಇದಕ್ಕೆ ಲಕ್ಷಣಗಳನ್ನು ಬರೆಯಲು ಯತ್ನಿಸಿದರು. ಆದರೂ ಆ ಕವಿತಾ ದೇವತೆ ಕೈಗೆ ಸಿಕ್ಕದೆ, ಎಲ್ಲರ ಮೇಲೆ ನಿಂತು, ನಮ್ಮ ಕಡೆ ನೋಟವನ್ನು ಬೀರುತ್ತಾ, ಇನ್ನೂ ನಗುತ್ತಲೇ ಇದ್ದಾಳೆ ಮತ್ತು ಲಕ್ಷಣಗಳು ಏನಿದ್ದರೂ ಯಾವಾಗಲೂ ಬಹಿರಂಗವನ್ನು ತಿಳಿಸಬಲ್ಲುವೇ ಹೊರತು ಅಂತರಂಗವನ್ನು ತಿಳಿಸುವ ಶಕ್ತಿ ಅವಕ್ಕಿಲ್ಲ. ಮಲ್ಲಿಗೆಹೂವನ್ನು ಎಂದೂ ಕಾಣದವರಿಗೆ ಅದರ ಸ್ವರೂಪವನ್ನು ತಿಳಿಸಲು ಪ್ರಯತ್ನಿಸಿದವರು ಏನು ಮಾಡಬಹುದು? ರೇಕು ಕಾಂಡ ಮೊದಲಾದವುಗಳ ಸಂಖ್ಯೆ, ಗಾತ್ರ, ಬಣ್ಣ ಮೊದಲಾದವು ಇಂಥವು ಎಂದು ಹೇಳಬಹುದು ಆದರೆ ಇತರ ಹೂವುಗಳಲ್ಲಿ ಇಲ್ಲದಿರುವ ಅದರ ಪರಿಮಳ ಇಂಥಾದ್ದೆಂದು ವರ್ಣಿಸಿ ಹೇಳಿ ಒಪ್ಪಿಸುವುದು ಹೇಗೆ? ಮೂಗು ಇದ್ದವನು ಅದನ್ನು ಸಾಕ್ಷಾತ್ತಾಗಿ ಮೂಸಿದರೇ ಹೊರತು ಬೇರೆ ಮಾರ್ಗಗಳಿಂದ ಯಾವ ವಿಧದಲ್ಲಿ ಹೇಳಿದರೂ ಅವನಿಗೆ ಅದು ಅರ್ಥವಾಗದು. ಪ್ರತಿಯೊಂದು ಪದಾರ್ಥದ ತತ್ತ್ವವೂ ಇಂಥಾದ್ದೇ. ಸಾಕ್ಷಾತ್ತಾಗಿ ಅನುಭವಿಸಿದವರನ್ನು ಅನುಭವ

ವನ್ನು ಪಡೆಯಲು ಸಾಧ್ಯವಾದವರನ್ನು ಬಿಟ್ಟು ಬೇರೆಯವರ ಪಾಲಿಗೆ ಅದು ಇಲ್ಲ. ಕವಿತ್ವವೂ ಕೂಡ ಇಂಥಾದ್ದೇ. ಆದರೆ ತಾನು ಅನುಭವಿಸಿದ ವಸ್ತುವಿನ ಅಂಗಾಂಗಗಳನ್ನು ಪರೀಕ್ಷಿಸಿ, ಇದು ಇಂಥಾದ್ದು ಎಂದು ಲಕ್ಷಣವನ್ನೂ ಹೇಳಲು ಪ್ರಯತ್ನಿಸುವುದು ಮಾನವ ಸ್ವಭಾವ. ಆದರೆ ಎಷ್ಟು ಪ್ರಯತ್ನ ಪಟ್ಟರೂ ಬಹಿರಂಗವನ್ನು ದಾಟಿ ಒಳಗೆ ಇಳಿದವರಿಲ್ಲ. ಪ್ರಕೃತ ನಾವು ಕೂಡ ಅಷ್ಟನ್ನೇ ಮಾಡಬಲ್ಲೆವು.

ಸಾಮಾನ್ಯವಾಗಿ ಒಂದು ವಸ್ತುವನ್ನು ಕುರಿತು ತನಗೆ ತೋರುವ ಭಾವಗಳನ್ನು ಭಾಷೆಯ ಮೂಲಕ ಇತರರ ಮನಸ್ಸಿಗೆ ಹೊಗುವಂತೆ ವ್ಯಕ್ತಪಡಿಸುವುದನ್ನು ಕವಿತ್ವವೆನ್ನಬಹುದು. ಅಂದರೆ ಭಾವಿಸುವವನು (ಕವಿ) ಆತನ ಭಾವ, ಅದಕ್ಕೆ ವಿಷಯವಾದ ವಸ್ತುಗಳು, ಅದನ್ನು ತಿಳಿಸುವ ಭಾಷೆ, ಅದನ್ನು ಕೇಳಿ ಗ್ರಹಿಸುವ ಸಭ್ಯರು—ಈ ಐದೂ ಕವಿತಾ ಸೃಷ್ಟಿಯಲ್ಲಿರುವ ಪಂಚಮಹಾಭೂತಗಳು. ಈ ಪಂಚಾಂಗಗಳಲ್ಲಿ (ಐದರಲ್ಲಿ) ಯಾವುದಿಲ್ಲದಿದ್ದರೂ ಕವಿತ್ವವೆನ್ನಿಸಿಕೊಳ್ಳದು. ಕವಿಯಿಲ್ಲದೆ ಕವಿತ್ವವಿರುವುದಿಲ್ಲವೆಂದು ಹೇಳಬೇಕಾದದ್ದಿಲ್ಲ. ಆತನಿಗೆ ಭಾವಗಳಿರಬೇಕು. ಭಾವಗಳೆಂದರೆ ಪದಾರ್ಥಗಳ ಸ್ವರೂಪ ಜ್ಞಾನವೆಂದಾಗಲೀ ಇದು ಒಳ್ಳೆಯದು ಅದು ಕೆಟ್ಟದ್ದು ಎಂಬ ಅಭಿಪ್ರಾಯವಾಗಲೀ ಅಲ್ಲ. ಮತ್ತು ವಿಷಯವನ್ನು ಕುರಿತು ನಮಗಾಗುವ ದ್ವೇಷ ಕೋಪ, ಅಸೂಯೆ, ಅಸಹ್ಯ, ಪ್ರೇಮ, ಭಕ್ತಿ ಮುಂತಾದವು ಭಾವಗಳೆಂದೆನಿಸುವುವು. ಕಳ್ಳನನ್ನು ಉದಾಹರಣೆಯಾಗಿ ತೆಗೆದುಕೊಳ್ಳೋಣ. ಈ ಅನಂತಪುರ ಸೀಮೆಯಲ್ಲಿ ಪ್ರಸಿದ್ಧನಾಗಿದ್ದ ಖದೀಮ ಕಳ್ಳ "ದಾಮಾಲಸಿಂಗ್" ಅವನನ್ನು ಕುರಿತು ಹೇಳಬೇಕಾದಾಗ ಅವನ ಎತ್ತರ ಗಾತ್ರ ಬಣ್ಣ ಕುಲ ಭಾಷೆ ಆಯುಧಗಳು ಮುಂತಾದುವುಗಳನ್ನು ಕಣ್ಣುಗಳನ್ನು ಮುಚ್ಚಿಕೊಂಡು ಹೇಳಿದರೆ ಅದು ಅವನನ್ನು ಕುರಿತ ಅಜ್ಞಾನವನ್ನೇ ತಿಳಿಸುತ್ತದೆ. ಆತನಿಂದ ದೇಶಕ್ಕೆ ಎಷ್ಟು ಕಷ್ಟನಷ್ಟಗಳಾಗಿವೆ ಎಂಬುದನ್ನು ಗಮನಿಸಿ ಆತನು ಕೆಟ್ಟವನೆಂದು ತೀರ್ಮಾನಿಸಿ ಹೇಳುವುದು ಅಭಿಪ್ರಾಯ. ಈ ಎರಡು ಸಂದರ್ಭಗಳಲ್ಲಿಯೂ ಕವಿತ್ವಕ್ಕೆ ಅವಕಾಶವಿಲ್ಲ. ಅದಲ್ಲದೆ ಆತನಿಂದ ದೋಚಲ್ಪಟ್ಟವರಿಗೆ ಆತನ ಮೇಲೆ ಕೋಪ ಬರುತ್ತದೆ. ಆತನ ಸಾಹಸಕಾರ್ಯಗಳನ್ನು ನೋಡಿದ ಕೆಲವರಿಗೆ ಆಶ್ಚರ್ಯವೂ ಮೆಚ್ಚಿಕೆಯೂ ಉಂಟಾಗುತ್ತವೆ. ಇವುಗಳೇ ಭಾವಗಳು. ಇವಿಲ್ಲದಿದ್ದಾಗ ತತ್ತ್ವಶಾಸ್ತ್ರವೂ ನೀತಿಶಾಸ್ತ್ರವೂ ಇರಬಹುದೇ ಹೊರತು ಕವಿತ್ವವಿರುವುದಿಲ್ಲ. ಆದ್ದರಿಂದ ಕವಿತ್ವಕ್ಕೆ ಭಾವಗಳೇ ಪ್ರಾಣ. ಇನ್ನು ಭಾವಗಳಿಗೆ ಆಧಾರವಾದ ವಿಷಯಗಳು, ಅದನ್ನು ವ್ಯಕ್ತಪಡಿಸುವ ಭಾಷೆ, ಕವಿತ್ವಕ್ಕೆ ಅವಶ್ಯಕವೆಂದು ಹೇಳಬೇಕಾಗಿಲ್ಲ. ಐದನೆಯ ಮಹಾಭೂತ ಕೇಳಿ, ಸಂತೋಷಪಡುವವನು. ಹೃದಯದಲ್ಲಿ ಹುಟ್ಟಿದ ಭಾವಗಳನ್ನು ಯಾರಾದರೂ ಕೇಳಲಿ, ಬಿಡಲಿ, ಅವನ್ನು ವ್ಯಕ್ತಪಡಿಸುವುದು ಮನುಷ್ಯನ ಸಾಮಾನ್ಯ ಧರ್ಮವಾದದ್ದರಿಂದ, ಕವಿಯೂ ಕೂಡ ಹಾಗೆಯೇ ತನ್ನಿಷ್ಟಕ್ಕೆ ಬರೆದುಕೊಂಡು ಮುಚ್ಚಿಟ್ಟುಕೊಂಡಿರಬಹುದೇ ಹೊರತು ಅದು ಕವಿತ್ವವಾಗುವುದೋ ಇಲ್ಲವೋ ಎಂದು ಚರ್ಚೆಮಾಡಬೇಕಾದ, ಕೇಳಿ ಸಂತೋಷಪಡಬೇಕಾದ, ನಾವುಗಳು ಇಲ್ಲದಿದ್ದರೆ,

ಅದರ ಪಾಲಿಗೆ ನಾವು ಹೇಗೆ ಇಲ್ಲವೋ, ಹಾಗೆಯೇ ನಮ್ಮ ಪಾಲಿಗೆ ಅದೂ ಇಲ್ಲದ್ದ ರಿಂದ, ಕವಿತಾಸೃಷ್ಟಿಯಲ್ಲಿ ಸಭ್ಯನೊಬ್ಬ ಆವಶ್ಯಕವಾದ ವಸ್ತುವೇ ಎಂದು ಹೇಳದೆ ತೀರದು.

ಮೇಲೆ ಹೇಳಿದ ಐದು ವಸ್ತುಗಳಲ್ಲಿ ಭಾವ, ವಿಷಯ ಎಂಬ ಎರಡನ್ನೂ ಕುರಿತು ನಾವು ಚಿಂತಿಸಬೇಕಾಗಿಲ್ಲ. ಕವಿತ್ವದಲ್ಲಿ ಯಾವ ಭಾವವಾದರೂ ಇರಬಹುದು; ಅದು ಯಾವ ವಿಷಯವನ್ನು ಕುರಿತಾದರೂ ಇರಬಹುದು. ಕವಿಗೆ, ತಾನೇ ಸಾಕ್ಷಾತ್ತಾಗಿ ಹೇಳುವಾಗ, ಮೃದುವಾಗಿರುವ ಪ್ರೇಮಭಕ್ತಿ, ಮೆಚ್ಚುಗೆ, ಮೊದಲಾದ ಭಾವಗಳೇ ಇರಬೇಕೇ ಹೊರತು ತೀವ್ರವಾದ ಅಸೂಯೆ ದ್ವೇಷ ಅಸಹ್ಯ ಕ್ರೂರತನ ಮೊದಲಾದುವು ಇರಬಾರದೆಂದು ಕೆಲವರು ಭಾವಿಸುತ್ತಾರೆ. ನಾನೂ ಹೀಗೆ ಭಾವಿಸಿದ್ದವನೇ. ಆದರೆ ಅದು ತಪ್ಪು. ಕಾವ್ಯದಲ್ಲಿ ಎಲ್ಲ ಭಾವಗಳು ಹೃದ್ಯಮಗಳಾಗಿಯೇ ಇರುತ್ತದೆ. ನಮಗೆ ಯಾವುದರ ಮೇಲೆ ಪ್ರೀತಿಯೋ ಕೋಪವೋ ಇರುತ್ತದೆಯೋ ಅದರ ಮೇಲೆ, ಕವಿಗೂ ಹಾಗೆಯೇ ಇರಬೇಕೆಂದು ಭಾವಿಸುವುದು ಅನ್ಯಾಯ, ಅಸಾಧ್ಯ. ನಮಗೆ ಬೇಕಾದದ್ದು ಆ ಭಾವವನ್ನು ಕವಿ ಎಷ್ಟು ನಿಜವಾಗಿ ತೀವ್ರವಾಗಿ ತಾನು ಅನುಭವಿಸಿ ನಮ್ಮನ್ನು ಅನುಭವಿಸುವಂತೆ ಮಾಡುತ್ತಾನೆ, ಎಂಬುದೇ ಹೊರತು ಬೇರೆಯಿಲ್ಲ. ಹೀಗೆ ಕೆಲವರು ಕವಿತ್ವಕ್ಕೆ ವಿಷಯವಾದ ವಸ್ತುಗಳನ್ನು ನಿರ್ಣಯಿಸಲು ಪ್ರಯತ್ನಿಸುತ್ತಾರೆ. ಈಚೆಗೆ ಮೋಟಾರು ಬಂಡಿ, ಸಿಗರೇಟು ಮುಂತಾದವುಗಳನ್ನು ಕುರಿತು ಸಹ ದೇಶಾಂತರಗಳಲ್ಲಿ ಕವಿತ್ವ ಹೊರಡುತ್ತಿದೆಯೆಂದೂ ನಮ್ಮ ದೇಶದಲ್ಲೂ ಅಂತಹ ನೀತಿ ಬರದಂತಾಗ ಬೇಕೆಂದೂ ಅವರು ಎಚ್ಚರಿಸುತ್ತಾರೆ. ನನಗೆ ಮೋಟಾರು ಬಂಡಿಯ ಶಬ್ದವನ್ನು ಕೇಳಿದರೆ ಅಸಹ್ಯ. ಅದರ ವೇಗದಮೇಲೆ ಪ್ರೀತಿ. ಆದ್ದರಿಂದ ಈ ಭಾವಗಳನ್ನು ವ್ಯಕ್ತಪಡಿಸುವ ಪದ್ಯಗಳನ್ನೇಕೆ ಬರೆಯಬಾರದು? ಮದ್ಯವನ್ನು ಕುರಿತು ಕಾಳಿದಾಸ ಮುಂತಾದವರೆಲ್ಲ ಸೊಂಪಾದ ಪದ್ಯಗಳನ್ನು ಬರೆದಿರುವಾಗ ಸಿಗರೇಟು ಮಾಡಿದ ತಪ್ಪೇನು? ಭಾವಗಳು ಇಂಥವೇ ಆಗಬೇಕೆಂಬ ನಿರ್ಬಂಧವಿಲ್ಲದಿದ್ದಾಗ ವಿಷಯಗಳಿಗೆ ಮಾತ್ರ ಏಕೆ ನಿರ್ಬಂಧ? ನಿರ್ಬಂಧಪಡಿಸಲು ತಾನೆ ಹೇಗೆ ಸಾಧ್ಯ?

ಇನ್ನು ಮಿಕ್ಕ ಕವಿ, ಭಾಷೆ, ಕೇಳುವವನು ಎಂಬ ಮೂರು ಪದಾರ್ಥಗಳಲ್ಲಿ ಪ್ರತಿಯೊಂದೂ ಸ್ವಲ್ಪ ವಿಶೇಷ ಧರ್ಮವನ್ನು ಹೊಂದಿರಬೇಕು. ಯಾರಾದರೂ ಯಾವ ಭಾಷೆಯಲ್ಲಾದರೂ ಬರೆದರೆ ಅದು ಯಾರ ಮನಸ್ಸಿಗಾದರೂ ಹೊಂದಿ ಕೊಳ್ಳುತ್ತದೆ ಎಂದು ಹೇಳಲಾರೆವು. ಕವಿತ್ವದಲ್ಲಿ ಮುಖ್ಯ ಜೀವಧರ್ಮ ಇತರರ ಮನಸ್ಸನ್ನು ಹೊಗುವಿಕೆ ಅದೇ ನಮಗರ್ಥವಾಗದ ರಹಸ್ಯ. "ಹೀಗೆ ಬರೆದದ್ದನ್ನು ಕೇಳಿ ನಾವು ಆನಂದಿಸುತ್ತೇವೆ" ಎಂದು ಕಾವ್ಯ ಶಾಸ್ತ್ರವನ್ನು ಬರೆಯುವುದು ಯಾರಿಗೂ ಸಾಧ್ಯವಿಲ್ಲ. ಅಂಥ ಆಕರ್ಷಣ ಶಕ್ತಿ ಯಾರೋ ಒಬ್ಬನಿಗೆ ಭಗವಂತನು ಪ್ರಸಾದಿಸಿರುತ್ತಾನೆ. ಅಂಥವನನ್ನು ಬಿಟ್ಟು ಮಿಕ್ಕವರು ಕವಿಗಳಾಗಲಾರರು. ಆತನೇ ತನಗೇ ಬೇಕಾದ ವಿಷಯಗಳಂತೆ ತನ್ನ ಭಾವಗಳನ್ನು ವ್ಯಕ್ತಪಡಿಸುವ ಭಾಷೆಯನ್ನು

ಕೂಡ ಅರಿಸಿಕೊಳ್ಳುತ್ತಾನೆ. ಸ್ಥೂಲವಾಗಿ ನೋಡಿದರೆ ಸಂಗ್ರಹ, ಸ್ಪಷ್ಟತೆ, ಸರಳತೆ ಮೊದಲಾದವು ಕವಿತ್ವಭಾಷೆಗೆ ಇರಬೇಕಾದ ಪ್ರಧಾನ ಗುಣಗಳು. ಕೇಳುವವರು ಸಹೃದಯರಾಗಿ ಇರಬೇಕು. ಅಂದರೆ ಕವಿಗೆಂಥ ಹೃದಯವಿದೆಯೋ ಅಂಥದ್ದನ್ನು ಹೊಂದಿದವರು ಸಹೃದಯರು ಎಂದು ಅರ್ಥ. ಕೆಲವರು ಹೃದಯದಲ್ಲಿ ಹುಟ್ಟುವ ಭಾವಗಳನ್ನು ಯಾವ ಕಾರಣದಿಂದಲಾದರೂ ಅಡಗಿಸಿಟ್ಟುಕೊಂಡು ಭಾವಿಸುವ ಶಕ್ತಿಯನ್ನೇ ಕ್ರಮವಾಗಿ ಕೊಂದುಕೊಂಡಿರುತ್ತಾರೆ. ಹಾಗಾದರೆ ಯಾವ ಭಾವವನ್ನಾದರೂ ಸಂಪೂರ್ಣವಾಗಿ ಅನುಭವಿಸುವ ಸಹಜವಾದ ಹೃದಯ ಸತ್ತ್ವವನ್ನುಳ್ಳವರು ಸಹೃದಯರು. ಇಂಥವರು ಕವಿತ್ವವನ್ನು ಕೇಳಿದಾಗ ತಮ್ಮ ಹೃದಯವನ್ನು ಮರೆತು ಕವಿ ಹೃದಯದಿಂದ ಅದನ್ನು ನೋಡಬಲ್ಲರು ಅಂದರೆ ಕವಿತ್ವವನ್ನು ಕೇಳಿ ಆನಂದಿಸುವುದಕ್ಕೆ ಅಹಂಕಾರ ಕೆಲಸಕ್ಕೆ ಬಾರದು ಎಂದು ಅಭಿಪ್ರಾಯ. ಅಹಂಕಾರವೆಂದರೆ ಗರ್ವವಲ್ಲ. ನಾನು, ನನ್ನದು, ನನ್ನ ಭಾವ, ನನ್ನ ಸಿದ್ಧಾಂತ, ಎನ್ನುವ ಜ್ಞಾನ. ಅದು ಇರುವವರೆಗೂ ಕವಿಯು ಏನನ್ನು ಹೇಳಿದರೂ "ಅದು ನನಗೆ ಯಾವ ವಿಧದಲ್ಲಿ ಅನ್ವಯಿಸುತ್ತದೆ? ನನ್ನ ಅಭಿಪ್ರಾಯಗಳಿಗೆ ಅನುಕೂಲವಾಗಿ ಹೇಳಿದ್ದಾನೆಯೋ ಇಲ್ಲವೆ" ಎಂಬ ದೃಷ್ಟಿ ಬಂದು ಅದಕ್ಕೆ ತಕ್ಕಂತೆ ನಮಗೆ ಸುಖವೋ ದುಃಖವೋ ಕೋಪವೋ ಅಸಹ್ಯವೋ ಉಂಟಾಗುತ್ತದೆ. ವೇಮನ ಸಮಾಧಿಯಿಂದ ಎದ್ದು ಬಂದು, ನನ್ನ ಈ ಉಪನ್ಯಾಸಗಳನ್ನು ಕೇಳಿ, ಅಣಕಿಸಿ ಅಪಹಾಸ್ಯಮಾಡುತ್ತಾ ಒಳ್ಳೆಯ ಪದ್ಯಗಳನ್ನು ರಚಿಸಿ ನನ್ನ ಮೂತಿಯ ಮುಂದೆಯೇ ಓದಿದನು ಎಂದುಕೊಳ್ಳೋಣ. ಆಗ ನನ್ನಲ್ಲಿ ಸಹೃದಯತ್ವವಿದ್ದರೆ ಅದು ಯಾವುದಕ್ಕಾದರೂ ಉಪಯೋಗವಾದದ್ದಾದರೆ, ವೇಮನನನ್ನು ಅಣಕಿಸುವುದರಿಂದ ನನಗಾಗುವ ಅವಮಾನ, ನಿರಾಶೆ ಮುಂತಾದ ಅಹಂಕಾರ ಗುಣಗಳನ್ನು ಅದು ಮರೆಯಿಸಿ, ಆತನ ಪದ್ಯಗಳಲ್ಲಿರುವ ಕವಿತ್ವ ಸೊಗಸಾಗಿದೆ ಎಂದು ಮಾತ್ರ ನಾನು ಗ್ರಹಿಸಿ ಸಂತೋಷಪಡುವಂತೆ ಮಾಡಬೇಕು. ಅಂದರೆ ಕವಿತ್ವಕ್ಕೆ ವಿಷಯವಾದ ವಸ್ತುವಿನ ಪಾಲಿಗೆ ಕವಿತ್ವವಿಲ್ಲ. ಚಂದ್ರ, ಮಲ್ಲಿಗೆ, ಹೂವು ಮುಂತಾದ ಜಡವಸ್ತುಗಳ ವಿಷಯದಲ್ಲಿ ಎಷ್ಟು ಒಳ್ಳೆಯ ಕವಿತ್ವವನ್ನು ಬರೆದರೂ ಅವು ಹೇಗೆ ಅದರ ಸೌಖ್ಯವನ್ನು ಅನುಭವಿಸಲಾರವೋ ಹಾಗೆಯೇ ನಮ್ಮ ವಿಚಾರವಾಗಿ ಬರೆದರೂ ನಾವು ನಾವಾಗಿ ಇರುವವರೆಗೂ, ಅದರ ಮಾಧುರ್ಯವನ್ನು ಸವಿಯಲಾರೆವು. ಹಾಗಲ್ಲವೆ ನಮ್ಮ ಅಭಿಪ್ರಾಯಗಳು, ಭಾವಗಳು ಇದನ್ನು ಮರೆತು ಕವಿಯೊಡನೆ ಏಕೀಭವಿಸಿದೆವಾದರೆ ಆಗ ಹಾಗೆ ಹೀಗೆಂದು ನಿರ್ವಚನ ಮಾಡಲಾಗದ ಒಂದು ಆನಂದ ಆಗುತ್ತದೆ. ಈ ಆನಂದ ಪ್ರತ್ಯಕ್ಷಸಿದ್ಧವೇ ಹೊರತು ಅದನ್ನು ಪ್ರಮಾಣಗಳಿಂದ ಸ್ಥಾಪಿಸಿ ತೋರಿಸುವುದು ಸಾಧ್ಯವಾಗದು. ಹೀಗೆ ಕವಿತಾ ಪ್ರಪಂಚದಲ್ಲಿಯೂ ಮಮತಾಪರಿತ್ಯಾಗಪೂರ್ವಕವಾದ ಸಾಯುಜ್ಯವೇ ಕಾವ್ಯ ಲಕ್ಷಣವಾದ ಮೋಕ್ಷಾನಂದಕ್ಕೆ ಕಾರಣ.

ಈ ಸಾಯುಜ್ಯವನ್ನು ಪಡೆಯುವಂತೆ ಮಾಡಲು ಛಂದಸ್ಸು ಒಂದು ದೊಡ್ಡ

ಸಹಕಾರಿ ವಸ್ತು. ಛಂದಸ್ಸಿನಲ್ಲಿ ಮುಖ್ಯವಾಗಿರುವ, ಇರಬೇಕಾದ ಗುಣ ಲಯ. ಲಯವೆಂದರೆ, ಇಲ್ಲಿ ಕ್ಲುಪ್ತವಾದ ಅಳತೆಯಿರುವ ಒಂದು ವಿಧವಾದ ಶಬ್ದಗಳ ಗತಿ, ನಡಿಗೆ. ಇದಕ್ಕೆ ಮಿಕ್ಕ ಯಾವ ಪದಾರ್ಥಗಳ ಸಹಾಯವೂ ಇಲ್ಲದೆ ನಮ್ಮನ್ನು ನಾವು ಮರೆಯುವಂತೆ ಮಾಡುವ ಶಕ್ತಿ ಇದೆ. ನಾವು ಏನು ಕೆಲಸ ಮಾಡುತ್ತಿದ್ದರೂ ಎಲ್ಲಿಯೋ ಒಂದು ಮೂಲೆಯಿಂದ ಕೇಳಿಬರುವ ಮೃದಂಗ ತಮಟೆ ಮುಂತಾದ ವಾದ್ಯಗಳ ಲಯ ಪ್ರಕಾರ ನಾವು ಬೆರಳನ್ನಾದರೂ ಆಡಿಸದೆ ಇರೆವು. ನಮಗಿಂತ ನಾಗರಿಕತೆ ಸ್ವಲ್ಪ ಕಡಿಮೆ ಇರುವವರು ಆ ಲಯಗತಿಗೆ ಸರಿಯಾಗಿ ನಿಸ್ಸಂಕೋಚವಾಗಿ ನಾಟ್ಯವನ್ನೇ ಮಾಡುತ್ತಾರೆ. ತೀವ್ರವಾದ ಭಾವಕ್ಕೆ, ಅದನ್ನು ವ್ಯಂಜಿಸುವ ಭಾಷೆಗೆ ಜೊತೆಯಾಗಿ ಈ ಲಯವೂ ಸೇರಿದರೆ, ಉರಿಯುವ ಬೆಂಕಿಗೆ ಗಾಳಿಯ ಸಹಾಯ ಒದಗಿದಂತೆಯೇ ಅಲ್ಲವೆ? ಆದುದರಿಂದಲೇ ಕವಿತ್ವದ ಪರಿಪೂರ್ಣಫಲ ಹಾಡುಗಳಲ್ಲಿ ಪದ್ಯಗಳಲ್ಲಿ ಲಭಿಸು ವಷ್ಟು ಕೇವಲ ಗದ್ಯದಿಂದಲೇ ದೊರಕದು. ಗದ್ಯದಲ್ಲೂ ಕವಿಯ ಭಾವಗಳೂ ಕವಿಯ ಭಾಷೆಯೂ ಇರಬಹುದಾದರೂ ಅವುಗಳನ್ನು ಸ್ಪಷ್ಟವಾಗಿ ಬೇರಳಿಟ್ಟು ತೋರಿಸಬಹು ದಾದ ಪಂಜರವಿರದು. ಅದಿರಲಿ.

ಕವಿತ್ವ ಸ್ವರೂಪವನ್ನು ಕುರಿತು ನಾನು ಮೇಲೆ ಹೇಳಿದ ವಿಷಯಗಳಲ್ಲಿ ಹೊಸತೇನೂ ಇಲ್ಲ. ಆದರೆ ಅದರಲ್ಲಿ ಒಂದು ವಿಷಯವನ್ನು ಮಾತ್ರ ಮುಖ್ಯವಾಗಿ ಒತ್ತಿ ಹೇಳಲು ಇಷ್ಟೆಲ್ಲಾ ಬರೆಯಬೇಕಾಯಿತು ಅದೇನೆಂದರೆ ಕೇಳುವವರ ಅಹಂಕಾರ ತ್ಯಾಗ. ವೇಮನನಂಥ ಸ್ವತಂತ್ರನ ಕವಿತ್ವದಲ್ಲಿಯ ಮಾಧುರ್ಯವನ್ನು ಅನುಭವಿಸಲು ಅದಿಲ್ಲದೆ ಸಾಧ್ಯವಾಗದು. ವೇಮನ ಹಲವು ಪೋಲಿ ಪದ್ಯಗಳನ್ನು ಬರೆದನು. ಅಂಥ ಪದಗಳನ್ನು ನಮ್ಮ ಬಾಯಿಗಳಿಂದ ಉಚ್ಚರಿಸಬಾರದೆಂಬ ಅಭಿಪ್ರಾಯವನ್ನು ನಾವು ಮರೆತು ಹೋಗುವವರೆಗೂ ಅವುಗಳಲ್ಲಿಯ ಕವಿತಾಧರ್ಮವು ನಮಗೆ ಗೋಚರಿಸದು. ವೇದಗಳ ಕಾಲದಿಂದಲೂ ನಮ್ಮಲ್ಲಿ ಅಂಥ ಮಾತುಗಳಿವೆ. ನಮ್ಮಲ್ಲೇ ಏಕೆ? ಎಲ್ಲರಲ್ಲೂ ಇವೆ. ಕಾಮಾತುರರೂ ಅವರನ್ನು ಖಂಡಿಸುವವರೂ ಎಲ್ಲ ಭಾಷೆಗಳಲ್ಲೂ ಪೋಲಿ ಪದಗಳನ್ನು ಉಪಯೋಗಿಸಿದವರೇ. ಇಂದಿಗೂ ಅಂಥವನ್ನು ಬರೆಯುವವರು, ಕೇಳಿ ಸಂತೋಷಪಡುವವರೂ ವಿದ್ಯಾವಂತರಲ್ಲೇ ಇದ್ದಾರೆ. ಆದರೆ ಅದನ್ನು ಹೊರಗೆ ಹೇಳಬಾರದೆಂಬ ಭಾವ ಈಗ ಬಲಪಡುತ್ತಿದೆ. ಅಷ್ಟು ಮಾತ್ರದಿಂದ ಅದು ಕವಿತ್ವ ವಲ್ಲವೆಂದು ಹೇಳಲಾರೆವು.

ಆದರೆ ಯಾರಿಗಾದರಾಗಲಿ "ತಾನು" ಎಂಬ ಪದಾರ್ಥವೊಂದು ಇರುವವರೆಗೂ ಅದನ್ನು ಪೂರ್ತಿಯಾಗಿ ಇಲ್ಲವೆಂದುಕೊಂಡು ಮರೆತುಹೋಗುವುದು ಅಸಾಧ್ಯ. ಇತರರನ್ನು ಮರೆತು ಹೋಗುವಂತೆಮಾಡಿ ವಶಪಡಿಸಿಕೊಳ್ಳುವುದೆ ಪ್ರಧಾನ ಧರ್ಮ ವಾಗುಳ್ಳ ಕವಿಕೂಡ ಈ ತತ್ತ್ವವನ್ನು ಮರೆಯಬಾರದು. "ನಾನು" ಎಂಬ ಈ ಅಹಂಕಾರವಿರುವವರೆಗೂ ಧರ್ಮ, ನೀತಿ ಮೊದಲಾದವನ್ನು ಕುರಿತು ಬುದ್ಧಿಯಿಂದ ಏರ್ಪಟ್ಟ ಸಿದ್ಧಾಂತವು ಎಂದಿಗೂ ನಮ್ಮೊಡನೆಯೇ ಇರುತ್ತದೆ. ಕವಿಗೂ ನಮಗೂ

ಹೃದಯ ಸತ್ತ್ವವು ಒಂದೇ ರೀತಿಯಾಗಿದ್ದು, ಆ ಕಾರಣದಿಂದ ಆತನಲ್ಲಿ ಜನಿಸಿದ ಪ್ರೇಮಶೋಕಾದಿ ಭಾವಗಳು ನಮ್ಮ ಹೃದಯದಲ್ಲೂ ಪ್ರತಿಬಿಂಬಿಸುವುವಾದರೂ, ಇಬ್ಬರ ಬುದ್ಧಿಗಳು, ಅನುಭವಗಳು ಬೇರೆ ಬೇರೆಯಾದ್ದರಿಂದ ಆತನ ಸಿದ್ಧಾಂತಗಳನ್ನೆಲ್ಲ ನಾವು ಅಂಗೀಕರಿಸಲಾರೆವು. ನೋಡಿ ವೇಮನ ಹೀಗೆ ಬರೆದನು.

ಆ|| ಸತುಲ ಗವಯನೇಲ? ಸತುಲ
ಬಡಯನೇಲ?
ವೆತಲು ಪಡಗನೇಲ ವೆರ್ರಿತನಮು
ನೇಲಮೀದಿರಾಯಿ ನೆತ್ತಿಕೆತ್ತಿನಯಟ್ಲು
(೩೮೨೭)

ಸತಿಯರನು ಪಡೆಯಬೇಕು ಏಕೆ ಸುತರನು
ಪಡೆಯಬೇಕು ಏಕೆ
ಬೇಯುವುದೇಕೆ? ಹುಚ್ಚುತನ
ನೆಲದ ಮೇಲಿನ ಕಲ್ಲನ್ನು ತಲೆಗೆ ಚಚ್ಚಿಕೊಂಡಂತೆ

ಈ ಸಿದ್ಧಾಂತವನ್ನು ನಮ್ಮಲ್ಲಿ ಅಂಗೀಕರಿಸುವವರು ಎಷ್ಟು ಜನ? ನೂರಕೊಬ್ಬರು ಇದ್ದಾರೆಯೆ? ಆದರೆ ಈ ಪದ್ಯವನ್ನು ಓದುವಾಗ ಆತನ ಹೃದಯದಲ್ಲಿರುವ ಸಂಸಾರದ ಮೇಲಿನ ಅಸಹ್ಯ ಭಾವವು ಕ್ಷಣಮಾತ್ರ ನಮ್ಮ ಹೃದಯಕ್ಕೂ ಸಂಕ್ರಮಿಸುತ್ತದೆ. ಅಷ್ಟು ಮಾತ್ರವಾದೊಡನೆಯೇ ನಾವು ಕಾವಿ ಬಟ್ಟೆಗಳನ್ನು ಕಟ್ಟಿಕೊಳ್ಳಲು ಹೋಗಿಬಿಡುವುದಿಲ್ಲ. ಕವಿಯ ಕವಿತ್ವ ಇಷ್ಟರಲ್ಲಿಯೇ ಚರಿತಾರ್ಥವಾಯಿತು. ಕವಿಯ ಸಿದ್ಧಾಂತಗಳು ನಮ್ಮ ಅಭಿಪ್ರಾಯಗಳೂ ಒಂದೇ ಆಗಿದ್ದರೆ, ಹಾಗಿರುವವರಿಗೂ ಆತನ ಭಾವ ನಮ್ಮ ಹೃದಯದಲ್ಲಿ ನಿಂತಿದ್ದು ಆ ಪದ್ಯ ಹಲವುಬಾರಿ ನೆನಪಿಗೆ ಬರುತ್ತದೆ.

ಹೀಗೆ ಕವಿಯ ಅಭಿಪ್ರಾಯಗಳೆಲ್ಲವನ್ನೂ ನಾವು ಅಂಗೀಕರಿಸುವುದಕ್ಕೆ ಅವಕಾಶ ಕೊಡದ, ಬುದ್ಧಿ ಅನುಭವ ಮೊದಲಾದವುಗಳ ಭೇದ ಹಾಗಿರಲಿ, ಇವಕ್ಕಿಂತಲೂ ಬಲವಂತವಾಗಿದ್ದು ಅಹಂಕಾರ ತ್ಯಾಗ ಮಾಡಗೊಡದ ವಸ್ತು ಬೇರೊಂದಿದೆ. ಅದು ನಾಗರಿಕತೆ. ನಮ್ಮ ವೇಷ, ಭಾಷೆ, ನಡತೆ ಮೊದಲಾದವುಗಳ ಸ್ವರೂಪವನ್ನು ಇದು ನಿರ್ಣಯಿಸುತ್ತದೆ. ಅನೇಕ ಕಾರಣಗಳಿಗಾಗಿ ಆಗಾಗ ನಾಗರಿಕತೆಗೆ ಸಂಬಂಧಿಸಿದ ಅಭಿಪ್ರಾಯಗಳು ಬದಲಾಗುತ್ತವೆ. ನಮ್ಮ ಪೂರ್ವಿಕರು ಗಂಡಸರಿಗೆ ಕೂಡ "ದುಂಬಿಗಳಂತೆ ಕಪ್ಪಾಗಿ ಉದ್ದವಾದ ಕೂದಲಿರುವುದು" ಅಲಂಕಾರವೆಂದುಕೊಂಡರು. ಈಗ ಹೆಂಗಸರಲ್ಲೂ ಕೂಡ ಕೂದಲನ್ನು ಎಷ್ಟು ಕುರುಚಾಗಿ ಕತ್ತರಿಸಿಕೊಂಡರೆ ಅಷ್ಟು ನಾಗರಿಕತೆಯೆಂಬ ಭಾವನೆ ವ್ಯಾಪಿಸುತ್ತಿದೆ. ಹೀಗಾದರೂ ನಾವು ನೀತಿಯನ್ನು ಧರ್ಮವನ್ನಾದರೂ ಬಿಟ್ಟುಬಿಡುತ್ತೇವೆಯೇ ಹೊರತು ಅನಾಗರಿಕರಂತೆ ಹೊರಗೆ ವರ್ತಿಸಲು ಇಷ್ಟಪಡುವುದಿಲ್ಲ. ಇತರರು ನಮ್ಮನ್ನು ನಾಗರಿಕರು ಎನ್ನಬೇಕು ಎಂಬ ಆಶೆಯಿಂದ ಎಷ್ಟೋ ಕಷ್ಟಪಡುತ್ತೇವೆ. ಅಸತ್ಯವಾದರೂ ಅಂಗೀಕರಿಸಿ ಬೈಯಬೇಕಾದವನನ್ನು ಸಭೆಯಲ್ಲಿ ಹೊಗಳುತ್ತೇವೆ ಆದ್ದರಿಂದ ಕವಿಯ ಪದ್ಯಗಳಲ್ಲಿ ಅನಾಗರಿಕ ಮಾತುಗಳು—ಅಂದರೆ ನಮ್ಮ ಕಾಲದಲ್ಲಿ ಹಾಗೆಂದುಕೊಂಡಿರುವಂಥವೂ—ಎಷ್ಟು ಮಾತ್ರವಿದ್ದರೂ ಅವು ತಕ್ಷಣ ಅವನ ಕವಿತ್ವದಿಂದ ನಮಗೂ ಉಂಟಾಗುವ ಮರೆವನ್ನೂ ಮರೆಯುವಂತೆ ಮಾಡುತ್ತದೆ. ಅಭಿಪ್ರಾಯಗಳು ಭಿನ್ನವಾದರೂ ಅಷ್ಟು ಕಷ್ಟವಿಲ್ಲ.

ಜನಗಳಲ್ಲಿರುವ ಈ ನಾಗರಿಕ ದೃಷ್ಟಿಯನ್ನು ಹಲವು ಬಾರಿ ಗಮನಿಸದೆ ವೇಮನ ಪದ್ಯಗಳು ಬರೆಯಲ್ಪಟ್ಟಿರುವುದರಿಂದ ಅವುಗಳ ವ್ಯಾಪ್ತಿಗೆ ಸ್ವಲ್ಪ ಅಡ್ಡಿ ಬಂದಿದೆ ಯೆಂದು ಹಿಂದೆಯೇ ಹೇಳಿದ್ದೇವೆ. ಆದ್ದರಿಂದ ಕವಿ ಸಹೃದಯ ಇಬ್ಬರೂ ಪರಸ್ಪರ ಹೊಂದಿಕೊಳ್ಳಬೇಕಾದವರು. ಇವರ ಸಾಮಾನ್ಯ ಸ್ವಭಾವವನ್ನು ಗಮನಿಸಿ ಮನ್ನಿಸುತ್ತಾ, ಆತನು ತನ್ನ ಸ್ವಾತಂತ್ರ್ಯವನ್ನು ಸ್ವಲ್ಪ ಬಿಟ್ಟುಕೊಡಬೇಕು. ಹಾಗೆಯೇ ಆತನಲ್ಲಿರುವ ವಿಶೇಷಗುಣದಿಂದಲೇ ಈ ಆನಂದ ಫಲವನ್ನು ಅನುಭವಿಸುವು ದಕ್ಕಾಗಿ ಇವರು ತಮ್ಮ ಸತ್ವವನ್ನೂ ಬಹಳ ಮಟ್ಟಿಗೆ ತ್ಯಾಗ ಮಾಡಬೇಕು. ವೇಮನ ತನ್ನ ಧರ್ಮವನ್ನು ನಿರ್ವಹಿಸುವಾಗ ಸ್ವಲ್ಪ ಉದಾಸೀನತೆಯನ್ನು ತೋರಿಸಿದನು. ಈಗ ಅವನನ್ನು ನಿಂದಿಸಿ ಫಲವಿಲ್ಲ. ನಾವು ಆತನು ನಮ್ಮ ಜಾತಿಯನ್ನು ಬೈದನೆಂದು, ನಮ್ಮ ಪದ್ಧತಿಗಳನ್ನು ತಿರಸ್ಕರಿಸಿದನೆಂದು, ನಮಗೆ ಅಸಹ್ಯವಾದ ಅನಾಗರಿಕ ಮಾತು ಗಳನ್ನು ಹೇಳಿದನೆಂದು ಮರೆತುಹೋಗದೆ ಅದನ್ನೇ ಮನನ ಮಾಡುತ್ತಿದ್ದರೆ, ಆತನ ಅಸಾಧಾರಣ ಕವಿತ್ವದಿಂದ ದೊರಕತಕ್ಕ ಆನಂದದ ಲಾಭವನ್ನು ಹೋಗಲಾಡಿಸಿ ಕೊಂಡವರಾಗುತ್ತೇವೆ.

ವೇಮನನ ಕವಿತ್ವದಲ್ಲಿಯೂ ಅಸಾಧಾರಣ ಗುಣಗಳಲ್ಲಿ ಮುಖ್ಯವಾದದ್ದು ಭಾವಗಳ ತೀವ್ರತೆ. ಅವು ಅಷ್ಟು ತೀವ್ರವಾಗಿರುವುದಕ್ಕೆ ಕಾರಣ ಆ ಭಾವಗಳು ಆತನವೇ ಅಲ್ಲದೆ ಇತರರವಲ್ಲ ಎಂಬುದೇ. ಮನುಷ್ಯರಲ್ಲಿ ಅನೇಕರು ಯಾವಾಗಲೂ ಇತರರ ಭಾವ ಗಳನ್ನು ತಮ್ಮ ಮೇಲೆ ಆರೋಪಿಸಿಕೊಳ್ಳುವವರೇ. ಪದಾರ್ಥಗಳು ಒಳ್ಳೆಯವು ಕೆಟ್ಟವು ಎಂಬ ಅಭಿಪ್ರಾಯಗಳನ್ನು ಎಲ್ಲರೂ ತಮ್ಮಷ್ಟಕ್ಕೆ ತಾವು ಪರಿಶೀಲಿಸಿ ನಿಶ್ಚಯಿಸಿಕೊಳ್ಳಲಾರರು. ಆದ್ದರಿಂದ ಅನೇಕ ವಿಷಯಗಳಲ್ಲಿ ನಾವು ಇತರರ ಅಭಿಪ್ರಾಯಗಳನ್ನೇ ಅನುವಾದ ಮಾಡಿಕೊಳ್ಳಬೇಕಾಗುತ್ತದೆ. ಬದನೆಕಾಯಿ ಆರೋಗ್ಯಕರವೇ ಅಲ್ಲವೇ ಎಂಬ ವಿಷಯದಲ್ಲಿ ಸಾಮಾನ್ಯ ಜನರೆಲ್ಲ ವೈದ್ಯರ ಅಭಿಪ್ರಾಯವನ್ನೇ ನಂಬಬೇಕಲ್ಲವೇ ? ಆದರೆ ಅದು ನನ್ನ ನಾಲಿಗೆಗೆ ರುಚಿಸುವುದೇ ರುಚಿಸುವುದಿಲ್ಲವೇ ಎಂಬ ವಿಷಯವನ್ನು ಕೂಡ ಇತರರ ಮುಖವನ್ನು ನೋಡಿ ಹೇಳ ಬೇಕಾಗಿ ಬಂದರೆ, ಮಿಕ್ಕ ವಿಷಯದಲ್ಲಿ ಏನೇ ಆಗಲಿ, ಕವಿತ್ವಕ್ಕೆ ಅದು ಪ್ರಳಯಕಾಲ. ಈ ವಿಷಯದಲ್ಲಿ ಪ್ರಾಚೀನ ಕವಿಗಳ ಪಾರತಂತ್ರ್ಯವನ್ನು ಮೊದಲೇ ಬಿನ್ನವಿಸಿದೆ. ಇತರರಿಗೋಸ್ಕರ ಅವರು ಬರೆದ ಗ್ರಂಥಗಳಲ್ಲೆಲ್ಲ ಅರ್ಥಕ್ಕರ್ಥ ಕವಿತ್ವ ಸೊನ್ನೆ. ಪ್ರಾಚೀನದಲ್ಲಿ ಅನೇಕರನ್ನು ಕವಿಗಳೆನ್ನುವುದಕ್ಕೆ ಕಾರಣ ಅವರು ಬರೆದ ಗ್ರಂಥಗಳ ಗಿಂತ ಚಾಟು ಪದ್ಯಗಳಲ್ಲಿ ಹೆಚ್ಚಾಗಿ ಕಾಣುತ್ತದೆ. ಅಲ್ಲಸಾನಿ ಪೆದ್ದಿರಾಜು, ತನ್ನ ಪ್ರಭುವಾದ ಕೃಷ್ಣದೇವರಾಯನನ್ನು ಕುರಿತು ಮನುಚರಿತ್ರೆಯ ಪೀಠಿಕೆಯಲ್ಲಿ ಎಷ್ಟೋ ರೀತಿಯಲ್ಲಿ ವರ್ಣಿಸಿ, ತನಗೆ ಆತನಲ್ಲಿರುವ ಮೆಚ್ಚಿಕೆ, ಗೌರವ, ಪ್ರೇಮ ಮುಂತಾದ ಭಾವಗಳನ್ನು ಪ್ರಕಟಪಡಿಸಲು ಯತ್ನಿಸಿದನು. ಆದರೆ ರಾಯನ ಮರಣಾನಂತರ ತನ್ನ ಮನೆಯ ಮೂಲೆಯಲ್ಲಿ ಕುಳಿತುಕೊಂಡು ಅಳುತ್ತಾ ಹೇಳಿದ “ ಯೆದುರೈನ ಚೋ ತನ

ಮದಕರೀಂದ್ರವು ಡಿಗ್ಗಿ " (ಎದುರು ಬಂದಾಗ ತನ್ನ ಆನೆಯಿಂದ ಇಳಿದು) ಎಂಬ ಪದ್ಯ ನಮ್ಮ ಮನಸ್ಸುಗಳನ್ನು ಕರಗಿಸಿದಂತೆ ಮೇಲಿನ ಪೀಠಿಕೆಯ ಪದ್ಯಗಳಲ್ಲಿ ಒಂದೂ ಮಾಡಲಾರದು ಎಂಬುದು ಸಹೃದಯ ವೇದ್ಯ ಕಾರಣವೇನೆಂದರೆ ಇದು ಶೋಕವು ಉಕ್ಕಿ ಹರಿದು ಬರುವಾಗ ತನಗಾಗಿ ಬರೆದದ್ದು. ಪೀಠಿಕಾಪದ್ಯಗಳು ರಾಮರಾಜ ಭೂಷಣ, ರಾಮಭದ್ರ ಮುಂತಾದವರ ಮುಖಗಳನ್ನು ನೋಡುತ್ತಾ ಬರೆದದ್ದು. ಈ ದೋಷ ಆಧುನಿಕ ಕವಿಗಳಲ್ಲೂ ಅನೇಕರಿಗಿದೆ. ವಿಚಿತ್ರವಾದ ಕಲ್ಪನೆಗಳನ್ನು ಮಾಡಬಲ್ಲವನು ಕವಿಯೆಂದು ಆ ಕಾಲದವರು ತಿಳಿಯಲು ವಿಚಿತ್ರವಾದ ಭಾವಗಳನ್ನು ತೋರಿಸುವವನು ಕವಿಯೆಂದು ಈ ಕಾಲದವರು ಭಾವಿಸುತ್ತಾರೆ. ಭರತಮಾತೆ, 'ಚರಕಾ ರಾಧಾಕೃಷ್ಣರು ಮುಂತಾದ ವಿಷಯಗಳನ್ನು ಕುರಿತು ಈ ಕಾಲದಲ್ಲಿ ಹೊರ ಬರುತ್ತಿರುವ ಅಸಂಖ್ಯ ಪದ್ಯಗಳಲ್ಲಿ ಮುಕ್ಕಾಲು - ಮೂರು ವೀಸದಷ್ಟರಲ್ಲಿ ಕವಿತ್ವ ಸೊನ್ನೆ. ಇವರು ತೋರಿಸುವ ಭಕ್ತಿ, ಪ್ರೇಮ, ಶೋಕ ಮುಂತಾದ ಭಾವಗಳೆಲ್ಲವೂ ಸ್ವಂತವಾಗಿ ಹೃದಯದಲ್ಲಿ ಹುಟ್ಟಿದವಲ್ಲ. ಯಾವ ರವೀಂದ್ರನಾಥನಿಂದಲೋ ಯಾವ ಸರೋಜಿನೀ ದೇವಿಯಿಂದಲೋ ಎರವು ತಂದುಕೊಂಡದ್ದು. ಆದ್ದರಿಂದ ಈ ಪದ್ಯ ಗಳು ಚಿಕ್ಕ ಮಕ್ಕಳಾಡುವ ನಾಟಕಗಳಂತೆ ಸ್ವಲ್ಪಮಟ್ಟಿಗೆ ವಿನೋದವಾಗಿಯೂ ಬಹುಮಟ್ಟಿಗೆ ಅಸಹ್ಯವಾಗಿಯೂ ಇವೆ. ವೇಮನನಲ್ಲಿ ಇಂಥ ಭಾವದಾಸ್ಯವಿಲ್ಲವೆಂದು ಬೇರೆಯಾಗಿ ಹೇಳಬೇಕಾಗಿಲ್ಲ.

ಯಾವಾಗ ಭಾವ ಹೀಗೆ ಸಹಜವಾಯಿತೋ ಆಗಲೇ ಭಾಷೆಗೆ ಒಂದು ವಿಧವಾದ ಬಿಗಿಯೂ ಬಲವೂ ಬರುತ್ತದೆ. ಅದು ಕೃತ್ರಿಮವಾದರೆ ಇದೂ ಸಡಲಿ ಹೋಗಿ ತೇಪೆ ತೇಪೆಯಾಗಿರುತ್ತದೆ. ತುಂಬಿದ ಕೊಡದಂಥಾದ್ದು ಭಾವ. ಭಾಷೆ ಅದನ್ನು ಮೇಲಕ್ಕೆಳೆ ಯುವ ಹಗ್ಗ. ಮುಖ್ಯವಾಗಿ ಕೊಡವೇ ಇಲ್ಲದಿದ್ದಾಗ ಬರಿ ಹಗ್ಗವನ್ನು ಎಷ್ಟು ನೆಮ್ಮದಿಯಾಗಿ ಎಳೆದರೂ ಅದು ಚೆನ್ನಾಗಿ ದೃಢವಾಗಿ ಮೇಲಕ್ಕೆ ಬರದೆ ಓಲಾಡುತ್ತದೆ ; ಸುಕ್ಕಾಗುತ್ತದೆ ಸೇದುವವನಿಗೆ ಸೇದಿದಂತೆಯೇ ತೋಚದು. ಹಾಗೆಯೇ ಭಾವ ದಾರ್ಢ್ಯವಿಲ್ಲದ ಭಾಷೆಯಲ್ಲಿ ಒಂದು ಧಾರೆಯಿರುವುದಿಲ್ಲ. ಪದಗಳ ಜೋಡಣೆ ಎಗ್ಗಡಿ ದಿಗ್ಗಡಿ (ಏರುಪೇರು) ಯಾಗಿರುತ್ತದೆ. ಅಂಥಾದ್ದು ಕಂಠಪಾಠವೆಂದೆನಿಸಿಕೊಳ್ಳುತ್ತದೆಯೇ ಹೊರತು ಕವಿತ್ವವೆನಿಸಿಕೊಳ್ಳದು. ಅಲ್ಲಿ ಅಧಿಕ ಪದಗಳು ಹೊರಳಾಡುತ್ತವೆ. ನಾನು ನೋಡಿದ್ದರಲ್ಲಿ ಕವಿತ್ವದಲ್ಲಿ ಅಪಶಬ್ದಗಳಿಗಿಂತ ಅಧಿಕಪದಗಳಿರುವುದೇ ಹೆಚ್ಚಿನ ದೋಷ. ಅಪಶಬ್ದದಿಂದ ವೈಯಾಕರಣರ ಮುಖಕೆಡುತ್ತದೆ. ಆದರೆ ಕವಿಯ ಭಾವ ಕೆಡದು. ಅಧಿಕ ಪದಗಳಿಂದ ಭಾವ ಖಂಡಿತ ಕೆಡುತ್ತದೆ. ತೀವ್ರವಾದ ಭಾವಗಳು ಇರುವವನಿಗೇ ಇಂಥ ತೊಡಕಿಲ್ಲದ ಭಾಷೆ ಒದಗಿಬರುತ್ತದೆ. ಅಂದರೆ ತೀವ್ರವಾದ ಭಾವವುಳ್ಳವರಿಗೆಲ್ಲ ಅಂಥ ಭಾಷೆ ಬರುತ್ತದೆಯೆಂದಲ್ಲ. ಅಸಲು ಕವಿಯಾಗಿ ಸೃಷ್ಟಿ ಮಾಡಲ್ಪಟ್ಟವನಿಗೇ ಈ ನ್ಯಾಯ ಅನ್ವಯಿಸುತ್ತದೆ. ತೀವ್ರವಾದ ಭಾವಗಳು ಮನುಷ್ಯರೆಲ್ಲರಿಗೂ ಇರುತ್ತವೆ. ಆದರೆ ಆ ಭಾವಗಳನ್ನು ವ್ಯಕ್ತಪಡಿಸಬೇಕಾದಾಗ ನಮಗೆಲ್ಲರಿಗೂ ಬರುವುದು ಕವಿತ್ವ

ವಲ್ಲ, ಬಿಕ್ಕಲು. ಕೆಲವರಿಗೆ ಅದು ನಾಲಿಗೆಗೇ ಅಂಟಿಕೊಂಡಿರುತ್ತದೆ. ಮತ್ತೆ ಕೆಲವರಿಗೆ ಇದು ಬರವಣಿಗೆಯಲ್ಲೂ ಇರುತ್ತದೆ. ಕವಿಗಳೆಂದೆನಿಸಿಕೊಂಡವರಲ್ಲಿ ಅನೇಕರು ಇಂಥ ಉಗ್ಗು ಬರವಣಿಗೆಯವರೇ. ಬುದ್ಧಿವಂತರಾದವರಿಗೆ ಈ ಎರಡಕ್ಕೂ ಮದ್ದು ಒಂದೇ, ಕೈಲಾದಮಟ್ಟಿಗೆ ಮೌನವಾಗಿರುವುದು.

ವೇಮನ ಹೀಗೆ ತೀವ್ರವಾದ ಭಾವಗಳು, ಅಡ್ಡಿಯಿಲ್ಲದ ನಾಲಿಗೆ ಇದ್ದವನಾದ್ದರಿಂದಲೇ ಆತನ ರಚನೆಗಳಲ್ಲಿ ಭಾವ, ಭಾಷೆ ಇವೆರಡೂ ಒಂದರೊಡನೊಂದು ಪಂದ್ಯಕಟ್ಟಿಕೊಂಡು ಕುಪ್ಪಳಿಸಿ ಎಗರಿದಂತೆ ಹೃದಯದಿಂದ ಮೇಲಕ್ಕೆ ಹೊಮ್ಮುತ್ತಿರುತ್ತವೆ. ಈ ವೇಗವನ್ನು ನಿರೋಧಿಸುವುದಕ್ಕೆ ಛಂದಸ್ಸು ಯತಿ ಪ್ರಾಸಗಳು ಈ ಯಾವ ನಿರ್ಬಂಧಗಳಿಗೂ ಆಗದು. ಇವು ಭಾವ ಭಾಷೆಗಳಿಗೇ ಬಗ್ಗಿ ನಡೆದುಕೊಳ್ಳಬೇಕಾಗಿದೆಯೇ ಹೊರತು ಅವು ಇದಕ್ಕೆ ಒಳಪಟ್ಟು ಕುಂಟುತ್ತ ನಡೆಯುವುದಿಲ್ಲ. ಆದ್ದರಿಂದಲೇ ಎಲ್ಲರಿಗೂ ಆದಂತೆ ಈ ನಿರ್ಬಂಧಗಳು ಸಂಕೋಲೆಯಂತೆ ಇರದೆ ಈತನ ಕವಿತೆಗೆ ಕಂಕಣಗಳು ಉಂಗುರಗಳಂತೆ ಅಲಂಕಾರಗಳಾಗಿವೆ. ಮತ್ತು ಕೆಲವು ಕಡೆಗಳಲ್ಲಿ ಮೇಲಿನ ನಿರ್ಬಂಧಗಳನ್ನು ಬಿಟ್ಟು, ಕಿತ್ತುಹಾಕಿ ಬರೆದರೂ ಮತ್ತೆ ಕೆಲವೆಡೆಗಳಲ್ಲಿ ಇಲ್ಲದ ನಿರ್ಬಂಧಗಳನ್ನು ಕಲ್ಪಿಸಿಕೊಂಡು ಅಷ್ಟೇ ಧಾರಾಳವಾಗಿ ಬರೆದು ವೇಮನ ವಿಚಿತ್ರವಾದ ಡೊಂಬರ ಲಾಘವವನ್ನು ತೋರಿಸುತ್ತಾನೆ. ನಮ್ಮಲ್ಲಿ ವೃತ್ತಜಾತಿಗಳಲ್ಲಿ ಅಕ್ಷರ ಸಂಖ್ಯಾ ನಿಯಮವನ್ನೂ ಪ್ರಾಸನಿರ್ಬಂಧವನ್ನೂ ಬಿಟ್ಟು ಯತಿಯನ್ನು ಮಾತ್ರ ಉಳಿಸಿಕೊಂಡ ಚಿಕ್ಕ ಸುಲಭವಾದ ಪದ್ಯರೀತಿ ಆಟವೆಲದಿಯಲ್ಲವೇ. ಆದರಲ್ಲೂ ಪ್ರಾಸವನ್ನು ಸೇರಿಸಿಕೊಂಡು ಈತನು ಮಾಡಿದ ಸರಳವಾದ "ಸಾಮು" ನೋಡಿ.

ಆ॥ ಚದುವುಲಂದು ಪಾಡಿಮೊದವುಲಂದು ಸ್ತ್ರೀಲ	ಓದಿನಲ್ಲಿ ಹಾಲು ಜಿನುಗುವ ಹಸುಗಳಲ್ಲಿ ಸ್ತ್ರೀಯರ
ಪೆದವುಲಂದು ರಾಜ್ಯಪದವುಲಂದು	ತುಟಿಗಳಲ್ಲಿ ರಾಜ್ಯಪದವಿಯಲ್ಲಿ
ಆಶಲುಡಿಗಿನಟ್ಟಿಯಯ್ಯಲು ಮುಕ್ತುಲು (೧೪೭೯)	ಆಶೆಯುಡುಗಿರುವ ಅಯ್ಯಗಳು ಮುಕ್ತರು
ಆ॥ ಆಕುಲನ್ನಿದಿನ್ನ ಮೇಕ ಪೋತುಲಕೇಲ	ಎಲೆಗಳೆಷ್ಟೋ ತಿಂದ ಮೇಕೆಗೇಕೆ
ಕಾಕಪೋಯೆನಯ್ಯ ಕಾಯಸಿದ್ಧಿ	ಆಗಲಿಲ್ಲವಯ್ಯ ಕಾಯಸಿದ್ಧಿ
ಲೋಕುಲೆಲ್ಲ ವೆರ್ರಿ ಪೋಕಿಳ್ಳಬೋದುರು (೨೨೩)	ಲೋಗರೆಲ್ಲ ಹುಚ್ಚುದಾರಿ ಹಿಡಿದರು

ಈತನಲ್ಲಿ ಅರ್ಥವಾಗದ ಕವಿತಾ ರಹಸ್ಯಗಳಲ್ಲಿ ಈ ಆಟವೇದಿಯೊಂದು. ಇಷ್ಟು ಚಿಕ್ಕ ವೃತ್ತದಲ್ಲಿ ಅಷ್ಟು ದೊಡ್ಡ ಭಾವಗಳನ್ನು ಯತಿ ಸ್ಥಾನಗಳನ್ನು ಬಿಡದೆ ಹಿಂದೆ ಮುಂದೆ ತೇಪೆಗಳಿಲ್ಲದೆ ಕತ್ತರಿಸಿದಂತಿರುವ ಶಬ್ದಾರ್ಥದೊಂದಿಗೆ ಹೀಗೆ ಈತನು ಅಚ್ಚು ಹುಯ್ದಿದ್ದಾನೋ?—ಎಂಬ ಪ್ರಶ್ನೆ ಪದ್ಯಗಳನ್ನು ಬರೆಯಲು ಕೈಹಾಕಿ

ದವರಿಗೆಲ್ಲ ಬಿಡಿಸಲಾಗದ್ದು. ಈತನ ಪದ್ಯಗಳನ್ನು ಓದಿದ ಮೇಲೂ ಕೂಡ ಆಟವೆಲದಿ ಯಲ್ಲಿ ಬರೆಯುವೆನೆಂದು ಕೈ ಹಾಕಿದವನು. ನನ್ನ ಮಟ್ಟಿಗೆ ಹೇಳುವುದಾದರೆ, ಹುಚ್ಚ ಶ್ರೀನಾಥನು ಅಪರೂಪವಾಗಿ ಇದೇ ಪದ್ಧತಿಯಲ್ಲಿ ಒಂದು ಆಟವೆಲದಿ ಚಾಟು ಪದ್ಯ ವನ್ನು ಬರೆದನು :

ಆ॥ ಚಿನ್ನ ಚಿನ್ನರಾಳ್ಳು ಚಿಲ್ಲರ ದೇವುಳ್ಳು	ಚಿಕ್ಕ ಚಿಕ್ಕ ಕಲ್ಲುಗಳು ಚಿಲ್ಲರೆ ದೇವತೆಗಳು
ನಾಗುಲೇಟಿ ನೀಳ್ಳು ನಾಪರಾಳ್ಳು	ನಾಗುಲೇಟಿಯ ನೀರು ಕಲ್ಲುಚಪ್ಪಡಿಗಳು
ಸಜ್ಜ ಜೊನ್ನ ಕೂಳ್ಳು ಸರ್ಪಂಬುಲುನುದೇಳ್ಳು	ಸಜ್ಜೆ ಜೋಳದ ಕೂಳು ಸರ್ಪಗಳು ಚೇಳುಗಳು
ಪಲ್ಲೆನಾಟಿ ಸೀಮೆ ಪಲ್ಲೆಟೂಳ್ಳು	ಪಲ್ಲೆನಾಟಿ ಸೀಮೆಯ ಹಳ್ಳಿಗಳು

ಆದರೆ ಇಂಥವು ನಾಲ್ಕನ್ನಾದರೂ ಬರೆಯುವುದಕ್ಕೆ ಮೊದಲೇ ಆತನಿಗೆ ರೆಡ್ಡಿರಾಜರ ಮುಂದೆ ಸಭಾಮಂದಿರದಲ್ಲಿ ಕೈಯೆತ್ತಿ ಹಾಡಲು ತಕ್ಕ ಸೀಸ ಪದ್ಯದ ಗಾಂಭೀರ್ಯ ಧೈರ್ಯಗಳ ಮೇಲೆ ಮನಸ್ಸು ಹೋಯಿತು. ಒಬ್ಬೊಬ್ಬರಿಗೆ ಒಂದೊಂದು ಜಾತಿಯ ಪದ್ಯದ ಮೇಲೆ ಸಹಜವಾದ ಅಭಿಮಾನವಿರುತ್ತದೆ. ಕಾಳಿದಾಸನ ಮಂದಾಕ್ರಾಂತ, ಭವಭೂತಿಯ ಶಿಖರಿಣೀ, ತಿಕ್ಕನನ ಕಂದ ಇವು ಸುಪ್ರಸಿದ್ಧಗಳೇ. ತೆಲುಗಿನವರಲ್ಲಿ ತರುವಾಯದ ಕವಿ ಚೌಡಪ್ಪ ಸುಮತಿ ಶತಕ ಕರ್ತ ಮೊದಲಾದ ಶತಕ ಕವಿಗಳನೇಕರು ಕಂದದಲ್ಲಿ ಹೆಚ್ಚಿನ ಅಭಿಮಾನವನ್ನು ತೋರಿಸಿ ಚೆನ್ನಾದ ಪದ್ಯಗಳನ್ನು ಬರೆದರು. ಹಾಗೆಯೇ ವೇಮನನಿಗೂ ಆಟವೆಲದಿಯ ಮೇಲಿನ ಅಭಿಮಾನ ಅವನ ಸಹಜ ಭಾವ ಗಳಲ್ಲಿ ಒಂದು. ಆದರೆ ಅದಕ್ಕೆ ಕಾರಣವೂ ಇದೆ. ತಮ್ಮ ಅಭಿಪ್ರಾಯವನ್ನು ಸ್ಪಷ್ಟ ವಾಗಿ ಸಿಕ್ಕುಗಳಿಲ್ಲದೆ ಹೇಳಲು ಇಷ್ಟಪಡುವವರು ಯಾರಾದರಾಗಲಿ, ದೊಡ್ಡ ದೊಡ್ಡ ವೃತ್ತಗಳನ್ನು ಬಳಸರು. ಅದಕ್ಕೆ ಕೈ ಹಾಕುವುದು ಆನೆಯನ್ನು ಕಟ್ಟಿಕೊಂಡಂತೆ. ಹೊಟ್ಟೆ ತುಂಬ ಅದಕ್ಕೆ ತೀನಿಯನ್ನೊದಗಿಸುವುದೇ ದೊಡ್ಡ ಕಷ್ಟ. ಆದ್ದರಿಂದಲೇ ಯಾವುದೋ ಎಲೆಗಳನ್ನು ತಂದು ಅದಕ್ಕೆ ಹೊಟ್ಟೆ ತುಂಬಿಸಬೇಕಾಗುತ್ತದೆ. ಅರ್ಥ ಭಾವಗಳಿಗೆ ಮಿತಿಯುಂಟೇ ಹೊರತು ಭಾಷೆಗಿಲ್ಲ. ಆದ್ದರಿಂದ ಯಾವುದೋ ಶಬ್ದಗಳ ಕಸವನ್ನು ಸೇರಿಸಿ ಪದ್ಯಗಳನ್ನು ತುಂಬಬಹುದೇ ಹೊರತು, ಅದರಿಂದ ಮುಖ್ಯವಾದ ವಸ್ತು ಕೆಡುವುದು ತಪ್ಪದು. ವೇಮನ ಹೀಗೆ ಕಸ ತುಂಬುವ ವ್ಯಾಪಾರಿಯಲ್ಲ. ಆದ್ದರಿಂದಲೇ ತೆಲುಗು ಛಂದಸ್ಸುಗಳಲ್ಲೆಲ್ಲ ಚಿಕ್ಕದಾದ ಆಟವೆಲದಿಯನ್ನು ಈತನು ಪರಿಗ್ರಹಿಸಿದನೆಂದು ಹೇಳಬಹುದು. ಕಂದ, ತೇಟಗೀತೆ ಮೊದಲಾದ ಪದ್ಯಗಳನ್ನು ಕೂಡ ಈತನು ಬಳಸಿದನಾದರೂ ಅವುಗಳಲ್ಲಿ ಬಹಳಮಟ್ಟಿಗೆ ಈ ಮುದ್ದು, ಈ ಕೆತ್ತಿದ ಚೊಕ್ಕತನ ಈ ಬಿಗುವು, ಈ ಲಘುತ್ವ ಇಲ್ಲ.

ಇದರಲ್ಲಿ ಈತನು ಯತಿಗೆ ಕೊಟ್ಟ ಮರ್ಯಾದೆ ಅಂಥ ಅದ್ಭುತವಾದದ್ದು. ಆಂಧ್ರ ವಾಙ್ಮಯದಲ್ಲಿ ಯತಿಯನ್ನು ಪರಸ್ಪರ ವಿರುದ್ಧವಾಗಿ ವಿಚಿತ್ರವಾಗಿ ಬಳಸಿದವರು ಇಬ್ಬರು. ಮೊದಲನೆಯವನು ತಿಕ್ಕನ ಸೋಮಯಾಜಿ. ಯತಿ ಬೇಕಾದವರು

ಪ್ರಯತ್ನಪೂರ್ವಕವಾಗಿ ಈತನ ಕವಿತ್ವದಲ್ಲಿ ಹುಡುಕಿ ನೋಡಬೇಕಾದದ್ದೇ ಹೊರತು, ಅದು ತಪ್ಪದೆ ಅಲ್ಲಿದ್ದರೂ ಸಾಮಾನ್ಯವಾಗಿ ಕೈಗೆ ಸಿಕ್ಕದು. ಲಯಾನುಸಾರವಾಗಿ ಪಾದ ಮಧ್ಯದಲ್ಲಿ ಒಂದು ಕಡೆ ಇರುವ ಪದದ ನಿಲುಗಡೆಗೆ ಯತಿಯೆಂದು ಪ್ರಾಚೀನ ನಿಯಮ. ಅದನ್ನು ಬಿಟ್ಟು ಬಿಟ್ಟು ತೆಲುಗಿನವರು ಆ ಸ್ಥಳದಲ್ಲಿ ಮೊದಲನೆಯ ಅಕ್ಷರ ಪುನರಾವೃತ್ತಿಯಾಗಬೇಕೆಂದು ಒಂದು ನಿಯಮವನ್ನು ಹಠವಾಗಿ ಹಿಡಿದುಕೊಂಡರು. ಅವರ ಪೀಡೆಯಿಂದ ತಪ್ಪಿಸಿಕೊಳ್ಳಲಾಗದೆ ತಿಕ್ಕನ ಬಂದಿದೆ ಎನಿಸಿಬಿಟ್ಟು ಮುಂದಕ್ಕೆ ಹೊರಟನು.

> ಗುರು ಭೀಷ್ಮಾದುಲು ಸೂಚು ಚುಂಡ ಸಭವಿಾಕುನ್
> ಗೀಡು ನಾಡಟ್ಲ ಮುಷ್ಕರುಲ್ಯೆ ಚೇಸಿರಿ ಯಂತಚೇಸಿಯುನು
> ಪಶ್ಚಾತ್ತಾಪಮುಂ ಬೊಂದ ನೋಪರ
>
> (ಭಾರತ : ಉದ್ಯೋಗ ಪರ್ವ)

—ಎಂದಾಗ ಅಷ್ಟುಕವಿಯ ಗ್ರಂಥವು ಕೈಯಲ್ಲಿಲ್ಲದವರಿಗೆ ಇಲ್ಲಿ ಯತಿ ಕಾಣಿಸದು. ತಪ್ಪಿಸಿಕೊಂಡು ತಿರುಗುವ ಕೌಶಲ ತಿಕ್ಕನನಿಗೆ ಬಂದಂತೆ ಬೇರೆ ಯಾರಿಗೂ ಬರಲಿಲ್ಲ. ಆದರೆ ಈ ದಾರಿಯೇ ಕೊಂಚ ಸುಲಭವೆಂದು ಮಿಕ್ಕವರೆಲ್ಲರೂ ಆ ದಾರಿಯನ್ನೇ ತುಳಿದರು. ನನಗೆ ತಿಳಿದ ಮಟ್ಟಿಗೆ ವೇಮನನೊಬ್ಬನೇ ಈ ವಿಷಯದಲ್ಲಿ ತಿಕ್ಕನನಿಗೆ ಎದುರು ತಿರುಗಿದವನು. ಎಲ್ಲಿ ಯತಿಯಿರಬೇಕೋ ಅಲ್ಲಿ ಪದವೊಂದೇ ಅಲ್ಲ, ಅಭಿಪ್ರಾಯವೂ ಸಹ ಕತ್ತರಿಸಿ ನಿಲ್ಲುತ್ತದೆ. ಜೊತೆಗೆ ಆದ್ಯಕ್ಷರಾವೃತ್ತಿಯು ತಡಕಾಟವಿಲ್ಲದೆ ಸಿದ್ಧವಾಗಿ ಒದಗಿಬರುತ್ತದೆ. ಅದು ಇಲ್ಲವೇ, ಪ್ರಾಸಸಿದ್ಧ ನೋಡಿ :

ಆ॥	ಕಡುಪು ಬೋರಗಿಂಚಿ ಕನ್ನುಲು ಮುಕುಳಿಂಚಿ	ಹೊಟ್ಟೆಯುಬ್ಬಿಸಿ ಕಣ್ಣುಗಳ ಮುಚ್ಚಿ
	ಬಿರ್ರಬಿಗುಸುಕೊನ್ನ ಬೀದಯೋಗಿ	ಬಿರ್ರನೆ ಬೀಗಿದ ಬಡಯೋಗಿ
	ಯಮುನಿ ಬಾರಿಗೊರ್ರೆಯತಡೇ ಮಿಸೇಯುನು (೮೭೩).	ಯಮನ ಬಲಿಪಶು ಅವನು ಏನುಮಾಡಬಲ್ಲ

ಆ॥	ಕೋತಿ ಬಟ್ಟ ತೆಚ್ಚಿಕೊತ್ತಪುಟ್ಟಮುಗಟ್ಟಿ	ಕೋತಿಯನ್ನು ಹಿಡಿದುತಂದು ಹೊಸವಸ್ತ್ರವ ನುದಿಸಿ
	ಕೊಂಡಮುಚ್ಚುಲೆಲ್ಲ ಕೊಲಿಚಿನಟ್ಲು	ಕರಿಮೂತಿಯ ಮಂಗಗಳೆಲ್ಲ ಸೇವಿಸಿದಂತೆ
	ನೀತಿ ಹೀನುನೊದ್ದ ನಿರ್ಭಾಗುಲುಂದುರು (೧೨೮೧)	ನೀತಿಹೀನನ ಬಳಿ ನಿರ್ಭಾಗ್ಯರಿರುವರು

ಈತನ ಭಾವಗಳು ಹೇಗೆ ಕೃತ್ರಿಮವಲ್ಲವೋ ಈತನ ಭಾಷೆಯೂ ಹಾಗೆಯೇ. ಇದೇ ನಿಜವಾದ ಅಚ್ಚ ತೆಲುಗು ಪ್ರಾಚೀನರಿಗೆ ಸಂಸ್ಕೃತದಂತೆ, ಆಧುನಿಕರಿಗೆ ಇಂಗ್ಲಿಷಿನಂತೆ. ಸ್ವಭಾಷಾರೂಪವನ್ನು ಕೆಡಸುವಂಥ ಎರಡನೆಯ ಭಾಷೆ ಯಾವುದನ್ನೂ ವೇಮನ ತಿಳಿಯನು. ಆದ್ದರಿಂದಲೇ ಯೋಗ ರಹಸ್ಯವನ್ನು ತಿಳಿಸುವ ಪಾರಿಭಾಷಿಕ

ಪದಗಳಿಂದ ತುಂಬಿದ ಪದ್ಯಗಳನ್ನು ಬಿಟ್ಟು ಅವನು ಬೇರೆ ಯಾವಮಾತನ್ನು ಹೇಳಿದರೂ ತೆಲುಗು ಮಾತನಾಡಲು ಕಲಿತವನು ಯಾರಿಗಾದರೂ ಅರ್ಥವಾಗದ ಪದ್ಯಗಳು ಈತನಲ್ಲಿ ಇಲ್ಲ. ದೊಡ್ಡ ತತ್ತ್ವ ವಿಷಯಗಳನ್ನು ಹೇಳುವಾಗಲೂ ಈತನ ಧಾರೆ ಹಾಗೆಯೇ ಇರುತ್ತದೆ. "ಈ ಸೌಲಭ್ಯದಲ್ಲೇ ಅನನ್ಯ ಸಾಧಾರಣವಾದ ಈತನ ಕವಿತಾ ಶಕ್ತಿ ಅಡಗಿದೆ". ತಾನು ಹೇಳುವ ಪ್ರತಿಯೊಂದು ನ್ಯಾಯಕ್ಕೂ ಒಂದು ಉಪಮಾನ ತಪ್ಪದೆ ಇರುತ್ತದೆ. ಆ ಉಪಮಾನಗಳು ಕೂಡ ಊಹಾ ಕಲ್ಪಿತಗಳಾಗದೆ ಮನೆಯ ಸುತ್ತಮುತ್ತಾ ಇರುವ ವಸ್ತುಗಳಾದ್ದರಿಂದ ಅವುಗಳ ಸೊಗಸನ್ನು ಬಿಗುವನ್ನು ಎಲ್ಲರೂ ಅನುಭವಿಸಿ ಆನಂದಿಸಬಹುದು. ಈಗಾಗಲೇ ಹೆಚ್ಚಾಗಿ ಉದಾಹರಿಸಿದ್ದೇನೆ. ಆದರೂ ಇನ್ನೆರಡನ್ನು ಉದಾಹರಿಸದೆ ಇರಲಾರೆ.

ಆ॥	ಪಸುಲ ವನ್ನೆವೇರು ಪಾಲೇಕ ವರ್ಣಮೌ	ಹಸುಗಳ ಬಣ್ಣ ಬೇರೆ, ಹಾಲಿನ ಬಣ್ಣವೊಂದೇ
	ಪುಷ್ಪಜಾತಿವೇರು ಪೂಜಯೊಕಟಿ	ಪುಷ್ಪ ಜಾತಿ ಬೇರೆ, ಪೂಜೆಯೊಂದೇ
	ದರ್ಶನಮುಲು ವೇರು ದೈವಂಬದೊಕ್ಕಟಿ (೨೪೮೦)	ದರ್ಶನಗಳು ಬೇರೆ ದೈವವೊಂದೇ
ಆ॥	ತಲ್ಲಿ ತಂಡ್ರಿಚಾವ ದಾನಾಲಿತೋಗೂಡಿ	ತಾಯಿತಂದೆ ಸಾಯುತ್ತಿದ್ದರೆ ತಾನು ಹೆಂಡಿರೊಡಗೂಡಿ
	ಯಿಲ್ಲು ಪಟ್ಟಿಯುನ್ನ ಯಿಂಪುಲೆಲ್ಲ	ಮನೆಯಲಿ ಪಡುವ ಭೋಗವೆಲ್ಲ
	ಕೊರಿತಿವಿಾದಿ ದೊಂಗಕೂಡಡಿಗಿನಯಟ್ಲು (೧೮೫೧)	ಶೂಲಾರೋಹಣಕ್ಕೆ ವಿಧಿಸಲ್ಪಟ್ಟ ಕಳ್ಳ ಕೂಳು ಕೇಳಿದಂತೆ

ಹೀಗೆ ಬರೆಯಬಲ್ಲವನ ಅಭಿಪ್ರಾಯಗಳೊಡನೆ ನಾವು ಏಕೀಭವಿಸಿದರೇನು? ಏಕೀಭವಿಸದಿದ್ದರೇನು? ಒಂದು ಸಾರಿ ಕೇಳಿದ ಬಳಿಕ ಪಂಡಿತನಾಗಲಿ ಪಾಮರನಾಗಲಿ ಇದನ್ನು ಮರೆಯಬಲ್ಲನೇ? ಸಂಪಗೆ ಹೂವುಗಳ ವಾಸನೆ ತಲೆನೋವು ತರಬಹುದು. ಆದರೆ ಏನು ಮಾಡಲುಸಾಧ್ಯ? ಮೂಗನ್ನು ಎಷ್ಟು ಹೊತ್ತು ಮುಚ್ಚಿಕೊಂಡಿರಬಹುದು? ಕೋಪ ಬಂದರೆ ಹಿತ್ತಲಲ್ಲಿರುವ ಮರವನ್ನು ಕಡಿದು ಬಿಡಬಹುದು. ಆದರೆ ಮೈಸೂರು ಸೀಮೆಯಲ್ಲಿ ಎಲ್ಲಿ ಹೋದರೂ ಹೂ ಬಿಟ್ಟ ಸಂಪಗಿ ಮರಗಳೇ? ವೇಮನ ಸಿದ್ಧಾಂತಗಳನ್ನು ಅಂಗೀಕರಿಸದವರಿಗೂ ಆತನ ಜೊತೆಯ ಬದುಕೂ ಅಷ್ಟೇ? ಈತನ ಕವಿತ್ವಕ್ಕೆ ಸ್ವಲ್ಪ ಮೆರುಗು ಕೊಟ್ಟು ಅದನ್ನು ದುರ್ವಾರ ಬಲವುಳ್ಳದ್ದನ್ನಾಗಿ ಮಾಡಿರುವುದು ಹಾಸ್ಯ. ನಮ್ಮಲ್ಲಿ ನಯದ ಜೊತೆಗೆ ಈ ಹಾಸ್ಯವಿಲ್ಲವೆಂದು ಮೊದಲೇ ಬಿನ್ನಯಿಸಿದ್ದೇನೆ. ನವರಸಗಳಲ್ಲಿ ಹಾಸ್ಯವನ್ನು ಕೂಡ ಸೇರಿಸಿದ್ದರೂ ಸಹ ಪ್ರಾಚೀನರ ಹಾಸ್ಯ, ಅಸಹ್ಯವಾದ್ದನ್ನೂ ಅಸಭ್ಯವಾದದ್ದನ್ನೂ ವರ್ಣಿಸುವುದರಲ್ಲಿ ಮಾತ್ರ ಚರಿತಾರ್ಥವಾಯಿತು. ಆದ್ದರಿಂದಲೇ ಹಾಸ್ಯರಸ ಪ್ರಧಾನವಾದ ಪ್ರಾಚೀನ ಪ್ರಹಸನಗಳನ್ನು ಓದುವುದಕ್ಕೆ ಇಂದಿನ ನಾಗರಿಕತೆಯುಳ್ಳವರು ಹೇಸುತ್ತಾರೆ. ಪ್ರಾಚೀನ ನಾಟಕಗಳಲ್ಲಿ ಕೊಂಚ ನಾಗರಿಕತೆಯುಳ್ಳ ಹಾಸ್ಯವನ್ನು ತೋರಿಸಲು ಏರ್ಪಾಟಾದ ಪಾತ್ರ ವಿದೂಷಕ.

ಆದರೆ ಅವನ ಹಾಸ್ಯಕೂಡ, ಕೋಣನ ಮೊದ್ದುತನ, ತಿಂಡಿಪೋತತನ—ಇವುಗಳಿಂದ ಉಂಟಾದ ಅಸಹ್ಯವಾದ ನಗುವೇ. ಕಾಳಿದಾಸನು ಇಂಥ ಪದ್ಧತಿಯನ್ನು ಮೊದಲಿಗೆ ಕೊಂಚ ಮಟ್ಟಿಗೆ ತಪ್ಪಿಸಿ ಮಾಳವಿಕಾಗ್ನಿಮಿತ್ರ ನಾಟಕದಲ್ಲಿ ಸ್ವಲ್ಪ ಜಾಣತನ, ಚುರುಕುತನ ಇರುವ ವಿದೂಷಕನ ಪಾತ್ರವನ್ನು ತಯಾರು ಮಾಡಿದನಾದರೂ ಸಂಪ್ರದಾಯಜ್ಞರು ಅದನ್ನು ಖಂಡಿಸುವುದಕ್ಕಾಗಿಯೋ ಏನೋ, ತರುವಾಯ ಬಂದ ನಾಟಕಗಳಲ್ಲಿ ಯಥಾಪ್ರಕಾರವಾಗಿ ತಿಂಡಿಪೋತ ವಿದೂಷಕನನ್ನೇ ಅಚ್ಚುಹಾಕಿದರು. ಅಲ್ಲಿಂದ ಮುಂದೆ ಬಂದವರು ಸರಿಯೇ ಸರಿ. ತೆಲುಗಿನವರಾದ ನಾವು ಎಲ್ಲ ವಿಧಗಳಲ್ಲಿಯೂ ಸಂಸ್ಕೃತದವರನ್ನೇ ಅನುಸರಿಸಿದವರು. ಕೀರ್ತಿಶೇಷರಾದ ಶ್ರೀ ಕೋಲಾಚಲ ಶ್ರೀನಿವಾಸರಾಯರು ಮೊದಲಾದ ಇಂದಿನವರ ನಾಟಕಗಳಲ್ಲಿ ಕೂಡ ಆ ವಿದೂಷಕ ಪಾತ್ರವೇ ಹಾಗೆಯೇ ಬದಲಾವಣೆಯಿಲ್ಲದೆ ಅವತರಿಸಿ ಬಂದಿದೆ. ಒಳ್ಳೆಯ ಹಾಸ್ಯವನ್ನು ಸೃಷ್ಟಿಸಲು ಸಾಮರ್ಥ್ಯವಾಗಲಿ ಅದನ್ನು ಕೇಳಿ ಹೊಟ್ಟೆತುಂಬ ನಗಲು ಶಕ್ತಿಯಾಗಲಿ ನಮ್ಮಲ್ಲಿ ಇಲ್ಲದಿಲ್ಲ. ಸಭ್ಯವಾಗಿ ಚಾತುರ್ಯದಿಂದ, ಕೇಳುವವರ ಪಕ್ಕೆಗೆ ಚಕ್ಕುಳಿಗುಳಿಯಿಟ್ಟಂತೆ ನಗಿಸಬಲ್ಲ ಪ್ರಾಚೀನ ಸಂಸ್ಕೃತ ಆಂಧ್ರಪಂಡಿತರ ಪರಿಚಯ ನನಗಿದೆ. ಆದರೆ ವಾಙ್ಮಯವನ್ನೂ ಜೀವನವನ್ನೂ ಬೇರ್ಪಡಿಸಿಕೊಂಡು ಬಿಟ್ಟಿರುವುದರಿಂದ ಲೇಖನಿಯನ್ನು ಹಿಡಿದು ಬರೆಯಲು ಉಪಕ್ರಮಿಸಿದರೆ ಆಗ ಎಲ್ಲೂ ಇಲ್ಲದ ಗಾಂಭೀರ್ಯ ನಮ್ಮವರಿಗೆ ಕವಿದುಬಿಡುತ್ತದೆ. ಮತ್ತೂ ಸಂಪ್ರದಾಯಕ್ಕೆ ದಾಸರಾಗಿ ಅಭಿಪ್ರಾಯಗಳಲ್ಲಿಯೂ ಭಾವಗಳಲ್ಲಿಯೂ ಸ್ವಾತಂತ್ರ್ಯವಿಲ್ಲದವರಿಗೆ ಹಾಸ್ಯಕ್ಕೆ ಅವಕಾಶ ಬಹುಕಮ್ಮಿ. ಹಾಸ್ಯಕ್ಕೆ ಮೂಲಪ್ರಕೃತಿ ಇತರರಲ್ಲಿರುವ ತಪ್ಪುಗಳನ್ನು ಹೊರಗೆ ಹಾಕುವುದು. ಅದರಲ್ಲೂ ತಪ್ಪು ಇದೆ ಎಂಬ ಅಭಿಪ್ರಾಯವೇ ಸಾಮಾನ್ಯ ಜನರಿಗೆ ಇರದ ಕಡೆಯಲ್ಲಿ ತಪ್ಪನ್ನು ಆಕಸ್ಮಿಕವಾಗಿ ಹೊರತೆಗೆದಾಗ ಹಾಸ್ಯಕ್ಕೆ ಬಲ ಹೆಚ್ಚು. ಇಂಥ ಸೂಕ್ಷ್ಮ ದೃಷ್ಟಿಯುಳ್ಳವನು ತನ್ನಲ್ಲಿರುವ ತಪ್ಪುಗಳನ್ನು ಕೂಡ ಗಮನಿಸಿ, ಹೇಳಲಾರದೆ ತನ್ನೊಳಗೆ, ನಗುತ್ತಾನೆ. ಅಂಥ ಕಡೆ ತಮ್ಮ ರಾಗ, ವೇಷ, ಭಾಷೆ, ಆಚಾರ, ವಿದ್ಯೆ ಇವುಗಳೆಲ್ಲ ನಿಷ್ಕಲ್ಮಷಗಳೆಂದು ದೃಢವಾಗಿ ನಂಬಿದವರಿಗೆ ಇತರರಲ್ಲಿರುವ ತಪ್ಪುಗಳನ್ನು ಗಮನಿಸುವ ಸಾಮರ್ಥ್ಯವೋ ಸಂಪ್ರದಾಯವೋ ಇದ್ದರೂ ಅದರಿಂದ ಅವರಲ್ಲಿ ಅಸಹ್ಯವು ಹುಟ್ಟಿ ಅವರು ಬೈಯಬಲ್ಲರೇ ಹೊರತು ನಗಿಸಲಾರರು. ಇದ್ದರಿಂದಲೇ ಮೊನ್ನೆ ಮೊನ್ನೆ ವೀರೇಶಲಿಂಗಂ ಪಂತುಲು ಅವರ ಬರಹಗಳು ಹೊರಬರುವವರೆಗೂ ತೆಲುಗು ಭಾಷೆಯಲ್ಲಿ ನಯವಾದ ಹಾಸ್ಯದಲ್ಲೂ ಸಂಘಸಂಸ್ಕಾರ ದೃಷ್ಟಿ ಪ್ರಬಲವಾಗಿ ಆವೇಶವಾಗಿದ್ದರಿಂದ ಸ್ವದೋಷ ದೃಷ್ಟಿ ಬಹುಮಟ್ಟಿಗೆ ಇಲ್ಲದಿದ್ದುದರಿಂದ ಅವರಲ್ಲಿ ಬೈಗುಳಲ್ಲಿ ತಿವಿಯುವಿಕೆಯೇ ಹೆಚ್ಚಾಗಿ ರಸ ಕೆಟ್ಟಿತು. ಒಬ್ಬರ ತಪ್ಪುಗಳನ್ನು ಹೊರಗೆಡವಿದಾಗಲೆಲ್ಲ ಹಾಸ್ಯ ತೋರುವುದಿಲ್ಲ. ಹಾಗೆ ಮಾಡುವುದರಲ್ಲೂ ಮಾರ್ಗವೊಂದಿದೆ. ಹಾಸ್ಯವನ್ನುಂಟುಮಾಡುವುದು ಒಂದು ಕಲೆ. ಒಂದು ಶಿಲ್ಪ. ಇಟ್ಟಿಗೆ ಗಾರೆಗಳಿಂದಲೇ ಮನೆ ಹೇಗೆ ಆಗದೋ ಹಾಗೆಯೇ ತಪ್ಪುಗಳನ್ನು

ಹಿಡಿದ ಮಾತ್ರದಿಂದ ಹಾಸ್ಯರಸೋತ್ಪತ್ತಿಯಾಗಿ ಇತರರು ನಗಲು. ಆ ರಹಸ್ಯವನ್ನು ಹಾಸ್ಯ ಶಿಲ್ಪಿ ಮಾತ್ರವೇ ತಿಳಿದಿರುವನು. ಹಾಸ್ಯದಿಂದಾದ ಫಲವಾಗಿ ಜನರ ಚಿತ್ತಕ್ಕೆ ಸಂಸ್ಕಾರವಾದರೂ ಅದನ್ನೇ ಮುಖ್ಯೋದ್ದೇಶವನ್ನಾಗಿ ಉಳ್ಳವನ ಬರಹದಲ್ಲಿ ಹಾಸ್ಯ ವಿರುವುದಿಲ್ಲ. ನೀತಿಯನ್ನು ಬೋಧಿಸಬೇಕೆಂದೇ ಪದ್ಯಗಳನ್ನು ಬರೆಯುವವರ ಬರಹ ದಲ್ಲಿ ಕವಿತ್ವವಿಲ್ಲದಿರುವಂತೆ. ಅದರ ದೃಷ್ಟಿಯೆಲ್ಲವೂ ಫಲದಮೇಲೆ ಇರುತ್ತದೆಯೇ ಹೊರತು ಶಿಲ್ಪದ ಮೇಲೆ ಗಮನವಿರದು. ವೀರೇಶಲಿಂಗಂ ಪಂತುಲು ಅವರ ಹಾಸ್ಯರಸ ಇದರಿಂದಲೇ ಕೆಟ್ಟಿತು. ಅವರ ಪ್ರಹಸನಗಳನ್ನು ಓದಿ ನಗಲು ಸಾಮಾನ್ಯವಾಗಿ ನನಗೆ ಸಾಧ್ಯವಿಲ್ಲ. ನಿಜವಾಗಿ ತೆಲಗುಭಾಷೆಗೆ ಮೊಟ್ಟಮೊದಲು ಹಾಸ್ಯರಸದ ಸವಿಯನ್ನು ತೋರಿಸಿದ ಧೀರ ಗುರಜಾಡ ಅಪ್ಪರಾವು ಅವರೇ. ಅವರ "ಕನ್ಯಾಶುಲ್ಕ"ದಲ್ಲಿರುವಷ್ಟು ಹಾಸ್ಯರಸ ನೈರ್ಮಲ್ಯ ಮಿಕ್ಕ ಯಾರ ಗ್ರಂಥದಲ್ಲೂ ಇಲ್ಲವೆನ್ನುವುದು ಅತಿಶಯೋಕ್ತಿ ಯೇನಲ್ಲ.

ವೇಮನನೂ ದೊಡ್ಡ ಬೋಧಕನೂ ಸಂಸ್ಕೃತನೂ ಆದ್ದರಿಂದ ಆತನಲ್ಲೂ ಹಾಸ್ಯರಸ ಕಲುಷಿತವಾಗಿದ್ದರೂ, ಅಲ್ಲಲ್ಲಿ ಸಹಜವಾಗಿ ಅಸಭ್ಯರಚನೆಗಳನ್ನು ಮಾಡಿದ್ದರೂ, ಕಿತ್ತುಹೋದ ಗಾಳಿಪಟದಂತೆ ಸ್ವತಂತ್ರ ಬುದ್ಧಿಯುಳ್ಳವನಾದ್ದರಿಂದ ಒಂದೊಂದು ಸಲ ತನ್ನ ಕೆಲಸವನ್ನು ತಾನು ಮರೆತು ಸ್ವಚ್ಛವಾದ ಹಾಸ್ಯದಿಂದ ತೃಪ್ತಿ ಪಡುತ್ತಾನೆ.

ಆ|| ಪಾಲಸಾಗರಮುನ ಪವ್ವಳಿಂಚಿನ ವಾಡು — ಹಾಲು ಸಾಗರದಲ್ಲಿ ಪವಡಿಸಿದವನು
ಗೊಲ್ಲಯಿಂಡ್ಲ ಪಾಲು ಕೋರನೇಲ ? — ಗೊಲ್ಲರ ಮನೆಯಲ್ಲಿ ಹಾಲುಕೇಳಲೇಕೆ ?

ಎಂಬ ಪ್ರಶ್ನೆ ಬಂದಿತು. ಬೇರೆ ಸಮಯಗಳಲ್ಲಿ ಇವುಗಳೆಲ್ಲಾ "ಬೂಟಕ ಪುರಾಣ ಕಥಲು" (೨೭೮೨) ಬೂಟಾಟಿಕೆಯ ಪುರಾಣ ಕಥೆಗಳು ಎಂದು ಹೇಳಿಬಿಡುತ್ತಿದ್ದನು. ಆದರೆ ಈಗ ಆ ಉದ್ರೇಕವಿಲ್ಲ. ಈಗಿನ ಜವಾಬು ಬೇರೆ. "ಎದುಟವಾರಿ ಸೊಮ್ಮು ಲೆಲ್ಲವಾರಿಕಿ ತೀಪು" ಪರರೊಡವೆ ಎಲ್ಲರಿಗೂ ಸಿಹಿ. (೨೫೮೯)

ಇದನ್ನು ಕೇಳಿದವನು ಎಷ್ಟು ದೊಡ್ಡಕೃಷ್ಣಭಕ್ತನಾದರೂ ನಗದಿರಲಾರನು. ಶ್ರೇಷ್ಠರಾದ ಗುರುಗಳು ಊರಿನಲ್ಲಿರುವುದಿಲ್ಲ. ಅವರು ಬೆಟ್ಟದ ಗುಹೆಯಲ್ಲಿರುವರು. ಅವರ ಆಶ್ರಯವಿಲ್ಲದೆ ಮುಕ್ತಿಮಾರ್ಗ ದುರ್ಲಭ" ಎಂದು ಯಾರೋ ಹೇಳಿದನು. ಹೌದು ನಿಜ ಎಂದು ವೇಮನನೂ ಅಂದನು.

ಆ|| ಗುಹಲಲೋನಜೊಚ್ಚಿ ಗುರುವುಲವೆದಕಂಗ — ಗುಹೆಯೊಳಗೆ ಬಂದು ಗುರುವನು ಹುಡುಕೆ
ಕ್ರೂರಮ್ಮೃಗ ಮೊಕಂಡು ತಾರಸಿಲಿನ — ಕ್ರೂರಮೃಗವೊಂದು ಮೇಲ್ವಾಯ್ದು ಬರೆ
ಮುಕ್ತಿಮಾರ್ಗ ಮದಿಯ ಮುಂದು — ಮುಕ್ತಿಗೆ ದಾರಿಯನ್ನು ಅದೇ ತೋರುವುದು
ಗಾಜೂಪುರಾ (೧೩೨೮)

ಇತರರ ಲೋಪಗಳನ್ನೆತ್ತಿ ಖಂಡಿಸಲು ಮೊದಲು ಮಾಡಿದಾಗಲೂ ಕೂಡ, ಅದಕ್ಕೆ ಎಷ್ಟುಬೇಕೋ, ಅಷ್ಟರಲ್ಲಿ ತೃಪ್ತಿ ಹೊಂದದೆ, ಇತರರಿಗೆ ನಗು ಬರಿಸುವ ಉದ್ದೇಶದಿಂದಲೇ ಕೆಲವು ಕೊಸರು ಮಾತುಗಳನ್ನು ಸೇರಿಸಿ ಬರೆಯುವುದು ಸಾಮಾನ್ಯವಾಗಿ ಈತನ ಪದ್ಧತಿಗಳಲ್ಲೊಂದು. ಲೋಭಿಯಾದವನನ್ನು ಕೇಳುವುದು ನಿಷ್ಫಲ, ಗೊಡ್ಡುಹಸುವನ್ನು ಕರೆದಂತೆ. ಆಡಿನ ಕತ್ತಿನ ಮಾಲೆಯನ್ನು ಹಿಂಡಿದರೆ ಹಾಗೆ ಎಂದು ಹೇಳಿದರೆ ಸಾಕಲ್ಲವೇ. ಈತನಿಗೆ ಅಷ್ಟರಲ್ಲಿ ತೃಪ್ತಿಯಿಲ್ಲ.

ಆ॥ ಗೊಡ್ಡುಟಾವು ಬಿತುಕ ಗುಂಡ ಗೊಂಪೋಯಿನ	ಗೊಡ್ಡುಹಸುವನು ಕರೆಯಲು ಗಡಿಗೆಯನು ಕೊಂಡುಹೋದರೆ
ಪಂಡ್ಲು ರಾಲದನ್ನು ಪಾಲನೀದು	ಹಲ್ಲು ಉದುರುವಂತೆ ಒದೆವುದೇ ಹೊರತು ಹಾಲುಕೊಡದು
ಲೋಭಿವಾನಿ ನಡುಗ ಲಾಭಂಬುಲೇದಯಾ (೧೩೩೭)	ಲೋಭಿಯಾದವನ ಕೇಳುವುದು ಲಾಭವಿಲ್ಲವಯ್ಯಾ

ಆ॥ ಮೇಕ ಕುತಿಕ ಬಟ್ಟಿ ಮೆಂಡಚನ್ನು ಗುಡುವಗಾ	ಮೇಕೆಯ ಕೊರಳನ್ನು ಹಿಡಿದು ಮೊಲೆಯನ್ನು ಉಂಡರೆ
ಆಕಲೇಲಮಾನು ನಾಶಕಾಗ	ಹಸಿವೇಕೆ ತೀರುವುದು ಬರಿಯ ಆಸೆಯಷ್ಟೇ
ಲೋಭಿವಾನಿ ನಡುಗ ಲಾಬಂಬುಗಲುಗುನಾ (೧೩೩೭)	ಲೋಭಿಯನು ಕೇಳುವುದು ಲಾಭವಲ್ಲವಯ್ಯ

ಇಲ್ಲಿ ಮಡಿಕೆಯನ್ನು ತೆಗೆದುಕೊಂಡು ಹೋಗುವುದು, ಕುತ್ತಿಗೆಯನ್ನು ಹಿಡಿಯುವುದು ಮೊದಲಾದುವು ಹಾಲುಕುಡಿಯಲು ಹೋಗುವವನ ಆತುರವನ್ನು ಸ್ಪಷ್ಟವಾಗಿ ತೋರಿಸಿ ಅವನ ಅಜ್ಞಾನ ನಮ್ಮನ್ನು ನಗಿಸುತ್ತದೆ.

ಈ ಹಾಸ್ಯಪ್ರಿಯತ್ವಕ್ಕೆ ಸೇರಿದ ಇನ್ನೊಂದು ಶಕ್ತಿ ಆತನಲ್ಲಿದೆ. ಎಲ್ಲರಿಗೂ ತಿಳಿದ ಸಾಮಾನ್ಯ ನ್ಯಾಯವನ್ನೇ ಗಂಭೀರವಾದ ಮುದ್ರೆಯಿಂದ ಎರಡು ಪಾದಗಳಲ್ಲಿ ಹೇಳಿ ಮೂರನೆಯ ಪಾದದಲ್ಲಿ ಎದುರುನೋಡದ ಒಂದು ಹೊಸಬಾರಿಗೆ ವಿಷಯವನ್ನು ಥಟ್ಟನೆ ತಿರುಗಿಸಿ, ಹೇಳುವಿಕೆ, ಉಪವಾಸವಿದ್ದಾಗ ದೇಹದಲ್ಲಿ ಜೀರ್ಣವಾಗದ ಮಲ ಗಳೆಲ್ಲವೂ ಜೀರ್ಣವಾಗುವುದೆಂದು ವೈದ್ಯಶಾಸ್ತ್ರ, ವೇಮನನು ಹಾಗೆಯೇ ತನ್ನ ಪದ್ಯವನ್ನು ಪ್ರಾರಂಭಿಸಿದನು.

ಆ॥ ಕೂಡುಬೆಟ್ಟಕುನ್ನ ಕುಕ್ಷಿಲೋ ಜಠರಾಗ್ನಿ	ಕೂಳು ಇಡದಿದ್ದರೆ ಹೊಟ್ಟೆಯ ಜಠರಾಗ್ನಿ
ಭಕ್ಷಿಣಂಬು ಚೇಯು ಗುಕ್ಷಿಮಲಮು	ಭಕ್ಷಿಸುವುದು ಕುಕ್ಷಿಮಲವನು

ಈ ಮಾತನು ಕೇಳಿದವರು "ಏನೋ, ವೇಮನ ಉಪವಾಸ ದ್ವೇಷಿಯಲವೇ,

ನಂತೆ ಮೂರನೆಯ ಪಾದ ಮೇಲೆರಗಿ ಬಿದ್ದು ನಾವು ಎಣಿಸಿದ್ದು ಸುಖ ನಿರಾಶೆ ಯಾಗುವಂತೆ ಮಾಡುತ್ತದೆ.

ಕೊಡು ವಿಡಿಚಿ ಮಲಮುಗುಡುಚುರಾ ಉಪವಾಸಿ — ಕೂಳು ಬಿಟ್ಟು ಮಲವ ತಿನ್ನುವನು ಉಪವಾಸಿ

ಇದನ್ನು ಕೇಳಿ ಮನಸ್ಸಿನಲ್ಲಿ ನೊಂದುಕೊಳ್ಳುವವರೇ ಹೆಚ್ಚಾಗಿದ್ದರೂ ನಗುವಂಥ ರಸಿಕರು ಕೆಲವರಾದರೂ ಇದ್ದಾರು. ಆದರೆ ಈ ಕೆಳಗಿನ ಪದ್ಯವನ್ನು ಕೇಳಿ ನಗುವರು ಇರರು.

ಅ॥ ಸಕಲ ತೀರ್ಥಮುಲನು ಸಕಲ ಯಜ್ಞಂಬುಲ — ಸಕಲ ತೀರ್ಥಗಳಲ್ಲೂ ಸಕಲ ಯಜ್ಞಗಳಲ್ಲೂ
ತಲಲುಗೊರುಗಕುನ್ನ ಫಲಮು ಲೇದು — ತಲೆಯ ಬೋಳಿಸಿಕೊಳ್ಳದೆ ಫಲವಿಲ್ಲ
ಮಂತ್ರಜಲಮುಕನ್ನ ಮಂಗಲಿ ಜಲಮೆಚ್ಚು (೩೭೭೨) — ಮಂತ್ರ ಜಲಕ್ಕಿಂತ ಹಜಾಮನ ಜಲ ಹೆಚ್ಚು

ಮೇಲಿನ ಪದ್ಯಗಳಲ್ಲಿಯ ಕವಿತಾಧಾರೆ, ಹಾಸ್ಯ ಇವುಗಳೊಡನೆ ಈತನ ಹೆಸರು ಆಂಧ್ರದೇಶದಲ್ಲಿ ಆಚಂದ್ರಾರ್ಕ ಸ್ಥಾಯಿಯಾಗಿರುವಂತೆ ಮಾಡಿರುವುದು ಈತನ ನೀತಿಗಳು. ಇಹಲೋಕದಲ್ಲಿ ಇತರರಿಗೂ ತನಗೂ ಸೌಖ್ಯವನ್ನು ಉಂಟುಮಾಡುವವು ನೀತಿಗಳೆಂದು ಮೊದಲೇ ಹೇಳಿದ್ದೇನೆ. ಈತನ ನೀತಿಗಳು ಸ್ವಾರ್ಥಗಳೆಂದೂ ಪರಾರ್ಥಗಳೆಂದೂ ಎರಡು ವಿಧವಾಗಿವೆ. ತತ್ತ್ವವಾದಗಳಿಗೆ ಹೇಗೋ ಹಾಗೆ ಈತನ ನೀತಿಗಳಿಗೂ ಅನುಭವ ಮೂಲವೇ ಹೊರತು ಪುಸ್ತಕಗಳಲ್ಲ. ಆದ್ದರಿಂದಲೇ ಅವು ಅಂದೂ ಇಂದೂ ಅನೇಕರಿಗಿದ್ದಂತೆ, ಈತನಿಗೆ, ಪುಸ್ತಕಗಳನ್ನು ಬರೆಯುವುದಕ್ಕೂ ಇತರರು ಉಪನ್ಯಾಸ ಮಾಡುವುದಕ್ಕೂ ಮಾತ್ರವಲ್ಲ. ಒಳ್ಳೆಯದು ಕೆಟ್ಟದ್ದು ಎರಡನ್ನೂ ತಾನು ಮಾಡಿ ಅವುಗಳ ತತ್ತ್ವವನ್ನು ಚೆನ್ನಾಗಿ ತಿಳಿದುಕೊಂಡು ಇತರರಿಗೆ ಬೋಧಿಸಿದವನಾದ್ದರಿಂದ ಸಾಮಾನ್ಯ ನೀತಿಗ್ರಂಥಗಳಲ್ಲಿ ಇಲ್ಲದ ತೀವ್ರತೆ ಆತನ ಪದ್ಯಗಳಲ್ಲಿ ಇದೆ.

ಆ॥ ವಿನ್ನವಾನಿಕನ್ನ ಕನ್ನವಾಡಧಿಕುಂಡು — ಕೇಳಿದವನಿಗಿಂತ ಕಂಡವನೇ ಹೆಚ್ಚು
ಕನ್ನವಾನಿಕನ್ನ ಕಲಿಯುವಾಡು (೩೫೨೨) — ಕಂಡವನಿಗಿಂತ ಪಡೆದವನು ಹೆಚ್ಚು

ಎಂಬ ಮಾತು ಆವನ ನೀತಿಗಳಿಗೂ ಅನ್ವಯಿಸುತ್ತದೆ.

ನೀತಿಗಳು ಪರಾರ್ಥಗಳೆಂದೂ ಸ್ವಾರ್ಥಗಳೆಂದೂ ಎರಡು ವಿಧಗಳೆಂದೆ. ಆದರೆ ಅನೇಕ ಧರ್ಮಶಾಸ್ತ್ರಕಾರರ ಮತವನ್ನು ಪರೀಕ್ಷಿಸಿದರೆ ಎಲ್ಲವೂ ಸ್ವಾರ್ಥಗಳೇ ಆಗುತ್ತವೆ. ಪರೋಪಕಾರವನ್ನೇಕೆ ಮಾಡಬೇಕು ? ಎಂದು ಕೇಳಿದರೆ ನಿನಗೆ ಪುಣ್ಯ ಬರುತ್ತದೆಂದು ಅವರೆನ್ನುವರು. ಪುಣ್ಯಕ್ಕೆ ಫಲ ಇಹಪರಗಳಲ್ಲಿ ಸುಖ. ಹೀಗೆಯೇ ಪರರಿಗೆ ಅಪಕಾರವನ್ನು ಮಾಡಿದರೆ ಪಾಪ ಬರುತ್ತದೆ. ಫಲ, ನರಕಾದಿಗಳು

ಆದ್ದರಿಂದ ಇತರರಿಗೆ ಸುಖವನ್ನುಂಟುಮಾಡಿದರೆ ಅದರಿಂದ ತನಗೆ ಸುಖವು ಬಂದೀತೆಂಬ ಆಸೆ, ದುಃಖವನ್ನುಂಟುಮಾಡಿದರೆ ತನಗೆ ಅದರಿಂದ ದುಃಖವುಂಟಾದೀತೆಂಬ ಭಯ, ಇವು ನೀತಿಸಾಮಾನ್ಯಕ್ಕೆ ಮೂಲವಾಗಿ ನಮ್ಮಲ್ಲಿ ಏರ್ಪಟ್ಟಿದೆ. ಆದ್ದರಿಂದ ಪದಾರ್ಥನೀತಿಗಳೂ ಸ್ವಾರ್ಥಗಳೇ. "ತನ್ನಿಂದ ಇತರರು ಸಂತೋಷಪಟ್ಟರೆ ತನಗೆ ಸಂತೋಷ ಆಗಬೇಕು, ದುಃಖವಾದರೆ, ತಾನು ದುಃಖಿಸಬೇಕು." ಎಂಬ ಉದಾರ ಭಾವವನ್ನು ಜನರಲ್ಲಿ ವ್ಯಾಪಿಸುವಂತೆ ಮಾಡಿದ ನೀತಿಗ್ರಂಥಗಳು ಪ್ರಾಚೀನರಲ್ಲಿ ವಿರಳ. ಇಂಥ ಸ್ವಾರ್ಥಬುದ್ಧಿಯಿಂದಲೇ ಅವರು ಘನವಾದ ನೀತಿಕಾರ್ಯಗಳನ್ನೆಷ್ಟೋ ಮಾಡಿದರೆನ್ನುವುದು ಸತ್ಯವೇ. ಆದ್ದರಿಂದ ಸಾಮಾನ್ಯವಾಗಿ ಜನರಲ್ಲಿ ಈಗಿಗಿಂತ ಆಗ ಪರೋಪಕಾರ ಬುದ್ಧಿ ಹೆಚ್ಚಾಗಿ ಇದ್ದಿತೆಂಬುದನ್ನು ನಾನು ಮರೆತುಹೋಗಿಲ್ಲ. ಆದರೆ ತನ್ನ ಕೆಲಸದಿಂದ ಇತರರಿಗೆ ಆಗುವ ಸುಖಕ್ಕಿಂತ ತನಗೆ ಆಗಬಹುದಾದ ಸುಖದ ವಿಷಯದಲ್ಲೇ ದೃಷ್ಟಿ ಹೆಚ್ಚಾಗಿರುವುದರಿಂದ ಇಂಥ ಕೆಲಸಗಳು ನಿಷ್ಕಲ್ಮಷವಾಗಿ ತೃಪ್ತಿಕರವಾಗಿರವು. ಈಗ ಸರಕಾರದವರ ಬಿರುದುಗಳಿಗಾಗಿ ಆಸೆಪಟ್ಟು ಸತ್ರಗಳನ್ನು ಕಟ್ಟಿಸುವವನಿಗೆ ಆ ಬಿರುದು ದೊರೆತನಂತರ ಆ ಸತ್ರದ ಗೋಡೆಗಳು ಯಾವಾಗ ಬಿದ್ದರೂ ಅವನಿಗೆ ಅದರ ಚಿಂತೆಯಿಲ್ಲವಲ್ಲವೇ ? ಹೀಗೆ ಸ್ವರ್ಗಸುಖವನ್ನಾಶಿಸುವವರು ಧರ್ಮಶಾಸ್ತ್ರಗಳಲ್ಲಿ ಯಾವ ಪರೋಪಕಾರವನ್ನು ಮಾಡಬೇಕೆಂದು ಹೇಳಲ್ಪಟ್ಟಿದೆಯೋ ಅಷ್ಟನ್ನು ಮಾಡಿದರೆ ಸಾಕು. ಹೆಚ್ಚು ಅಗತ್ಯವಿಲ್ಲ. ಅದನ್ನೂ ಕೂಡ ಎಷ್ಟು ಸುಲಭವನ್ನಾಗಿ ಮಾಡಿಕೊಳ್ಳಬಹುದೋ ಅಷ್ಟು ಸುಲಭವನ್ನಾಗಿ ಮಾಡಿಕೊಳ್ಳುತ್ತಾರೆ. ಗೋದಾನ ಮಾಡಿದ ಪಕ್ಷದಲ್ಲಿ, ಆ ಗೋವು ಹಾಲು ಕರೆದರೂ ಬತ್ತಿದರೂ ನಮ್ಮ ಸ್ವರ್ಗಲೋಕದ ದಾರಿಗೆ ಅಡ್ಡಲಾಗಿರುವ ವೈತರಣೀ ನದಿಯನ್ನು ದಾಟಿಸುವುದಕ್ಕೆ ನಮಗೆ ಅಲ್ಲಿಯು ದಿವ್ಯಗೋವು ಸಿದ್ಧವಾಗಿ ನಿಂತಿರುತ್ತದೆ. ಆದರೆ ಗೋವು ಇಲ್ಲದಿದ್ದಾಗ ಅದಕ್ಕೆ ಬದಲಾಗಿ ಸುವರ್ಣದಾನ ಮಾಡಬಹುದೆಂದು ಧರ್ಮಶಾಸ್ತ್ರಗಳೇ ಇವೆ. ಚಿನ್ನವಿಲ್ಲದಿದ್ದರೆ ಬೆಳ್ಳಿ ಆಗಬಹುದು. ಇಷ್ಟೇ ಬೆಳ್ಳಿಕೊಡಬೇಕೆಂಬ ನಿಯಮವೂ ಇಲ್ಲ. ಇಷ್ಟು ದಿನಗಳವರೆಗೂ ಎರಡಾಣೆಯು ಪಾವಲಿಯೂ ಬೆಳ್ಳಿಯದೇ. ಅದಿಲ್ಲದಿದ್ದಾಗ ಎರಡಾಣೆಯು ತಾಮ್ರದ ನಾಣ್ಯಗಳು. ಅದರಲ್ಲಿ ಒಂದೆರಡು ಕೊರತೆಯಲ್ಲಿದ್ದರೂ ಬಾಧಕವಿಲ್ಲ ಕಟ್ಟಕಡೆಗೆ ಅದು ಒಂದು ಕಾಸಿನ ಬಿಲ್ಲೆಗೆ ಇಳಿಯುತ್ತದೆ. ಆದ್ದರಿಂದ ಈ ಪದ್ಧತಿಯ ಪ್ರಕಾರ ಒಂದು ಗೋವಿನ ಬೆಲೆ ಒಂದು ಚಿಕ್ಕಕಾಸು. ಅದನ್ನು ದಾನಕೊಟ್ಟರೂ ಗೋದಾನ ಮಾಡಿದಂತೆಯೇ. ಆದ್ದರಿಂದ ಈ ಬೊಟ್ಟನ್ನೂ ಕೂಡ ಮೂರು ದಮ್ಮಿಡಿಯಾಗಿ ಒಡೆಯಬಹುದಲ್ಲವೇ. ಮಿತವ್ಯಯವನ್ನು ಕುಲಧರ್ಮವಾಗಿ ಹೊಂದಿರುವ ವೈಶ್ಯಶಿಖಾಮಣಿಯೊಬ್ಬನು ಅದನ್ನು ಮರೆಯಲಿಲ್ಲ. ಅದಕ್ಕಿಂತ ಆತ ತಾನು ಕಟ್ಟಿಸಿದ ಸತ್ರದಲ್ಲಿ ಭೋಜನವಾದ ಮೇಲೆ ಬ್ರಾಹ್ಮಣರಿಗೆ ತಪ್ಪದೆ ನಿತ್ಯವೂ ತಾಂಬೂಲದೊಂದಿಗೆ ಒಂದು ದಮ್ಮಿಡಿಯನ್ನಿಟ್ಟು "ಸುವರ್ಣಪುಷ್ಪ ದಕ್ಷಿಣೆ"ಯನ್ನು ಸಮರ್ಪಿಸುತ್ತಿದ್ದಾನೆಂದು

ನನಗೂ ಗೊತ್ತು. ಆದ್ದರಿಂದ ಇಂಥ ಸ್ವಾರ್ಥಮೂಲವಾದ ಪರೋಪಕಾರದಲ್ಲಿ ಫಲ ಹೆಚ್ಚು ಇರದೆಂದು ಹೇಳಬೇಕಾಗಿಲ್ಲ.

ವೇಮನನ ಪದಾರ್ಥನೀತಿಗಳಲ್ಲಿ ಈ ಸ್ವಾರ್ಥದೃಷ್ಟಿ ಬಹುಕಡಿಮೆ. "ಇಂಚುಕಂತಬೋನವಿಶ್ವರಾರ್ಪಣಮನ್ನ ಪುಣ್ಯಲೋಕಮುನಕು ಬೋವುನತಡು" (೩೪೮). ಸ್ವಲ್ಪ ಅನ್ನವನ್ನಾದರೂ ಈಶ್ವರಾರ್ಪಣವೆಂದೆ ಆತ ಪುಣ್ಯಲೋಕಕ್ಕೆ ಹೋಗುವನು ಇತ್ಯಾದಿಯಾಗಿ ಒಂದೆರಡು ಬಾರಿ ಹೇಳಿದರೂ ಒಟ್ಟಿನ ಮೇಲೆ ಲಂಚದ ಆಸೆಯಿಟ್ಟೋ, ಭಯಪಡಿಸಿಯೋ ಪರೋಪಕಾರವನ್ನು ಮಾಡಿಸುವುದು ಆತನಿಗೆ ಇಷ್ಟವಿಲ್ಲ. ಪುಣ್ಯ, ಪಾಪ ಎಂಬ ಭಾವಗಳು ಮನುಷ್ಯರು ಕಲ್ಪಿಸಿಕೊಂಡದ್ದೇ ಹೊರತು ದೇವರು ಮಾಡಿದ್ದಲ್ಲ ಎಂಬುದು ಅವನ ಮತ :

ಆ॥ ಮೇನಮಾಮ ಬಿಡ್ಡ ಮೆರಸಿ ಪೇಡ್ಲಾಮಾಯೆ	ಸೋದರಮಾವನ ಮಗಳು ಹೆಂಡತಿಯಾದಳು
ಅರವಲಂದು ಚೆಲ್ಲೆಲಾಯೆನದಿಯು	ತಮಿಳರಲ್ಲಿ ಅವಳೇ ತಂಗಿಯಾಗುವಳು
ವಲಸಿನ ಪ್ರಣ್ಯಂಬುವಲದನ್ನದೋಷಂಬು	ಬೇಕೆಂದರೆ ಪುಣ್ಯ ಬೇಡವಾದರೆ ದೋಷ
(ಓಲ್ಸೈ ೧೩–೪–೧೦)	

ಮನುಷ್ಯರಲ್ಲಿ ಸಹಜವಾಗಿ, ಇತರರ ದುಃಖಕ್ಕಾಗಿ ದುಃಖಿಸುವುದು, ಸುಖಕ್ಕೆ ಸಂತೋಷಪಡುವುದು, ಎಂಬ ಉದಾರ ಗುಣಗಳಿವೆ. ಆದ್ದರಿಂದ ಅಂಥ ದುಃಖವನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡುವುದರಿಂದ ತನಗೆ ಉಂಟಾಗುವ ಸಂತೋಷವೇ ಪರೋಪಕಾರದಲ್ಲಿಯ ಪರಮಾರ್ಥ, ಇದು ಕೂಡ ಸ್ವಾರ್ಥವಲ್ಲವೇ ಎಂಬ ಸೂಕ್ಷ್ಮತಾರ್ಕಿಕರ ವಾದದೊಡನೆ ನಮಗೆ ಕೆಲಸವಿಲ್ಲ.

ಇಂಥ ಪದಾರ್ಥ ಕಾರ್ಯಗಳಲ್ಲಿ ವೇಮನನಿಗೆ ಹೆಚ್ಚು ಅಭಿಮತವಾದದ್ದು ಔದಾರ್ಯ. ಇತರರು ತನ್ನನ್ನು ಯಾಚಿಸುವುದಕ್ಕೆ ಮೊದಲೇ ದಾನವನ್ನು ಮಾಡಿದವನೇ ದಾತ ಎಂದು ಅವನ ಅಭಿಪ್ರಾಯ. ಈ ವಿಷಯದಲ್ಲಿ ಈತನು ಅತಿವಾದಿಯೆಂದು ಹಿಂದೆಯೇ ಹೇಳಿದ್ದೇನೆ. ಆದ್ದರಿಂದ ಆತನಿಗೆ ಲೋಭಿಗಳ ಮೇಲೆ ಬಹಳ ಅಸಹ್ಯ ಹುಟ್ಟಿತು. ಸಾಧ್ಯವಾದರೆ ಪ್ರಪಂಚದಲ್ಲಿ ಲೋಭಿಗಳನ್ನೆಲ್ಲ ಹಿಡಿದು ಕೊಂದರೂ ಪಾಪ ಬರುವುದಿಲ್ಲ ಎಂದು ಆತನು ಭಾವಿಸಿದಂತಿದೆ. ಅವರನ್ನು ಕೊಲ್ಲುವುದಕ್ಕೆ ಈತನ ಮದ್ದು :

ಆ॥ ಲೋಭಿವಾನಿ ಜಂಪ ಲೋಕಂಬು ಲೋಪಲ	ಲೋಭಿಯನು ಕೊಲ್ಲುವುದಕ್ಕೆ ಲೋಕದಲಿ
ಮಂದುವಲದು ವೇರುಮತಮುಗಲದು	ಮದ್ದು ಬೇಡ ಬೇರೆ ಮತವಿದೆ
ಪೈಕಮಡಿಗಿನಂತ ಭಗ್ಗುನಬಡಿ ಚಚ್ಚು (೪೦೦)	ಪೈಸೆಕೇಳಿದರೆ ಅವನು ಭಗ್ಗೆಂದು ಸಾಯುವನು

ಇಷ್ಟು ಅಸಹ್ಯದಲ್ಲಿಯೂ ಹಾಸ್ಯವಿಲ್ಲದೆ ಹೋಗಲಿಲ್ಲ. ಇನ್ನೂ ಕೇಳಿ.

ಆ। ಪಿಸಿನಿವಾನಿ ಯಿಂಟ ಬೀನುಗು ವೆಡಲಿನ	ಜಿಪುಣನ ಮನೆಯಿಂದ ಹೆಣವು ಹೊರಟರೆ
ಕಟಿಕೋಲಲಕನು ಕಾಸು ಲಿಚ್ಚಿ	ಚಟ್ಟ ಬಿದುರುಗಳಿಗೆ ಕಾಸುಕೊಟ್ಟು
ವೆಚ್ಚಮಾಯೆನನುಚು ವೆಕ್ಕಿವೆಕ್ಕೇಡ್ಚುರಾ (೨೫೨೬)	ವೆಚ್ಚವಾಯಿತೆಂದು ಬಿಕ್ಕಿಬಿಕ್ಕಿ ಮತ್ತೆ ಅಳುವನು

ಇಷ್ಟು ಉದಾರ ಬುದ್ಧಿಯಿದ್ದರೂ ವೇಮನನಿಗೆ ಪಾತ್ರಾಪಾತ್ರ ವಿವೇಕವಿಲ್ಲದೆ ಹೋಗಲಿಲ್ಲ. ದಾನಕ್ಕೆ ಯಾರು ಪಾತ್ರ ಎಂದು ನಿರ್ಣಯಿಸುವಾಗ ಈತನಿಗೆ ಕುಲ ಜಾತಿ ಮೊದಲಾದುವುಗಳ ಮಾತು ಹಾಗಿರಲಿ, ಗುಣವು ಕೂಡ ಅಗತ್ಯವಿಲ್ಲ. ಮುಖ್ಯವಾದದ್ದು ಬಡತನ. ಅದಿದ್ದರೆ ಮಿಕ್ಕದ್ದು ಏನಿದ್ದರೂ ಇಲ್ಲದಿದ್ದರೂ ಆತನು ಪಾತ್ರನೆ:

ಆ॥ ದೋಸಕಾರಿಯ್ಯೈನ ದೂಷರಿಕಾಡ್ಡೈನ	ದೋಷಿಯಾದರೂ ದೂಷಿಸುವವನಾದರೂ
ಪಗತಕಡ್ಡೈನ ವೇದಬಾಹ್ಯುಡ್ಡೈನ	ಹಗೆಯಾದರೂ ವೇದಬಾಹಿರನಾದರೂ
ಪಟ್ಟಲೇನಿ ಪೇದವಾನಿಕೀ ದಗುನೀವಿ	ಕಾಸಿಲ್ಲದ ಬಡವನಿಗೆ ದಾನವೀಯಬೇಕು
ಧನಿಕುನಕು ನೊಸಗದಗದು ವೇಮ (೨೯೫)	ಧನಿಕನಿಗೆ ಕೊಡಬಾರದು

ಅನ್ನದಾನವನ್ನು ಕುರಿತು ಈತನ ಮತವನ್ನು ಮೊದಲೇ ತಿಳಿದೆವು. ಅವುಗಳ ತರುವಾಯ ಕನ್ಯಾದಾನದ ವಿಷಯದಲ್ಲಿ ಈತನಿಗೆ ಅಭಿಮಾನ ಹೆಚ್ಚು. ಸ್ತ್ರೀಪ್ರಜೆ ಇಂದಿಗಿಂತ ಪೂರ್ವಕಾಲದಲ್ಲಿ ಕಡಿಮೆಯೆಂದು ಕಾಣುತ್ತದೆ. ಮತ್ತು ಬಲವಂತರಾದ ನಮ್ಮವರು ಹಲವರು ಬಹುಪತ್ನೀವ್ರತವನ್ನಾಶ್ರಯಿಸಿದ್ದರು. ಆದ್ದರಿಂದಲೇ ಆ ಕಾಲದಲ್ಲಿ ಗಂಡಸರು ಮದುವೆಗಾಗಿ ಪಡುವ ಕಷ್ಟಗಳ ಕಥೆಗಳನ್ನು ಪೂರ್ವ ಕಾಲದವರು ಇಂದಿಗೂ ಆಶ್ಚರ್ಯದಿಂದ ಹೇಳುವರು. ಅಂದಿನ ಮದುವೆ ಕನ್ಯಾದಾನ ಇಂದಿನದು ವರದಾನವಾಗಿ ಪರಿಣಮಿಸಿದೆ. ಅಂದರೆ ವರದಕ್ಷಿಣೆಗಳು ಮುಂತಾದವನು ಅಪೇಕ್ಷಿಸದೇ ಧರ್ಮಬುದ್ಧಿಯಿಂದ ಮದುವೆಮಾಡಿಕೊಂಡವರಿಗೆ, ಇಲ್ಲದವರಿಗೆ ವರವಿಕ್ರಯವೇ, ಧರ್ಮಶಾಸ್ತ್ರಗಳನ್ನು ಬರೆಯುವ ಕಾಲ ಹೋಯಿತು, ಇಲ್ಲದಿದ್ದರೆ, ಯಾವ ವರದಕ್ಷಿಣೆಗೂ ಆಸೆಪಡದೆ ಬಡವರ ಮನೆಯ ಹುಡುಗಿಯನ್ನು ಮದುವೆ ಮಾಡಿಕೊಂಡವರಿಗೆ ಜನ್ಮಾಂತರದಲ್ಲಿ ತ್ರಿಲೋಕಾಧಿಪತ್ಯವು ಬರುವುದೆಂದೂ, ವರದಕ್ಷಿಣೆಯನ್ನು ಕೊಡಲಿಲ್ಲವೆಂದು ತಿರಸ್ಕರಿಸುವವರಿಗೆ ಆಚಂದ್ರಾರ್ಕವಾಗಿ ಎಲ್ಲ ನರಕಬಾಧೆಗಳೂ, ಒಂದೇ ಕಾಲದಲ್ಲಿ ಉಂಟಾಗುವುದೆಂದೂ ನಾನೀಗ ಶಾಸ್ತ್ರಗಳನ್ನು ಬರೆದು ಪರಾಶರರ ಹೆಸರು ಇಡುತ್ತಿದ್ದೆ. ಇಂದಿನ ಹೆಣ್ಣುಮಕ್ಕಳ ತಂದೆಯರ ಕಷ್ಟವನ್ನು ಮಗನನ್ನು ಹೆತ್ತ ತಂದೆಯರ ಕೊಬ್ಬನ್ನು ದೇವರು ನೋಡುತ್ತಿದ್ದಾನೆಂದು ನಾನು ಧರ್ಮಶಾಸ್ತ್ರವನ್ನು ಬರೆದರೂ ಬರೆಯದಿದ್ದರೂ ಮೇಲಿನ ಫಲಗಳನ್ನು ತಪ್ಪದೆ ಕೊಡಬೇಕಾದದ್ದೆ. ವೇಮನನ ಕಾಲದಲ್ಲಿ ಈ ಸ್ಥಿತಿ ವಿಪರೀತವಾಗಿದ್ದಿತು. ಐಶ್ವರ್ಯವಂತರು ಹೇಗೋ ತಮ್ಮ ಮನೆಗಳಿಗೆ ಹೆಂಡಿರನ್ನು ಸೊಸೆಯರನ್ನು ತಂದು ಕೊಳ್ಳುತ್ತಿದ್ದರು. ಆದರೆ ಬಡವರಿಗೆ ಮದುವೆಯಾಗುವುದೇ ಕಷ್ಟವಾಗಿದ್ದಿತು.

ಆದ್ದರಿಂದಲೇ ಈ ದಾನವನ್ನು ಕೂಡ ಧನವಂತರಿಗೆ ಮಾಡಬಾರದೆಂದೂ ಬಡವರಿಗೇ ಮಾಡಬೇಕೆಂದೂ ವೇಮನ ಶಾಸನಮಾಡಿದನು. ಹೀಗೆ ಮಾಡುವುದು ಧರ್ಮವೇ ಅಲ್ಲ, ಇದರಿಂದ ಸುಖವೂ ದೊರಕದು :

ಆ॥ ಕಲಿಮಿ ಚೂಚಿಯಿಯ್ಯ ಗಾಯಮಿಚ್ಚಿನಯಟ್ಲು	ಐಶ್ವರ್ಯವನ್ನು ಕಂಡು ಹೆಣ್ಣುಕೊಟ್ಟರೆ
ಸಮುನಕಿಯ್ಯನದಿಯು ಸರಸತನಮು	ದೇಹವನು ಕೊಟ್ಟಂತೆ
ಪೇದಕಿಚ್ಚು ಮನುವು ಪೆನವೇಸಿನಟ್ಲುಂಡು	ಸಮಾನರಿಗೆ ಕೊಟ್ಟರೆ ಅದು ಸರಸತನವು
(೯೮೧)	ಬಡವನ ಸಂಬಂಧ ಹೆಣೆದಂತೆ

ನಿಜವಾಗಿ ಪರರಿಗೆ ಉಪಕರಿಸಬೇಕೆಂಬ ಜ್ಞಾನವಿದ್ದವರಿಗೆ ಪರರನ್ನು ಪೀಡಿಸ ಬಾರದೆಂಬ ಭಾವ ಜೊತೆಯಲ್ಲಿಯೇ ಇರುತ್ತದೆ. ಈ ಅಹಿಂಸಾವ್ರತದ ಮೇಲೆ ವೇಮನನಿಗೆ ಬಹುಪ್ರೀತಿ.

ಆ॥ ಜೀವಿ ಜೀವಿಜಂಪ ಶಿವುನಿ ಜಂಪುಟಯಗು	ಜೀವಿ ಜೀವಿಯು ತೊಂದರೆ ಶಿವನನ್ನೇ ಕೊಂದಂತೆ
ಜೀವುಡರಸಿ ತೆಲಿಯ ಶಿವುಡೆ ಕಾಡೆ	ಜೀವವ ತಿಂದರೆ ಅವನೇ ಶಿವನಲ್ಲವೇ
(೧೬೨೪)	

ಆದ್ದರಿಂದಲೇ ಈತನು ಯಜ್ಞಕರ್ಮಗಳನ್ನು ಬಹಳವಾಗಿ ನಿಂದಿಸಿದನು. ಸ್ಪಷ್ಟ ವಾಗಿ ಹಿಂಸೆ ಕಾಣಬರುತ್ತಿರುವ ಈ ಯಜ್ಞಗಳನ್ನು ಜೈನರು ಬೌದ್ಧರು ಮೊದಲಾ ದವರೆಲ್ಲರೂ ಬಹಳ ಕಾಲದಿಂದಲೂ ಖಂಡಿಸುತ್ತಿದ್ದಾರೆ.

> ಯೂಪಂ ಕೃತ್ವಾ ಪಶೂನ್ ಹತ್ವಾ ಕೃತ್ವಾ ರುಧಿರಕರ್ದಮಮ್
> ಯದ್ಯೇವಂ ಗಮ್ಯತೇ ಸ್ವರ್ಗೇ ನರಕೇ ತೇನ ಗಮ್ಯತೇ
>
> (ತಿಲಕ ಮಂಜರಿ ಪು. ೪)

(ಯೂಪ ಸ್ತಂಭವನ್ನು ನಾಟಿ ಪಶುಗಳನ್ನು ಕೊಂದು ರಕ್ತದ ಕೆಸರನ್ನು ಉಂಟುಮಾಡಿ ಇದರಿಂದ ಸ್ವರ್ಗಕ್ಕೆ ಹೋಗಬಹುದಾದರೆ ನರಕಕ್ಕಿನ್ನೂ ಹೋಗುವವನು ಯಾರು).

ಎಂದು ಧನಪಾಲಕವಿ ಅರಚಿಕೊಂಡನು. ವೈದಿಕವಾದ ಕರ್ಮಗಳಲ್ಲಿ ಶ್ರದ್ಧೆಭಕ್ತಿ ಗಳನ್ನುಳ್ಳ ಬ್ರಾಹ್ಮಣರಲ್ಲಿಯೇ ಮಾಧ್ವರು ಪ್ರತ್ಯೇಕ್ಷವಾಗಿ ಪಶುವನ್ನು ಕೊಲ್ಲುವುದನ್ನು ಬಿಟ್ಟು ಹಿಟ್ಟಿನಿಂದ ಪಶುವನ್ನು ನಿರ್ಮಿಸಿ ಕೆಲಸವನ್ನು ನೆರವೇರಿಸುತ್ತ ಅಹಿಂಸಾ ಧರ್ಮದಲ್ಲಿ ಮಿಕ್ಕವರಿಗಿಂತ ಒಂದು ಹೆಜ್ಜೆ ಮುಂದುವರಿದವರು. ಶ್ರೀ ವೈಷ್ಣವರಲ್ಲಿ ತೆಂಗಲೆಯವರು ಯಜ್ಞಗಳು ಅನಾವಶ್ಯಕವೆಂದು ತಳ್ಳಿಬಿಟ್ಟರು. ಮಿಕ್ಕವರಲ್ಲಿ ಯಜ್ಞಗಳನ್ನು ಮಾಡುವವರೇ ಅಪರೂಪವಾದರು. ಆದರೆ ಶಾಸ್ತ್ರಕ್ಕಾಗಿ ಯಜ್ಞದಲ್ಲಿ ಮಾಡುವ ಹಿಂಸೆ ಹಿಂಸೆಯಲ್ಲ ಎಂದು ಹೇಳಿಕೊಳ್ಳುತ್ತಿದ್ದಾರೆ. ವೇಮನನಿಗೆ ಈ ಹಿಂಸೆ ಮಾತ್ರವೇ ಅಲ್ಲ, ತನ್ನ ಶತ್ರುವಿಗೆ ಕೂಡ ಹಿಂಸೆಕೊಡುವುದಕ್ಕಿಷ್ಟವಿಲ್ಲ.

ಆ॥ ಚಂಪದಗಿನಯಟ್ಟಿ ಶತ್ರುವು ತನಚೇತ
ಚಿಕ್ಕೆ ನೇನಿ ಕೀಡು ಜೇಯರಾದು
ಪೊಸಗ ಮೇಲು ಚೇಸಿ ಪೊಮ್ಮನುಟೇ
ಚಾಲು (೧೪೯೪)

ಕೊಲ್ಲಲರ್ಹವಾದ ಶತ್ರು ತನಕೈಗೆ
ಸಿಕ್ಕಿದರೆ ಕೆಡುಕ ಮಾಡಲಾರರು
ಸ್ನೇಹತೋರಿ ಮೇಲನೆ ಮಾಡಿ
ಹೋಗೆಂದರೇ ಸಾಕು

ನಿಜವೇ, ಶತ್ರುತ್ವ ಸಾಯಬೇಕೇ ಹೊರತು ಶತ್ರುವು ಸಾಯಲೇಬೇಕೆಂದು ಕೋರುವುದು ಅನ್ಯಾಯವಲ್ಲವೇ. ಪ್ರಕೃತ ಮನುಷ್ಯರು ಇಷ್ಟು ದೂರ ಅಹಿಂಸಾ ವ್ರತವನ್ನು ಪಾಲಿಸಲಾರರಾದರೂ, ಯಾವಾತನೂ ಹೀಗೆ ಹೇಳಿದನೋ ಆತನ ಹೆಸರಿನಲ್ಲೇ ಕುರಿ ಕೋಣಗಳನ್ನು ಬಲಿಕೊಡುವುದನ್ನಾದರೂ ನಿಲ್ಲಿಸುವ ಪ್ರಯತ್ನ ಮಾಡುವುದು ವೇಮನನಲ್ಲಿ ಅಭಿಮಾನವುಳ್ಳವರಿಗೆಲ್ಲ ಮುಖ್ಯ ಧರ್ಮವೆನ್ನುವುದರಲ್ಲಿ ಸಂದೇಹವಿಲ್ಲವಲ್ಲವೆ.

ಈತನ ಸ್ವಾರ್ಥ ನೀತಿಗಳಲ್ಲಿ ಸ್ವಾನುಭವದ ವಿವೇಕ ಇನ್ನೂ ಹೆಚ್ಚಾಗಿ ಕಾಣ ಬರುತ್ತದೆ. ಮನುಷ್ಯರಿಗೆ ಈ ಲೋಕದಲ್ಲಿ ನೆಮ್ಮದಿಯಾಗಿ ಬದುಕುವುದಕ್ಕೆ ಅತ್ಯಾವಶ್ಯಕವಾದ ತಾಳ್ಮೆ, ವಿವೇಕ ಮೊದಲಾದ ಗುಣಗಳನ್ನು ಅವು ಬೋಧಿಸುತ್ತ ಎಲ್ಲರಿಗೂ ಪ್ರಿಯವಾಗಿವೆ. ನೋಡಿ ಶೌರ್ಯ ಒಳ್ಳೆಯದೆ. ಆದರೆ ಅದು ಸಮಾನರಾದವರ ವಿಷಯದಲ್ಲಿ ಮಾತ್ರ ಕೆಲಸಕ್ಕೆ ಬರುತ್ತದೆ. ತನಗಿಂತ ದುರ್ಬಲರಾದವರಲ್ಲಿ ಶೌರ್ಯವನ್ನು ತೋರಿಸುವುದು ಹೇಡಿತನ ಎಂದು ಎಲ್ಲರೂ ಅಂಗೀಕರಿಸುವರು. ತನಗಿಂತ ಬಲವಂತರಾದವರಲ್ಲಿ ಪ್ರಯೋಗಿಸಿ ಕೆಟ್ಟವನನ್ನು ನೋಡಿ "ಭಲೆ" ಎಂದು ಮೆಚ್ಚಿಕೊಳ್ಳುವವರು ಕೆಲವರಿದ್ದರೂ ಅದು ಅವಿವೇಕವೆಂದು ಹೇಳುವವರೇ ಹೆಚ್ಚು. ವೇಮನನೂ ಈ ವಿವೇಕಿಗಳ ಗುಂಪಿಗೆ ಸೇರಿದವನೇ.

ಆ॥ ಎದುಟಿ ತನಆಲಂಬುಲೆಂಚುಕೋನೇರಕ
ದೀಕೊನಿ ಚಲಮುನನೆದಿರ್ಚೆನೇನಿ
ಎಲುಗು ದಿವಿಟಿಸೇವ ಕೇರ್ಪಡು ಚಂದಂಬು
(೬೪೬)

ಎದುರಾಳಿಯ, ತನ್ನ ಬಲಗಳ ತಿಳಿಯದೆಯೆ
ಚಲವನ್ನೇ ಸಾಧಿಸಿದರೆ
ಕರಡಿಯನ್ನು ದೀವಟಿಗೆಯು ಸೇವೆಗೆ
ಏರ್ಪಡಿಸಿದ ಚಂದ

ಆದ್ದರಿಂದ

ಆ॥ ಅನುವುಗಾನಿ ಚೋಟನಧಿಕುಲಮನರಾದ
ಕೊಂಚೆಮುಂಡುಟೆಲ್ಲ ಕೊದುವಗಾದು
ಕೊಂಡಯದ್ದ ಮಂದು ಕೊಂಚಮೈ
ಯುಡದಾ (೧೨೮)

ತಗದ ಕಡೆ ತಾನು ಅಧಿಕನೆಂದೆನಬಾರದು
ಕೊಂಚವಾಗಿರುವುದು ಕೀಳಲ್ಲ
ಬೆಟ್ಟ ಕನ್ನಡಿಯಲಿ ಚಿಕ್ಕದಾಗ ಕಾಣುವುದಲ್ಲವೇ

ಹೀಗೆಯೇ ಇತರರು ಯಾರಾದರೂ ತನ್ನನ್ನು ದಂಡಿಸಿದರೆ ಸಹಿಸದೆ ತಿರುಗಿ ಬೀಳುವುದೂ ಶೌರ್ಯವಾಗಿಯೇ ತೋರಬಹುದಾದರೂ ಹಾಗೆ ದಂಡಿಸುವುದರಿಂದ ತನಗೆ ಮೇಲು ಆಗುವ ಪಕ್ಷಕ್ಕೆ ದಂಡಿಸದೇ ಸಹಿಸಿಕೊಂಡಿರುವುದೇ ವಿವೇಕವೆಂದು ವೇಮನನ ಮತ.

ಆ॥	ವಾಕಿ ಕೋಕಲುದಿಕಿ ಚೀಕಾಕು ಪಡಜೇಸಿ	ಆಗಸ ಸೀರೆಯನು ಒಗೆಯುತ್ತಾ
	ಮ್ಯೆಲದೀಸಿ ಲೆಸ್ಸಮಡಿಚಿನಟ್ಲು	ಕೊಳಕನ್ನು ತೆಗೆದು ಮಡಿಸಿದಂತೆ
	ಬುದ್ಧಿಜೆಪ್ಪವಾಡು ಗ್ರುದ್ದಿತೇನೇಮಯ	ಬುದ್ಧಿ ಹೇಳುವವನು ಗುದ್ದಿದರೇನಯ್ಯ

(೧೫೦೨)

ಮೇಲಿನ ಎರಡು ವಿಧಗಳನ್ನು ಈತನು ಸಾಕ್ಷಾತ್ತಾಗಿ ಹೇಳುವುದು ಒಂದು ತೀರು. ಅವುಗಳನ್ನು ಆಚರಿಸುವುದರಿಂದಲೂ ಹಾಗೆ ಮಾಡದೆ ಬಿಡುವುದರರಿಂದಲೂ ಉಂಟಾಗುವ ಪ್ರಾಪಂಚಿಕ ಸ್ಥಿತಿಗಳನ್ನು ಇದ್ದುದನ್ನು ಇದ್ದಂತೆಯೆ ಹೇಳಿ ಆ ಮೂಲಕವಾಗಿ ಮೇಲೆ ಹೇಳಿದ ನೀತಿಗಳನ್ನು ವ್ಯಂಜಿಸುವಂತೆ ಮಾಡುವುದು ಅದಕ್ಕಿಂತ ಬಲವಂತವಾದ ಕವಿತಾಮಾರ್ಗ. ವೇಮನನಿಗೆ ಈ ಮಾರ್ಗದಲ್ಲಿ ಆಸೆ ಹೆಚ್ಚು. ಶಕ್ತಿಯೂ ಹೆಚ್ಚು ನೋಡಿ :

ಆ॥	ಆಲಿಮಾಟಲು ವಿನಿ ಅನ್ನದಮ್ಮುಲರೋಸಿ	ಹೆಂಡತಿಯ ಮಾತುಕೇಳಿ ಅಣ್ಣತಮ್ಮಂದಿರೊಡನೆ ರೋಸಿ
	ವೇರೆ ಪೋವುವಾಡು ವೆರ್ರಿವಾಡು	ಬೇರೆಹೋಗುವವನು ಹುಚ್ಚ
	ಕುಕ್ಕತೋಕಪಟ್ಟಿ ಗೋದಾವರೀದುನಾ	ನಾಯಿ ಬಾಲ ಹಿಡಿದು ಗೋದಾವರಿಯನ್ನು ಈಜಲಾಗುವುದೇ

ಎಂದು ಸ್ಪಷ್ಟವಾಗಿ ಹೇಳುವುದು ಒಂದು ವಿಧ. ಈ ಕೆಳಗೆ ಕಾಣಿಸಿರುವ ಪದ್ಯ ಅದಕ್ಕಿಂತ ಬಲವಂತವಾದ ಧ್ವನಿಮಾರ್ಗ.

ಆ॥	ಆಲಿವಂಕವಾರು ಆತ್ಮಬಂಧುವುಲೈರಿ	ಹೆಂಡತಿಯ ಕಡೆಯುವರು ಆತ್ಮಬಂಧುಗಳಾಧರು
	ತಲ್ಲಿವಂಕವಾರು ತಗಿನಪಾಟಿ	ತಾಯಿಯ ಕಡೆಯುವರು ತಗ್ಗದ ನಂಟು
	ತಂಡ್ರಿವಂಕವಾರು ದಾಯಾದಿಪಗವಾರು	ತಂದೆಯ ಕಡೆಯುವರು ದಾಯಾದಿ ಹಗೆಗಳು

(೩೦೦)

ಹೀಗೆಯೇ ಪ್ರಪಂಚದಲ್ಲಿ ಪಲಕುಪಡಿ ಮತ್ತು ಮರ್ಯಾದೆ ಸಂಪಾದಿಸುವುದಕ್ಕೆ ಮಿಕ್ಕ ಎಲ್ಲಕ್ಕಿಂತಲೂ ಹಣ ಮುಖ್ಯವಾದ್ದರಿಂದ, ಅದನ್ನು ಸಂಪಾದಿಸು ಎಂದು ಸ್ಪಷ್ಟವಾಗಿ ಹೇಳುವುದಕ್ಕಿಂತ ಈ ಕೆಳಗಿನ ಪದ್ಯದಲ್ಲಿಯ ವಸ್ತು ಸ್ಥಿತಿ ಕಥನ ಹೆಚ್ಚು ಫಲಕಾರಿಯಾಗಿದೆ.

ಆ॥	ಕುಲಮುಗಲುಗುವಾರು ಗೋತ್ರಂಬುಗಲವಾರು	ಒಳ್ಳೆಯ ಕುಲವುಳ್ಳವರು ಗೋತ್ರವುಳ್ಳವರು
	ವಿದ್ಯಚೇತ ವಿರ್ರವೀಗುವಾರು	ವಿದ್ಯೆಯಿಂದ ಬಿರಿಬಿರಿ ಬೀಗುವವರು
	ಪಸಿಡಿ ಗಲ್ಗುವಾನಿ ಬಾನಿಸಕೊಡುಕುಲು	ಹಣವಿರುವವನ ತೊತ್ತಿನ ಮಕ್ಕಳು

(೧೧೩೩)

ಇಂಥವೇ ಇನ್ನೆರಡು ಪದ್ಯಗಳು :

ಆ॥ ಪನಸತೊನಲಕನ್ನ ಪಂಚದಾರಲಕನ್ನ	ಹಲಸಿನತೊಳೆಗಿಂತ, ಸಕ್ಕರೆಗಿಂತ
ಜೂಟಿತೇನೆ ಕನ್ನ ಜುನ್ನುಕನ್ನ	ಜೇನಿಗಿಂತ ಗಿಣ್ಣುಹಾಲಿಗಿಂತ
ಚೆರುಕುರಸಮುಕನ್ನ ಚೆಲಿಮಾಟತೀಪುರಾ (೨೪೦೪)	ಕಬ್ಬಿನಹಾಲಿಗಿಂತ ಯುವತಿಯ ಮಾತು ಸಿಹಿಯೋ
ಆ॥ ಜಾರಪುರುಷುನಕುನು ಜಾಜಿಪೂವುಲತೋಡ	ಜಾರಪುರುಷನಿಗೆ ಜಾಜಿ ಹೂವುಗಳಿಂದ
ಪಾನ್ಪುವೇಯುನಯ್ಯ ಪ್ರಾತಲಂಜ	ಹಾಸಿಗೆ ಹಾಸುವಳೆ ಹಳೆಯ ಸೂಳೆ
ಸೊಂತಮಗನಿಮಿಾದ ಚಿಂತನಿಪ್ಪಲುಚೆಲ್ಲು (೧೫೬೬)	ಸ್ವಂತ ಮಗನ ಮೇಲೆ ಹುಣಸೆಯ ಬೆಂಕಿಯ ಚೆಲ್ಲುವಳು

ಮತ್ತು ಬರಿಯ ಉಪಮಾನಗಳನ್ನೇ ಹೇಳಿ, ವಿಷಯವನ್ನು ತಿಳಿಸದೆ, ವ್ಯಂಜಿಸುವುದು ಆತನ ಇನ್ನೊಂದು ವಿಚಿತ್ರಮಾರ್ಗ.

ಆ॥ ತಿರುಮಲಕುನು ಬೋವ ದುರಕ ದಾಸರಿಗಾಡು	ತಿರುಮಲೆಗೆ ಹೋದ ತುರುಕ ದಾಸನಾದಾನೆ
ಕಾಶಿಕೇಗ ಬಂದಿ ಗಜಮುಗಾದು	ಕಾಶಿಗೇ ಹೋದ ಹಂದಿ ಗಜವಾಗದು
ಕುಕ್ಕಸಿಂಗಮಗುನೆ ಗೋದಾವರಿಕಿಬೋವ (೧೯೪೪)	ನಾಯಿ ಸಿಂಹವಾಗುವುದೆ ಗೋದಾವರಿಗೆ ಹೋದರೆ
ಆ॥ ಪೊಟ್ಲಕಾಯ ರಾಯಿಪೊಡುಗು ತ್ರಾಟನು ಗಟ್ಟ	ಪಡವಲಕಾಯಿಗೆ ಕಲ್ಲುಭಾರದ ಹಗ್ಗವನು ಕಟ್ಟಿದರೆ
ಲೀಲತೋಡ ವಂಕಲೇಕ ಪೆರುಗು	ಲೀಲೆಯಿಂದ ವಕ್ರವಿಲ್ಲದೆ ಬೆಳೆವುದು
ಕುಕ್ಕ ತೋಕಗಟ್ಟಂ ಗುದುರುನಾ ಚಕ್ಕನಾ (೨೬೧೫)	ನಾಯಿಬಾಲವನ್ನು ಕಟ್ಟಲು ಸರಿಯಾಗುವುದೇ

ಹೀಗೆ ಧರ್ಮ, ತತ್ತ್ವ, ನೀತಿ, ಪರಮತಖಂಡನ ಮುಂತಾದ ಯಾವ ವಿಷಯಗಳನ್ನು ಹೇಳಿದರೂ ಈತನ ಪದ್ಯಗಳಲ್ಲಿ ಅನನ್ಯ ಸಾಧಾರಣವಾದ ಸರಳತೆ, ಧಾರಾಳತೆ, ಕೆತ್ತನೆಯ ಕೆಲಸ ನಿರ್ಲಕ್ಷ್ಯತೆ ಮುಂತಾದ ಕವಿತಾಗುಣಗಳು ತುಂಬಿರುತ್ತವೆ. ಈತನ ಯಾವ ಪದ್ಯವನ್ನು ಕೇಳಿದರೂ, ನಿಂತು ತಕ್ಷಣ ಆ ಕಡೆ ತಿರುಗಿ ಒಂದು ಸಲವಾದರೂ ನೋಡದಿರುವುದು ತೆಲುಗುಮಾತನಾಡುವ ಯಾವಾತನಿಗೂ ಸಾಧ್ಯವಿಲ್ಲ. ಈ ಆಕರ್ಷಣ ಶಕ್ತಿ ಆತನಲ್ಲಿರುವಷ್ಟು ಬೇರೆ ಯಾರಲ್ಲಿಯೂ ಕಾಣಬರುವುದಿಲ್ಲ. ತಾನು ಹೇಳುವ ಮಾತು ಇತರರ ಹೃದಯದಲ್ಲಿ ಬಿದ್ದು ಜಾರಿಹೋಗದೆ ಅಲ್ಲಿಯೇ ಅಂಟಿಕೊಳ್ಳುವಂತೆ ಮಾಡುವುದೇ ಕವಿಗೆ, ಇತರರಲ್ಲಿಲ್ಲದಿರುವ, ಭಗವದ್ದತ್ತವಾದ ಶಕ್ತಿ. ಅದಕ್ಕೆ ಪರವಶರಾಗಿ ಮಿಕ್ಕ ಸಹೃದಯರೆಲ್ಲರೂ ಹೀಗೆಂದು ಹೇಳಲಾಗದ ಒಂದು ಆನಂದವನ್ನು ಅನುಭವಿಸಬೇಕೆಂಬುದು ಸೃಷ್ಟಿ ಸಿದ್ಧಿಯಾದ ಅನಿರ್ವಚನೀಯ ರಹಸ್ಯಗಳಲ್ಲಿ ಒಂದು. ಆದರೆ ಅಸಹೃದಯತೆ ಕೂಡ ಸ್ವಲ್ಪ ಮಟ್ಟಿಗೆ ಸಹಜವಾದ ಶಕ್ತಿ. ಸ್ವಾಭಾವಿಕವಾಗಿ ಕವಿತ್ವ ಸಂಗೀತ ಮುಂತಾದ ಕಲೆಗಳಲ್ಲಿ ಅಭಿರುಚಿ ಇಲ್ಲದವರು ಎಷ್ಟೋ ಜನರಿದ್ದಾರೆ. ಅಸಹಜವಾದ ಸಹೃದಯತ್ವವನ್ನು ಓದು, ವಿವೇಕ, ಅಭ್ಯಾಸ ಇವುಗಳಿಂದ ತಪ್ಪು ದಾರಿಯಲ್ಲಿ

ವೃದ್ಧಿಪಡಿಸಿಕೊಂಡು ವಾಸನಾ ಪರಿಪಕ್ವ ಬುದ್ಧಿಯುಳ್ಳವರಾದರೆ ಹೆಚ್ಚಾದ ಆನಂದವನ್ನು ಅನುಭವಿಸುವವರಾಗುವೆವು. ಹಾಗಾಗದೆ ನೀತಿ, ಮತ, ನಾಗರಿಕತೆ, ಪ್ರಾಚೀನ ಸಿದ್ಧಾಂತಗಳು, ನಮಗಿಂತ ಬಲವಂತರಾದವರ ಸಿದ್ಧಾಂತಗಳು ಮೊದಲಾದವುಗಳಿಗೆ ಒಳಗಾಗಿ ತಪ್ಪುದಾರಿಯಲ್ಲಿ ಅವುಗಳನ್ನು ಹೋಗಗೊಟ್ಟರೆ ಅನೇಕ ಮಹಾಕವಿಗಳ ಕವಿತ್ವ ಇದ್ದರೂ ನಮ್ಮ ಪಾಲಿಗೆ ಇಲ್ಲದಂತೆಯೇ.

ಇದುವರೆವಿಗೂ ಕವಿತ್ವ ಯಾವುದು ಎಂಬ ಚರ್ಚೆಬಂದಾಗ ನಾವು ಸಂಸ್ಕೃತ ಪಂಡಿತರ ಕನ್ನಡಕಗಳನ್ನು ಹಾಕಿಕೊಂಡೇ ನೋಡಿ ನಿರ್ಣಯಿಸುತ್ತಿದ್ದೆವು. ಈಗ ಇಂಗ್ಲೀಷಿನವರ ದುರ್ಬಿನಿನ ಮೂಲಕ ನೋಡುತ್ತಿದ್ದೇವೆ. ಅವರು ಯಾವುದನ್ನು ಕವಿತ್ವವೆಂದರೋ ನಾವು ಅದನ್ನೇ ಕವಿತ್ವವೆನ್ನುತ್ತಿದ್ದೇವೆ. ಅವರು ಅಲ್ಲವೆಂದರೆ ಅಲ್ಲವೆನ್ನುತ್ತೇವೆ. ಇಷ್ಟೇ ಹೊರತು ನಮ್ಮ ಅನುಭವಗಳನ್ನು ನಂಬಿ ನಾವು ನಮ್ಮ ಸಿದ್ಧಾಂತವನ್ನು ಮಾಡುತ್ತಿಲ್ಲ. ಓದಿದವರಲ್ಲಿ ಮೊಟ್ಟ ಮೊದಲು ವೇಮನನ ಪದ್ಯಗಳ ಶ್ರೇಷ್ಠತೆಯನ್ನು ಗುರುತಿಸಿದವನು ಬ್ರ್ರಾನ್ ದೊರೆ. ಆದರೆ ಆತನೂ ಇವು ಹೊಸದಾಗಿ ತೆಲುಗನ್ನು ಕಲಿತುಕೊಳ್ಳುವ ದೇಶಾಂತರದವರಿಗೆ ಉಪಯೋಗವಾಗುತ್ತದೆಯೇ ಹೊರತು ಇವುಗಳಲ್ಲಿ ಪುರಾಣಗಳ ಪ್ರಾಮಾಣ್ಯವಾಗಲೀ ಪ್ರಬಂಧಕವಿಗಳ ಪ್ರೌಢಿಮೆಯಾಗಲಿ ಇಲ್ಲವೆಂದೇ ಹೇಳಿದನು† ನಂತರದವನು ಕಾಂಬೆಲು ದೊರೆ. ಕ್ರೈಸ್ತಮತ ಪ್ರಚಾರವೇ ಪರಮಾರ್ಥವಾಗಿ ಹೊಂದಿದ್ದ ಈತನು ಹಿಂದುಗಳ ದಂಭಾಚಾರವನ್ನು ಬೈಯ್ಯುವುದಕ್ಕಾಗಿಯೇ ವೇಮನ ಉಪಯೋಗಿಸಿಕೊಂಡನೆಂದು ಕಾಣುತ್ತದೆಯೇ ಹೊರತು ಆತನ ಕವಿತ್ವದತ್ತ ಅಷ್ಟು ಅಭಿಮಾನವನ್ನು ತೋರಿಸಲಿಲ್ಲ. ಇನ್ನು ವೇಮನ ಕವಿಯೆಂದು ನಮ್ಮವರು ಅಂದುಕೊಳ್ಳಲೇ ಇಲ್ಲ. ಪಾಶ್ಚಾತ್ಯರು ಶಿಫಾರಸು ಮಾಡಲೂ ಇಲ್ಲ. ಆದ್ದರಿಂದ ತೆಲುಗಿನವರಲ್ಲಿ ಓದಿದ ಪಂಡಿತರನೇಕರು ಇನ್ನೂ ವೇಮನ ಪದ್ಯಗಳ ಕವಿತ್ವದ ಬೆಲೆಯನ್ನು ಗಮನಿಸದೆಯೇ ಇದ್ದಾರೆ.

ಹೇಗೆ ಗಮನಿಸಬಲ್ಲರು? ವೇಮನ ಪದ್ಯಗಳು ಹತ್ತಿದ ದೊಡ್ಡ ಸಿಂಹಾಸನ 'ಮ್ಯಾಕ್‌ಮಿಲನ್' ಅವರ ಮೂರನೆಯ ರೀಡರ್. ಕಾಲೇಜಿನಲ್ಲಾಗಲೀ ಹೈಸ್ಕೂಲಿನಲ್ಲಾಗಲೀ ತೆಲುಗು ವಿದ್ಯಾರ್ಥಿಗಳು ಅವುಗಳ ಮುಖವನ್ನು ನೋಡಲು ಅವಕಾಶ ಕೊಡುವ ಪಾಪಕ್ಕೆ ಯಾರಾದರೂ ಹೋಗಿದ್ದಾರೆಯೆ? ಪಾಠ ಪುಸ್ತಕಗಳನ್ನು ನಿರ್ಣಯಿಸುವವರೆಲ್ಲರೂ ಇನ್ನು ತೆಲುಗು ಪಂಡಿತನ ನಿಘಂಟು ಜ್ಞಾನವನ್ನು ಪರೀಕ್ಷಿಸಿ ನೋಡುತ್ತಿರುವರೇ ಹೊರತು, ಶಿಷ್ಯರ ಮನೋವಿಕಾಸದ ಮೇಲೆ ದೃಷ್ಟಿಯುಳ್ಳವರು ಅಪರೂಪ. ಕಾವ್ಯಗಳನ್ನು ಪಾಠಹೇಳುವುದು ಎಂದರೆ ಶಿಷ್ಯನಿಗೆ ತಿಳಿಯದ ಪದಗಳಿಗೆ ಅರ್ಥ ಹೇಳುವುದೇ ಎಂದು ಇಂದಿಗೂ ಅನೇಕರ ಅನಿಸಿಕೆ. ಆದರೆ ಕವಿಯ ಭಾವಗಳು, ಅಭಿಪ್ರಾಯಗಳು, ಶೈಲಿ ಮುಂತಾದುವನ್ನು ಕುರಿತು ಚರ್ಚಿಸಿ, ತಿಳಿಸುವ ಆವಶ್ಯಕತೆಯಿಲ್ಲವೆ?

---

† Brown's Vemana Preface iii

ಇದೂ ಅಲ್ಲದೆ ಇಂದಿನ ಪಾಠಶಾಲೆಗಳಲ್ಲಿ ಶುದ್ಧ ಸಂಸ್ಕೃತ ಪದ್ಧತಿಯನ್ನು ಇಂಗ್ಲಿಷು ಪದ್ಧತಿಯನ್ನು ಅವಲಂಬಿಸಿ ಬರೆದ ಪ್ರಾಚೀನ ಪುರಾಣಗಳು, ಪ್ರಬಂಧಗಳು, ನಾಟಕಗಳು, ಕಾದಂಬರಿಗಳು ಮೊದಲಾದುವನ್ನು ನಿಯಮಿಸುತ್ತಾರಲ್ಲವೇ? ಅವುಗಳಲ್ಲಿ, ಅನೇಕ ಬರೆಗಳೇ ಹೊರತು, ಬರಹಗಳಲ್ಲ. ಈ ಎರಡನ್ನೂ ತಿಳಿಯದ ಶುದ್ಧವಾದ ತೆಲುಗು ಕವಿತ್ವವೊಂದು ಇದೆಯಲ್ಲವೇ ? ಅದನ್ನು ತೆಲುಗು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಲ್ಲವೇ ? ವೇಮನನದು ಇಂಥ ಅಚ್ಚ ತೆಲುಗು ಕವಿತ್ವವೆನ್ನುವುದು ತೆಲುಗಿನವರಿಗೆಲ್ಲ ಗೊತ್ತು. ಇದಕ್ಕೆ ಮೇಲೆ ಹೇಳಿದ ಪುರಾಣ ಪ್ರಬಂಧಗಳಿಗೆ ಕೊಡುವ ಗೌರವವನ್ನು ಕೊಡಲಾಗದೆ ಹೋದದ್ದೂ ಅಲ್ಲದೆ, ತಲೆ ಬಾಲವಿಲ್ಲದ ಕಾದಂಬರಿಗಳು ನಾಟಕಗಳು ಮೊದಲಾದವುಗಳೊಂದಿಗೆ ಸಮಾನವಾಗಿ ಯಾರಾದರೂ ಮನ್ನಿಸಲಿಲ್ಲ ವೆಂದರೆ, ನಮ್ಮ ತೆಲುಗಾಗಲೀ ತಿಳುವಳಿಕೆಯಾಗಲೀ ಯಾವುದಕ್ಕೆ ಬಂದೀತು ? ಈತನಲ್ಲಿ ಅಪಶಬ್ದಗಳು ಇವೆಯಾದ್ದರಿಂದ ಪಾಠಶಾಲೆಗೆ ತಕ್ಕುದಲ್ಲವೆಂದು ಹೇಳಿದರೆ, ಪೂರ್ವಕಾಲದವರ ಬರವಣಿಗೆಯೆಲ್ಲವೂ ಸುಶಬ್ದಗಳೇ ಎಂದು ಕೊಳ್ಳೋಣ ಬಿಡಿ. ಆದರೆ, ಆಧುನಿಕರಿಂದ ಬರೆಯಲ್ಪಟ್ಟ ಪಠ್ಯಪುಸ್ತಕಗಳಾಗಿ ನಿಯಮಿಸಲ್ಪಟ್ಟ ಗ್ರಂಥ ಗಳಲ್ಲಿ ಅಪಶಬ್ದಗಳಿಲ್ಲದೆ ಇರುವುದನ್ನು ಹತ್ತರಲ್ಲಿ ಒಂದನ್ನಾದರೂ ತೋರಿಸಬಲ್ಲರೇ ? ಮತ್ತು ತೆಲುಗಿನಂಥ ಬದುಕಿರುವ ಭಾಷೆಯಲ್ಲಿ " ಇವೇ ಅಪಶಬ್ದಗಳು ಇವೇ ಸುಶಬ್ದ ಗಳು " ಎಂದು ನಿಖರವಾಗಿ ಶಾಶ್ವತವಾಗಿ ನಿರ್ಣಯಿಸುವುದಕ್ಕೆಂದು ಹೊರಡುವುದು ಹುಚ್ಚೆಂದು ಇಷ್ಟುದಿನವಾದರೂ ತಿಳಿದುಕೊಳ್ಳದೇ ಇರುವುದು ನಮ್ಮ ತಪ್ಪೇ ಅಲ್ಲವೇ?

ನಿಜವನ್ನು ನೋಡಿದೆವಾದರೆ ಕಾರಣವಿದಲ್ಲ. ರಹಸ್ಯ ಬೇರೆ ಇದೆ. ನಾವು ಸಂಪ್ರದಾಯಕ್ಕೆ ದಾಸರು. ಅದನ್ನು ಬದಲಾಯಿಸಿಕೊಳ್ಳುವ ಶಕ್ತಿ ನಮ್ಮಲ್ಲಿ ಅನೇಕರಿಗಿಲ್ಲ. ವೇಮನನ ಪದ್ಯಗಳು ದೊಡ್ಡ ತರಗತಿಯ ವಿದ್ಯಾರ್ಥಿಗಳಿಗೆ ಓದಲು ನಿಯಮಿಸುವ ಸಂಪ್ರದಾಯ ಇದುವರೆಗೂ ಇಲ್ಲ. "ಅದಿಲ್ಲದೆಯೇ ಪ್ರಪಂಚ ನಡೆಯು ತ್ತಿದೆಯಲ್ಲಾ, ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಾಸ್ ಆಗುತ್ತಿದ್ದಾರೆ. ಈ ಹೊಸ ಸಂಪ್ರದಾಯವೇಕೆ? ಇದ್ದದ್ದು ಹಾಗೆ ಇರಲು ಬಿಡೋಣ." ಎಂಬುದೇ ನಮ್ಮ ಈಗಿನ ಸ್ಥಿತಿ. ಆಂಧ್ರವಿಶ್ವಕಳಾ ಪರಿಷತ್ತಿನವರು ಈ ವಿಷಯದಲ್ಲಿ ಹೆಜ್ಜೆಮುಂದಕ್ಕಿಟ್ಟು ಇಂಥ ನೂತನ ಸಂಪ್ರದಾಯವನ್ನು ಕಲ್ಪಿಸಿದರೆ ಶಿಷ್ಯರಿಗೆ ಹೃದಯೋಲ್ಲಾಸವನ್ನು ಉಂಟುಮಾಡಿದವರಾಗುತ್ತಾರೆ; ತಾವೂ ಸ್ವಧರ್ಮವನ್ನು ಅನುಸರಿಸಿ ಧನ್ಯರಾಗುತ್ತಾರೆ.

(ಮುಗಿಯಿತು)

ಮೂಲ: **ಐ ಕ್ವಿಂಗ್,** ಚೀನಿ ಕವಿ, ೧೯೭೮

ಅನು: **ಎನ್. ಎಸ್. ಶಾರದಾ ಪ್ರಸಾದ್**

ಕನ್ನಡಿ

ಅದೊಂದು ಸರಳ ಸುಂದರ ದರ್ಪಣ
ಆದರೆ ಅದರ ಅಂತರಂಗವನು ಅರಿತವರು ಯಾರು ?

ಸತ್ಯವೆಂದರೆ ಅದಕೋ ಅಚ್ಚುಮೆಚ್ಚು
ಲೋಪ-ದೋಷಗಳನು ಎಂದಿಗೂ ಅದು ಮುಚ್ಚದು.

ಅದನರಸಿ ಹೋಗುವವರಿಗೆ ಅತಿ ಮೆಚ್ಚು
ಯಾರಾದರೂ ಅದರಲಿ ತಮ್ಮತನ ಕಾಣಬಹುದು.

ನಾಚಿನೀರಾಗಿ ಕೆಂಪೇರಿದ ಕೆನ್ನೆಯೋ ಇರಬಹುದು
ಶ್ವೇತಮೇಘದಂಥ ಕೇಶರಾಶಿಯೋ ಇರಬಹುದು.

ತಾವು ಸುರೂಪಿ ಸ್ಫುರದ್ರೂಪಿಗಳು
ಅದಕಾಗಿ ಮೆಚ್ಚುವರು ದರ್ಪಣವ.

ಸದಾ ಸತ್ಯವನೇ ತೋರುವ ದರ್ಪಣ
ಮತ್ತೆ ಕೆಲವರಿಗೆ ಹೇವರಿಕೆ ತರುವುದು.

ಮತ್ತೆ ಕೆಲವರ ರೋಷ-ದ್ವೇಷವೆನಿತಿದೆಯೆಂದರೆ
ಅದನು ಕಂಡೊಡನೆ ನುಚ್ಚುನೂರಾಗಿಸಲು
ಸದಾ ಬಯಸುವರು.

ಡಾ. ಎಚ್. ಎಸ್. ಬಿಳಿಗಿರಿ

ಭೃಂಗಿಗತಿ ರಗಳೆ

ತಮ್ಮ ನೀರೊಳಗಾಡಬಂದು ಬಳಿ ಸುಳಿದ
ವ್ಯಾಕರಣಸಾಗರದ ಮಾನಿಗತಿ ಮುಳಿದ
ಛಂದಸ್ಸಮುದ್ರದ ತಿಮಿಂಗಿಲಗಳಿಂದ
ನುಣುಚಿಕೊಳ್ಳುವ ಚದುರ ಕಲಿಸಲಿ ಮುಕುಂದ !

*

೧. ಕನ್ನಡದ ಅತ್ಯುತ್ತಮ ಕವಿಗಳಲ್ಲಿ ಒಬ್ಬರಾಗಿರುವ ಶ್ರೀಮಾನ್ ಪು. ತಿ. ನರಸಿಂಹಾಚಾರ್ಯರ ' ಶ್ರೀಹರಿಚರಿತೆ ' ಎಂಬ ನೂತನ ಕೃತಿಯಲ್ಲಿ ಬಳಕೆಯಾಗಿರುವ ಛಂದಸ್ಸನ್ನು ಕುರಿತು ಕೆಲವು ಟಿಪ್ಪಣಿಗಳನ್ನು ಬರೆಯುವುದು ಈ ಲೇಖನದ ಉದ್ದೇಶವಾಗಿದೆ.* ಈ ಲೇಖನದ ವ್ಯಾಪ್ತಿ ಪರಿಮಿತವಾದದ್ದು. ತಲಸ್ಪರ್ಶಿಯೂ ಸಮಗ್ರವೂ ಆದ ಅಧ್ಯಯನ ಇದರ ಗುರಿಯಲ್ಲ. ಆ ರೀತಿಯಾದ ಅಧ್ಯಯನವನ್ನು ಮುಂದೆ ಕೈಕೊಳ್ಳಬೇಕೆಂದೆನಿಸಿದರೆ, ನನಗೋ ಇತರ ವಿದ್ವಾಂಸರಿಗೋ ಸಹಾಯವಾಗಬಹುದೆಂಬ ನಂಬಿಕೆಯಿಂದ ಈ ಕೆಲವು ಟಿಪ್ಪಣಿಗಳನ್ನು ಬರೆದಿದ್ದೇನೆ.

೨ 'ಶ್ರೀಹರಿಚರಿತೆ' ಯಲ್ಲಿ ಬಳಕೆಯಾಗಿರುವ ಛಂದಸ್ಸನ್ನು ಕುರಿತು ಕವಿಗಳೇ ಕೆಲವು ಮಾತುಗಳನ್ನಾಡಿದ್ದಾರೆ. ತಮ್ಮ 'ಅರಿಕೆ'ಯಲ್ಲಿ (ಪು. × ×) "ಭೃಂಗಿ ನಡೆಯು ಭಾಮಿನೀವಾರ್ಧಕವೆಂದು ಕರೆಯಬಹುದಾದ ಈ ಛಂದಸ್ಸು .." ಎಂದಿದ್ದಾರೆ. ಮೊದಲನೆಯ ಉಲ್ಲಾಸದಲ್ಲಿ " ಬೃಹಚ್ಛಂದದ ಸಕಲಮಾತ್ರಾಗತಿಯ ಗಮಕಂ ಮೆರೆಯೆ " (ಸಾಲು ೧೮) ಎಂಬ ಮಾತೂ, ಕೊನೆಯ ಉಲ್ಲಾಸದಲ್ಲಿ " ಹೊಸ ಬಗೆ ನಡೆಯ ತೊಂತೊಂನ್ನ ತಾನಗತಿ ಗಮಕದ ಛಂದ " (ಸಾಲು ೫೨) ಎಂಬ ಮಾತೂ ಬಂದಿವೆ.

---

* ಈ ಲೇಖನದ ಮೊದಲನೆಯ ಸಿದ್ಧಪ್ರತಿ ಇನ್ನೂ ಹಸಿ ಹಸಿಯಾಗಿರುವಾಗಲೇ, ಇದರ ವಾಚನವನ್ನು ಮಿತ್ರರಾದ ಸರ್ವಶ್ರೀ ಸುಜನಾ, ಕಿಕ್ಕೇರಿ ನಾರಾಯಣ, ರಾಮಸ್ವಾಮಿ ಅವರುಗಳು ತಾಳ್ಮೆಯಿಂದ ಕೇಳಿದ್ದಾರೆ. ಸುಜನಾ ಅವರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಲೇಖನದ ಕೊನೆಯ ಸಿದ್ಧಪ್ರತಿಯನ್ನು ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿಯವರೂ, ಶ್ರೀ ಕಿ. ರಂ. ನಾಗರಾಜ ಅವರೂ ಓದಿದ್ದಾರೆ. ಇವರಿಗೆಲ್ಲಾ ನಾನು ಕೃತಜ್ಞನಾಗಿದ್ದೇನೆ.

೩. ಈ ಕೃತಿಯಲ್ಲಿ ಬಳಕೆಯಾಗಿರುವುದು ಒಂದು ರೀತಿಯ ರಗಳೆ. ಈ ಮಾತಿಗೆ ಸಮರ್ಥನೆಯೇನೂ ಬೇಕಾಗಿಲ್ಲ. ಆದರೆ, ನನಗೆ ತಿಳಿದ ಮಟ್ಟಿಗೆ, ಕನ್ನಡ ಸಾಹಿತ್ಯದಲ್ಲಿ ಇದುವರೆಗೂ ರಗಳೆಗಳಲ್ಲಿ ಬಳಕೆಯಾಗಿರದ ಒಂದು ವಿಶಿಷ್ಟಲಕ್ಷಣವು 'ಶ್ರೀಹರಿಚರಿತೆ'ಯಲ್ಲಿ ಕಂಡುಬರುವುದರಿಂದಲೂ, ಆ ವಿಶಿಷ್ಟ ಲಕ್ಷಣವನ್ನು "ಭೃಂಗಿ ನಡೆ" ಎಂಬ ಮಾತು ಚೆನ್ನಾಗಿ ಹಿಡಿದಿಡಬಲ್ಲುದು ಎಂದು ನನಗೆ ಎನಿಸಿದ್ದರಿಂದಲೂ ಈ ಛಂದಃಪ್ರಕಾರವನ್ನು 'ಭೃಂಗಿಗತಿ ರಗಳೆ' ಎಂದು ಕರೆದಿದ್ದೇನೆ. ಈ ಹೆಸರೇ ಲೇಖನದ ಹೆಸರೂ ಆಗಿದೆ.

೪. ಮುಂದುವರಿಯುವ ಮುನ್ನ, ಈ ಕೃತಿಯ ಬಗೆಗೆ ಕೆಲವು ಮಾಹಿತಿಗಳನ್ನು ಕೊಡಬಹುದು. 'ಶ್ರೀಹರಿಚರಿತೆ'ಯಲ್ಲಿ ಮೂವತ್ತಮೂರು ಉಲ್ಲಾಸಗಳಿವೆ. ಸುಮಾರು ೫೨೭೦ ಸಾಲುಗಳಿವೆ. ನಾಲ್ಕನೆಯ ಹಾಗೂ ಐದನೆಯ ಉಲ್ಲಾಸಗಳಲ್ಲಿ ಬಹುಮಟ್ಟಿಗೆ ಸಾಲಿಗೆ ಇಪ್ಪತ್ತೆಂಟು ಮಾತ್ರೆಗಳು ಕಂಡುಬರುತ್ತವೆ. ಏಳು, ಹನ್ನೆರಡು, ಹದಿಮೂರು, ಹದಿನೈದು, ಹದಿನಾರು ಈ ಐದು ಉಲ್ಲಾಸಗಳಲ್ಲಿ ಬಹುಮಟ್ಟಿಗೆ ಸಾಲಿಗೆ ಇಪ್ಪತ್ತಾರು ಮಾತ್ರೆಗಳು ಕಂಡುಬರುತ್ತವೆ. ಇನ್ನು ಮಿಕ್ಕ ಇಪ್ಪತ್ತಾರು ಉಲ್ಲಾಸಗಳಲ್ಲಿ ಬಹುಮಟ್ಟಿಗೆ ಸಾಲಿಗೆ ಇಪ್ಪತ್ತನಾಲ್ಕು ಮಾತ್ರೆಗಳು ಕಂಡುಬರುತ್ತವೆ. ಈ ಎಲ್ಲಾ ಉಲ್ಲಾಸಗಳಲ್ಲೂ ನಡುನಡುವೆ ಮೇಲೆ ಹೇಳಿದ ಮಾತ್ರಾ ಸಂಖ್ಯೆಗಳ ಸಾಲುಗಳಲ್ಲದೆ, ೧೯–೨೩, ೨೫, ೨೭, ೨೯–೩೧ ಮಾತ್ರೆಗಳಿರುವ ಸಾಲುಗಳೂ ಸುಳಿದಿವೆ. ಇಂಥ ಸಾಲುಗಳ ಸಂಖ್ಯೆ ಸುಮಾರು ಮುನ್ನೂರು ಆಗಬಹುದು. ಐದು ಉಲ್ಲಾಸಗಳನ್ನು (೧, ೩, ೮, ೧೦, ೩೨) ಬಿಟ್ಟರೆ ಉಳಿದವುಗಳ ಕಡೆಯ ಎರಡು ಸಾಲುಗಳಲ್ಲಿ ಅಂತ್ಯಪ್ರಾಸವೂ ಕಂಡುಬರುತ್ತದೆ. ಮೇಲೆ ನಮೂದಿಸಿರುವ ಐದು ಉಲ್ಲಾಸಗಳಲ್ಲಿ ಮೊದಲನೆಯದನ್ನು ಬಿಟ್ಟು ಮಿಕ್ಕವುಗಳ ಕಡೆಯ ಸಾಲಿನಲ್ಲಿ ಒಂದು ರೀತಿಯ ಒಳಪ್ರಾಸವಿದೆಯೆಂದೂ ಹೇಳಬಹುದು.

೫. ಒಟ್ಟು ಕೃತಿಯ ದೃಷ್ಟಿಯಿಂದ ಇಪ್ಪತ್ತನಾಲ್ಕು ಮಾತ್ರೆಗಳಿರುವ ಸಾಲುಗಳೇ ಅಧಿಕ ಸಂಖ್ಯೆಯಲ್ಲಿರುವುದರಿಂದ, ಮೊದಲು ಅವುಗಳ ವಿಶ್ಲೇಷಣೆಗೆ ತೊಡಗಬಹುದು. ಇಪ್ಪತ್ತನಾಲ್ಕು ಮಾತ್ರೆಗಳ ಸಾಲನ್ನು 'ಮೂಲ'ವಾಗಿಟ್ಟುಕೊಂಡರೆ, ಕೆಲವು ಗಣಗಳ ಅಥವಾ ಮಾತ್ರೆಗಳ ಸಂಕಲನದಿಂದಲೋ ವ್ಯವಕಲನದಿಂದಲೋ ಇತರ ಸಾಲುಗಳನ್ನು ಬಹುಮಟ್ಟಿಗೆ ಸಿದ್ಧಪಡಿಸುವ ನಿರೂಪಣ ಸೌಲಭ್ಯವೂ ಉಂಟು.

೬. ಇಪ್ಪತ್ತನಾಲ್ಕು ಮಾತ್ರೆಗಳಿರುವ ಸಾಲುಗಳ ಗಣರಚನೆ ಹೀಗೆ: ಪ್ರತಿ ಸಾಲಿನಲ್ಲೂ ಐದು ಗಣಗಳು; ಐದು ಮಾತ್ರೆಗಳ ಗಣಗಳು ನಾಲ್ಕು, ನಾಲ್ಕು ಮಾತ್ರೆಗಳ ಗಣ ಒಂದು. ಈ ನಾಲ್ಕು ಮಾತ್ರೆಗಳ ಗಣವು ಎಲ್ಲಿ ಬೇಕಾದರೂ ಬರಬಹುದು. ಹೀಗೆ:

೪	೫	೫	೫	೫
೫	೪	೫	೫	೫
೫	೫	೪	೫	೫
೫	೫	೫	೪	೫
೫	೫	೫	೫	೪

ನಾಲ್ಕು ಮಾತ್ರೆಗಳ ಗಣ ಒಂದೇ ಕಡೆ ಉಂಡೆಯಾಗಿ ಬರದೆ ಎರಡೆರಡಾಗಿ ಸಾಧಾರಣ ವಾಗಿ ಯಾವುದಾದರೂ ಐದು ಮಾತ್ರೆಗಳ ಗಣಕ್ಕೆ ಅಂಟಿಕೊಂಡು ಬರಬಹುದು. ಸಾಧ್ಯತೆಗಳು ಕೆಳಗೆ ತೋರಿಸಿದಂತೆ :

೨	೨	೫	೫	೫	೫	*
೨	೫	೨	೫	೫	೫	
೨	೫	೫	೨	೫	೫	
೨	೫	೫	೫	೫	೨	
೨	೫	೫	೫	೨	೫	
೫	೫	೫	೨	೨	೫	*
೫	೫	೫	೨	೫	೨	
೫	೫	೫	೫	೨	೨	*
೫	೫	೨	೨	೫	೫	*
೫	೫	೨	೫	೫	೨	
೫	೫	೨	೫	೨	೫	
೫	೨	೫	೨	೫	೫	
೫	೨	೫	೫	೫	೨	
೫	೨	೫	೫	೨	೫	
೫	೨	೨	೫	೫	೫	*

* ಎಂದು ಗುರುತಿಸಿರುವ ರಚನೆಗಳಲ್ಲಿ ಎರಡು ಎರಡು ಮಾತ್ರೆಗಳ ತುಂಡುಗಳು ಒಂದಾದ ಮೇಲೊಂದು ಬಂದು, ನಾಲ್ಕು ಮಾತ್ರೆಗಳ ಗಣವಾಗಿ ಬಿಡುವ ಸಾಧ್ಯತೆಯೇ ಅಧಿಕವಾಗಿದ್ದರೂ ಒಂದು ವಿಶೇಷ ಸಂದರ್ಭದಲ್ಲಿ ಅವುಗಳಿಗೂ ಉಪಯೋಗವುಂಟು. ಅಂಥ ಸಂದರ್ಭ ಯಾವುದು ಎಂಬುದನ್ನು ಕುರಿತು ಮುಂದೆ ಎಂಟನೇ ಟಿಪ್ಪಣಿಯಲ್ಲಿ ಬರೆಯಲಾಗುತ್ತದೆ. ಮೇಲೆ ಕೊಟ್ಟಿರುವ ರಚನೆಗಳಲ್ಲಿ ಎಲ್ಲವಕ್ಕೂ ಬಿಡಿಬಿಡಿಯಾದ ಸಾಲುಗಳನ್ನು ಉದಾಹರಣೆಗಳನ್ನಾಗಿ ಕೊಡುವ ಬದಲು, ಹತ್ತನೇ ಉಲ್ಲಾಸದಿಂದ ಅರವತ್ತು ಸಾಲುಗಳ (ಪು. ೪೪–೪೬, ೧೧೯–೧೭೮) ಒಂದು ಖಂಡವನ್ನು ಕೊಟ್ಟಿದೆ. ಇದರಿಂದ ಎಲ್ಲಾ ಸಾಧ್ಯತೆಗಳಿಗೂ ಉದಾಹರಣೆಗಳನ್ನು ಕೊಟ್ಟಂತೆ ಆಗದಿದ್ದರೂ ಚಿಂತೆಯಿಲ್ಲ. ಈ ಛಂದೋಬಂಧದ ಗತಿಯನ್ನು ಸವಿಯಲು ಇದೇ ಉತ್ತಮ ಮಾರ್ಗ. ಕೆಳಗಿನ ಸಾಲುಗಳಲ್ಲಿ ಗಣವಿಭಜನೆಯನ್ನು ಪ್ರತಿಗಣದ ಕೆಳಗೆ ಕೊಟ್ಟಿರುವ ಸಂಖ್ಯೆಯಿಂದ ತೋರಿಸಲಾಗಿದೆ. ಎರಡು ಮಾತ್ರೆಯ ತುಂಡನ್ನು ಬೇರೆಯಾಗಿಯೇ ತೋರಿಸಿದೆ. ಅದು ಯಾವ ಐದು ಮಾತ್ರೆಗಳ ಗಣಕ್ಕೆ ಅಂಟಿಕೊಂಡು ಬಂದಿದೆ ಎಂಬುದನ್ನು ಅದರ ಹಿಂದೆ ಅಥವಾ ಮುಂದೆ ಇರುವ ಚುಕ್ಕಿ ತೋರಿಸುತ್ತದೆ. ಚುಕ್ಕಿ ಹಿಂದಿದ್ದರೆ, ಹಿಂದಿರುವ ಐದು ಮಾತ್ರೆಗಳ ಗಣದ ಜೊತೆಗೂ ಮುಂದಿದ್ದರೆ ಮುಂದಿರುವ ಐದು ಮಾತ್ರೆಗಳ ಗಣದ ಜೊತೆಗೂ ಬರುತ್ತದೆ ಎಂದು ತಿಳಿದುಕೊಳ್ಳಬೇಕು. ಮುಂದೆ, * ಎಂದು ಗುರುತಿಸಿರುವ ಸಾಲುಗಳು ಇಪ್ಪತ್ತನಾಲ್ಕು ಮಾತ್ರೆಯವುಗಳಲ್ಲ.

ಕಾನನದ

ದುರ್ಗಮ ಗಭೀರೈಕಾಂತ ಸ್ಥಲಗಳನು ಶೋಧಿಸುತ *

೪ ೫ ೪ ೫ ೫

ಸಂಚರಿಸುತಿರಲೊಮ್ಮೆ ಕಂಡನಾ ವನವಾರ್ಗ ಕೋವಿದ

೫ ೫ ೫ ೫ ೪

ನೊಂದು ಪೇರಾಲವನು, ಬೃಂದಾವನದ ತರುರಾಜನನು

೫ ೫ ೨.೫ ೨.೫

ತನ್ನ ನೋಟದ ಹರವನೆಲ್ಲವ ಹೀರುತಿಹ ಬಿತ್ತರದ

೫ ೫ ೪ ೫ ೫

ಬಾನೆ ತನ್ನಾಕಾರದೊಳಗೀ ಹಸುರಿನೆಲೆ ಮಾಡವನು

೫ ೫ ೪ ೫ ೫

ಸಮೆದು ತನ್ನೊಳಬಾಗಿಗಿನ್ನೊಂದ ಜೋಡಣೆಗೈದುದೋ

೫ ೫ ೫ ೪ ೫

ವಾಮನಂ ಬಾನಳೆಯೆ ಪಾದವನೆತ್ತಿಹನೊ, ಮಾರುತಂ

೫ ೫ ೪ ೫ ೫

ಕೂಜಿತ ಪೂಜಿತಂ ಪರ್ಣಮರ್ಮರಲೋಲುಪಂ ರಾಸ-

೪ ೫ ೫ ೫ ೫

ಲೀಲಾಸಕ್ತನೀ ತರುವ ಬಿಡಲರಿಯದಲ್ಲಿಯೆ-ಬೀಡ

೪ ೫ ೫ ೫ ೫

ಬಿಟ್ಟಿಹನೊ ಎನಲೆಸೆವುದನು. ನೋಡಿ ತಣಿಯನು ಕೃಷ್ಣನದ.

೫ ೨. ೫ ೫ ೨. ೫

ತನ್ನಳವಿನೊಳೆ ತನ್ನನೆತ್ತುತ ಬೆಳೆದ ಮಾಸತ್ವವನು,

೫.೨ ೫ ೫ ೨.೫

ಸಾಸಿರಗಂಬಗಳ ಕರುಮಾಡವನು, ನಿತ್ಯದುತ್ಸವದ

೪ ೫ ೫ ೫ ೫

ಖಗನಗರವನು. ತಾನೂರೆ ತಳವುಂಟೆಂಬ ನಿಶ್ಚಿತವ

೨.೫ ೫ ೨.೫ ೫

ನೆಂತೆಯೊ ತಳೆದು, ತಾಯ್ಮೊಲೆಗೆ ತವಿಸಿ ಕರು ಮಿಣಿ ತುಯ್ವಂತೆ

೨. ೫ ೫ ೫ ೨. ೫

ನೆಲವನೆ ನಿಟ್ಟಿಸುತ ಮೃತ್ತೃಷೆಯ ಪ್ರಕಟಿಸುತಲಾ ಮರದ

೪ ೫ ೫ ೫ ೫

ನಿಡುರೆಂಬೆಯಿಂದೆಳಲುವಿಳಬಿಳಲುಗಳ ಕೋಮಲಾಗ್ರವ

೨.೫ ೫ ೫ ೫.೨

ಮುಟ್ಟಿ ಮುಟ್ಟಿಯರೆ ಮರುಕದೊಳು ನೇವರಿಸಿ ತಣಿಯನು *
೩ ೫ ೫ ೫ ೪
ತಾನುಳಿಯಲೋ ತನ್ನ ಬಾಳ್ವೆಯ ಬಿತ್ತರಂ ಬಳೆಯಲೋ
೨.೫ ೫ .೨ ೫ ೫
ನಾಡಸತ್ತ್ವಂ ಮಹಾಹವದ ಮುಂಚೂಣಿಯೊಳು ಎಳೆಯರ
೫ ೫ ೫ ೫ ೪
ದೂಡುವಂತಿದು ನವಿರೆಳೆಯ ಮೂಲಂಗಳನು ಮರುಗದೆಯೆ
೫.೨ ೫ ೫ ೨.೫
ಅಟ್ಟಿಹುದಲಾ ಗಟ್ಟಿನೆಲವನು ಕೊರೆದು ಕಳವನು ಗೆಲ್ಲೆ !
೨.೫ ೫.೨ ೫ ೫
ಭಾಪುರೆ ಬಿಳಲೆ, ಎನ್ನುತಾ ಸಾಹಸಕೆ ತಲೆದೂಗುವನು.
೨.೫ ೫ ೫ ೨.೫
ಬೇರೆ ಮರಗಳ ಬೃಹತ್ಕಾಂಡವಿವೆಂಬ ಪರಿಯೊಳು ನಿಂತ
೫ ೫.೨ ೨. ೫ ೫
ತದಗ್ರಜರ ಜಯವಿಕ್ರಮಕೆ ಬಲು ಮೆಚ್ಚುವನು. ಮೆರೆದಿರೆ
೫ ೫ ೫ ೫ ೪
ಬುಡಬುಡ ಮೇಳದೊಳು ಮೂಲಕಾಂಡ ಶಾಖಾನ್ಯಶಂಸ್ಯಂ
೨.೫ ೫ ೫.೨ ೫
ಬಲು ತಾಳಿನೊಂದೆ ಮರದೀ ತರುವನಕೆ ಮರುಳಪ್ಪನವ.
೫ ೫ ೨.೫ ೨.೫
ತಿರೆನಭಗಳೆರಡನು ಹೀರಿಯಪ್ರತಿಮ ಜೀವೇಚ್ಛೆಯನು
೪ ೫ ೫ ೫ ೫
ಬಹುಗಾಢ ಭಾವದಿಂ ಮೂರ್ತೀಕರಿಸುವೊಲು ನಿಂತಿರುವ
೫ ೫ ೪ ೫ ೫
ಮೋಡವ ಸೆಳೆದು ಬಿಸಿಲನು ತಡೆದು ತಣುವೆರೆದು ತಂಪಾಳ್ವ
೪ ೫ ೫ ೫ ೫
ವೃಕ್ಷವಿದ ಕಾಣುತಾ ಗೋವಿಂದನತಿ ವಿಸ್ಮಯಂ ತಳೆದು *
೫ ೫ ೫ . ೫ ೫
ನಸುಭೀತಿಯೊಳು ಮನಗಾಂಬನದಕೌದಾಸೀನ್ಯವನು. *
೨.೫ ೫ ೨.೪ ೫
ಆಶ್ರಿತವೊನಾಶ್ರಿತವೊ ತದಿತರ ಜೀವೌಘ ವಿಷಯದೊಳು
೫ ೫ ೪ ೫ ೫

ತಳಿರೆಳೆ ಹಸುರಿನಿಂ ಶುಕ ಚಂಚುವರ್ಣ ಶಿಕ್ಷಾಚಾರ್ಯ
೪ ೫ ೫ ೫ ೫
ಫಲರಕ್ತಿಮೆಯಿನಪ್ಪುಗೆಯು ಪಲಬಗೆಯ ಬಳ್ಳಿಯಿಂ *
೩.೫ ೫ ೫ ೫
ದಟ್ಟ ಕಪ್ಪೆಲೆ ತುರುಗಲಿಂದಚಲಾಗ್ರಮಂಡಿತ ಘನಂ
೫.೩ ೫ ೫ ೫.೩
ಮಳೆಬಿಲ್ಲ ತಳೆದೆಸೆವ ಪರಿಯಂ ಮೆರೆಯಲಾ ಸ್ಥಾವರಂ
೫ ೫ ೪ ೫ ೫
ಬಾನ ಕಾವಣದಾಸರೆಯ ನಿಡುಗಂಬವೋ ಭಾಸ್ಕರನು
೫.೩ ೫.೩ ೫ ೫
ಮುಳುಮುಳುಗೀಸಿ ಬಹ ಹೇರಾಳದಚ್ಛೋದ ಸರಸಿಯೋ
೪ ೫ ೫ ೫ ೫
ಕಾಪಿನವ ತೆರವುಗೊಡಲಂತಿಂತರ ಮನೆಯೊಳಿಣುಕುತಿಹ
೫ ೫.೩ ೩.೫ ೫
ಕೃಪಣ ಜನದೋಲನಿಲ ದಾಕ್ಷಿಣ್ಯದಿಂ ತುಸ ತೆರೆದೆಡೆಯೊ–
೫ ೫.೩ ೫.೩ ೫
ಳಲ್ಲಲ್ಲಿಯಾಗಸದ ತಾರಾಕ್ಷಿಗಳ್ ತಾವಿಣುಕುತಿಹ
೫ ೫ ೫.೩ ೩.೫
ಬಹು ಖುದ್ಧಿಯಿಂ ಕೊರ್ವಿದುಪ್ಪರಿಗೆಯೋ ಎನುತ ಕೃಷ್ಣಂ
೩ ೫ ೫ ೫ ೫.೩
ಬಲಬಹನದನು. ಕಾಂಡಗಳನೆಣಿಸುವನು. ಇದೆ ಗೋವಳರ
೩.೫ ೫ ೫ ೩.೫
ಮಾತುಕತೆಯೊಳು ಬರುವ ಮರ ಭಾಂಡೀರ, ನಾನೆ ಮೊದಲಿಗ–
೫.೩ ೫ ೫ ೩.೫
ನಿದಕಂಡು ಗುರುತಿಸೆ, ಇದುವೆ ಸೈ, ಬಿಸಿಲಿಳಿಯದಿಹ ನೆಳಲ
೫ ೪ ೫ ೫ ೫
ಬಲು ಬಿತ್ತರದ ಕಂಬ ಸಾಲುಗಳದ ಮನ ಬಂದಂತೆ
೩.೫ ೫ ೫ ೩.೫
ಮುಂದೆ ಹಿರಿಯರ ಕಣ್ಮರೆಸಿ ನಾವಾಡುವಾಡುಂಬೊಲಂ
೫.೩ ೫ ೫ ೫.೩
ಎಂದುಲ್ಲಸದೊಳದ ಭಾವಿಸುತ ಬಿಳಲೊಂದ ಪಿಡಿದೇರಿ
೩.೫ ೩.೫ ೫ ೫

ಕುಳ್ಳಿರುತಲ್ಲಿ ಕೊಳಲಂ ದನಿಸುವನು ಬಿತ್ತರಿಸೆ ಮೌನ–
೪ ೫ ೫ ೫ ೫
ವಾ ಮರದಾಳದೊಳು, ಮಿಗವಕ್ಕಿಗಳ ಕೊರಳಗಾವರವ
೨.೫.೨ ೫ ೫
ಸರದಿಂಪಿನಿಂ ತವಿಸಿ, ಇದೆ ತಾಣ ತನ್ನೀ ವೇಣುವನು
೫ ೫ ೫ ೪ ೫
ಹೃದಯಾನಂದನಾಲವನು ಬಸಗೈಯಲೆಂದು ಮುರಲೀ–
೪ ೫ ೫ ೫ ೫
ಧಾರಿಯಾ ತರುರಹಸ್ಯವ ಹೊರಬಿಡದೆ ಅದ ಸೇವಿಸುತ
೫ ೫.೨ ೫ ೨.೫
'ಪವನಾಭೋಗಧರ'ವಾ ದ್ರುಮವು ತನ್ನ ಕಲಿಕೆಯ ಕೊಳಲ
೨. ೫.೨ ೫ ೫ ೫
ಕೇಳಿಸದು ಹೊರಲೋಕಕೆಂಬುದನಂತು ಕೆಲದಿನದೊಳೇ
೫ ೫ ೪ ೫ ೫
ಸಿದ್ಧಿಯ ಪಡೆದು ಮನಬಂದಂದು ಸರದೊಳು ಮುಳುಗಿ ತನ್ನ
೨. ೫ ೨.೫ ೫ ೫
ತವರಿನ ಪಡುಗಡಲ ಹಾಸಿನೊಳು ಮಲಗಿ ಬಿಡುತೆಯ ಪಡುತ
೪ ೫ ೫ ೫ ೫
ಆ ಸೊಗದಾಣದಾನಂದವನು ತನಗೊಲಿದ ಸುಹೃದರಿಗೆ
೨. ೫ ೫.೨ ೫ ೫
ಕೃತಹೃದಯರಿಗೆ ತೆರಲು ಕಾದಿರ್ದನಾ ಶುಭಮುಹೂರ್ತಕೆ
೨. ೫ ೫ ೫ ೫.೨
ಎಳಗೋವಳಂ—ನೆನೆದದನು ಕರಗದಾವನ ಕಾವಳಂ !
೨.೫ ೫ ೫.೨ ೫

೭. ಮೇಲೆ ಮೂರನೇ ಟಿಪ್ಪಣಿಯಲ್ಲಿ ಹೇಳಿದ ವಿಶಿಷ್ಟ ಲಕ್ಷಣವೆಂದರೆ, ಐದು ಮಾತ್ರೆಗಳ ಗಣಗಳೊಡನೆ ನಾಲ್ಕು ಮಾತ್ರೆಗಳ ಗಣವೊಂದನ್ನು ಬಳಸಿರುವುದೇ. ಈ ಗಣದ ಬಳಕೆಯಿಂದ ಉಂಟಾಗುವ ಸೊಗಸು ಅನುಭವೈಕವೇದ್ಯ. ಆದರೂ ಆ ಸೊಗಸು ಎಂತಹುದೆಂಬುದನ್ನು ಪರೋಕ್ಷವಾಗಿ ತೋರಿಸಿಕೊಡಲು ಪ್ರಯತ್ನಿಸಬಹುದು. ಕೆಳಗೆ ಎಂಟು ಜೊತೆ ಸಾಲುಗಳನ್ನು ಕೊಟ್ಟಿದೆ. ಈ ಜೋಡಿಗಳಲ್ಲಿ ಎರಡನೆಯದು "ಶ್ರೀ ಹರಿಚರಿತೆ"ಯಿಂದ ಎತ್ತಿಕೊಟ್ಟಿರುವ ಸಾಲು ; ಮೊದಲನೆಯದು ಆ ಸಾಲಿನಲ್ಲಿ ಬಂದಿರುವ ನಾಲ್ಕು ಮಾತ್ರೆಗಳ ಗಣವನ್ನು ಅಲ್ಪ

ವ್ಯತ್ಯಾಸದಿಂದ ಐದು ಮಾತ್ರೆಗಳ ಗಣವನ್ನಾಗಿ ಪರಿವರ್ತಿಸಿ ರಚಿತವಾದದ್ದು. ಇಲ್ಲೂ ಇನ್ನು ಮುಂದೆಯೂ ಬಿಡಿ ಸಾಲುಗಳನ್ನು ಉದಾಹರಣೆಗಳನ್ನಾಗಿ ಕೊಟ್ಟಾಗ ಅವುಗಳ ಸ್ಥಾನ ನಿರ್ದೇಶನವನ್ನು ಪುಟದ ಸಂಖ್ಯೆ. ಉಲ್ಲಾಸದ ಸಂಖ್ಯೆ, ಸಾಲಿನ ಸಂಖ್ಯೆ–ಈ ಕ್ರಮದಲ್ಲಿ ಕೊಡಲಾಗಿದೆ.

(೧) ಇಂದೆ ತಾ ಮೂಡಿದೊಲು ತೋರುತಿಹ ಚುಕ್ಕಿಯೊಲು ಹೊಳೆವುದೀ
೫ ೫ ೫ ೫ ೫
ಇಂದೆ ತಾ ಮೂಡಿದೊಲು ತೋರುವ ಚುಕ್ಕಿಯೊಲು ಹೊಳೆವುದೀ
೫ ೫ ೪ ೫ ೫
(....) (೭.೧.೨೯)

(೨) ಮರುಗಿ ಅರ್ತಿಸಿ ಸೆಣಸಿ ಪೂಜಿಸುತ ವಿನಯದೊಳು ಬಾಗುತ್ತ
೫ ೫ ೫ ೫ ೫
ಮರುಗಿ ಅರ್ತಿಸಿ ಸೆಣಸಿ ಪೂಜಿಸಿ ವಿನಯದೊಳು ಬಾಗುತ್ತ
೫ ೫ ೪ ೫ ೫ (೪.೧.೮೪)

(೩) ಶ್ರೀಹರಿಯ ಪದಯುಗವ ಪಿಡಿದು ನೀ ದೃಢವಾಗು ಚಲಮನವೆ
೫ ೫ ೫ ೫ ೫
ಶ್ರೀಹರಿಯ ಪದಯುಗ ಪಿಡಿದು ನೀ ದೃಢವಾಗು ಚಲಮನವೆ
೫ ೪ ೫ ೫ ೫ (೧೨೦.೨೨.೧)

(೪) ಒಂದೊಂದು ವಾದ್ಯದೊಳಗೊಂದೊಂದು ಸವಿಗರೆಯುವಿಂಚರಂ
೫ ೫ ೫ ೫ ೫
ಒಂದೊಂದು ವಾದ್ಯದೊಳಗೊಂದೊಂದು ಸವಿಗರೆವಿಂಚರಂ
೫ ೫ ೫ ೪ ೫ (೪೨.೧೦.೫೪)

(೫) ಬಿಡುಗಡೆಯೊ ಅಲ್ಲೆ ಬೃಂದಾವನಂ ದಿವ್ಯಗಾನಾಶ್ರಯಂ
೫ ೫ ೫ ೫ ೫
(ಎಲ್ಲಿ) ಬಿಡುಗಡೆ ಅಲ್ಲೆ ಬೃಂದಾವನಂ ದಿವ್ಯಗಾನಾಶ್ರಯಂ
೪ ೫ ೫ ೫ ೫ (೪೧.೧೦.೧೮)

(೬) ಎಮ್ಮವನೆಯಾದನಿವನಬ್ಬ, ಏಂ ಸವಿಗರೆದ ಕೊಳಲಿಂದ
೫ ೫ ೫ ೫ ೫
ಎಮ್ಮವನೆಯಾದನಿವನಬ್ಬ, ಏಂ ಸವಿಗರೆದ ಕೊಳಲಿಂ (೬೩.೧೪.೧೫)
೫ ೫ ೫ ೫ ೪

(೭) ಶಿಶುಬಲಿಯ ಕೊಡುಕೊಡುತ ಬಲಿದು ಕರ್ಕಶವಾಗಿ
ಮರ್ಮವನು ಭೇದಿಸುವ
೫ ೫ ೫ ೫ ೫

ಶಿಶುಬಲಿಯ ಕೊಡೆಕೊಡೆ ಬಲಿದು ಕರ್ಕಶವಾಗಿ ಮರ್ಮವ ಭೇದಿಸುವ
೫ ೪ ೫ ೫ ೪ ೫
(೧೬.೪.೨೮)

(೮) ಮಿಲಮಿಲನೆ ಮಿಡುಕಾಡುತಿರ್ದುದಹ ಬಾನುಲಿಯ ಹೆಬ್ಬಾವ ಹಿಡಿತದೊಳು
೫ ೫ ೫ ೫ ೫ ೫

ಮಿಲಮಿಲನೆ ಮಿಡುಕಾಡುತಿರ್ದುದು ಬಾನುಲಿಯ ಹೆಬ್ಬಾವ ಹಿಡಿತದಿ
೫ ೫ ೪ ೫ ೫ ೪
(೧೪.೪.೨೭)

ಪ್ರತಿ ಜೋಡಿಯಲ್ಲೂ ನಮಗೆ ಬಳಕೆಯಾಗಿರುವ ರಚನೆಯಿರುವ ಮೊದಲನೆಯ ಸಾಲು ಸರಾಗವಾಗಿ ಓಡುತ್ತದೆ ಎಂದೂ ಎರಡನೆಯ ಸಾಲು ಕುಂಟುತ್ತದೆಯೆಂದೂ ಎನಿಸಿದರೆ ಆಶ್ಚರ್ಯವಿಲ್ಲ. ಪರಿಚಿತವಾದ ವ್ಯವಸ್ಥೆಯಿಂದ ದೊರಕುವ ನೆಮ್ಮದಿಯ ಜಾಡಿನಲ್ಲಿರುವವರಿಗೆ ಅಪರಿಚಿತವಾದುದನ್ನು ಎದುರುಗೊಂಡಾಗ ಏನೋ ಭಂಗವಾಗಿದೆಯೆಂದೆನಿಸಬಹುದು. ಆದರೆ ಈ 'ಭಂಗ'ದ ಭಂಗಿಯನ್ನು ಪರಿಭಾವಿಸಿದರೆ, ಅದರಲ್ಲೇ ಸೊಗಸು ಕಾಣುವುದನ್ನು ಕಲಿತುಕೊಳ್ಳಲು ಸಾಧ್ಯವಾಗುತ್ತದೆ. "ಎಂಥ ಕುಂಟೇ ಆಗಲಿ, ಬಳಕೆಯಾಗಿಬಿಟ್ಟರೆ ಅದೂ ಬಳುಕು ಎನ್ನಿಸಿಬಿಡುತ್ತದೆ" ಎಂಬ ಕುಹಕೋಕ್ತಿಗೆ ಇಲ್ಲಿ ಅವಕಾಶವಿದೆ, ನಿಜ. ಆದರೆ ಕುಹಕೋಕ್ತಿಗಳಿಂದ ಹರಿಹರ ಬ್ರಹ್ಮರೂ ತಪ್ಪಿಸಿಕೊಳ್ಳುವಂತಿಲ್ಲ. ಇಲ್ಲಿ "ಬಳಕೆಯಾಗಿಬಿಡುವುದು" ಕುಂಟೋ, ಬಳುಕಾಗಿದ್ದರೂ ನಮಗೆ ಅಪರಿಚಿತವಾದ್ದರಿಂದ ಕುಂಟೆನಂತೆ ತೋರುವ ಕುಂಟೋ ಎಂದು ನಮ್ಮನ್ನು ನಾವೇ ಕೇಳಿಕೊಳ್ಳಬೇಕು.

ಎಷ್ಟು ಹೇಳಿದರೂ ಅಷ್ಟೇ, ಇಷ್ಟು ಸಾಕು : ಭೃಂಗಿಗೆ ಮೂರು ಕಾಲುಗಳಂತೆ. ಅವನು ನರ್ತಿಸುವಾಗ ತನ್ನ ಮೂರನೆಯ ಕಾಲನ್ನು ಇಡುವಾಗಲೆಲ್ಲಾ ಅನಭಿಜ್ಞರಿಗೆ ತಾಳ ತಪ್ಪಿತು ಎಂದೆನಿಸಿದರೂ, ತಿಳಿದವರಿಗೆ ವಿಚಿತ್ರವಾದ ಅನಿರೀಕ್ಷಿತವಾದ ಗತಿಯೊಂದರ ಅನುಭವವಾಗುತ್ತದೆಯಂತೆ. 'ಶ್ರೀಹರಿಚರಿತೆ'ಯಲ್ಲಿ ಬಳಕೆಯಾಗಿರುವ ನಾಲ್ಕು ಮಾತ್ರೆಗಳ ಗಣದ ಬಳಕೆಯ ಪರಿಣಾಮವು ಇದೇ ರೀತಿಯದು, ಈ ಚತುರ್ಮಾತ್ರಾ ಗಣವೇ ಭೃಂಗಿಯ ಮೂರನೆಯ ಕಾಲು ಎಂದು ಈ ಸಂದರ್ಭದಲ್ಲಿ ಹೇಳಬೇಕು.

೮. ಮೇಲೆ ಆರನೇ ಟಿಪ್ಪಣಿಯಲ್ಲಿ ಎರಡು ಮಾತ್ರೆಗಳ ತುಂಡುಗಳ ಬಗೆಗೆ ಮತ್ತೆ ಪ್ರಸ್ತಾವಿಸುವುದಾಗಿ ಬರೆಯಲಾಗಿತ್ತು. ಆ ವಿಷಯವನ್ನೂ, ಗಣ ವಿಭಜನೆಯಲ್ಲಿ ನಾನು ಅನುಸರಿಸಿರುವ ಸೂತ್ರಗಳನ್ನೂ ಕುರಿತು ಬರೆಯಬೇಕು. ಈ ಸೂತ್ರಗಳು ಸಾಮಾನ್ಯವಾದುವುಗಳು. ಅವುಗಳನ್ನು ಮೀರಬೇಕಾದ ಸಂದರ್ಭಗಳೂ ಬರಬಹುದು.

(೧) ಪಾದದ ಆದಿಯಲ್ಲಿ ೨ ೨ ೫ ಎಂಬ ಆನುಪೂರ್ವಿಯಾಗಲಿ, ಅಂತ್ಯದಲ್ಲಿ ೫ ೨ ೨ ಎಂಬ ಆನುಪೂರ್ವಿಯಾಗಲಿ ಬರಲೇಬಾರದು. ಎರಡು ಮಾತ್ರೆಗಳ ತುಂಡು

ಯಾವುದಾದರೂ ಒಂದು ಪಂಚಮಾತ್ರಾ ಗಣಕ್ಕೆ ಅಂಟಿಕೊಂಡು ಬರುವುದರಿಂದ ಪಾದದ ಆದಿಯಲ್ಲಿ ಮೊದಲನೆಯ ಎರಡು ಮಾತ್ರೆಯ ತುಂಡೂ, ಪಾದದ ಅಂತ್ಯದಲ್ಲಿ ಕಡೆಯ ಎರಡು ಮಾತ್ರೆಯ ತುಂಡೂ ತಬ್ಬಲಿಗಳಾಗುತ್ತವೆ. ಆದ್ದರಿಂದ ಇಂಥ ಕಡೆಗಳಲ್ಲೆಲ್ಲಾ ೪ ೫ ಎಂದೋ ೫ ೪ ಎಂದೋ ಗಣವಿಭಜನೆಯಾಗಿರುತ್ತದೆ. ಉದಾಹರಣೆಗಳು :

ಬಾಲವ ಹಿಡಿದು ಕೊರಲವುಕಿ ಶ್ರೀಕೃಷ್ಣ ಹೆಡೆ ತುಳಿವುದಂ
೪ ೫ ೫ ೫ ೫ (೧೦೧.೧೮.೧೩೬)
ತುರುಗಲಿಗೆ, ಥಳಗುಟ್ಟಿ ಧುಮುಕಿತೀ ಕೆಳಗರಿಕೆ ಹಸರದ (೪೮ ೧೧.೩೬)
೫ ೫ ೫ ೫ ೪

(೨) ಪಾದದ ಮಧ್ಯದಲ್ಲಿ ಎರಡು ಮಾತ್ರೆಗಳ ತುಂಡುಗಳು ಒಂದಾದ ಮೇಲೊಂದು ಬರುವಂತಿರುವ ಸಂದರ್ಭಗಳಲ್ಲೆಲ್ಲಾ ೫ ೨ ೨ ೫ ಎಂಬ ವಿನ್ಯಾಸ ಕಂಡು ಬರುತ್ತದೆ. ಇಂಥ ಸಂದರ್ಭಗಳಲ್ಲಿ, (ಅ) ೨ ೨ ಎಂಬ ಆನುಪೂರ್ವಿ ಸ್ವತಂತ್ರವಾದ ಪದವೂ ಆಗಿದ್ದರೆ ಅಥವಾ (ಇ) ಮೊದಲನೆಯ ಪಂಚಮಾತ್ರಾಗಣದ ಅಂತ್ಯಾಕ್ಷರವು ಸ್ಪಷ್ಟವಾಗಿ ಪದದ ಅಂತ್ಯಾಕ್ಷರವೂ ಆಗಿದ್ದರೆ, ಅಥವಾ (ಉ) ಎರಡನೆಯ ಪಂಚ ಮಾತ್ರಾ ಗಣದ ಆದ್ಯಕ್ಷರವು ಸ್ಪಷ್ಟವಾಗಿ ಪದದ ಆದ್ಯಕ್ಷರವೂ ಆಗಿದ್ದರೆ ೨ ೨ ಎಂಬ ಆನುಪೂರ್ವಿಯನ್ನು ೪ ಮಾತ್ರೆಯ ಗಣವೆಂದು ಪರಿಗಣಿಸುವುದು ಮೇಲು. ಈ ಮೂರರಲ್ಲಿ ಯಾವುದೊಂದೂ ಆಗಿರದಿದ್ದರೆ, ೫.೨ ೨.೫ ಎಂಬ ವಿಭಜನೆ ಮೇಲು. ಉದಾಹರಣೆಗಳು :

(ಉ) ಗರಕಾರಿ ಕಾಳಿಂಗಸರ್ಪಂ ಕುಸಿವುದಂ, ಪರಿವಾರ (೧೦೧.೧೮.೧೩೭)
೫ ೫ ೪ ೫ ೫
(ಅ) ಮೊರೆವುದಂ, ಕನಿಕರಿಸಿ ಮಾಧವಂ ಬದುಕಲು ಬಿಡುವುದಂ
೫ ೫ ೫ ೪ ೫ (೧೦೧.೧೮.೧೩೮)
(ಇ) ನಗುತುಳುಕೆ ತುಟಿಯೊಳಗೆ ನಯನದೊಳಾಡೆ ಗೆಲವಿನ ಹೊಳವು
೫ ೫ ೪ ೫ ೫
(೧೦೨ ೧೮.೧೭೨)
ನುಡಿಕೊಂಡುದಾ ವಿಷಧರ ಭಾಮಿನೀವೃಂದ ಸಿರಿಹರಿಗೆ
೫.೨ ೨.೫ ೫ ೫ (೧೦೦.೧೮.೧೦೯)

ಮೇಲೆ ಕೊಟ್ಟ ದೀರ್ಘ ಉದ್ಧರಣದಲ್ಲೂ ಮತ್ತಷ್ಟು ಉದಾಹರಣೆಗಳು ಬೇಕಿದ್ದರೆ ಸಿಕ್ಕುತ್ತವೆ.

(೩) ಪದವನ್ನು ಒಡೆದದ್ದರಿಂದ ಆ ಪದದ ತುಂಡುಗಳು ಎರಡು ಸಾಲುಗಳ ಅಂತ್ಯಾದಿಗಳಲ್ಲಿ ಬರುವಂತೆ ರಚನೆಯಾಗಿದ್ದರೆ, ಹಿಂದಿನ ಸಾಲಿನಲ್ಲಿರುವ ಪದದ

ತುಂಡೋ ತುಂಡಿನ ಭಾಗವೋ ಎರಡು ಮಾತ್ರೆಯ ತುಂಡಾಗಿರದಂತೆ ಎಚ್ಚರವಹಿಸ ಬೇಕು. ಆ ಸಾಲು ಐದು ಮಾತ್ರೆಗಳ ಗಣದಿಂದಲೋ ನಾಲ್ಕು ಮಾತ್ರೆಯ ಗಣ ದಿಂದಲೋ ಮುಗಿಯುವಂತೆ ವಿಭಜಿಸಬೇಕು. ಹಿಂದಿನ ಸಾಲಿನಲ್ಲಿರುವ ಪದದ ತುಂಡೋ ತುಂಡಿನ ಭಾಗವೋ ಸಮಾಸದ ಪೂರ್ವಪದವಾಗಿದ್ದರೆ ವಿನಾಯಿತಿಯುಂಟು. ಕಾವ್ಯವನ್ನು ಪಠಿಸುವಾಗ ಹಿಂದಿನ ಮುಂದಿನ ಸಾಲುಗಳಲ್ಲಿ ಹಂಚಿಹೋದ ಪದದ ತುಂಡುಗಳನ್ನು ಸೇರಿಸಿಕೊಂಡೇ ಪಠಿಸುವುದಾದರೂ, ಗಣ ವಿಭಜನೆ ಸಾಲಿನ ಪರಿಮಿತಿ ಯಲ್ಲೇ ನಡೆಯುವಂಥದು ಎಂಬುದನ್ನು ಮರೆಯಬಾರದು. ಉದಾಹರಣೆಗಳು :

ತಣಿವುದಂ, ಬಲರಾಮನವಿಂತಬಲವಂ, ಧೇನುಕನ ಹೊಗ (ಲರಿದೆನಿಪ)
೫ ೫ ೫.೨ ೨.೫ (೬೪.೧೪.೪೧)

ದುಷ್ಟಜನ ಶಿಕ್ಷಣಂ ಹಗೆಯೊಲವಿರದೆ ನಡೆವುದಾವನಿ (ನವನೆ ಸತ್)
೫ ೫ ೫ ೫ ೪ (೯೭ ೧೮.೨೧)

ಎಲ್ಲಿಹುದು ಬೃಂದಾವನಂ ಮಹಾವೃಕ್ಷಾಶಯಂ ಬಲ-(ರಾಮ)
೫ ೨. ೫ ೫ ೫ ೨. (೪೦.೧೦.೧)

ಸರ್ವಮಂಗಳವಲಾ ಪ್ರಕೃತಿಮೂಲಂ ಆನಂದ ಪರಿ-(ಚಾಲಕಮೆಂಬೆ)
೫ ೫ ೫.೨ ೫.೨ (೯೭.೧೮.೨೮)

(೪) ಗಣ ವಿಭಜನೆಯಾಗುವಾಗ ಪದಗಳನ್ನು ಒಡೆಯಲೇಬೇಕಾಗುತ್ತದೆ. ಈ ಒಡೆಯುವಿಕೆ ಸ್ವಾಭಾವಿಕವಾಗಿಯೂ ಹಿತಕರವಾಗಿಯೂ ಇರುವುದು ಮೇಲು.

ಇದಕ್ಕೆ ಬೇರೆಯಾಗಿ ಉದಾಹರಣೆಗಳನ್ನು ಕೊಡಬೇಕಾಗಿಲ್ಲ. ಮೇಲಿನ ದೀರ್ಘ ವಾದ ಉದ್ಧರಣದಲ್ಲೇ ಬೇಕಾದಷ್ಟು ಉದಾಹರಣೆಗಳು ಸಿಕ್ಕುತ್ತವೆ.

(೫) ವಿಷಮಗಣಗಳು ಬಾರದಂತೆ ಗಣ ವಿಭಜನೆ ನಡೆದರೆ ಮೇಲು. ಈ ಸೂತ್ರವಿರುವುದು ನನ್ನ ತೃಪ್ತಿಗಾಗಿ ! ಕವಿಗಳಿಗೆ ವಿಷಮಗಣಗಳ ಬಳಕೆಯಲ್ಲಿ ಬಹಳ ಪ್ರೀತಿ. ಉದಾಹರಣೆಗಳಲ್ಲಿ ಎರಡು ರೀತಿಯ ವಿಶ್ಲೇಷಣೆಗಳನ್ನು ತೋರಿಸಿದೆ. ಸಾಲಿನ ಕೆಳಗೆ ತೋರಿಸಿರುವ ವಿಶ್ಲೇಷಣೆ ಮೇಲಿನದಕ್ಕಿಂತ ಉತ್ತಮ.

೫ ೪ ೫ ೫ ೫
ಸೆಡಕಳಿದು ಜೋಲುವ ತಲೆಗಳುರಗನಾಥಗೆ ಮರುಮರುಗಿ
೫ ೨. ೫ ೫.೨ ೫ (೧೦೦.೧೮.೧೦೮)

೫ ೫ ೫ ೫ ೫
ನೇಹ ಮೋಹಂಗಳನು ಮಂಗಳ ಗುಣಂಗಳ ಪರಿಮಿತಿಯು (೨.೧.೫೨)
೫ ೫ ೫ ೪ ೫

(೬) ಪಾದಮಧ್ಯದಲ್ಲಿ ಮುಗಿಯುವ ವಾಕ್ಯವು ೨ರ ತುಂಡಿನಿಂದಲೋ, ನಾಲ್ಕೋ ಐದೋ ಮಾತ್ರೆಗಳ ಗಣದಿಂದಲೋ ಮುಗಿಯುವಂತೆ ಗಣ ವಿಭಜನೆ ಯಾದರೆ ಮೇಲು. ಉದಾಹರಣೆಗಳು :

ಒಪ್ಪಿಸುವಂತೆ ತನ್ನಗೆಲವಂ. ತಲೆಯಲೆಯೆ ಕುರುಳೊಲೆಯೆ
ಳ ಖ ಖ ಖ ಖ (೧೦೨.೧೮.೧೬೧)
ಜೀವಿಪ ಭೀಕರಂ. ಕೃಷ್ಣನಿಂದಾಯಿತಿವಗುಪವಾಸ (೯೭.೧೮.೩೬)
ಳ ಖ ಖ ಖ ಖ
ಕೊಂಡಾಡಲೆನಗಳವೆ ? ನುತಿಯೇಕೆ ? ಶ್ರೀಹರಿಯನ್ಯನೇ ?
ಖ ಖ ಖ ಳ ಖ (೧೦೨.೧೮.೧೭೪)
ಎಂತಪ್ಪುದೀ ಜೀವ–
ಮಾನಂದಪಿಲಯಂ ? ಜನ್ಮದಿಂ ಕರ್ಮದಿಂ ತನುಜಾತಿ
ಖ ಳ ಖ ಖ ಖ (೧೦೨.೧೮.೧೦ಖ)

(೭) ಈ ಸೂತ್ರಗಳನ್ನು ಅನ್ವಯಿಸುವಾಗ ಮೂರನೆಯ ಸೂತ್ರಕ್ಕೂ ಐದನೆಯ ಸೂತ್ರಕ್ಕೂ ವಿರೋಧ ಕಂಡು ಬಂದರೆ ಮೂರನೆಯದೇ ಹೆಚ್ಚು ಬಲಶಾಲಿ ಎಂದು ಪರಿಗಣಿಸಬೇಕು. ಉದಾಹರಣೆಯಲ್ಲಿ ಎರಡು ರೀತಿಯ ವಿಶ್ಲೇಷಣೆಗಳನ್ನು ತೋರಿಸಿದೆ.

ಖ ೨. ಖ ಖ ಖ.೨
ಕಾಮವಂ ಶುಭನೆರೆವಂದ ಕೇಡೊಗೆಯದಂದವಂಕೆಯೊ (೪೮೩)
ಖ ೨ ಖ ಖ ೨ ಖ (೯೭.೧೮.೧೩)

ಮೇಲಿನ ವಿಶ್ಲೇಷಣೆ ಮೂರನೆಯ ಸೂತ್ರವನ್ನು ಮೀರುತ್ತದೆ. ಕೆಳಗಿನ ವಿಶ್ಲೇಷಣೆ ಐದನೆಯದನ್ನು ಮೀರುತ್ತದೆ. ಆದರೂ ಕೆಳಗಿನ ವಿಶ್ಲೇಷಣೆ ಸ್ವೀಕಾರ ಯೋಗ್ಯವಾಗುತ್ತದೆ.

ಮೇಲಿನ ಸೂತ್ರಗಳು ಇಪ್ಪತ್ತನಾಲ್ಕು ಮಾತ್ರೆಗಳಿರುವ ಸಾಲುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದವುಗಳು. ಇತರ ಸಂಖ್ಯೆಯ ಮಾತ್ರೆಗಳಿರುವ ಸಾಲು ಗಳಿಗೂ ಇವು ಬಹುಮಟ್ಟಿಗೆ ಅನ್ವಯವಾಗುತ್ತವೆ.

೯. ಇಪ್ಪತ್ತನಾಲ್ಕು ಮಾತ್ರೆಗಳನ್ನುಳ್ಳ ಸಾಲುಗಳನ್ನು ನಿರೂಪಣ ಸೌಲಭ್ಯ ಕ್ಕಾಗಿ 'ಮೂಲ'ವೆಂದು ಪರಿಗಣಿಸಿದ್ದರಿಂದ, ವಿವರವಾಗಿ ಅದರ ಎಲ್ಲಾ ಸಾಧ್ಯತೆಗಳನ್ನೂ ಮೇಲೆ ಆರನೇ ಟಿಪ್ಪಣಿಯಲ್ಲಿ ತೋರಿಸಲಾಯಿತು. ಪ್ರತಿಸಾಲಿನಲ್ಲೂ ಐದು ಮಾತ್ರೆ ಗಳ ಗಣಗಳ ಹಾಗೂ ನಾಲ್ಕು ಮಾತ್ರೆಯ ಗಣದ ಬಳಕೆಯಾಗುತ್ತದೆ, ಆ ನಾಲ್ಕು ಮಾತ್ರೆಯ ಗಣವೂ ಉಂಡೆಯಾಗಿ ಒಂದೇ ಕಡೆ ಬಾರದೆ ಎರಡೆರಡಾಗಿ ಒಡೆದು ಯಾವುದಾದರೂ ಐದು ಮಾತ್ರೆಗಳ ಗಣಕ್ಕೆ ಅಂಟಿಕೊಂಡು ಬರಬಹುದು ಎಂಬ ಸಾಮಾನ್ಯತತ್ತ್ವ ಹೊಳೆದ ಕೂಡಲೇ ಮಿಕ್ಕ (ಎಂದರೆ ಇಪ್ಪತ್ತೆಂಟು ಹಾಗೂ ಇಪ್ಪತ್ತಾರು ಮಾತ್ರೆಗಳಿರುವ) ಸಾಲುಗಳ ರಚನೆಯೂ ಹೊಳೆಯುತ್ತದೆ. ಆದ್ದರಿಂದ

ಅವುಗಳಲ್ಲಿ ಕಂಡುಬರುವ ಎಲ್ಲಾ ಸಾಧ್ಯತೆಗಳನ್ನೂ ವಿವರಿಸುವ "ಸಮಗ್ರ" ದೃಷ್ಟಿ ಮುಂದಿನ ಟಿಪ್ಪಣಿಗಳಲ್ಲಿಲ್ಲ.

೧೦. ಇಪ್ಪತ್ತೆಂಟು ಮಾತ್ರೆಗಳಿರುವ ಸಾಲುಗಳ ಗಣವಿಭಜನೆ ಹೀಗೆ: ಐದು ಮಾತ್ರೆಗಳ ಗಣಗಳು ನಾಲ್ಕು, ನಾಲ್ಕು ಮಾತ್ರೆಗಳ ಗಣಗಳು ಎರಡು. ನಾಲ್ಕು ಮಾತ್ರೆಗಳ ಗಣಗಳು ಎಲ್ಲಿ ಬೇಕಾದರೂ ಬರಬಹುದು. ಅವುಗಳು, ಹಿಂದೆಯೇ ನೋಡಿರುವಂತೆ, ಎರಡು ಎರಡಾಗಿ ಒಡೆಯಬಹುದು. ಸಾಧ್ಯತೆಗಳೆಷ್ಟು ಎಂಬುದನ್ನು ಓದುಗರೇ ಲೆಕ್ಕಹಾಕಿಕೊಳ್ಳಬಹುದು. ಉದಾಹರಣೆಗೆಂದು ಐದನೇ ಉಲ್ಲಾಸದ ಹದಿಮೂರು ಸಾಲುಗಳನ್ನು (ಪು. ೨೧, ೧೦೪–೧೧೬) ಕೆಳಗೆ ಕೊಡಲಾಗಿದೆ.

ಹೆಡೆಬಿಚ್ಚಿ ಕೊಡೆವಿಡಿದನಾದಿಶೇಷಂ ಒಟ್ಟೆಯು ಬೆಳಗೆ ಹಣೆಮಣಿ
೫ ೫ ೫.೨ ೨.೫ ೪
ಸುವಿಲಾಸದಿಂದತ್ತಿತ್ತೊಲೆದು ನಡೆನಡೆವೆಡೆಯೊಳೆಡೆಯಂಗೊಟ್ಟ–
೨.೫ ೫.೨ ೨.೫ ೨ ೫
ಳಂತಕನನುಜೆ ನೆಲದ ಜಲವಿದು ಮನದ ಜೀವನವೆನಿಪ ನಲ್ಮೆಯ
೨.೫ ೫ ೫ ೫.೨ ೪
ಪತಿಕರಿಪನೆನಗೀತನೆನ್ನುತ. ನಡೆದನಾಗಮಶಾಸ್ತ್ರ ರಕ್ಷೆಯೊ–
೫ ೫ ೪ ೫ ೫ ೪
ಳಧ್ಯಾತ್ಮ ನಡೆವೊಲು ವಸುದೇವ, ಎಡರಿಲ್ಲದೆಯೆ ಕರೆಯನು ಮುಟ್ಟಿ
೫ ೪ ೫ ೫.೨ ೨. ೫
ಮಳೆ ಸದ್ದಿನೊಳು ಸೊಲ್ಲಡಗಿ ಛಾಯಾಮಾತ್ರವೆನಲಿರುವ ಗೊಲ್ಲರ
೨. ೫ ೫ ೨. ೫ ೫ ೪
ಬಂಡಿವಾಡಿನ ಪಾಳೆಯವ ಕಂಡನು. ಸಾರಿದನು ನಂದಗೋಪನ
೫.೨ ೫ ೪ ೫ ೫.೨
ಪೆರ್ಬಂಡಿಯನು ಕಂಡನಲ್ಲೊಂದಚ್ಚರಿಯನವ ಕಿರು ಮಿಂಚಿಸೆಯೆ
೫ .೨ ೫ ೫ ೪ ೫.೨
ತುಂಬು ನಿದ್ದೆಯೊಳಿರುವ ನಂದನ ಪೆಂಡಿರೆಡೆ ಅದೆ ತಾನೆ ಹುಟ್ಟಿದ
೫ ೫ ೪ ೫ ೫ ೪
ಕೂಸ. ಹೊಳೆಯಲತಿಗೂಢವಹುದು ಸುತಜನನವಿದರಿಂದೆಂಬ ಮತಿ
೫ ೫ ೪ ೫ ೪ ೫
ಪಲ್ಲಟಿಸಿದನು ಹಸುಳೆಗಳ ಗೋಪೀ ವಿಪುಲ ವಾತ್ಸಲ್ಯ ಪಾರ್ಶ್ವಂ
೫.೨ ೫ ೪ ೫ ೫ .೨

ಯದುಕುಲ ಬಾಲನಾಶ್ರಯವಾಗೆ ಕಂಸಭಯ ಸಂವಿಷ್ಟಕಾರಾ
೪ ೫ ೫ ೫ ೫ ೪

ಗಾರ ಕಾರ್ಪಣ್ಯವಾ ಗೋಪಶಿಶುಗಾಗೆ ದೇವಕಿಯ ಮಗ್ಗುಲೊಳು *
೫ ೫ ೩ ೫ ೫ ೫

೧೧. ಇಪ್ಪತ್ತಾರು ಮಾತ್ರೆಗಳಿರುವ ಸಾಲುಗಳ ಗಣವಿಭಜನೆ ಹೀಗೆ: ಐದು ಮಾತ್ರೆಗಳ ಗಣಗಳು ನಾಲ್ಕು, ನಾಲ್ಕು ಮಾತ್ರೆಗಳ ಗಣ ಒಂದು, ಯಾವುದಾದರೂ ಒಂದು ಐದು ಮಾತ್ರೆಗಳ ಗಣಕ್ಕೆ ಅಂಟಿಕೊಂಡ ಎರಡು ಮಾತ್ರೆಗಳ ತುಂಡೊಂದು. ಮಿಕ್ಕ ವಿಚಾರಗಳೆಲ್ಲೆಲ್ಲಾ ಮೇಲಿನಂತೆಯೇ. ಉದಾಹರಣೆಗೆಂದು ಹನ್ನೆರಡನೇ ಉಲ್ಲಾಸದ ಮೊದಲಿನ ಹದಿನಾರು ಸಾಲುಗಳನ್ನು (ಪು. ೫೩–೫೪) ಕೆಳಗೆ ಕೊಟ್ಟಿದೆ.

ಗೆಲವಂಗೊಳ್ಳದಾವನ ಮನಂ ಹರಿಚರಿತ ಸಂಸ್ಮರಣದಿಂ.
೪ ೫ ೫ ೫ ೨.೫

ಮುಂಜಾನೆಯೊಳು ಹೊಳೆಯೆಡೆ ನಡೆವ ಸಾಧುಗಳ ಕರಿಕೀರ್ತನಂ
೨. ೫ ೪ ೫ ೫ ೫

ಕಿವಿಪೊಕ್ಕನಿತು ತಂಪೆರೆಯಿತಾ ಗೋದಾದೇವಿಗಾ ಪರಿಗೆ
೨.೫ ೫.೨ ೨.೫ ೫

ಭವದಿ ಬೇಗುದಿಗೊಂಬ ಮನುಜಗು ನಿರ್ಮಲ ಮನದಿ ಪೊರಮಡುವ
೫ ೫ ೪ ೫.೨ ೫

ಗೋವಿಂದ, ಹರಿಕೃಷ್ಣ, ನಾರಾಯಣಾಚ್ಯುತ ನಾಮಘೋಷಂ
೫ ೫ ೨. ೫.೨ ೫.೨

ಸಕಲ ತಾಪೋಪಶಮಕರವಲಾ, ಜಯಕರವಲಾ ಕ್ಷೇಮಂ
೫ ೫. ೫ ೫.೨ ೪

ಕರವಲಾ ಕರ್ಣಾಮೃತಂ ಪ್ರತ್ಯಕ್ಷಗೊಳಿಪುದು ರೂಪವಂ
೫ ೨. ೫ ೫ ೪ ೫

ಮೇಘಶ್ಯಾಮ ಸುಂದರನ ಮುಂಗುರುಳ ಸಿಂಗರದ ಮೊಗವಂ
೨. ೫ ೫ ೫ ೫ ೪

ಚೆನ್ನಡಿಗಳಂ, ಕಹಳೆಯ ತೆರದ ಜಂಘೆಗಳ, ಸಿಂಗದ ನಡುವ
೨. ೫ ೨. ೫ ೫ ೨. ೫

ಬಿತ್ತರದೆದೆಯ, ಆಜಾನುಲಂಬಿ ಬಾಹುಗಳ, ಕಂಬುಗಳವ
೨. ೫ ೫ ೫ ೫ ೪

ತುಂಬುಗೆನ್ನೆಯ, ಚೆಂದಳಿರೊಳಗೆ ಮಿಸುಗುತಿಹ ಕಿರಣವ ನಗುವ
೫.೨ ೨.೫ ೫ ೨. ೫

ಮಿದು ನಗೆಯ ಚೆಂದುಟಿಯ, ಮಿಂಚುಗುವ ಕಂಗಳ, ಮಾಟದ ಕಿವಿಯ
೫ ೫ ೫ ೪ ೨. ೫
ಪೌಗಂಡದೊಳೆ ಕಾರುಣ್ಯ ಶೋಭೆಯಂ ತಳೆದೆಸೆವಾಕೃತಿಯ
೫ ೨ ೫ ೫ ೪ ೫
ಕಂಡವರು ತಮ್ಮವನೆಂದೆ ಮೋಹಿಸುವ ಚೆಲುವಿನ ಮೂರ್ತಿಯನು
೫ ೨. ೫ ೫ ೪ ೫
ಅರ್ತಿಗೈದರ್ತಿಯ ಹೊಮ್ಮಿಸುವ ವನಮಾಲಿ ಗೋವಿಂದನನು
೫ ೪ ೫ ೫ ೫ .೨

೧೨. ಮೇಲೆ ನಾಲ್ಕನೇ ಟಿಪ್ಪಣಿಯಲ್ಲಿ ಹೇಳಿದ ವಿವಿಧ ಸಂಖ್ಯೆಯ (ಎಂದರೆ ಇಪ್ಪತ್ತನಾಲ್ಕು, ಇಪ್ಪತ್ತಾರು, ಇಪ್ಪತ್ತೆಂಟು ಮಾತ್ರೆಗಳಿರುವ) ಸಾಲುಗಳೇ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ನಾಲ್ಕು ಮಾತ್ರೆಗಳ ಗಣ ಬರಬಲ್ಲ ಭಿನ್ನ ಭಿನ್ನ ಸ್ಥಾನಗಳು ಹಾಗೂ ಅದನ್ನು ಎರಡೆರಡಾಗಿ ಒಡೆಯಬಲ್ಲ ಅವಕಾಶ ಇವುಗಳಿಂದ ಲಭಿಸುವ ಸೌಲಭ್ಯ ಸ್ವಾತಂತ್ರ್ಯಗಳಿಂದ ಉಂಟಾಗುವ ಸಾಧ್ಯತೆಗಳೇ ಗತಿಯಲ್ಲಿ ತೋರಬಹುದಾಗಿದ್ದ ಏಕತಾನತೆಯನ್ನು ಬಹುಮಟ್ಟಿಗೆ ನಿವಾರಿಸುತ್ತದೆ ಎಂಬುದನ್ನು ಗಮನಿಸಬೇಕು. ಗಣ ಪರಿವೃತ್ತಿಯಿಂದ ಲಭಿಸುವ ಗತಿವೈವಿಧ್ಯಗಳನ್ನು ಕುರಿತು ಮುಂದೆ ಇಪ್ಪತ್ತೈದನೇ ಟಿಪ್ಪಣಿಯಲ್ಲಿ ಬರೆಯುವುದಾಗುತ್ತದೆ.

೧೩. ಇನ್ನು, ಮೇಲೆ ನಾಲ್ಕನೇ ಟಿಪ್ಪಣಿಯಲ್ಲಿ ಹೇಳಿದ ವಿವಿಧ ಸಂಖ್ಯೆಯ ಮಾತ್ರೆಗಳಿರುವ (ಎಂದರೆ ಇಪ್ಪತ್ತನಾಲ್ಕು, ಇಪ್ಪತ್ತೆಂಟು, ಇಪ್ಪತ್ತಾರು ಮಾತ್ರೆಗಳಿರುವ ಸಾಲುಗಳನ್ನು ಬಿಟ್ಟು) ಸಾಲುಗಳ ಪರಿಶೀಲನೆಗೆ ತೊಡಗಬಹುದು. ಹತ್ತೊಂಬತ್ತು ಮಾತ್ರೆಗಳಿರುವ ಮೂರು ಸಾಲುಗಳು ನನ್ನ ಕಣ್ಣಿಗೆ ಬಿದ್ದಿವೆ. ಇಪ್ಪತ್ತನಾಲ್ಕು ಮಾತ್ರೆಗಳ ಸಾಲಿನಿಂದ ಐದು ಮಾತ್ರೆಯ ಗಣವೊಂದನ್ನು ಕಳೆದರೆ ಈ ಸಾಲುಗಳು ಬರುತ್ತವೆ:

ಪಡಿನುಡಿಯೆ ತರುಣರ ಹುಯಿಲ ಯಾತ್ರಾಘೋಷ (೧೧೨.೨೦,೧೨೩)
೫ ೪ ೫ ೫
ಮಲೆಯೆತ್ತಿದಗೆ ಕೊಳಲಿನಿಯ ಮುನಿಪೂಜಿತಗೆ (೧೮೫.೩೨.೧೧೮)
೨. ೫ ೫ ೨. ೫
(ಶೀವಾನು) ಭೂತಿಗಳ ಸಿಂಹಾವಲೋಕನವಿಾಕೃತಿಯೊ
೫ ೫ ೪ ೫
(....) (೧೮೬ ೩೩.೨೦)

೧೪. ಇಪ್ಪತ್ತು ಮಾತ್ರೆಗಳಿರುವ ನಾಲ್ಕು ಸಾಲುಗಳು ನನ್ನ ಕಣ್ಣಿಗೆ ಬಿದ್ದಿವೆ. ಅವುಗಳು ಒಂದಿದ್ದಂತೆ ಇನ್ನೊಂದಿಲ್ಲ. ಅವುಗಳನ್ನು ಪರಿಶೀಲಿಸೋಣ.

ಹೃದಯೌದಾರ್ಯವನೆ ನೀಗುವೆಯಾ? ಸನಿಹದೊಳು (೯೪.೧೬.೧೧೦)

ಈ ಸಾಲಿನ "ನೀಗುವೆಯಾ" ಎಂಬುದು "ನೀಗುವೆಯ" ಎಂದಿದ್ದಿದ್ದರೆ ೫೨.೫೫ ಎಂದಾಗಿ ಮೇಲೆ ಹದಿಮೂರರಲ್ಲಿ ಸೇರಿಸಬಹುದಿತ್ತು. "ಯಾ'' ಎಂಬುದನ್ನು ಪ್ಲುತವಾಗಿ ಉಚ್ಚರಿಸಿದರೆ ೪೫೨.೫೫ ಎಂದು ವಿಭಜಿಸಿ ಮುಂದೆ ಹದಿನೈದರಲ್ಲಿ ಸೇರಿಸಬಹುದಿತ್ತು. ಈಗ ಅದನ್ನು ೪೫೪.೨೫ ಎಂದು ವಿಭಜಿಸಬೇಕಾಗಿದೆ.

ಅಹಿಂಸೆಯ ಕೊಳ್ಳುತೀ ನಾಡು ಪ್ರಬಲರ ಸೆಣಸಿ (೧೧೪.೨೧.೧೯)

ಎಂಬ ಸಾಲನ್ನು ನೋಡೋಣ, ಇದನ್ನೇನೋ ೫ ೫ ೫ ೫ ಎಂದು ವಿಭಜಿಸಬಹುದು. '' ಅಹಿಂಸೆಯ '' ಎಂಬ ವಿಷಮ ಗಣ ಬರುತ್ತದೆ, '' ನಾಡು ಪ್ರಬಲರ '' ಎಂಬುದರಲ್ಲಿ "ಡು'' ಲಘುವಾಗಿಯೇ ಇರುತ್ತದೆ.

ನಮ್ಮೆದೆ ಕಡಲೊಳಂ ನೆಡದೆಯದನೇಕೆ ಬಿಡುವೆ? (೧೪೪.೨೬.೫೨) ಎಂಬ ಸಾಲನ್ನು ೪ ೫ ೩ ೫ ೩ ಎಂಬ ವಿಭಜಿಸಬೇಕೋ ಏನೋ !

ತಡೆವರಾರಕ್ಕರೆಯ
ನಿನ್ನ ಕಂಡೆಮ್ಮೊಳುಕ್ಕುವುದಿದ? ಅಪ್ಪ ಅಣ್ಣ ಅಮ್ಮ (೧೪೯.೨೯.೨೧೪)

ಎಂಬ ಸಾಲನ್ನು ಭಾಗಶಃ ೫ ೫ ೪ ಎಂದು ವಿಭಜಿಸಬಹುದು. ಮಿಕ್ಕದ್ದನ್ನೇನು ಮಾಡುವುದು? ಮುಂದಿನ ಸಾಲಿನಲ್ಲಿ ಬರುವ ''ಗಂಡ ವರ ನಂಟೆಲ್ಲಮುಂ ನೀನೆಯೇ'' ಎಂಬ ಮಾತನ್ನು ದೃಷ್ಟಿಯಲ್ಲಿಟ್ಟುಕೊಂಡು ''ಅಪ್ಪ ಅಣ್ಣ ಅಮ್ಮ'' ಎಂಬುದನ್ನು ಶ್ರೀಹರಿಗೇ ಅರ್ಪಿಸಿಬಿಡುವುದು !

೧೫. ಇಪ್ಪತ್ತೊಂದು ಮಾತ್ರೆಗಳಿರುವ ನಾಲ್ಕು ಸಾಲುಗಳು ನನ್ನ ಕಣ್ಣಿಗೆ ಬಿದ್ದಿವೆ. ಅವುಗಳನ್ನು ಇಪ್ಪತ್ತಾರು ಮಾತ್ರೆಗಳಿರುವ ಸಾಲಿನಿಂದ ಐದು ಮಾತ್ರೆಯ ಗಣವೊಂದನ್ನು ಕಳೆದು ಸಿದ್ಧಪಡಿಸಬಹುದು.

ಯೋಗೀಶ್ವರನ ಕಾಮವಿದು ಲೌಕಿಕ ಕಾಮವೇ? (೮೮.೧೬.೨೧೪)
೨. ೫ ೫ ೪ ೫

(ಹಲುಬಿದರು) ಹಲಬಗೆಯಪಸ್ವರವ ಕೊರಲೊಳು ತಂದು. ತಣಿದವು
೨. ೫ ೫ ೫ ೪

(....) (೯೮.೧೮.೭೧)

ಏನಿದು ಹಬ್ಬ ಯಾವನ ಜಾತ್ರೆ? ಗೋವ್ರಜದೊಳೀ (....) (೧೦೫.೧೯.೬೨)
೨. ೫ ೨. ೫ ೨. ೫

ನಿಮ್ಮವನು ನಾನಪ್ಪ ಚಾತುರಿಯುಸಿದರಿಂ
ಕಲಿತೆ. ಎನಗೊಲಿದವರ ನಿಮಗಿದನೊತ್ತೆಯಿಡುವೆಂ (೧೭೦.೨೯.೨೧೮)
೫ ೫ ೨. ೫ ೪

೧೬. ಇಪ್ಪತ್ತೆರಡು ಮಾತ್ರೆಗಳಿರುವ ಸಾಲುಗಳ ಸಂಖ್ಯೆ ಸುಮಾರು ಅರವತ್ತೈದು. ಅವುಗಳಲ್ಲಿ ಎರಡು ಸಾಲುಗಳನ್ನು ಬಿಟ್ಟು ಮಿಕ್ಕವುಗಳನ್ನು ಇಪ್ಪತ್ತನಾಲ್ಕು ಮಾತ್ರೆಗಳಿರುವ ಸಾಲಿನಿಂದ ಎರಡು ಮಾತ್ರೆ ಕಳೆದು ಸಿದ್ಧಪಡಿಸಬಹುದು. ಕೆಲವು ಉದಾಹರಣೆಗಳು.

ಗೋಪಾಲಕನ ಪದವಿಡಿದು ಚರಿಸುವೆನು ಕಬ್ಬದೊಳು (೨.೧.೩೩)
೫ .೨ ೫ ೫ ೫
ಲೋಕದಿಂ ಸುಖಕೆ ಬೆಲೆ ಈ ಲೋಕಕಂ ಸುಖದಿ ಬೆಲೆ (೬ ೨.೪೭)
೫ ೫ ೨.೫ ೫
ಮಿದುನುಡಿಗೆ ಬಾಳಂ ಬಿಸುಟು ನಡೆದನರಮನೆಯತ್ತ (೧೨.೩.೧೦೫)
೫ ೫ .೨ ೫ ೫
ಬರುವ ಮುಂದಾಳಿನೊಲುನುಸುಳಿ ಬಹ ರವಿಯಂ ಕಂಡು (೨೩.೬.೧೬)
೫ ೫ ೫ .೨ ೫
ಮೊದಲ ಬೇಸಗೆವಳಿಗೆ ಮೈಯೊಡ್ಡುವುದು ಹಿತವೆನಗೆ (೫೦.೧೧.೧೧೫)
೫ · ೫ ೨. ೫ ೫
ಅಟ್ಟಹಾಸವ ಮೆರೆದು ತಡಿಯೊಳು ನಿಂತು ಗೋಳಿಡುವ (೯೬.೧೭.೧೬೦)
೫ ೫ ೨. ೫ ೫

ಕಡೆಯ ಎರಡು ಉದಾಹರಣೆಗಳು ಭಾಮಿನೀಷಟ್ಪದಿಯ ಮೂರನೆಯ ಅಥವಾ ಆರನೆಯ ಸಾಲಿನಂತಿರುವುದನ್ನು ಗಮನಿಸಬೇಕು.

ಕೃತಸ್ಮರಣೆ ದೈವೀಗುಣಂ. ತಾವು ಗೈದುಪಕೃತಿಯ (೩೫.೮.೧೧೬)
೫ ೫.೨ ೫ ೫

ಉದಾಹರಣೆಯಲ್ಲಿ "ಸ್ಮ" ಎಂಬುದನ್ನು ತೇಲಿಸಿ ಉಚ್ಚರಿಸಬೇಕಾಗುತ್ತದೆ. ಅಪವಾದಗಳಿಗೆ ಒಂದು ಉದಾಹರಣೆ :

(ಕಲ್ಪ) ಮಿದೆಲ್ಲಿ ? ರಸನೆಯ ಲೋಭದಿಂ ಹಸಗೆಟ್ಟ ಜಠರಂ (೧೨೪.೨೨.೧೨೦)
ಈ ಉದಾಹರಣೆಯನ್ನು ತೃಪ್ತಿಕರವಾಗಿ ವಿಭಜಿಸುವುದು ಕಷ್ಟ.

೧೭. ಇಪ್ಪತ್ತಮೂರು ಮಾತ್ರೆಗಳಿರುವ ಸಂಖ್ಯೆ ಸುಮಾರು ಅರವತ್ತಾರು. ಇವುಗಳಲ್ಲಿ ನಲವತ್ತಕ್ಕಿಂತಲೂ ಹೆಚ್ಚಿನ ಸಾಲುಗಳನ್ನು ಇಪ್ಪತ್ತೆಂಟು ಮಾತ್ರೆಗಳ ಸಾಲಿನಿಂದ ಐದು ಮಾತ್ರೆಯ ಗಣವೊಂದನ್ನು ಕಳೆದು ಸಿದ್ಧಪಡಿಸಬಹುದು. ಕೆಲವು ಉದಾಹರಣೆಗಳು :

ಕಿವಿಯೊಳಗಿಂದುಮನುರಣಿಸುವುದು ಗೆಳೆಯರ ಗಾವರಂ (೪೧.೧೦.೨೨)
೪ ೫ ೫ ೪ ೫
ರಾಧೇ ಎಂದು ಪಿಸುಮಾತಿನೊಳು ತೊದಲುತಲಿ ಜತೆಯೊಳೆ
೪ ೫ ೫ ೫ ೪ (೩೮ ೧೫.೨೦೮)
ಚಿತ್ರಿಸಿತಾ ಬೃಂದಾವನದಿ ಶಾದ್ವಲ ಸಂಕಟಂ (೧೩೦.೨೮.೧೫)
೫.೨ ೩.೫ ೪ ೫
ಮೆಲ್ಲನೆ ಜಾರಿಯೆತ್ತಲೊ ಮರೆಯಾದನಾ ಮಾಯಿಗಂ
೪ ೫.೨ ೫.೩ ೫ (೧೫೫.೨೭.೯೪)

ಮಿಕ್ಕ ಸಾಲುಗಳಲ್ಲಿ ಎರಡು ಮೂರನ್ನು ಬಿಟ್ಟು ಎಲ್ಲವನ್ನೂ ಮೇಲಿನಂತೆಯೇ ಸಿದ್ಧಪಡಿಸಬಹುದಾದರೂ, ನಾಲ್ಕು ಮಾತ್ರೆಗಳ ಗಣಗಳೆರಡೂ ಒಟ್ಟಾಗಿ ಬಂದು ೩–೫ ಆಗಿಯೋ ೫–೩ ಆಗಿಯೋ ಒಡೆಯುತ್ತವೆ. ಈ ಬಳಸುದಾರಿಯೇಕೆ? ಪ್ರತಿ ಸಾಲಿನಲ್ಲೂ ಐದು ಮಾತ್ರೆಗಳ ಗಣ ನಾಲ್ಕು, ಮೂರು ಮಾತ್ರೆಗಳ ಗಣ ಒಂದು ಇದೆ ಎಂದು ಹೇಳಬಹುದಲ್ಲಾ? ಆದರೆ ಈ ರಗಳೆಯ ವಿಶಿಷ್ಟ ಲಕ್ಷಣವಾದ ಚತುರ್ಮಾತ್ರಾ ಗಣವನ್ನು ಈ ರೀತಿಯಲ್ಲಾದರೂ ಉಳಿಸಿಕೊಳ್ಳುವುದೇ ಮೇಲು. ಕೆಲವು ಉದಾಹರಣೆಗಳು :

ಜಪದಿನಲ್ಪೋಪಶಮನಮಂ ಪಡೆಯಲಕ್ಕುಂ ದಿಟಂ (೧೨೭.೨೩.೧೪)
೩ ೫ ೫ ೫ ೫
ತೋರಿಕೆಯ ಮಾಟವಿದನೇನೆಂಬೆ ನಾಂ ಮಾಯೆಯೆನಲೆ (೬.೨.೨೭)
೫ ೫ ೫ ೫ ೩
ವಿಹಂಗಮ ದಂಶಕಾದಿ ವೈಚಿತ್ರ್ಯದಿಂ ಬಗೆಬಗೆಯ (೩೮.೯.೩೫)
೫ ೩ ೫ ೫ ೫
ದಗ್ಧ ಕಾಮಃ ಶೈವಲಲಿತಾ ಪ್ರೇಮಸಂವಿಷ್ಟರಾ (೧೫೯.೩೮.೧೨)
೩ ೫ ೫ ೫ ೫

ಈ ಟಿಪ್ಪಣಿಯನ್ನು ಮುಗಿಸುವ ಮುನ್ನ ಕೆಳಗೆ ಕೊಟ್ಟಿರುವ ಸಾಲಿನ ಕಡೆಗೆ ಓದುಗರ ಗಮನವನ್ನು ಸೆಳೆಯಬೇಕು.

ಬಿರುಬಿಸಿಲು ಚಂಡಮಾರುತ ಸಿಡಿಲಾರ್ಭಟದ ಹೊಯ್‌ಮಳೆ
೫ ೫.೨ ೨. ೫ ೪ (೧೫೩.೨೭.೩೭)

ಈ ಸಾಲಿನ ಕಡೆಯಲ್ಲಿ ಬರುವ ''ಹೊಯ್‌ಮಳೆ'' ಎಂಬುದನ್ನು ನಾಲ್ಕು ಮಾತ್ರೆಗಳ ಗಣವನ್ನಾಗಿ ಪರಿಗಣಿಸದೆ, ''ಹೊಯ್'' ಎಂಬುದರ ಯಕಾರವನ್ನು

ದೀರ್ಘವಾಗಿ ಉಚ್ಚರಿಸಿ "ಹೊಯ್ಸಮಳೆ" ಎಂದು ಐದು ಮಾತ್ರೆಗಳ ಗಣವನ್ನಾಗಿ ಮಾಡಿ, ಸಾಲು ಇಪ್ಪತ್ತನಾಲ್ಕು ಮಾತ್ರೆಗಳದು ಎಂದು ಭಾವಿಸುವುದು ಮೇಲು. ಈ ದೀರ್ಘೀಕರಣದ ಔಚಿತ್ಯವನ್ನೂ, ಅದರಿಂದ ಉಂಟಾಗುವ ನಿರಂತರವಾದ ಜಡಿಮಳೆಯ ಚಿತ್ರವನ್ನೂ ಓದುಗರು ಪರಿಭಾವಿಸಬೇಕು.

೧೮. ಇಪ್ಪತ್ತೈದು ಮಾತ್ರೆಗಳಿರುವ ಸಾಲುಗಳ ಸಂಖ್ಯೆ ಸುಮಾರು ಎಪ್ಪತ್ತೈದು. ಅವುಗಳಲ್ಲಿ ಇಪ್ಪತ್ತೆಂಟು ಸಾಲುಗಳನ್ನು ಸಲೀಸಾಗಿ ಐದು ಮಾತ್ರೆಗಳ ಐದು ಗಣಗಳಿರುವ ಸಾಲುಗಳನ್ನಾಗಿ ಪರಿಗಣಿಸಬಹುದೆಂಬ ಹಿಗ್ಗಾದರೂ, ಅವುಗಳಲ್ಲಿ ಈ ಪ್ರಕಾರದ ರಗಳೆಯ ವಿಶಿಷ್ಟ ಲಕ್ಷಣವೆಂದು ನಾನು ಪರಿಗಣಿಸಿರುವ ನಾಲ್ಕು ಮಾತ್ರೆಗಳ ಗಣವೇ ಇಲ್ಲದಿರುವುದು ಕುಗ್ಗಿಗೆ ಕಾರಣವಾಗಿದೆ :

ಯುವತೀಮನೋರಮಣ, ಷೋಡಶೀಚಿತ್ತಹರ ವಿಧುವದನ
x x x x x (೩೫.೫೧.೧೨೭)
ಗರ್ಭದೊಳಗಲ್ಪ ಸಮಯಂ ಮನುಜಶಿಶು ತನ್ನ ವಿಕಸನದ
x x x x x
ಸರ್ವಸ್ತರಂಗಳಂ ಹಾಯ್ದು ಬಂದಂತ್ಯದೊಳು ಮಾನುಷ್ಯ (....)
x x x x x
(೧೪೪.೨೬ ೬೭–೬೮)
ಕೈಸೋಕುಗಳ ನೆನಹಿನಾತುರಕೆ ಕೈಸೋಕೆ ಮದ್ದು ಹರಿ
x x x x x (೧೫೭.೨೭ ೧೬೧)

"ಗರ್ಭದೊಳಗಲ್ಪ" ಎಂಬುದನ್ನು "ಗರ್ಭದೊಳಲ್ಪ" ಎಂದೂ, "ಸರ್ವಸ್ತರಂಗಳಂ" ಎಂಬುದನ್ನು "ಸರ್ವಸ್ತರಗಳಂ" ಎಂದೂ ತಿದ್ದಿಕೊಂಡರೆ ಸಾಮಾನ್ಯ ಲಕ್ಷಣಕ್ಕೆ ಹೊಂದುವ ೨೪ ಮಾತ್ರೆಗಳ ಸಾಲುಗಳಾಗುತ್ತವೆ.

ಮಿಕ್ಕ ಸಾಲುಗಳು, ಐದಾರನ್ನು ಬಿಟ್ಟರೆ, ದಿಗ್ಭ್ರಮೆಯನ್ನೂ ಬೆರಗನ್ನೂ ಉಂಟುಮಾಡುತ್ತವೆ. ಅವುಗಳೆಲ್ಲವೂ ಒಂದು ಸಾಮಾನ್ಯ ಲಕ್ಷಣಕ್ಕೆ ಅಳವಡದಿದ್ದರೂ ಹೋಲಿಕೆಗಳಿರುವ ಸಾಲುಗಳನ್ನೊಳಗೊಂಡ ಎರಡು ಗುಂಪುಗಳನ್ನಾಗಿ ಮಾಡಬಹುದು. ಈ ಸಾಲುಗಳನ್ನು ಉರು ಹೊಡೆದು ಗುಣುಗುಣಿಸುತ್ತಿದ್ದರೆ ಅವುಗಳ ಗತಿ ಸೌಂದರ್ಯವು ಉನ್ಮೀಲನವಾಗುತ್ತದೆ. ಒಂದು ಗುಂಪಿನ ಸಾಲುಗಳಲ್ಲಿ ಪ್ರತಿಸಾಲಿನಲ್ಲೂ ಖಚಿತವಾಗಿ ಸ್ಪಷ್ಟವಾಗಿ ಐದು ಮಾತ್ರೆಗಳ ಗಣಗಳು ಮೂರು ಸಿಕ್ಕುತ್ತವೆ. ಇನ್ನು ಮಿಕ್ಕ ಹತ್ತು ಮಾತ್ರೆಗಳು ೪ ೪ ೨ ಆಗಿ ಹಂಚಿಹೋಗಿರುತ್ತವೆ. ಬೇರೆ ಕಡೆಗಳಲ್ಲಿರುವಂತೆ ಚತುರ್ಮಾತ್ರಾ ಗಣಗಳು ಎರಡೆರಡಾಗಿಯೂ ಕಂಡುಬರಬಹುದು. ಕೆಲವು ಉದಾಹರಣೆಗಳು :

ಸಾರವ ತೆಗೆವ ಮಾರ್ಗವೆ ತಪಂ. ಪಿಡಿವಡು ಬಲ್ಲಿದರದಂ (೭೩.೧೫.೬೧)
೨. ೫ ೨. ೫ ೪ ೫.೨
ತಿಲಕವ ತಿದ್ದಿ ತಣಿಯಳು. ಸವಿಯುಲಿವಿನೊಡವೆಗಳನಾರಿಸಿ (೮೨.೧೬.೫೪)
೨. ೫ ೪ ೫ ೫ ೪
ನಲ್ಮೆಯ ನೆಲೆಯೆ, ಇನಿದಿನಿದಿನಿಯಳೇ, ಪೇಳೆಲ್ಲಿ ಕಹಿ ನೀ (೮೭.೧೬.೧೯೯)
೨. ೫ ೪ ೫ ೫ ೪
ಘೋರಸರ್ಪಂ, ಮೇಗಡೆ ನಿರ್ಭೀತ ಸುಂದರ ಬಾಲಕಂ (೯೯.೧೮.೮೮)
೫.೨ ೪ ೫ ೪ ೫
ಬೇಗನೆ ಮರಳಿ ಬಾರೈ, ಕೆಣಕದಿರು ಸುಮ್ಮನೆ ಯಾರನೂ (೧೭೫.೩೧.೪೩)
೨. ೫ ೪ ೫ ೪ ೫

ಮತ್ತೊಂದು ಗುಂಪಿನ ಸಾಲುಗಳಲ್ಲಿ ಐದು ಮಾತ್ರೆಗಳ ನಾಲ್ಕು ಗಣಗಳಿದ್ದು, ಉಳಿದ ಐದು ಮಾತ್ರೆ ೩–೨ ಆಗಿ ಹಂಚಿರುತ್ತವೆ. ಕೆಲವು ಉದಾಹರಣೆಗಳು :

ಗುಡಿಗೋಪುರದ
ತುದಿಯ ನಕ್ಷತ್ರದೊಲು, ಒಲಿದವರಂತೆ, ಸಂದತಂದೆಯೊಲ್ (೭.೧.೨೪)
೫ ೫ ೨. ೫ ೩ ೫
(ಶಾರದಾಂ–) ಭೋಧ ಸಿತಛತ್ರಮಂಡಿತಂ ಸರ್ವರ್ಧಿಸಾರ್ವಭೌಮಂ
೩ ೫ ೫ ೫ ೫.೨ (೩೭.೯.೩೦)
ವಿಯನ್ಮಾನಸಂ ಕೊಳೆನೀಗಿಹಗುರಾಗಿ ಮೈಗಿಳಿದುದೈ (೧೬೭.೨೯.೧೦೦)
೩ ೫ ೫ ೫ ೫.೨

ಕೆಲವು ಸಾಲುಗಳ ಗಣ ವಿಭಜನೆ ಕಷ್ಟ. ಉದಾಹರಣೆಗಳು :

ದಿಟಂ ದಿಟಂ ನೆಲೆಮನವಿಲ್ಲವಿಂದ್ರನಿಗೆ ಚಂಚಲನಾತ (೧೦೭.೧೯.೧೧೭)
ಜಗದ್ಧಾತ್ರಿಯಾದಳೈ ವಸುಮತಿ ನಿನ್ನ ಖತಕೊಳವಟ್ಟು (೧೨೨.೨೨.೬೫)
ನಿನ್ನಾಲಸ್ಯ, ಸಂಕಲ್ಪ ದೌರ್ಬಲ್ಯ, ಅನುತ್ಪನ್ನತೆಗಳ್ (೧೬೫.೨೯.೪೧)

ಕಡೆಯದಾಗಿ ಒಂದು ಉದಾಹರಣೆ :

ಹೊದರೊಳಗವಿತಿಹನೇ ಬಳಿ ಗಿಡದ ರೆಂಬೆಯೊಳಡಗಿಹನೇ (೧೫೫.೨೭.೯೬)

ಈ ಸಾಲಿನ ಸೊಗಸೇ ಸೊಗಸು. ಈ ಸಾಲಿನಲ್ಲಿ ಮೂರು ಭಾಗಗಳಿವೆ. ಮೊದಲ ಭಾಗವಾದ ಮೇಲೆ ಸ್ವಲ್ಪ ವಿರಾಮ, ಬಳಿಕ ಎರಡನೇ ಭಾಗವಾದ ಮೇಲೂ ಸ್ವಲ್ಪ ವಿರಾಮ ಕೊಟ್ಟು ಓದಬೇಕು.

೧೯. ಇಪ್ಪತ್ತೇಳು ಮಾತ್ರೆಗಳಿರುವ ಸಾಲುಗಳ ಸಂಖ್ಯೆ ಸುಮಾರು ಮೂವತ್ತೊಂದು. ಅಪವಾದಗಳನ್ನು ಬಿಟ್ಟರೆ, ಈ ಸಾಲುಗಳು ಎರಡು ಗುಂಪುಗಳಾಗುತ್ತವೆ. ಮೊದಲನೆಯ ಗುಂಪಿನ ಸಾಲುಗಳಲ್ಲಿ ಐದು ಮಾತ್ರೆಯ ಐದು ಗಣಗಳೂ ಮೇಲೆರಡು ಮಾತ್ರೆಗಳೂ ಕಂಡು ಬರುತ್ತವೆ. ಉದಾಹರಣೆಗಳು :

ಮೋದವಂ ನಿಃಕ್ಷುಧಾತರ್ಷವಂ ಸ್ವಾಸ್ಥ್ಯವಂ ಸಂದೀಪ್ತಿಯಂ (೬೦.೧೩.೫೨)
೫ ೫ ೫ ೫ ೨.೫

(ಧುಮ್ಮಿಕ್ಕಿ)ದೊಂದು ತನಿಸರದ ಬೆಂಗಡೆ ಅವನ ಕುಡಿಗಣ್ಣು ನೋಟದ ಧಾಳು
೫ ೫ ೫ ೫.೨ ೫
(೬೯.೧೪.೧೮೪)

ಎರಡನೆಯ ಗುಂಪಿನ ಸಾಲುಗಳಲ್ಲಿ ಸಾಲಿಗೆ ಐದು ಮಾತ್ರೆಯ ನಾಲ್ಕು ಗಣಗಳಿರುತ್ತವೆ, ಮಿಕ್ಕ ಏಳು ೪–೩ ಆಗಿ ಹಂಚಿರುತ್ತವೆ. ಯಥಾ ಪ್ರಕಾರ ನಾಲ್ಕು ಎರಡೆರಡಾಗಿ ಒಡೆಯಬಹುದು. ಉದಾಹರಣೆಗಳು :

(ಈ) ತೆರದ ಸಡಗರವ ಕಂಡ ನೆನವಿಲ್ಲೆನಗೆ ಪೇಳಿಂ ಹರಕೆಯೇಂ ?
೩ ೫ ೫ ೫ ೪ ೫ (೧೦೫.೧೯.೬೩)

ನಾನು, ಹರಿ, ಕಂಡೆರೆ ಕಂದೆರೆ ವಿಶಾಲಾಕ್ಷಿ ನೋಡು ನೋಡೆನ್ನ
೫ ೪ ೫ ೫ ೩ ೫ (೭೮.೧೫.೨೧೨)

ಕೆಲವು ಸಾಲುಗಳ ಗಣವಿಭಜನೆ ಸುಲಭವಲ್ಲ. ಉದಾಹರಣೆಗಳು :

ದುಃಖದೊಳಾವರ್ತಿಸಿತು ಸುಖದುಃಖವವ್ಯಾಹತದ ಗತಿಯೊಳು (೧೫.೪.೭೦)
ಮಹಾರ್ಹ ವೈಡೂರ್ಯ ಕಿರೀಟ ಕುಂಡಲ ತ್ರಿಭೂಷಾಪರಿಷ್ಕೃತ (೨೦.೫.೭೬)

೨೦. ಇಪ್ಪತ್ತೊಂಬತ್ತು ಮಾತ್ರೆಗಳಿರುವ ಸಾಲುಗಳ ಸಂಖ್ಯೆ ಸುಮಾರು ಹದಿನೆಂಟು. ಅಪವಾದಗಳನ್ನು ಬಿಟ್ಟರೆ, ಈ ಸಾಲುಗಳಲ್ಲಿ ಐದು ಮಾತ್ರೆಯ ಐದು ಗಣಗಳೂ ನಾಲ್ಕು ಮಾತ್ರೆಯ ಒಂದು ಗಣವೂ ಬರುತ್ತದೆ. ಉದಾಹರಣೆಗಳು :

ಮುಗ್ಧ ಸರಳಂ ವಿದಗ್ಧಾದ್ಭುತಂ ವ್ಯೋಮಸ್ಫುರಣ ಭಗಣೋದಯಂ
೫ ೫ ೫ ೫.೨ ೨.೫ (೧೮.೫.೩೬)

ಎಂದು ವಸುದೇವನಂ ನುಡಿಸಿ ಮೆಲ್ಲಾತಿನೊಳು ಸೈರಣೆಗೆ ತಂದನು
೫ ೫ ೫ ೫ ೫ ೪ (೨೨.೪.೧೫೫)

ಉಜ್ವಲಿಸಿ ಕಾಂಬರರಿವಿನ ಕಪ್ಪವಂ ಕೊಳುವ ಜಲದಶ್ಯಾಮನಂ (೨೦.೫.೭೫)
೫ ೫ ೫ ೫ ೪ ೫

೨೧. ಮೂವತ್ತು ಮಾತ್ರೆಗಳಿರುವ ಮೂರು ಸಾಲುಗಳು ನನ್ನ ಕಣ್ಣಿಗೆ ಬಿದ್ದಿವೆ.

ಆ ಸರ್ವವ್ಯಾಪಿ ವಿಶ್ವಂಭರ ದಯಾಸಾಗರಂಗಾವುದು ಹೊರಗು (೮.೨.೧೦೦)
ಳ ೫ ೨. ೫ ೨.೫ ೨.೫

ತರುವೀವರ್ಧ್ಯವಂ ಶಾದ್ವಲದ ಪುಲ್ಮೊನೆ ಹನಿಗಳಾಚಮನೀಯ
ವಂ ವನಗಳ ಗಂಧವಂ ಸರಸಿಗಳ ತೆರೆನಗೆಯ ನೀರಾಜನೆಗಳಂ (೧೮.೫.೩೧)
೨. ಳ ೫ ೫ ೫ ೫ ಳ

ಚೇತನರ ಕರಣಂಗಳೆಲ್ಲವ ಕೊಳ್ಳುವೊಲು ಘನಘರ್ಜಿತಂ ಚಪಲಾ (ಹಾಸ)
೫ ೫ ಳ ೫ ೨. ೫ ಳ (೨೦.೫೮೯)

೨೨. ಮೂವತ್ತೊಂದು ಮಾತ್ರೆಗಳಿರುವ ಎರಡು ಸಾಲುಗಳು ನನ್ನ ಕಣ್ಣಿಗೆ ಬಿದ್ದಿವೆ.

ಗರ್ಭದೊಳು ನಟ್ಟಳಲ್ಲಿಂ ಕಿತ್ತು ಹರಿಮಾಯೆ ಹರಿಯಾಜ್ಞೆಯಿಂದೆಂಬರ್
೫ ೫ ೫ ೫ ೫.೨ ಳ
(೧೬.೪.೮೩)

ಪ್ರೇಮಾಯತನರೆಂತಿರ್ದರೇನಂ ಗೈದರಾವಾಸೆಯೆತ್ತಿತ್ತವರ ? (೧೩.೪.೨)
೫.೨ ೫೨. ೫ ೫ ೫.೨

೨೩. ಮೇಲಿನ ಹತ್ತು ಟಿಪ್ಪಣಿಗಳಲ್ಲಿ (೧೩–೨೨), ೧೯–೨೩, ೨೫, ೨೭, ೨೯–೩೧ ಮಾತ್ರೆಗಳಿರುವ ಸಾಲುಗಳನ್ನು ವಿವರವಾಗಿ ಪರಿಶೀಲಿಸಿದ್ದಾಯಿತು. ಒಂದೊಂದು ಕಡೆಯೂ, ಸಾಧ್ಯವಾದ ಮಟ್ಟಿಗೆ, ಕಂಡುಬರುವ ಸಾಮಾನ್ಯ ಲಕ್ಷಣ ಗಳನ್ನೂ ಅಪವಾದಗಳನ್ನೂ ನೋಡಿದೆವು. ಈ ಸಾಲುಗಳು ಎರಡು ದೃಷ್ಟಿಗಳಿಂದ ಗಮನಾರ್ಹ. ಒಟ್ಟು ಕೃತಿಯ ದೃಷ್ಟಿಯಿಂದ ಅವುಗಳ ಸಂಖ್ಯೆ ಅಲ್ಪವಾಗಿರುವುದು ಒಂದು. ಅವುಗಳಲ್ಲಿ ಒಂದೊಂದಕ್ಕೂ ಸಾಮಾನ್ಯ ಲಕ್ಷಣಗಳೂ ಅಪವಾದಗಳೂ ಇರುವುದು ಎರಡು. ೨೪, ೨೬, ೨೮ ಮಾತ್ರೆಗಳಿರುವ ಸಾಲುಗಳು ಅಧಿಕ ಸಂಖ್ಯೆ ಯಲ್ಲಿವೆ. ಅವುಗಳಲ್ಲಿ ಕಂಡುಬರುವ ಸಾಮಾನ್ಯ ಲಕ್ಷಣಗಳನ್ನು ಕುರಿತು ಈಗಾಗಲೇ ವಿವರವಾಗಿ ಬರೆದಾಗಿದೆ. ಈ ಸಾಲುಗಳಲ್ಲೂ ಸಾಮಾನ್ಯ ಲಕ್ಷಣಗಳಿಗೆ ಒಗ್ಗದವು ಗಳು ಇರಬೇಕು. ಹತ್ತನೇ ಟಿಪ್ಪಣಿಯಲ್ಲಿ ಉದಾಹರಣೆಯಾಗಿ ಕೊಟ್ಟಿರುವ ಖಂಡದಲ್ಲಿ ಕಡೆಯ ಸಾಲು ಸಾಮಾನ್ಯ ಲಕ್ಷಣಕ್ಕೆ ಅನುಸಾರವಾಗಿಲ್ಲ. ಅಂಥ ಸಾಲುಗಳನ್ನೂ ಪರಿಶೀಲಿಸಬೇಕು. ಮೇಲಿನ ಹತ್ತು ಟಿಪ್ಪಣಿಗಳಲ್ಲಿ ಕೇವಲ ಮುನ್ನೂರು ಸಾಲು ಗಳನ್ನು ಪರಿಶೀಲಿಸಿದೆವು. ಈಗ ಮಿಕ್ಕ ಸುಮಾರು ಐದು ಸಾವಿರ ಸಾಲುಗಳಲ್ಲಿ ಕಂಡು ಬರಬಹುದಾದ ವ್ಯಭಿಚಾರಗಳನ್ನು (irregularities) ಪರಿಶೀಲಿಸಬೇಕು. ಇದು ಶ್ರಮಸಾಧ್ಯವಾದ ಕೆಲಸ. ಹೀಗೆಂದು ಅವುಗಳನ್ನು ಕಡೆಗಣಿಸುವಂತೆಯೂ ಇಲ್ಲ. ಸುಲಭವಾಗಿ ಹಿಡಿತಕ್ಕೆ ಸಿಕ್ಕುವ ಕೇವಲ ಮುನ್ನೂರು ಸಾಲುಗಳ ಪರಿಶೀಲನೆಯನ್ನು ವಿವರವಾಗಿ ಮಾಡಿ, ಒಟ್ಟು ಕೃತಿಯ ದೃಷ್ಟಿಯಿಂದ ಅಧಿಕ ಸಂಖ್ಯೆಯಲ್ಲಿರುವ ಸಾಲು

ಗಳನ್ನು ಈ ದೃಷ್ಟಿಯಿಂದ ಪರಿಶೀಲಿಸದೆ ಬಿಡುವುದು ಪ್ರಮಾಣೌಚಿತ್ಯಭಂಗವಾಗುತ್ತದೆಯೆಂಬ ದೂರು ಬರಬಾರದೆಂದು, ಅವುಗಳ ಬಗೆಗೆ ನಾನು ತೀರಾ ಉದಾಸೀನನಾಗಿಲ್ಲವೆಂದು ತೋರಿಸಿಕೊಳ್ಳುವುದಕ್ಕಾದರೂ, ಕೆಲವು ಮಾತುಗಳನ್ನು ಮುಂದಿನ ಟಿಪ್ಪಣಿಯಲ್ಲಿ ಬರೆಯುತ್ತೇನೆ.

೨೪. 'ಶ್ರೀಹರಿಚರಿತೆ'ಯಲ್ಲಿ ಇಪ್ಪತ್ತನಾಲ್ಕು ಮಾತ್ರೆಗಳಿರುವ ಸುಮಾರು ೩೮೦೦ ಸಾಲುಗಳೂ, ಇಪ್ಪತ್ತಾರು ಮಾತ್ರೆಗಳಿರುವ ಸುಮಾರು ೯೩೦ ಸಾಲುಗಳೂ, ಇಪ್ಪತ್ತೆಂಟು ಮಾತ್ರೆಗಳಿರುವ ಸುಮಾರು ೨೫೦ ಸಾಲುಗಳೂ ಇವೆ. ಆಶ್ಚರ್ಯದ ಸಂಗತಿಯೆಂದರೆ ಆ ಸಾಲುಗಳಲ್ಲಿ ಸಾಮಾನ್ಯ ಲಕ್ಷಣಕ್ಕೆ ಅನುಗುಣವಾಗಿರದ ಸಾಲುಗಳೇ ಬಹಳ ಕಡಮೆ. ಅಂಥ ಸಾಲುಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು.

(೧) ಸಾಮಾನ್ಯಲಕ್ಷಣಕ್ಕೆ ಅನುಸಾರವಾಗಿದ್ದರೂ ಹಿತವಾದ ಗಣವಿಭಜನೆಗೆ ಸಿಕ್ಕದಂತಹವುಗಳು. ಉದಾಹರಣೆಗಳು :

(ಹಿಂದಣವ) ನೆಂತಪ್ಪನಾ ಕಂಸ ಮಹೋದ್ಧತನಹಂಮನ್ಯ ಪ್ರಭು ?
೫ ೫ ೫ ೫ ೪ (೯.೩.೨೨)

ಸುಖಾಸನವಾಯ್ತು ಪುಷ್ಪಭುಜ, ಸುಕರಂ ಕೈಯಾಸರೆಗೆ
೫ ೫ ೪ ೫ ೫ (೧೪೦.೨೫.೧೦೦)

(ಪುರ) ಪೂರವಾಸವಿಂದೆಮಗಾಯ್ತು ಎನ್ನುತ ವೃದ್ಧನೊರ್ವಂ
೫ ೫ ೫ ೫ ೪
(೧೨೮.೨೩.೬.)

ವಿದ್ಯುದ್ವಿಶದೋಪಹಾಸಂ ಭವಿಷ್ಯಪ್ರಕಾಶಕವೆಂದು
೫. ೪ ೫ ೫೨. ೫ (೧೧.೩.೭೯)

(೨) ಸಾಮಾನ್ಯ ಲಕ್ಷಣವನ್ನು ಮೀರಿರುವ, ಆದರೆ ತನ್ನದೇ ಆದ 'ಸಾಮಾನ್ಯ ಲಕ್ಷಣ'ವನ್ನು ಹೊಂದಿರುವ ಸಾಲುಗಳು. ಇಂಥ ಸಾಲುಗಳು ೨೮ ಮಾತ್ರೆಯ ಸಾಲುಗಳು. ನಾಲ್ಕು ಮಾತ್ರೆಗಳ ಗಣ ಎರಡು ಒಟ್ಟಿಗೆ ಬಂದು, ೩–೫ ಆಗಿಯೋ ೫–೩ ಆಗಿಯೋ ಒಡೆದಿರುತ್ತವೆ. ಉದಾಹರಣೆಗಳು :

ಸರ್ವಭೂತ ನಿರ್ವೈರ ಭಾವಸ್ಫುರಣ ಕುಶಲಮೆತ್ತಣದೀಕೆ (....)
೩ ೫ ೫ ೫ ೫ ೫ (೧೭.೪.೧೦೪)

ದೇವಕೀಗರ್ಭಸ್ಥಗಿತ ಚೇತನ–
ರೊಳಗೆ ನೆಲೆಗೊಂಡುದನು ಕಾಣುತಾ ಮಹಾಭಾಗೆಯನು ಬಣ್ಣಿಪುವು
೫ ೫ ೫ ೩ ೫ ೫
(೧೭.೫.೨)

ಫಲಗರ್ಭೆಯಿಜ್ಯೆ ನೀ ನೀನೆ ದೇವದಾನವಗರ್ಭೆ ದಿತಿಯದಿತಿ
೫ ೩ ೫ ೫ ೫ ೫

(೨) ಯಾವ ರೀತಿಯ ತೃಪ್ತಿಕರವಾದ ಗಣ ವಿಭಜನೆಗೂ ಸಿಕ್ಕದ ಸಾಲುಗಳು. ಉದಾಹರಣೆಗಳು :

ಶ್ರೀ ಹರಿಯೆಂಶಿವನ ಚರಿತಂ ಮಾನವಸಾಧ್ಯಮೆನಿಕುಂ (೧೧೩. ೨೧.೨)
ಎಳ್ಳುರಿಗೆಯತಿರಸಂ ಹೋಳಿಗೆ ಪಾಯಸಂ ಬಗೆ ಬಗೆ (...)
(೧೦೯.೨೦.೩೧)
ಪೀತಾಂಬರಧಾರಿಯುಂ ವನಮಾಲಿಯುಂ ಬರ್ಹ ಬರ್ಹ
(ಚೂಡಾವತಂಸನಂ) (೪೭ ೧೧.೬)

ಮೇಲಿನ ಮೂರು ಬಗೆಯ ಸಾಲುಗಳನ್ನು ಬಿಡಿಬಿಡಿಯಾಗಿ ಪರಿಶೀಲಿಸಿದಾಗ ಹೀಗೆನ್ನಿಸಿದರೂ, ಒಟ್ಟು ಕಾವ್ಯವನ್ನು ಓದುವಾಗ ಪ್ರತೀತಿಯಾಗುವ ಗತಿಯ ಓಘವು ಇವೆಲ್ಲವನ್ನೂ ಕೊಚ್ಚಿಕೊಂಡು ಹೋಗಿ ಬಿಡುತ್ತದೆ.

ಇಪ್ಪತ್ತೆಂಟು ಮಾತ್ರೆಗಳಿರುವ ಸಾಲುಗಳನ್ನು ಕುರಿತು ಒಂದು ಮಾತು. ಈ ಸಾಲುಗಳ ಛಂದಸ್ಸನ್ನು ಕವಿಗಳು ನಿರ್ವಹಿಸಿರುವ ರೀತಿ ಬೆರಗನ್ನು ತರುತ್ತದೆ. ಬಹುಶಃ ಈ ರೀತಿಯ ಸಾಲುಗಳ ರಚನೆ ಕವಿಗಳಿಗೆ ಸಾಕಷ್ಟು ಕಷ್ಟವನ್ನು ಕೊಟ್ಟಿರಬೇಕು. ಆದ್ದರಿಂದಲೇ ಏನೋ ಅಂಥ ಸಾಲುಗಳು ಕಡಮೆ ಸಂಖ್ಯೆಯಲ್ಲಿವೆ. ಆದರೂ ಈ ಸಾಲುಗಳಲ್ಲಿ ಕಂಡು ಬರುವ ಗತಿಗಾಂಭೀರ್ಯ ಅದ್ಭುತವಾದದ್ದು. ಇನ್ನೂ ಎರಡು ಮೂರು ಉಲ್ಲಾಸಗಳನ್ನು ಇದೇ ರೀತಿಯಲ್ಲಿ ಬರೆದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎನಿಸುತ್ತದೆ.

೨೫. ಈಗಾಗಲೇ ಅಲ್ಲಲ್ಲಿ ಆನುಷಂಗಿಕವಾಗಿ ಗಣಪರಿವೃತ್ತಿಯ ಮಾತು ಬಂದಿದೆ. ಇಲ್ಲಿ ಅದರ ಬಗೆಗೇ ಸ್ವಲ್ಪ ವಿವರವಾಗಿ ಬರೆಯಬೇಕು.

ಮುಂದುವರಿಯುವ ಮುನ್ನ, ಏಳಬಹುದಾದ ಒಂದು ಆಕ್ಷೇಪಣೆಗೆ ಸಮಾಧಾನ ನೀಡಬೇಕು. ಆರನೇ ಟಿಪ್ಪಣಿಯಲ್ಲಿ ಪಟ್ಟಿಹಾಕಿರುವ ಸಾಧ್ಯತೆಗಳಲ್ಲಿ ಒಂದನ್ನು ಮೂಲವಾಗಿಟ್ಟುಕೊಂಡು ವಾಕ್ಯವುಗಳನ್ನು ಗಣಪರಿವೃತ್ತಿ ಎಂದೇಕೆ ಪರಿಗಣಿಸಬಾರದು ? ಯಾವುದೋ ಒಂದು ಗತಿಯಲ್ಲಿ ಸಾಗುತ್ತಿರುವ ಸಾಲುಗಳಲ್ಲಿ ಅಲ್ಲಲ್ಲಿ ವಿರಳವಾಗಿ ವೈವಿಧ್ಯವನ್ನು ತರಲು ಉಪಯೋಗಿಸುವ ಪ್ರಕ್ರಿಯೆಗೆ ಗಣಪರಿವೃತ್ತಿ ವೆನ್ನಬಹುದೇ ಹೊರತು, ವಿಪುಲವಾಗಿ ಕಂಡುಬರುವ ಭಿನ್ನರಚನೆಗಳನ್ನು ಗಣಪರಿವೃತ್ತಿ ಎಂದು ಕರೆದರೆ ಆ ಶಬ್ದಕ್ಕೆ ಅರ್ಥವೇ ಇಲ್ಲವಾಗುತ್ತದೆ. ಆದ್ದರಿಂದ ಆ ಸಾಧ್ಯತೆಗಳೆಲ್ಲಾ 'ಮೂಲ'ಗಳೇ.

ಓದುಗರು 'ಶ್ರೀಹರಿಚರಿತೆ'ಯಲ್ಲಿ ಏನನ್ನು ನಿರೀಕ್ಷಿಸಬಹುದು ಎಂಬುದನ್ನು ಸೂಚಿಸಲೋ ಎಂಬಂತೆ ಮೊದಲನೇ ಉಲ್ಲಾಸದಲ್ಲಿ ಬಂದಿರುವ ಕೆಲವು ಸಾಲುಗಳನ್ನು (ಪು ೪.೧೦೧–೧೧೭) ನೋಡಬಹುದು.

ದಿನಕರ ಕರಧರ ಸುರುಚಿರ ಮರಕತ ಮಣಿಸಮ ಸುಂದರ ವರ್ಣನ (೪)
ನೊಸಲ ತಿದ್ದಿ ಮುದ್ದುಗೊಳಿಪ ಕುಗುಳ ಚಿಗುರುದುಟಿಯ
ಮಂದಹಾಸನ (೩)
ಮಂಗಳ ತೇಜಂಗಳ ನೆಲೆಯೆನಿಸುತ ಕಂಗೊಳಿಸುವ ಕಂಗಳವನ (೪/೬)
ಮಂದರನ ಬಿಗಿದಹಿಯೊ ಕಡಲ ಪವಳಿಗೆ ಹಾವೊ ಎನೆ ತೋಳ್ಗಳವನ (೫)
ಕಣ್ಬೆಳಗೆಡೆ ಕೌಸ್ತುಭಮಣಿ ದೀಪಿಸುತಿಹ ವಿಪುಲೋರಸ್ಥಲನ (೬)
ಮುಗಿಲ ಮಳೆಬಿಲ್ಲಂತೆ ಬಳಸಿಹ ಹೊನ್ನದುಗುಲದ ಚೆಲುವರಾಯನ (೩–೪)
ನಡೆಗು ನಿಲವಿಗೂ ದಿವ್ಯಗಾಂಭೀರ್ಯವೀವ ಜಂಘೆಗಳ ಧೀರನ (೩–೫)

ಈ ರೀತಿಯಾಗಿ ಒಂದಾದಮೇಲೊಂದು ಬೇರೆ ಬೇರೆಯ ಲಯಗಳನ್ನು ತರುವುದು ಅಷ್ಟೇನೂ ಹಿತಕರವಲ್ಲ. ಎಲ್ಲೋ ನಮಗೆ ತಿಳಿಯದಂತೆ ಗೋಚರಿಸಿ ಮರೆಯಾಗುವ ಲಯವೈವಿಧ್ಯ ಮೇಲು. ಈ ರೀತಿಯ ಲಯವೈವಿಧ್ಯವನ್ನು ತರಬಲ್ಲ ಗಣಪರಿವೃತ್ತಿ 'ಶ್ರೀಹರಿಚರಿತೆ'ಯಲ್ಲಿ ಸಮೃದ್ಧವಾಗಿದೆ. ಕೆಲವು ಉದಾಹರಣೆಗಳನ್ನು ನೋಡೋಣ.

(೧) ಕೆಳಗೆ ಕೊಟ್ಟಿರುವ ನಾಲ್ಕು ಸಾಲುಗಳ ಮೂಲ ರಚನೆ ೨.೫ ೨.೫ ೫ ೫ ಎಂಬುದೇ ಆಗಿದೆ.

ಆರಿಸಿ ತಂದು ಕಿವಿಯೊಳು ಸುರಿದು ಇರವಿನಾಳದೊಳೆಲ್ಲೊ (...)
(೪೩.೧೦.೮೫)
ಮೆಲ್ಲನೆ ಜಾರಿ ಎತ್ತಲೊ ಸಾರಿ, ಯಾವುದನೊ ಗೆಲಿದಂತೆ (೪೬.೧೧.೨)
ಹರಿದುದು ಮೋಡ ಹರಿದುದು ನೀರು ವೇಣಿಗೊಂಡಾಬಸದಿ (೫೧.೧೧.೧೪೩)
ತನ್ನೊಳ ಉಸಿರೆ ಅದರೊಳು ಹಾಯ್ದು ಕಿವಿಗಳಿಂದೊಳಸರಿವ (೪ .೧೦.೫೭)

ಈ ಸಾಲುಗಳ ಆದಿಭಾಗದಲ್ಲಿ ಕಂಡುಬರುವ ೪–೩ ೪–೩ ಗತಿಯ ಸೊಗಸನ್ನು ಗಮನಿಸಬೇಕು. ಈ ರೀತಿಯ ಗತಿಯ ಬಳಕೆ ವಿಶೇಷವಾಗಿ ಕಂಡುಬರುತ್ತದೆ.

(೨) ಕೆಳಗಣ ಮೂರು ಸಾಲುಗಳ ಮೂಲ ರಚನೆ ೫ ೫ ೪ ೫ ೫ ಎಂಬುದೇ ಆಗಿದೆ.

ಬಯಕೆ ಬೆಂಗಡೆಯುಸೆವ ನೆಳಲೇ ಮಗುಡ, ದೈವವೆ ಬೆಳಕು (೧೭೮.೩೧.೧೨೭)
ಆವ ದೇವರ ಗಾಳಿ ತೇರಿದೊ ಕಾಣೆ ಮಿಂಚಿನ ರೆಕ್ಕೆ (೪೯.೧೧.೮೪)
ಮಳೆಯ ಮೋಡದ ಮೊದಲ ನೋಟದ ವಿಸ್ಮಯವೆ ವಿಸ್ಮಯಂ (೪೮.೧೧.೫೬)

ಇಲ್ಲಿ ಕಂಡುಬರುವ ೩–೪ ೩–೪ ಲಯವನ್ನು ಗಮನಿಸಬೇಕು ಈ ರೀತಿಯ ಲಯವೂ ವಿಶೇಷವಾಗಿ ಗೋಚರಿಸುತ್ತದೆ.

(೩) ಮುಂದಿನ ನಾಲ್ಕು ಸಾಲುಗಳನ್ನು ನೋಡಿ.

ಶ್ರೀಹರಿಚರಿತಚಾರಣಂ ಭಾಗವತಚರಣಶರಣಂ (೩೧.೮.೮)
೨. ೫ ೫ ೫ ೫.೨

ಆ ಬಿಡುವಿನುಲ್ಲಾಸವೋ ಆ ಸಲಸಸಲ್ಲಾಪವೋ (೧೧೩.೨೦.೧೩೯)
೫ ೫ ೨ ೫ ೫.೨

ಸರ್ವಭೂತಪ್ರೀಣನಂ ಗೋವರ್ಧನಾರಾಧನಂ (೧೧೩.೨೦ ೧೪೩)
೫.೨ ೫ ೫.೨ ೫

ಕೋಡೊಳು ಮುಗಿಲು ಮಲೆಯುತಿದೆ ಪಾದವ ಹೊನಲು ತೊಳೆಯುತಿದೆ
೨. ೫ ೫ ೨. ೫ ೫
(೧೦೭.೧೯.೧೨೫)

ಪ್ರತಿಯೊಂದು ಸಾಲಿನಲ್ಲೂ ಇಪ್ಪತ್ತನಾಲ್ಕು ಮಾತ್ರೆಗಳಿದ್ದು, ೧೨–೧೨ ಮಾತ್ರೆಗಳ ಸಮಭಾಗಗಳೂ ಅಂತ್ಯ ಪ್ರಾಸವೂ ಕಂಡುಬರುತ್ತದೆ. ಮೊದಲನೆಯ ಉದಾಹರಣೆಯಲ್ಲಿ ಸಮಭಾಗಗಳ ಒಳರಚನೆಗಳು ಸಮಾನವಾಗಿಲ್ಲ; ಮಿಕ್ಕ ಉದಾಹರಣೆಗಳಲ್ಲಿ ಸಮಾನವಾಗಿವೆ. ಅಲ್ಲದೆ ಈ ಉದಾಹರಣೆಗಳನ್ನು ಒಂದೇ ಸಾಲಾಗಿ ನೋಡಿದಾಗ ಕಂಡುಬರುವ ರಚನೆ ಮೂಲವಾದದ್ದೇ. ಆ ಮೂಲ ರಚನೆಯಿರುವ ಸಾಲುಗಳನ್ನು ಪದಯತಿಯ ಸಹಾಯದಿಂದ ಸಮಭಾಗಗಳನ್ನಾಗಿ ಮಾಡಿ ಅಂತ್ಯಪ್ರಾಸವನ್ನಿಟ್ಟಿರುವುದು ಅವುಗಳಿಗೆ ಅವುಗಳದೇ ಆದ ಒಂದು ಬಳುಕನ್ನು ತಂದುಕೊಟ್ಟಿದೆ.

ಮೇಲಿನ ಉದಾಹರಣೆಗಳಲ್ಲಿ ಮೂಲ ರಚನೆ ಬದಲಾಗಿಲ್ಲ. ಹಾಗೆ ಬದಲಾಗಿರುವ ಕೆಳಗಣ ಇಪ್ಪತ್ತಾರು ಮಾತ್ರೆಗಳ ಸಾಲಿನ ಸೊಗಸೇ ಸೊಗಸು.

ಸಾಗರವೇರುವುದು ಮುಗಿಲಂ. ಕಾನನವೇರುವುದು ಕಂಪಂ (೫೮.೧೩.೬)
೪ ೫ ೪ ೪ ೫ ೪

ಇಪ್ಪತ್ತಾರು ಮಾತ್ರೆಗಳ ಸಾಲಿನಲ್ಲಿ ಮಾತ್ರೆಗಳ ವಿತರಣೆ ಹೀಗೆ: (೫×೪)+(೪×೧)+(೨×೧). ಇದನ್ನು (೫×೨)+(೪×೪) ಎಂದು ಮಾಡಿಕೊಂಡರೆ ಒಂದೊಂದು ಭಾಗದಲ್ಲೂ ಹದಿಮೂರು ಮಾತ್ರೆಗಳಿರುವಂತೆ ಮಾಡಲು ಆಗುತ್ತದೆ. ಇದೇ ರೀತಿಯ ಬದಲಾವಣೆಯಾಗಿರುವ ಇಪ್ಪತ್ತನಾಲ್ಕು ಮಾತ್ರೆಗಳ ಸಾಲನ್ನು ಕೆಳಗೆ ಕೊಟ್ಟಿದೆ.

ಅವುಗಳ ಗಾತ್ರಕಾಕಜ್ಜ. ನನ್ನೀಗಾತ್ರಕೀಕಜ್ಜ (೧೧೨.೧೮.೧೬೮)
೪ ೫ ೩ ೪ ೫ ೩

ಇಲ್ಲಿ (೫×೪)+(೪×೧) ಎಂಬ ವಿತರಣೆಯನ್ನು (೫×೨)+(೪×೨)+(೩×೨) ಎಂದು ಬದಲಾಯಿಸಿದೆ.

ಇಪ್ಪತ್ತೆರಡು ಮಾತ್ರೆಗಳಿರುವ ಒಂದು ಸಾಲಿನಲ್ಲೂ ಇದು ಕಂಡುಬರುತ್ತದೆ.

ಪ್ರೇಮಾಮೋದ ನಿಧಿಯನು ಧರ್ಮೋದ್ಧಾರ ನಿಧಿಯನು (೧೭೪.೩೧.೧೨)
೨.೫ ೪ ೨.೫ ೪

ಇಲ್ಲಿ (೫×೪)+(೨×೧) ಎಂಬ ವಿತರಣೆಯನ್ನು (೫×೨)+(೪×೨)+(೨×೨) ಎಂದು ಬದಲಾಯಿಸಿದೆ.

(೪) ಕಡೆಯದಾಗಿ ಒಂದು ಉದಾಹರಣೆ :

(ಶ್ಯೇನಂ) ಮೃಗವ್ಯವ್ಯಾಪಾದನೋತ್ಸಾಹಹೀನಂ ಗಗನಲೀನಂ (೬೦.೧೩.೪೮)
೫ ೫ ೫ ೪ ೫.೨

ಇಲ್ಲಿ ಕಂಡು ಬರುವ ಗತಿ ಅಕ್ಷರ ವೃತ್ತಗಳದ್ದು. ಅಷ್ಟಿ ಎಂಬ ಛಂದಸ್ಸಿನಲ್ಲಿ ೧೨೬೨೬ ನೇ ವೃತ್ತದ ಪಾದವಿದು. ಹಿಂದಿನ ಸಾಲಿನ ಕೊನೆಯ ಪದವಾದ "ಶ್ಯೇನಂ" ಎಂಬುದನ್ನು ಸೇರಿಸಿಕೊಂಡರೆ, ಧೃತಿ ಎಂಬ ಛಂದಸ್ಸಿನಲ್ಲಿ ೫೮೫೦೧ನೇ ವೃತ್ತದ ಪಾದವಾಗುತ್ತದೆ.

'ಶ್ರೀಹರಿಚರಿತೆ'ಯಲ್ಲಿ ಐದು ಮಾತ್ರೆಯ ಗಣಗಳೇ ಅಧಿಕವಾಗಿರುವುದರಿಂದ ಅದರಲ್ಲಿ ವಾರ್ಧಕ ಷಟ್ಪದಿಯ ಗತಿ ತೋರಿದರೆ ಆಶ್ಚರ್ಯವಿಲ್ಲ. ೩–೪ರ ಲಯವೂ ಕಿವಿಗೆ ವಿಶೇಷವಾಗಿ ಬೀಳುವುದರಿಂದ ಭಾಮಿನೀ ಷಟ್ಪದಿಯ ಗತಿಯೂ ಕೇಳಿಸುತ್ತದೆ. ಮೇಲೆ ಹನ್ನೆರಡನೇ ಟಿಪ್ಪಣಿಯಲ್ಲಿ ಹೇಳಿರುವಂತೆ, ನಾಲ್ಕು ಮಾತ್ರೆಯ ಗಣದ ಬಳಕೆಯಲ್ಲಿ ಕಂಡುಬರುವ ಸೌಲಭ್ಯ ಸ್ವಾತಂತ್ರ್ಯಗಳೇ ಪದಯತಿಯ ಸಹಾಯದಿಂದ ಗಣ ಪರಿವೃತ್ತಿಯು ಮಾಡುವ ಕೆಲಸವನ್ನೇ ಮಾಡುತ್ತದೆ.

೨೬. ಕವಿಗಳೇ ತಮ್ಮ ಕೃತಿಯ ಛಂದಸ್ಸಿನ ಬಗೆಗೆ ಏನು ಬರೆದಿದ್ದಾರೆ ಎಂಬುದನ್ನು ಮೇಲೆ ಎರಡನೇ ಟಿಪ್ಪಣಿಯಲ್ಲಿ ನೋಡಲಾಯಿತು. ಅಲ್ಲಿ ಕಂಡು ಬರುವ "ಭೃಂಗಿನಡೆ", "ಭಾಮಿನೀವಾರ್ಧಕ", "ಸಕಲಮಾತ್ರಾಗತಿಯ ಗಮಕ" ಎಂಬವುಗಳ ಬಗೆಗೆ ಯಥಾಮತಿ ಬರೆದಿದ್ದೇನೆ. ಇನ್ನು "ತೊಂತೊಂನ್ನ ತಾನಗತಿ ಗಮಕದ ಛಂದ" ಎಂಬ ಮಾತನ್ನು ಕುರಿತು ಬರೆಯುವಷ್ಟು ಸಂಗೀತಶಾಸ್ತ್ರದ ಪರಿಚಯ ನನಗಿಲ್ಲ. ಆದ್ದರಿಂದ ಅದರ ಬಗೆಗೆ ಏನನ್ನೂ ಹೇಳಲಾಗಿಲ್ಲ.

೨೭. "ಶುಷ್ಕೋವೃಕ್ಷಸ್ತಿಷ್ಠತ್ಯಗ್ರೇ" ಎಂಬಂತಿರುವ ಈ ಲೇಖನದ ಶೈಲಿಯ ಬಗೆಗೆ ಒಂದು ಮಾತು. 'ಶ್ರೀಹರಿಚರಿತೆ'ಯ ಛಂದೋಗತಿಯ ಸೌಂದರ್ಯವನ್ನು ಕುರಿತು ಹೆಚ್ಚು ಬರೆಯಲು ಹೋಗಿದ್ದರೆ, ಲೇಖನವು ಉದ್ಗಾರಗಳಿಂದ ತುಂಬಿ ಭಾವುಕವಾಗಿಬಿಡುತ್ತಿತ್ತು. ಮೇಲೆ ಮಾಡಿರುವುದು ಬಹುಮಟ್ಟಿಗೆ ಬಿಡಿ ಸಾಲುಗಳ ವಿಶ್ಲೇಷಣೆ.* ಯಾವುದಾದರೂ ಒಂದು ಉಲ್ಲಾಸವನ್ನು ಅಖಂಡವಾಗಿ ಗಟ್ಟಿಯಾಗಿ

* ಸಾಲಿನ ಕೊನೆಯಲ್ಲಿ ಕಡ್ಡಾಯವಾಗಿ ವಿರಾಮವಿಲ್ಲದಿದ್ದರೂ, ಕಡ್ಡಾಯವಾಗಿ ಯತಿ ಪರಿಪಾಲನೆಯಾಗಿರುವ, ಸಾಲಿನಿಂದ ಸಾಲಿಗೆ ಹರಿಯುವ ಇಂಥ ಕಾವ್ಯಗಳ ಛಂದೋವಿಶ್ಲೇಷಣೆ ಮಾಡುವಾಗ ಸಾಲನ್ನಷ್ಟೇ ಗಣನೆಗೆ ತೆಗೆದುಕೊಳ್ಳಬೇಕೇ ಅಥವಾ ಸಾಲಿಗಿಂತ ಭಿನ್ನವಾದ

ಅರ್ಥಕ್ಕೆ ಸರಿಯಾಗಿ ಪಾದದಿಂದ ಪಾದಕ್ಕೆ ಹರಿಯುತ್ತಾ ಪಠಿಸುವಾಗ ಉಂಟಾಗುವ ಗತಿಯ ಅನುಭವವನ್ನು ಮಾತಿನಲ್ಲಿ ಹೇಗೆ ಹಿಡಿದಿಡುವುದು? ಅಲ್ಲದೆ, ಛಂದೋ ದ್ರವ್ಯಮೀಮಾಂಸೆ ಲೆಕ್ಕಕ್ಕೆ ಸಿಕ್ಕುವಂತಿದ್ದು ವಸ್ತುನಿಷ್ಠವಾಗಿರಲು ಸಾಧ್ಯವಾಗುತ್ತದೆ. ಛಂದೋಗತಿಯ ಮೀಮಾಂಸೆಯಾದರೋ ಅನುಭವೈಕನಿಷ್ಠವಾದ್ದರಿಂದ ಅದನ್ನು ಕುರಿತ ಬರೆಯುವುದೂ ಕಷ್ಟ. ಲೇಖನದ ಜೊತೆಗೇ ಧ್ವನಿಮುದ್ರಿತ ಕ್ಯಾಸೆಟ್ಟನ್ನು ಕೊಡುವಂತಿದ್ದರೂ ಈ ಕಷ್ಟದ ನಿವಾರಣೆಯಾಗುತ್ತಿತ್ತೇ ಎಂಬುದೂ ಸಂದೇಹ. ಏಕೆಂದರೆ 'ಕೇಳು'ವುದೇ ಸ್ವಯಂ ಅನುಭವವಾಗಲಾರದು.

*

ಕಡೆದು ಕಾವ್ಯದ ಸಾರವೆಲ್ಲವ
    ರಸಿಕ ಸಹೃದಯು ಸವಿವನು
ಶುಷ್ಕ ಛಂದಃಶಾಸ್ತ್ರಿಪಂಡಿತ
    ನೀರುಮಜ್ಜಿಗೆ ಕುಡಿವನು!

(ಪ್ರೇರಣೆ : ಸಂಸ್ಕೃತದಿಂದ)

ಮೇಲಿನ ಮಾತು

'ಶ್ರೀಹರಿಚರಿತೆ' ಪ್ರಕಟವಾಗಿ ಬಿಡುಗಡೆಯಾದ ದಿನವೇ ಅದರ ಪ್ರತಿಯೊಂದನ್ನು ಕೊಂಡುಕೊಂಡೆ, ನಿಧಾನವಾಗಿ ಓದಿದೆ. ಆ ಕಾವ್ಯದಲ್ಲಿ ಬಳಕೆಯಾಗಿರುವ ಛಂದಸ್ಸು ನನ್ನ ಮನಸ್ಸನ್ನು ಸೆಳೆಯಿತು. ಅದನ್ನು ಕುರಿತು ವಿವರವಾದ ವರ್ಣನಾತ್ಮಕ ವಿಶ್ಲೇಷಣೆಯೊಂದನ್ನು ಬರೆಯೋಣವೆನಿಸಿತು. ಆ ಪುಸ್ತಕವನ್ನು ಓದಿದ ಹೊಸದರಲ್ಲೇ ಪು.ತಿ.ನ. ಅವರನ್ನು ಭೇಟಿ ಮಾಡುವ ಸಂದರ್ಭ ಬಂದಿತ್ತು. ಆಗ ಅವರಿಗೆ "ಶ್ರೀಹರಿಚರಿತೆ"ಯ ಛಂದಸ್ಸನ್ನು ಕುರಿತು ಬರೆಯಬೇಕೆಂದಿರುವುದನ್ನು ತಿಳಿಸಿದೆ. ಅವರು "ಯಾವಾಗಲಾದರೂ ಬಿಡುವಾಗಿ ಬಾರಯ್ಯ, ಓದಿ ತೋರಿಸುತ್ತೇನೆ. ಅದರಲ್ಲಿ ನಾನು ಏನು ಮಾಡಿದ್ದೇನೆ ಎಂಬುದನ್ನು ತೋರಿಸುತ್ತೇನೆ" ಎಂದರು. ನಾನು ಕೂಡಲೇ, "ಬೇಡ, ಬೇಡ. ಅದನ್ನು ಕುರಿತು ನೀವೇನೂ ಹೇಳಬೇಕಾಗಿಲ್ಲ. ನಾನೇ ಓದಿ ಅದರ ಛಂದಸ್ಸನ್ನು ಕಂಡುಹಿಡಿದು ಲೇಖನ ಬರೆದು ತಂದು ತೋರಿಸುತ್ತೇನೆ"

ಇನ್ನಾವುದಾದರೂ ಖಂಡವನ್ನು ಗಣನೆಗೆ ತೆಗೆದುಕೊಳ್ಳಬೇಕೇ ಎಂಬ ವಿಷಯದಲ್ಲಿ ನನಗೆ ಯಾವ ನಿರ್ಧಾರಕ್ಕೂ ಬರುವುದು ಸಾಧ್ಯವಾಗದಿದ್ದುದರಿಂದಲೂ, ಒಂದು ಸಮಯ ಸಾಲಿಗಿಂತ ಭಿನ್ನವಾದ ಘಟಕವನ್ನೇ ಗಣನೆಗೆ ತೆಗೆದುಕೊಳ್ಳಬೇಕು ಎಂದು ನಿರ್ಧರಿಸಿದರೂ ಆ ಘಟಕ ಯಾವುದು ಎಂಬ ಪ್ರಶ್ನೆಗೆ ಉತ್ತರವು ನನಗೆ ಹೊಳೆಯದಿದ್ದುದರಿಂದಲೂ, ಈಗಿರುವಷ್ಟರಿಂದಲೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಈ ವಿಷಯದಲ್ಲಿ ನೆರವು ನೀಡಬಹುದೆಂಬ ನಿರೀಕ್ಷೆಯಿಂದ ಮಹಾಛಂದಸ್ಸಿನ ಮೇಲೆ ಬರೆಯಲಾಗಿರುವ ಎರಡು ಲೇಖನಗಳನ್ನು ಓದಿ ನೋಡಿದೆ. ಇದರಿಂದ ನನ್ನ ಮನಸ್ಸಿನಲ್ಲಿ ಮೂಲಭೂತವಾದ ಸಮಸ್ಯೆಗಳ ಸರಮಾಲೆಯೇ ಎದ್ದಿತು. ಆ ಸಮಸ್ಯೆಗಳನ್ನು ಕುರಿತು ಬೇರೆಯಾಗಿ ಒಂದು ಚಿಕ್ಕ ಲೇಖನವನ್ನು ಬರೆಯಬೇಕೆಂದಿದ್ದೇನೆ.

ಎಂದು ಬಿಟ್ಟೆ, ಸುಮಾರು ನಾಲ್ಕೈದು ತಿಂಗಳ ಅವಧಿಯಲ್ಲಿ ಸಾವಕಾಶವಾಗಿ ಆಗಾಗ ಕೆಲಸ ಮಾಡುತ್ತಿದ್ದು, ಮೇಲಿನ ಲೇಖನವನ್ನು ೧೯೮೮ ಸೆಪ್ಟೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ಬರೆದು ಮುಗಿಸಿದೆ.

ಪು.ತಿ.ನ. ಅವರ ಮನೆಗೆ ೨೬–೯–೮೮ರಂದು ಹೋಗಿ ಅಲ್ಲೇ ಹಗಲೆಲ್ಲಾ ಕಳೆದೆ. ಅವರೂ ನನ್ನ ಲೇಖನವನ್ನು ತಾಳ್ಮೆಯಿಂದ ಓದಿದರು. ಆದರೆ ನಮ್ಮಿಬ್ಬರಿಗೂ 'ಷಾಕ್' ಆಯಿತು, ನನ್ನ ವಿಶ್ಲೇಷಣೆ ಅವರ ಆಶಯಕ್ಕೆ ವಿರುದ್ಧವಾಗಿದ್ದರಿಂದ ಅವರಿಗೆ ಒಪ್ಪಿಗೆಯಾಗಲಿಲ್ಲ. ಅವರ ಪ್ರಕಾರ ನನ್ನ ವಿಶ್ಲೇಷಣೆಯಲ್ಲಿ ಐದು ಮಾತ್ರೆಗಳ ಗಣಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕಿದೆ; ಅದರಲ್ಲಿ ಭಾಮಿನೀ ನಡೆಯನ್ನು ಪ್ರಮುಖವಾಗಿ ತೋರಿಸಬೇಕು. ನಾನು ಆ ನಡೆ ಗಣಪರಿವೃತ್ತಿಯಿಂದ ತೋರುತ್ತದೆ ಎಂದು ಹೇಳಿದೆ. ಅವರಿಗೆ ತೃಪ್ತಿಯಾಗಲಿಲ್ಲ. ಅವರ ಪ್ರಕಾರ ಆ ನಡೆಯನ್ನು ಮೂಲ ರಚನೆಯಲ್ಲೇ ತೋರಿಸಬೇಕಾಗಿತ್ತು.

ಮನೆಗೆ ಹಿಂತಿರುಗಿದೆ. ಪು.ತಿ.ನ. ಅವರು ಹೇಳಿದಂತೆ ೩–೪ರ ಅಥವಾ ೪–೩ರ ನಡೆಯನ್ನು ಮೂಲ ರಚನೆಯಲ್ಲೇ ತೋರಿಸುವುದು ಸುಲಭ ಎಂದು ನನಗೆ ತೋರಿತು. ನನ್ನ ಯೋಚನೆ ಹರಿದದ್ದು ಹೀಗೆ: ಹೇಗಿದ್ದರೂ ನನ್ನ ವಿಶ್ಲೇಷಣೆಯಲ್ಲಿ ಎಷ್ಟೋ ಕಡೆ ೫.೨ ಎಂದೋ ೨.೫ ಎಂದೋ ಗಣವಿಭಜನೆ ತೋರಿಸಿದ್ದೇನೆ. ೫+೨=೭. ಈ ೭ ಅನ್ನೇ ೩–೪ ಆಗಿಯೋ ೪–೩ ಆಗಿಯೋ ಒಡೆದರೆ ಆಯಿತು. ನನ್ನ ವಿಶ್ಲೇಷಣೆಯಲ್ಲಿ ೪ ಮಾತ್ರೆಗಳ ಗಣವನ್ನು ತೋರಿಸಿರುವ ಕಡೆಗಳಲ್ಲಿ, ಹಿಂದೆ ಅಥವಾ ಮುಂದೆ ಬರುವ ೫–೫ರ ಅನುಪೂರ್ವಿಯನ್ನು ೩–೪–೩ ಆಗಿ ಒಡೆದರೆ ಆಯಿತು. ಹೀಗೆ:

(೧) ೪ ೫ ೫ ೫ ೫
೪ ೩ ೪ ೩ ೫ ೫

(೨) ೫ ೪ ೫ ೫ ೫
೫ ೪ ೩ ೪ ೩ ೫

(೩) ೫ ೫ ೪ ೫ ೫
೩ ೪ ೩ ೪ ೫ ೫
೫ ೫ ೪ ೩ ೪ ೩
(೩ ೪ ೩ ೪ ೩ ೪ ೩)

(೪) ೫ ೫ ೫ ೪ ೫
೫ ೩ ೪ ೩ ೪ ೫

(೫) ೫ ೫ ೫ ೫ ೪
೫ ೫ ೩ ೪ ೩ ೪

ಈ ಯೋಚನೆಯ ಆಧಾರದ ಮೇಲೆ ಈ ಲಕ್ಷಣವನ್ನು ಹೊರಡಿಸಿದೆ: ಪ್ರತಿ ಸಾಲಿನಲ್ಲೂ ಐದು ಮಾತ್ರೆಗಳ ಗಣಗಳು ಎರಡು, ಏಳು ಮಾತ್ರೆಗಳ ಗಣಗಳು ಎರಡು. ಇವುಗಳು ಯಾವ ಕ್ರಮದಲ್ಲಿ ಬೇಕಾದರೂ ಬರಬಹುದು. ಏಳು ಮಾತ್ರೆಗಳ ಗಣಗಳು ೪–೩ ಆಗಿಯೋ ೩–೪ ಆಗಿಯೋ ಒಡೆಯುತ್ತವೆ :

೫	೫	೭	೭						
೫	೭	೫	೭			೪	೩	೪	೩
೫	೭	೭	೫			೪	೩	೩	೪
೭	೭	೫	೫	೬ × ೪		೩	೪	೩	೪
೭	೫	೭	೫			೩	೪	೪	೩
೭	೫	೫	೭						

೨೪ ಸಾಧ್ಯತೆಗಳಾಗುತ್ತವೆ :

೫	೫	೪	೩	೪	೩	೪	೩	೪	೩	೫	೫
೫	೫	೪	೩	೩	೪	೪	೩	೩	೪	೫	೫
೫	೫	೩	೪	೩	೪	೩	೪	೩	೪	೫	೫
೫	೫	೩	೪	೪	೩	೩	೪	೪	೩	೫	೫
೫	೪	೩	೫	೪	೩	೪	೩	೫	೪	೩	೫
೫	೪	೩	೫	೩	೪	೪	೩	೫	೩	೪	೫
೫	೩	೪	೫	೩	೪	೩	೪	೫	೩	೪	೫
೫	೩	೪	೫	೪	೩	೩	೪	೫	೪	೩	೫
೫	೪	೩	೪	೩	೫	೪	೩	೫	೫	೪	೩
೫	೪	೩	೩	೪	೫	೪	೩	೫	೫	೩	೪
೫	೩	೪	೩	೪	೫	೩	೪	೫	೫	೩	೪
೫	೩	೪	೪	೩	೫	೩	೪	೫	೫	೪	೩

ಮೇಲಿನ ವಿಶ್ಲೇಷಣೆಯನ್ನು ೨೮–೯–೮೮ರಂದು ಪು. ತಿ. ನ. ಅವರಿಗೆ ಕಳಿಸಿದೆ. ಈ ವಿಶ್ಲೇಷಣೆ ಹೇಗೆ work ಆಗುತ್ತದೆ ನೋಡೋಣ ಎಂದುಕೊಂಡು 'ಶ್ರೀಹರಿ ಚರಿತೆ'ಯ ಸಾಲುಗಳನ್ನು ಅಲ್ಲಲ್ಲೇ ಪರಿಶೀಲಿಸುತ್ತಾ ಬಂದೆ. "ಇವರಿಗೆ ಐದು ಮಾತ್ರೆಗಳ ಗಣ ಎಂದರೇ 'ಅಲರ್ಜಿ'. ನಾನು ಕಳಿಸಿರುವ ವಿಶ್ಲೇಷಣೆಯಲ್ಲೂ ಐದು ಮಾತ್ರೆಗಳ ಗಣಗಳು ಉಳಿದುಕೊಂಡು ಬಿಟ್ಟಿವೆ. ಆದ್ದರಿಂದ ಅವುಗಳನ್ನೂ ಒಡೆಯೋಣ" ಎನಿಸಿತು. ಈ ಲಕ್ಷಣ ಹೊರಟಿತು :

ಪ್ರತಿ ಸಾಲಿನಲ್ಲೂ ಏಳು ಮಾತ್ರೆಗಳ ಗಣಗಳು ಮೂರು, ಮೂರು ಮಾತ್ರೆಗಳ ಗಣ ಒಂದು. ಮೂರು ಮಾತ್ರೆಗಳ ಗಣ ಸಾಧಾರಣವಾಗಿ ಪಾದಾಂತ್ಯದಲ್ಲಿ ಕಂಡು ಬರುತ್ತದೆ. ಕ್ವಚಿತ್ತಾಗಿ ಬೇರೆ ಕಡೆಗಳಲ್ಲೂ ಕಂಡು ಬರಬಹುದು. ಏಳು ಮಾತ್ರೆಗಳ ಗಣಗಳು ೩–೪ ಆಗಿಯೋ ೪–೩ ಆಗಿಯೋ ಒಡೆಯುತ್ತವೆ.

ಈ ಲಕ್ಷಣವನ್ನೂ, ೨೯ ಸಾಲುಗಳನ್ನು ನನ್ನ ವಿಶ್ಲೇಷಣೆಯ ಪ್ರಕಾರವೂ ಈ ಹೊಸ ವಿಶ್ಲೇಷಣೆಯ ಪ್ರಕಾರವೂ ವಿಭಜಿಸಿ ತೋರಿಸಿ ಪು.ತಿ.ನ. ಅವರಿಗೆ ೩೦–೯–೮೮ ರಂದು ಒಂದು ಕಾಗದವನ್ನು ಬರೆದೆ.

ನನ್ನ ೨೮–೯–೮೮ರ ಕಾಗದಕ್ಕೆ ಅವರು ೨೯–೯–೮೮ರಂದೇ ಉತ್ತರವಾಗಿ ಬರೆದ ಕಾಗದ ನನಗೆ ೧–೧೦–೮೮ರಂದು ತಲಪಿತು. ಅವರು ಬರೆದ ಪತ್ರದಿಂದ ಉದ್ಧರಣ :

> ನಿನ್ನ ಈಗಿನ ವಿಶ್ಲೇಷಣೆ ಬಹಳ ಚೆನ್ನಾಗಿದೆ. ಇದು ನನಗೆ ಸಮ್ಮತ. ಐದು ಮಾತ್ರೆಯ ಗಣವನ್ನೂ ೨+೩ ಎಂದಾಗಿಸಿದರೆ ಇನ್ನೂ ಚೆನ್ನ. ೨, ೩, ೪ ಈ ಗಣಗಳು consistent ಆಗಿ ವಿವಿಧ combinations ನಲ್ಲಿ ಬರುತ್ತದೆ.
>
> ಶಮದಂ ಶರ್ಮದಂ ತನೋನುದಂ ಸಚ್ಚಿದಾನಂದಂ
> ೨+೨ ೩+೨ ೩+೩ ೨+೩+೪
>
> ಈ ನಿಯಮ ೨೪ ಮಾತ್ರೆಗಳ ಸಾಲುಗಳಿಗಲ್ಲದೆ ೨೬, ೨೮ ಮಾತ್ರೆಗಳ ಸಾಲುಗಳಿಗೂ ಅನ್ವಯಿಸುತ್ತದೆ. Many thanks. ತುಂಬ ಶ್ರಮವಹಿಸಿದ್ದೀಯೆ. You gave me a shot in the arm. I felt very happy to have found a true ರಸಿಕ in you who reacts so wonderfully to the ಲಾವಣ್ಯ of ಛಂದಸ್ that permeates the whole work.

ನನ್ನ ೩೦–೯–೮೮ರ ಕಾಗದಕ್ಕೆ ಅವರ ಪ್ರತಿಕ್ರಿಯೆಯನ್ನು ಕಾಯುತ್ತಿರುವಂತೆಯೇ, ಮೇಲಿನ ಅವರ ಪತ್ರಕ್ಕೆ ಉತ್ತರವಾಗಿ ನಾನು ೩–೧೦–೮೮ರಂದು ಒಂದು ಕಾಗದವನ್ನು ಬರೆದೆ : ಅದರಿಂದ ಉದ್ಧರಣ :

> ನಾನು ಕಳಿಸಿದ ವಿಶ್ಲೇಷಣೆ ನಿಮಗೆ ಒಪ್ಪಿಗೆಯಾಗಿದೆಯೆಂದು ತಿಳಿಸಿದ್ದೀರಿ. ಅಲ್ಲದೆ ನನ್ನ ಗತಿಪ್ರಜ್ಞೆಗೆ compliments ಕೊಟ್ಟಿದ್ದೀರಿ. I do not deserve it. What I did was just to make some arithmetical readjustments in my analysis.

ನೀವು "೨, ೩, ೪ ಈ ಗಣಗಳು consistent ಆಗಿ ವಿವಿಧ combinations ನಲ್ಲಿ ಬರುತ್ತವೆ.

ಶಮದಂ ಶರ್ಮದಂ ತಮೋನುದಂ ಸಚ್ಚಿದಾನಂದಂ''
೨+೨ ೩+೨ ೩+೩ ೨+೩+೪

ಎಂದು ಬರೆದಿದ್ದೀರಿ. ನನಗೆ ಇಷ್ಟೇ ಸಾಲದು. ಅಲ್ಲದೆ ಕೆಲವು ಸಂದೇಹಗಳೂ ಇವೆ :

೧. ಮೊದಲನೆಯದಾಗಿ ನನಗೆ ಎರಡು ಮಾತ್ರೆಗಳ ಗಣವನ್ನು recognise ಮಾಡಬಹುದು ಎಂಬುದರಲ್ಲೇ ಸಂದೇಹವಿದೆ. ಆದಕ್ಕೋಸ್ಕರವಾಗಿಯೇ ನನ್ನ ಲೇಖನದಲ್ಲಿ ''ಎರಡು ಮಾತ್ರೆಗಳ ತುಂಡು'' ಎಂದಿದ್ದೇನೆ. ಇದೇನೂ ಅಂಥ ದೊಡ್ಡ ವಿಷಯವಲ್ಲ ಎಂದು ಬಿಟ್ಟುಬಿಡಬಹುದು.

೨. ನೀವೇನೋ 'ಶ್ರೀಹರಿಚರಿತೆ'ಯ ಸಾಲುಗಳನ್ನು (ಮುಖ್ಯವಾಗಿ ೨೪ ಮಾತ್ರೆಗಳಿರುವವುಗಳನ್ನು) ಅಳೆಯಲು ಉಪಯೋಗಿಸುವ ಮೂಲ ಘಟಕಗಳು ೨, ೩, ೪—ಈ ಗಣಗಳು ಎಂದಿದ್ದೀರಿ. Fine. ಆದರೆ ಇಷ್ಟೇ ಸಾಲದು. ನೀವು ಮಾಡಿರುವಂತೆ (''ಶಮದಂ...'' ಎಂಬುದರಲ್ಲಿ) ಮಾಡಿದರೆ, ಯಾವುದೇ ಕವಿತೆಯ (including ನವ್ಯಕಾವ್ಯ) ಯಾವುದೇ ಸಾಲನ್ನು, ಏಕೆ, ಯಾವುದೇ ಗದ್ಯಖಂಡದ ಯಾವುದೇ ವಾಕ್ಯವನ್ನು ತೆಗೆದುಕೊಂಡು ಅದರಲ್ಲಿರುವ ಪದಗಳನ್ನು ಆ ರೀತಿ ವಿಶ್ಲೇಷಿಸಿ ತೋರಿಸಿಬಿಡಬಹುದು. (I grant that the line is a beautiful one and has a ಗತಿ of its own, but in my opinion it defies analysis) ಹಾಗೆ ಮಾಡಿದರೆ, ಯಾವ ರೀತಿಯ ಗತಿ ಪ್ರತೀತಿಯಾಗಬೇಕಾಗಿದೆ ಎಂಬುದು ಗೊತ್ತಾಗುವುದಿಲ್ಲ.

೩. ಹಾಗೆ ಗೊತ್ತಾಗಬೇಕಿದ್ದರೆ, ಒಂದು ಸಾಲಿನಲ್ಲಿ ಈ ಮೂಲ ಘಟಕಗಳು ಎಷ್ಟು ಇವೆ, ಅವುಗಳು ಬರುವ ಕ್ರಮ ಯಾವುದು ಎಂಬುದನ್ನು ಖಚಿತವಾಗಿ ತಿಳಿಸಬೇಕಾಗುತ್ತದೆ. ಇದನ್ನೇ ನೀವು consistent, combinations ಎಂಬ ಶಬ್ದಗಳಿಂದ ತಿಳಿಸಲು ಪ್ರಯತ್ನಿಸಿದ್ದೀರಿ. ಆದರೆ ಇಷ್ಟೇ ಸಾಲದು. ಈ ಮೂಲ ಘಟಕಗಳು ಎಷ್ಟು ಎಂದರೆ ಅಷ್ಟು, ಎಲ್ಲಿ ಎಂದರೆ ಅಲ್ಲಿ, ಹೇಗೆ ಎಂದರೆ ಹಾಗೆ ಬರುವಂತಿಲ್ಲ. ಈ ವಿಚಾರವಾಗಿ ಸ್ವಲ್ಪ ಬರೆಯುತ್ತೀರಾ?

೪. ಮತ್ತೂ ಒಂದು ಸಂದೇಹವುಂಟು. ನಾನು ನಿಮಗೆ ಕಳಿಸಿದ ವಿಶ್ಲೇಷಣೆಯ ಪ್ರಕಾರ ೩-೪ರ ಅನುಪೂರ್ವಿಯೂ ೪-೩ರ ಅನುಪೂರ್ವಿಯೂ ಒಂದೇ ಸಾಲಿನಲ್ಲಿ ಬರಬಹುದು. ಇದು ನನಗೆ ಹಿತವಾಗಿ ಕಾಣುವುದಿಲ್ಲ. Either the two sequences have to be

interrupted by some other ಗಣ if they come in the same line, or they should not come at all in the same line, ನಿಮ್ಮ ಅಭಿಪ್ರಾಯವನ್ನು ತಿಳಿಸುವುದು.

ನನ್ನ ೩೦–೯–೮೮ರ ಕಾಗದಕ್ಕೆ ಅವರು ಉತ್ತರವಾಗಿ ೨–೧೦–೮೮ರಂದು ಎರಡು ಕಾಗದಗಳನ್ನು ಬರೆದರು. ಅವುಗಳ ಪ್ರಕಾರ ನಾನು ಕಳಿಸಿದ್ದ ಎರಡನೆಯ ವಿಶ್ಲೇಷಣೆ ಅವರಿಗೆ ಹಿಡಿಸಲಿಲ್ಲ. ನಾನು ೨೮–೯–೮೮ರಂದು ಕಳಿಸಿದ ವಿಶ್ಲೇಷಣೆಯೇ ಸರಿ ಎಂದು ಬರೆದರು. ಈ ವಿಚಾರದಲ್ಲಿ ತಮ್ಮ ಕೊನೆಯ ಮಾತೋ ಎಂಬಂತೆ ಹೀಗೆ ಬರೆದರು :

ನನ್ನ ಅಭಿಪ್ರಾಯ ಹೀಗಿದೆ :

೧. ೨೮ ಮಾತ್ರೆಗಳಿರುವ ಸಾಲುಗಳಲ್ಲಿ ೭ ಮಾತ್ರೆಗಳ ನಾಲ್ಕು ಗಣ ಇವೆ.

೨. ೨೬ ಮಾತ್ರೆಗಳಿರುವ ಸಾಲುಗಳಲ್ಲಿ ೭ ಮಾತ್ರೆಗಳ ಮೂರು ಗಣ, ೫ ಮಾತ್ರೆಯ ಒಂದು ಗಣವೂ ಇದೆ.

೩. ೨೪ ಮಾತ್ರೆಗಳಿರುವ ಸಾಲುಗಳಲ್ಲಿ ೭ ಮಾತ್ರೆಗಳ ಎರಡು ಗಣಗಳೂ ೫ ಮಾತ್ರೆಗಳ ಎರಡು ಗಣಗಳೂ ಇವೆ. ೨೪ ಮಾತ್ರೆಗಳ ಸಾಲುಗಳೇ ಈ ಕೃತಿಯಲ್ಲಿ ಅಧಿಕವಾಗಿವೆ. ೭ ಮಾತ್ರೆಯ ಗಣ ೪+೩ ಅಥವಾ ೨+೫ ಆಗಿ ಒಡೆಯುವ ಹಾಗೂ ೫ ಮಾತ್ರೆಯ ಗಣ ೨+೩ ಆಗಿ ಒಡೆಯುವ ಸೌಲಭ್ಯ ಹೊಂದಿರುವುದರಿಂದ ಈ ಮುಂಚಕುಗಳನ್ನು ಸಂದರ್ಭಾನುಸಾರವಾಗಿ ಆಂತರಲಯವೈವಿಧ್ಯವನ್ನೂ ಗಮಕದ ಬೆಡಗನ್ನೂ ತರುವುದಕ್ಕಾಗಿ, ಸಾಲೊಟ್ಟಿನ ಮಾತ್ರಾ ಸಂಖ್ಯೆಯನ್ನು ಮೀರದಂತೆ ಜೋಡಿಸಿದೆ.

ಐದರ ಹಿಂದೆಯೋ ಮುಂದೆಯೋ ನಾಲ್ಕು ಮಾತ್ರೆಯ ಗಣ ಬಂದಾಗ ಭೃಂಗಿ ನಡೆಯ ಅನುಭವವಾಗುತ್ತದೆ.

ಇಷ್ಟೇ ಇದರ ಸ್ವಾರಸ್ಯ

ಪ್ರಾಯಶಃ ಇದನ್ನು ನೀನು ಒಪ್ಪಬಹುದು. ಏಕೆಂದರೆ ಮೊದಲು ನಾನು ಹೊರಟಿದ್ದು ಕುಮಾರವ್ಯಾಸನ ಷಟ್ಪದಿಯ ಮೊದಲೆರಡು ಸಾಲುಗಳನ್ನು ನನ್ನ ಒಂದು ಸಾಲನ್ನಾಗಿ ಮಾಡಿಕೊಂಡು ಭಾಮಿನೀ ರಗಳೆಯನ್ನು ರಚಿಸಬೇಕೆಂದು. ಮೊದಲ ಉಲ್ಲಾಸವನ್ನು ಎರಡು ಮೂರು ನಾಲ್ಕನೆಯದನ್ನು ಸಹ ಈ ರಗಳೆಯಲ್ಲಿ ಬರೆದು ತುಂಬ ಅಸಮರ್ಪಕವಾಗಿ ಕಂಡದ್ದರಿಂದ ನಾಲ್ಕನೆಯದನ್ನು ಮಾತ್ರ ಈಗಿರುವಂತೆ ಉಳಿಸಿಕೊಂಡು ಮಿಕ್ಕ ಮೂರನ್ನು ೨೪ಕ್ಕೆ ತಿರುಗಿಸಿ ಮರಳಿ ಬರೆದೆ. ೨೪ ತುಂಬಾ ಸೊಗಸಾಗಿ ಕಂಡಿತು. ಅದು 'ಬೇಸಿಕ್'........

ಇದು ಕೂಡಾ ನನ್ನ ಶಾಸ್ತ್ರ ಬುದ್ಧಿಗೆ ಪೂರ್ಣವಾಗಿ ಒಪ್ಪಿಗೆಯಾಗದಿದ್ದರೂ ಈ ವಿಚಾರದಲ್ಲಿ ಚರ್ಚೆಯನ್ನು ಮುಂದುವರಿಸುವುದು ಉಚಿತವೂ ಫಲಪ್ರದವೂ ಅಲ್ಲವೇನೋ ಎಂದುಕೊಂಡು ಸುಮ್ಮನಾದೆ.

ಈ ಎರಡು ವಿಶ್ಲೇಷಣೆಗಳನ್ನು (ಎಂದರೆ, ನನ್ನ ಲೇಖನದಲ್ಲಿರುವುದು ಹಾಗೂ ನಾನು ೨೮–೯–೮೮ರಂದು ಕಳಿಸಿ ಪು.ತಿ.ನ. ಅವರ ಒಪ್ಪಿಗೆ ಪಡೆದದ್ದು) ಕುರಿತು ಬರೆಯುವ ಮುನ್ನ ನನಗೆ ಬೆರಗು ತರುವ ಒಂದು ವಿಚಾರವನ್ನು ತಿಳಿಸಬೇಕು. ಓದುಗರು ಈಗಾಗಲೇ ಗಮನಿಸಿರಬಹುದಾದಂತೆ, ನಾನು ೨೮–೯–೮೮ರಂದು ಕಳಿಸಿದ ವಿಶ್ಲೇಷಣೆಯು 'ಶ್ರೀಹರಿಚರಿತೆ'ಯನ್ನು ಮತ್ತೆ ಆಮೂಲಾಗ್ರವಾಗಿ ಓದಿ ಮಾಡಿದ ವಿಶ್ಲೇಷಣೆಯಲ್ಲ. ಸಂಖ್ಯಾಕ್ರೀಡೆಯನ್ನಾಡಿ ನನ್ನ ಲೇಖನದಲ್ಲಿರುವ ವಿಶ್ಲೇಷಣೆಯಿಂದ ಸಿದ್ಧಪಡಿಸಿದ್ದು. ಇದು ಕವಿಗಳಿಗೆ ಒಪ್ಪಿಗೆಯಾಯಿತು!

ಇರಲಿ. ಈ ಎರಡು ರೀತಿಯ ವಿಶ್ಲೇಷಣೆಗಳನ್ನು 'ಶ್ರೀಹರಿಚರಿತೆ'ಯ ಸಾಲುಗಳಿಗೆ ಅನ್ವಯಿಸಿ ನೋಡಿದಾಗ ಆಶ್ಚರ್ಯವಾಯಿತು. ನನ್ನ ವಿಶ್ಲೇಷಣೆ work ಆಗುತ್ತದೆ ಎಂಬುದರಲ್ಲಿ ಸಂದೇಹವಿರಲಿಲ್ಲ. ಈ ಹೊಸ ವಿಶ್ಲೇಷಣೆಗೆ ಹೋಲಿಸಿ ನೋಡಿದಾಗ :

(೧) ಎರಡು ವಿಶ್ಲೇಷಣೆಗಳಿಗೂ ಹೊಂದಿಕೊಂಡು ತೃಪ್ತಿಕರವಾದ ಗಣವಿಭಜನೆಗೆ ಎಡೆಕೊಡುವ ಸಾಲುಗಳು ಬೇಕಾದಷ್ಟಿವೆ

(೨) ಈ ಎರಡು ವಿಶ್ಲೇಷಣೆಗಳಲ್ಲಿ ಒಂದಕ್ಕೆ ಹೊಂದಿಕೊಂಡು ತೃಪ್ತಿಕರವಾದ ಗಣವಿಭಜನೆಗೆ ಎಡೆಕೊಡುವ ಆದರೆ ಮತ್ತೊಂದಕ್ಕೆ ಹೊಂದಿಕೊಳ್ಳದೆ ತೃಪ್ತಿಕರವಾದ ಗಣವಿಭಜನೆಗೆ ಎಡೆಕೊಡದ ಸಾಲುಗಳೂ ಉಂಟು.

(೩) ಈ ಎರಡು ವಿಶ್ಲೇಷಣೆಗಳಿಗೂ ಹೊಂದಿಕೊಳ್ಳದೆ ತೃಪ್ತಿಕರವಾದ ಗಣವಿಭಜನೆಗೆ ಎಡೆಕೊಡದ ಸಾಲುಗಳೂ ಉಂಟು.

ಈ ಎರಡು ವಿಶ್ಲೇಷಣೆಗಳಲ್ಲಿ ಯಾವುದಾದರೂ ಒಂದನ್ನು ಮೂಲವಾಗಿಟ್ಟುಕೊಂಡು, ಸಂಖ್ಯಾಕ್ರೀಡೆಯನ್ನಾಡಿ ಮತ್ತೊಂದು ವಿಶ್ಲೇಷಣೆಯನ್ನು ಸುಲಭವಾಗಿ derive ಮಾಡಿಬಿಡಬಹುದು. ಇದು ಹೇಗೆ ಸಾಧ್ಯವಾಗುತ್ತದೆ? ಪದಯತಿ ಎಲ್ಲಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ೫–೫ ಗಣಗಳ ಆನುಪೂರ್ವಿಗೂ ೩–೪–೩ ಗಣಗಳ ಆನುಪೂರ್ವಿಗೂ ಕಂಡುಬರುವ ಪರಸ್ಪರ ಸಂಬಂಧವು ಛಂದೋವಿದರಿಗೆ ಸುಪರಿಚಿತವಾದದ್ದೇ.

"ಅದೆಲ್ಲಾ ಹಾಗಿರಲಿ. ಈ ಎರಡು ವಿಶ್ಲೇಷಣೆಗಳಲ್ಲಿ ಯಾವುದು ಸರಿ?" ಎಂಬ ಪ್ರಶ್ನೆಯನ್ನು ಓದುಗರು ಕೇಳಿಯೇ ಕೇಳುತ್ತಾರೆ ಎಂಬ ಅರಿವು ನನಗೆ ಇದೆ. ಈ ಪ್ರಶ್ನೆಗೆ ನನ್ನ ಬಳಿ ಉತ್ತರವಿಲ್ಲ. ಆದ್ದರಿಂದಲೇ ನನ್ನ ಲೇಖನವನ್ನು ಹಾಗೆಯೇ ಉಳಿಸಿಕೊಂಡು ಕವಿಗಳ ಆಶಯ ಏನಿತ್ತು ಎಂಬುದನ್ನು ಇಲ್ಲಿ ತಿಳಿಸಿದ್ದೇನೆ.

ಹೀಗೆ ಮಾಡಿರುವುದಕ್ಕೆ ಮತ್ತೊಂದು ಕಾರಣವಿದೆ. ಆ ಕಾರಣ ಏನು ಎಂಬುದನ್ನು ತಿಳಿಸುವ ಮೊದಲು ಒಂದು ಸಂದರ್ಭವನ್ನು ಕಲ್ಪಿಸಿಕೊಳ್ಳೋಣ, ಇದು ಬರಿಯ ಕಲ್ಪನೆಯ ಮಾತಲ್ಲ, ಸಾಧ್ಯವೂ ಆಗಿರುವಂತಹುದು. ಸರಿಯಾದ ಉದಾಹರಣೆ ಕೂಡಲೇ ಮನಸ್ಸಿಗೆ ಹೊಳೆಯದಿರುವುದರಿಂದ ಸಾಮಾನ್ಯ ಶಬ್ದಗಳಲ್ಲಿ ಆ ಸಂದರ್ಭವನ್ನು ವಿವರಿಸುತ್ತೇನೆ. ಒಬ್ಬ ಕವಿ ನಾಲ್ಕು ಮಾತ್ರೆಗಳ ಗಣಗಳನ್ನು ಉಪಯೋಗಿಸಿ ಒಂದು ಕವಿತೆಯನ್ನು ಬರೆದಿದ್ದಾನೆ ಎಂದಿಟ್ಟುಕೊಳ್ಳೋಣ. ಅವನು ಶಕ್ತನಾದ ಕವಿಯಾಗಿದ್ದರೆ, ಏಕತಾನತೆಯನ್ನು ತಪ್ಪಿಸಲು ಮಧ್ಯೆ ಮಧ್ಯೆ ೨-೪ರ ನಡೆಯನ್ನೋ ೩-೫ರ ನಡೆಯನ್ನೋ ತರುತ್ತಾನೆ. ಇದು ಹೇಗೆ ಆಗುತ್ತದೆ ಎಂಬುದರ ವಿವರಣೆ ಇಲ್ಲಿ ಬೇಕಾಗಿಲ್ಲ. ಯಾವುದಾದರೂ ಒಂದು ಕವಿತೆಯಲ್ಲಿ ೪ ಮಾತ್ರೆಗಳ ಗಣಗಳ ನಡೆಯೇ ವಿಶೇಷವಾಗಿದ್ದು, ಮಧ್ಯೆಮಧ್ಯೆ ೩-೫ರ ನಡೆ ತೋರಿದರೆ, ಆ ಕವಿತೆಯ ಪ್ರಧಾನಗತಿ ೪ ಮಾತ್ರೆಗಳ ಗಣದ್ದೆಂದೂ, ಮಧ್ಯೆಮಧ್ಯೆ ವೈವಿಧ್ಯಕ್ಕಾಗಿ ೩-೫ರ ನಡೆ ಬಳಕೆಯಾಗಿದೆ ಎಂದೂ ಹೇಳಬಹುದು ಹಾಗೆಯೇ, ಯಾವುದಾದರೂ ಒಂದು ಕವಿತೆಯಲ್ಲಿ ೩-೫ರ ನಡೆಯೇ ವಿಶೇಷವಾಗಿದ್ದು ಮಧ್ಯೆಮಧ್ಯೆ ೪-೪ರ ನಡೆ ತೋರಿದರೆ, ಆ ಕವಿತೆಯ ಪ್ರಧಾನಗತಿ ೩-೫ರದ್ದೆಂದೂ, ಮಧ್ಯೆಮಧ್ಯೆ ವೈವಿಧ್ಯಕ್ಕಾಗಿ ೪-೪ರ ನಡೆ ಬಳಕೆಯಾಗಿದೆಯೆಂದೂ ಹೇಳಬಹುದು. ಈಗ ಒಂದು ಕವಿತೆಯಲ್ಲಿ ಈ ಎರಡು ರೀತಿಯ ಗತಿಗಳೂ ಹೆಚ್ಚು ಕಡಮೆ ಸಮ ಪ್ರಮಾಣದಲ್ಲಿ ಕಂಡು ಬಂದರೆ ಏನು ಮಾಡುವುದು ? ಆ ಕವಿತೆಯನ್ನು ಎಂಟು ಮಾತ್ರೆಗಳ ಗಣಗಳಿಂದ ಕಟ್ಟಲಾಗಿದೆಯೆಂದೂ, ಆ ಗಣಗಳು ಕೆಲವು ಸಲ ೪-೪ ಎಂದೂ ಕೆಲವು ಸಲ ೩-೫ ಎಂದೂ ಒಡೆಯುತ್ತವೆ ಎಂದು ಹೇಳುವುದೇ ಶಾಸ್ತ್ರಸಮ್ಮತವಾದ ರೀತಿ. 'ಶ್ರೀಹರಿಚರಿತೆ'ಯಲ್ಲೂ, ಇಷ್ಟು ಸರಳವಾದ ರೀತಿಯಲ್ಲಲ್ಲದಿದ್ದರೂ, ಹೀಗೆಯೇ ಏನಾದರೂ ಆಗಿದೆಯೋ ಏನೋ ಎಂಬ ಸಂದೇಹವು ನನಗೆ ಬರತೊಡಗಿದೆ. ಈ ಸಂದೇಹವು ಆಧಾರರಹಿತವಾದದ್ದಲ್ಲ ಎಂದು ತಿಳಿದುಕೊಂಡಿದ್ದೇನೆ. ಇದನ್ನು ನಿರ್ಧರಿಸುವುದು ಶ್ರಮದಾಯಕವಾದ ಕೆಲಸ. ಆದಾಗುವವರೆಗೂ ಈ ಎರಡು ವಿಶ್ಲೇಷಣೆಗಳೂ ಸಹಬಾಳ್ವೆ ನಡೆಸುವುದು ಮೇಲು.*

ಈ ರೀತಿಯಾಗಿ ನನ್ನ ವಿಶ್ಲೇಷಣೆಯನ್ನೂ ಕವಿಗಳಿಗೆ ಒಪ್ಪಿಗೆಯಾಗಿರುವ ವಿಶ್ಲೇಷಣೆಯನ್ನೂ ಒಟ್ಟಿಗೆ ಕೊಟ್ಟಿರುವುದು ಸ್ಪರ್ಧೆಯ ಮನೋಭಾವದಿಂದಲ್ಲ ಎಂಬುದನ್ನು ಓದುಗರು ಗಮನಿಸಬೇಕು ಎಂದು ಬೇಡುತ್ತೇನೆ. ನಾನು ಹೇಳುವುದು ಸರಿಯೋ, ಕವಿಗಳು ಹೇಳುವುದು ಸರಿಯೋ ಎಂಬ ಪ್ರಶ್ನೆಯಲ್ಲಿ ನನಗೆ ಆಸಕ್ತಿಯಿಲ್ಲ.

---

* ಈ ಮೇಲಿನ ಮಾತನ್ನು ಓದಿದ ಯಾರಿಗೇ ಆದರೂ, ಕವಿಗಳಾದ ಪು.ತಿ.ನ. ಅವರಿಗೆ ನಾನು ಎಷ್ಟು ಋಣಿಯಾಗಿದ್ದೇನೆ ಎಂಬುದು ಗೊತ್ತಾಗುತ್ತದೆ. ಅವರಿಗೆ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು.

ನಾನು ಈ ಬಗೆಗೆ ತೀರಾ ಉದಾಸೀನನಾಗಿದ್ದೇನೆ. ಈ ಸಂದರ್ಭದಲ್ಲಿ, ಶಾಸ್ತ್ರಕ್ಕೆ ಸಂಬಂಧಿಸಿದಂತೆ, ಥಿಯರಿಗೆ ಸಂಬಂಧಿಸಿದಂತೆ ಏಳುವ ಪ್ರಶ್ನೆಗಳೇ ನನಗೆ ಹೆಚ್ಚು ಸ್ವಾರಸ್ಯಕರವಾಗಿವೆ. ಅವುಗಳನ್ನು ಕುರಿತು ಬರೆಯುವ ಆಸೆಯೇನೋ ಇದೆ. ನೋಡೋಣ, ಸದ್ಯಕ್ಕೆ ಇಷ್ಟು ಸಾಕು :

ಸುತ್ತುವುದು ತಲೆ, ಕುರಿತು ಮನ ಪರಿ–
ಭಾವಿಸಿದರೀ ಪಾಂಗನು
ಕವಿಗೊ ನನಗೋ, ತಿಳಿಯದಾರಿಗೆ,
ಬ್ರೃಂಗಿ ಕೊಟ್ಟನು ಟಾಂಗನು !

ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರೀ

‘ಕಾವ್ಯಾವಲೋಕನ’ — ‘ಶಬ್ದಮಣಿದರ್ಪಣ’ಗಳ ಒಂದು ಕ್ಲಿಷ್ಟ ಲಕ್ಷ್ಯಪದ್ಯದ ಅರ್ಥ

‘ಕಾವ್ಯಾವಲೋಕನ’ದ (=ಕಾವ್ಯಾವ.) ಶಬ್ದಸ್ಮೃತ್ಯಧಿಕರಣದಲ್ಲಿಯೂ ‘ಶಬ್ದಮಣಿದರ್ಪಣ’ದಲ್ಲಿಯೂ (=ಶಮದ.), ಅವುಗಳ ಆಖ್ಯಾತ ಪ್ರಕರಣದಲ್ಲಿ ಅಜ್ಞಾತ ಕಾಲಕರ್ತೃಕವಾದ ಈ ಮುಂದಿನ ಲಕ್ಷ್ಯಪದ್ಯ (ಪ.೪೮೨ ; ೨೪೧–೪) ಮಧ್ಯಮ ಪುರುಷ ವಿಧ್ಯರ್ಥ ಏಕವಚನ ಕ್ರಿಯಾಪದದ ಸ್ವರೂಪವನ್ನು ನಿದರ್ಶಿಸುವುದಕ್ಕೆಂದು ಬಂದಿದ್ದು, ಅದು ತನ್ನ ಅರ್ಥಸ್ವಾರಸ್ಯದಿಂದ ಸಹೃದಯರ ಗಮನವನ್ನು ಎಂದಿನಿಂದಲೂ ಸೆಳೆಯುತ್ತಿರುವುದು ವಿದಿತವೇ ಇದೆ.

೧. **ಕಾವ್ಯಾವ.ದ ಪಾಠ :**

ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು ಕಚ್ಛಪೋ
ಪಾಯದಡಂಗಿ ನಿಲ್ ಭ್ರಮರಿಯೊಳ್ ಭ್ರಮಿಯಂತಿರೆ ಬೆಚ್ಚರಾಗು ಖ
ಟ್ಗಾಯುಧಚಾಮರಂ ಪೊಳೆವ ಮಿಂಚನೆ ಪೋಲ್ತಿರೆ ಬೀಸು ನೀಂ ಖಳ
ನ್ಯಾಯದಿನೆಲ್ಲಮಂ ನೆಱೆಯೆ ಕಲ್ತುಪದೇಶಕನಾಗು ಲೋಕದೊಳ್॥

ಈ ಪದ್ಯದ ಪಾಠಕ್ಕೆ ಎರಡು ಕಡೆ ಪಾಠಾಂತರಗಳು ಇವೆಯಾದರೂ (ಚಾಮರಂ–ಚಾಪಮಂ ; ನ್ಯಾಯದಿ–ನ್ಯಾಯಮ), ಇವಕ್ಕೆ ಅಧಿಕಪ್ರತಿಗಳ ಅವಲಂಬನೆಯಾಗಲಿ ಶಮದ. ಪತ್ಯದ ಬಾಹ್ಯಸಾಕ್ಷ್ಯದ ಪೋಷಣೆಯಾಗಲಿ ಇಲ್ಲವೆಂಬುದು ಅವು ಕವಿಪಾಠವಾಗಿರುವ ಸಾಧ್ಯತೆಯನ್ನು ತಗ್ಗಿಸುತ್ತದೆ.

೨. **ಶಮದ.ದ ಪಾಠ :**

ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು ಕಚ್ಛಪೋ
ಪಾಯದಡಂಗಿ ನಿಲ್ ಭ್ರಮರಿವೋಲ್ ಭ್ರಮಿಯಂತಿರೆ ಬೆಚ್ಚರಾಗು ಖ
ಡ್ಗಾಯುಧಚಾಮರಂ ಪೊಳೆವ ಮಿಂಚನೆ ಪೋಲ್ತಿರೆ ಬೀಸು ನೀಂ ಖಳ
ನ್ಯಾಯದಿನೆಲ್ಲಮಂ ನೆಱೆಯೆ ಕಲ್ತುಪದೇಶಕನಾಗು ಲೋಕದೊಳ್॥

ಇದು ಪ್ರಚಲಿತವಾಗಿರುವ ಸಾಮಾನ್ಯಪಾಠ; ಕಾವ್ಯಾವ.ದ ಪಾಠಕ್ಕೆ, ಒಂದು ಕಡೆಯ ಗಮನಾರ್ಹ ವ್ಯತ್ಯಾಸವನ್ನು ಬಿಟ್ಟರೆ ಸದೃಶವಾದುದು. ಆದರೆ ಕಿಟ್ಟೆಲ್ (ಕಿ.), ಮುದರಾಸು (ಮು.) ಮತ್ತು ಬಸವರಾಜು (ಬ.) ಪರಿಷ್ಕರಣಗಳಲ್ಲಿ 'ಬಕದಂತಿರೆ' ಎಂಬುದಕ್ಕೆ 'ಕಪಿಯುಂತಿರೆ' ಎಂಬ ಪಾಠಭೇದವಿದೆ. ಹಾಗೆಯೇ ಕಚ್ಛಪಾಪಾಯದ ಡಂಗು (ಕಿ.), ಕಚ್ಛಪೋಪಾಯುದಡಂಗು (ಕನ್ನಡ ಸಾಹಿತ್ಯ ಪರಿಷತ್ತು/ಪ.), ಕಚ್ಛಪೋಪಾಯವಡಂಗು (ಬ.)–ಇವೂ ಗಮನಿಸತಕ್ಕ ವ್ಯತ್ಯಾಸಗಳು. ಉಳಿದ ಇತರ ಪಾಠವ್ಯತ್ಯಾಸಗಳನ್ನು ಬಲುಮಟ್ಟಿಗೆ ಪ್ರತಿಕಾರ ಸ್ಖಾಲಿತ್ಯಗಳಿಂದೋ ಅನ್ಯವಿಧ ಪ್ರಮಾದಗಳಿಂದೋ ಸುಲಭವಾಗಿ ಅಲಕ್ಷಿಸಬಹುದು.

ಈ ಪದ್ಯದ ಸಾರ್ಥಕ ಪದಸಮುಚ್ಚಯಗಳ ವಿಭಜನೆ ಹೀಗಿರಬಹುದು: (೧) ವಾಯುಸದಂತೆ ನೋಡು (೨) ಬಕದಂತಿರೆ (ಪಾ ಕಪಿಯಂತಿರೆ) ಮೆಲ್ಲನೆ ಮೆಟ್ಟು (೩) ಕಚ್ಛಪೋಪಾಯುದಡಂಗಿ (ಪಾ. ಕಚ್ಛಪಾಪಾಯದಡಂಗು, ಕಚ್ಛಪೋಪಾಯುದ ಡಂಗು, ಕಚ್ಛಪೋಪಾಯವಡಂಗು) (೪) ನಿಲ್ ಭ್ರಮರಿವೋಲ್ (ಪಾ. ಭ್ರಮರಿ ಯೊಳ್) (೫) ಭ್ರಮಿಯುಂತಿರೆ ಬೆಚ್ಚರಾಗು (೬) ಖಡ್ಗಾಯುಧ (ಪಾ. ಖಟ್ವಾಯುಧ) ಚಾಮರಂ (ಪಾ. ಚಾಪಮಂ) ಪೊಳೆವ ಮಿಂಚನೆ ಪೋಲ್ತಿರೆ ಬೀಸು (೭) ನೀಂ ಖಳನ್ಯಾಯದಿನೆಲ್ಲಮಂ (ಪಾ. ಖಳನ್ಯಾಯವನೆಲ್ಲಮಂ) ನೆಱೆಯೆ ಕಲ್ತುಪದೇಶಕ ನಾಗು ಲೋಕದೊಳ್.

ಇಲ್ಲಿ ಪಾಠನಿರ್ಣಯ ಹೇಗೆ? (೧) ರ ವಿಷಯದಲ್ಲಿ ಸಂಶಯವಿಲ್ಲ. (೨) 'ಕಪಿಯುಂತಿರೆ'ಗೆ ಕಾವ್ಯಾವ.ದ ಪ್ರತಿಗಳಲ್ಲಿ ಸ್ಥಾನವೇ ಇಲ್ಲದಿರುವುದರಿಂದಲೂ ಆ ಆಕರವೂ ಸೇರಿದಂತೆ ಶಮದ.ದ ಬಹುಸಂಖ್ಯೆಯ ಪ್ರತಿಗಳಲ್ಲಿ 'ಬಕದಂತಿರೆ' ಎಂದೇ ಇರುವುದರಿಂದಲೂ ಅರ್ಥಸ್ವಾರಸ್ಯದ ದೃಷ್ಟಿಯಿಂದಲೂ ಇದೇ ಗ್ರಾಹ್ಯವೆನ್ನ ಬೇಕು. (೩) 'ಕಚ್ಛಪಾಪಾಯ' (ಕಿ.) ಎಂಬುದನ್ನು ಸುಲಭವಾಗಿ ತಪ್ಪೆಂದು ನಿರಾ ಕರಿಸಬಹುದು. ಆದರೆ 'ಅಡಂಗಿ'–'ಅಡಂಗು' ಎಂಬವುಗಳಲ್ಲಿ ಯಾವುದು ಗ್ರಾಹ್ಯ ವಾಗಬೇಕು? ಕಾವ್ಯಾವ.ವೂ ಸೇರಿದಂತೆ ಶಮದ.ದ ಹಲವು ಪ್ರತಿಗಳಲ್ಲಿ ಕಂಡು ಬರುತ್ತಿರುವುದೂ ಪ್ರಚಲಿತಪಾಠವಾಗಿ ಮಾನ್ಯವಾಗಿರುವುದೂ 'ಅಡಂಗಿ' ಎಂಬ ಭೂತನ್ಯೂನ ರೂಪವೇ ಆದುದರಿಂದ ಅದೇ ಸಂಭಾವ್ಯಪಾಠ. ಬಹುಶಃ ಪದ್ಯದೊಳ ಗಿನ ಉಳಿದ ಭಾಗದ ವಿಧ್ಯರ್ಥ ಕ್ರಿಯಾಪದಗಳ ಪ್ರಭಾವದಿಂದ ಯಾರೋ ಅಭ್ಯಾಸಿ ಇಲ್ಲವೆ ಪ್ರತಿಕಾರ ಭೂತನ್ಯೂನ ರೂಪವನ್ನು 'ಅಡಂಗು' ಎಂಬುದಾಗಿ ವಿಧ್ಯರ್ಥ ರೂಪಕ್ಕೆ ತಿರುಗಿಸಿರಬೇಕು. (೪) ನಿಲ್ ಭ್ರಮರಿವೋಲ್–ನಿಲ್ ಭ್ರಮರಿವೊಲ್ ಯುಗ್ಮದಲ್ಲಿ ಯಾವುದೇ ಒಂದು ಕವಿಪಾಠವಾಗಿರಬಹುದು. ಏಕೆಂದರೆ, "ವೋಲೊಳ್ ಹ್ರಸ್ವಮುಮಕ್ಕುಂ" (ಶಮದ. ೨೫). ಆದರೆ 'ನಿಲ್ ಭ್ರಮರಿಯೊಳ್' ಕಾವ್ಯಾವ. ದಲ್ಲಿ ಮಾತ್ರ ಕಾಣುತ್ತಿರುವ ಪಾಠ; ಸರ್ವಪ್ರತಿಭಿನ್ನವಾದ ಪ್ರತ್ಯೇಕಪಾಠ. ಅರ್ಥ ಸಾಮಂಜಸ್ಯವೂ ಇಲ್ಲದಿರುವುದರಿಂದ ಅದನ್ನು ತಿರಸ್ಕರಿಸಬಹುದು.

ಪ್ರತ್ಯೇಕವಾಗಿ ಗಮನಿಸಬೇಕಾದ್ದು ಎಂದರೆ : (೫) "ಭ್ರಮಿಯಂತಿರೆ ಬೆಚ್ಚರಾಗು." ಈ ವಿಭಜನೆ ಸೂಕ್ತವೇ, ಸೂಕ್ತವೆಂದಾದರೆ ಆ ಪದಸಮುಚ್ಚಯದ ಅರ್ಥವೇನು ? ಕಿಟ್ಟೆಲ್ ಕೋಶದಲ್ಲಿ 'ಬೆಚ್ಚರ' (2) ಶಬ್ದದ ಅರ್ಥವನ್ನು ತಿಳಿಸುವಾಗ "ಭ್ರಮರಿಯೊಳ್ ಭ್ರಮಿಯನ್ನಿರೆ ಬೆಚ್ಚರಾಗು" ಎಂದೂ 'ಭ್ರಮರಿ' ಶಬ್ದದ ಅರ್ಥವನ್ನು ಕುರಿತಾಗ "ಭ್ರಮರಿವೊಲ್ ಭ್ರಮಿಯನ್ನಿರೆ ಬೆಚ್ಚರಾಗು" ಎಂದೂ ಪ್ರಯೋಗಗಳನ್ನು ತೋರಿಸಿರುವುದರಿಂದ, 'ನಿಲ್' ಹೊರತುಪಡಿಸಿ (೪) ಮತ್ತು (೫) ಇವನ್ನು ಒಂದೇ ಸಾರ್ಥಕ ಪದಸಮುಚ್ಚಯವನ್ನಾಗಿ ಕಿಟ್ಟೆಲ್ ಭಾವಿಸಿದ್ದಾರೆಂದು ಅಭಿಪ್ರಾಯವಾಗುವುದು. ಈ ಅಭಿಪ್ರಾಯ ಸಮರ್ಥನೀಯವಾಗದು. ಅದು ಹೀಗೆ : ಒಂದೊಂದು ಪದಸಮುಚ್ಚಯದಲ್ಲಿ ಒಂದೊಂದು ಉಪಮಾನಾರ್ಥ ವಾಚಕವೂ ಒಂದೊಂದು ವಿಧ್ಯರ್ಥ ಕ್ರಿಯಾಪದವೂ ಬಂದಿರುವ ವ್ಯವಸ್ಥೆ ಈ ಪದ್ಯದಲ್ಲಿ ಬಲುಮಟ್ಟಿಗೆ ಕಂಡುಬರುತ್ತದೆ. ಅಲ್ಲದೆ ಕಿಟ್ಟೆಲ್ ಸಮಾನಪ್ರಯೋಗವನ್ನು ಎರಡು ರೀತಿಗಳಲ್ಲಿ ಉದ್ಧರಿಸಿರುವುದೇಕೋ ತಿಳಿಯದು. (ಅವರ ಶಮದ.ದಲ್ಲಿ "ಭ್ರಮರಿವೊಲ್" ಎಂದಿರುವುದರಿಂದ ಅದನ್ನೇ ಅಧಿಕೃತವೆಂದು ತಿಳಿಯಬಹುದು.) ಎರಡನೆಯದರಲ್ಲಿ, ಎರಡು ಉಪಮಾನಾರ್ಥ ವಾಚಕಗಳು ಬಂದಿರುವುದೇ ಈ ವಿಭಜನೆಯನ್ನು ಸಸಂದೇಹವಾಗಿ ನೋಡುವಂತೆ ಮಾಡುತ್ತದೆ. ಅಲ್ಲದೆ 'ನಿಲ್' ಎಂಬ ಹಿಂದಿನ ವಿಧ್ಯರ್ಥಕ್ರಿಯಾವಾಚಿಗೆ ಕರ್ತೃವೇ ಇಲ್ಲದ ತ್ರಿಶಂಕುಸ್ಥಿತಿ ಒದಗುತ್ತದೆ. ಆದ್ದರಿಂದ ಕಿಟ್ಟೆಲ್ ಅವರ ಅನ್ವಯಕ್ರಮ ದೂಷ್ಯವಾದ್ದು; ಆದ್ದರಿಂದ ತ್ಯಾಜ್ಯವಾದ್ದು.

(೬) 'ಖಡ್ಗಾಯುಧ'–'ಖಟ್ಗಾಯುಧ' ಈ ಭಿನ್ನಪಾಠಗಳಲ್ಲಿ ಹೆಚ್ಚಿನ ಪ್ರತಿಗಳು ಪೋಷಿಸುವ 'ಖಡ್ಗಾಯುಧ' ಎಂಬುದೇ ಗ್ರಾಹ್ಯ. ಒಂದು ವೇಳೆ 'ಖಟ್ಗಾಯುಧ' ಎಂದಿದ್ದರೂ ಅರ್ಥದ ದೃಷ್ಟಿಯಿಂದ ಬಾಧಕವೇನಿಲ್ಲ. ಶಮದ.ದಲ್ಲಿ ಸರ್ವತ್ರ ಮೊದಲ ರೂಪವನ್ನೇ ಪುರಸ್ಕರಿಸಿರುವುದು, ಅದನ್ನೇ ಒಪ್ಪುವುದಕ್ಕೆ ಸಹಕಾರಿಯಾಗಿದೆ. 'ಚಾಪಮಂ'ಗೆ ಅಧಿಕಪ್ರತಿಗಳ ಅವಲಂಬನವಿಲ್ಲ ಎನ್ನುವುದರ ಜೊತೆಗೆ 'ಬೀಸು' ಎಂಬ ಕ್ರಿಯೆಗೆ ಅದು ತಕ್ಕ ಕರ್ತೃವಾಗದು ಎಂಬುದನ್ನೂ ನೆನೆದರೆ, ಆ ಪಾಠವನ್ನು ಹಿಂದಿಕ್ಕಿ 'ಚಾಮರಂ' ಪಾಠವನ್ನು ಸಹಜವಾಗಿಯೇ ಗ್ರಹಿಸುವಂತಾಗುತ್ತದೆ. ಧಾರವಾಡದ ಕಾವ್ಯಾವ.ದ ಪರಿಷ್ಕರಣದಲ್ಲಿ (೧೯೩೯) 'ಖಡ್ಗಾಯುಧ ಚಾಪಮಂ' ಎಂಬ ಪಾಠವನ್ನೇ ಕವಿಪಾಠವನ್ನಾಗಿ ಗ್ರಹಿಸಿರುವುದಕ್ಕೆ ಸಮರ್ಥನೆಯೇನೋ ತಿಳಿಯದು. "ಚಾಮರಮಂ ಬೀಸು" ಎಂಬರ್ಥದ ವಿಭಕ್ತಿಪಲ್ಲಟಘಟಿತ ರಚನೆ ಇಲ್ಲವೆ "ಖಡ್ಗಾಯುಧ ಚಾಮರಂ.... ಪೋಲ್ತಿರೆ, (ಅದಂ) ಬೀಸು" ಎಂಬ ಅಧ್ಯಾಹೃತ ಸರ್ವನಾಮದ ರಚನೆ–ಎರಡರಲ್ಲಿ ಯಾವುದನ್ನಾದರೂ ಮಾನ್ಯಮಾಡಬಹುದು.

ಈಗ ಅರ್ಥನಿಷ್ಕರ್ಷೆಗೆ ಬರೋಣ : ಈ ಅಜ್ಞಾತಕಾಲಕರ್ತೃಕ ಲಕ್ಷ್ಯಪದ್ಯದ ಕೃತಿಯ ಹೊಲಬು ಸಹ ಸಿಕ್ಕುತ್ತಿಲ್ಲ. ಆದರೆ ಧಾಟಿಯಿಂದ, ಇದು ರಾಜನೀತಿಯ

ಸಂದರ್ಭವನ್ನು ಹೇಳುವುದೆನ್ನಬೇಕು. ನೀತಿಯ ಮಾತುಗಳನ್ನು ನೇರವಾಗಿ ಆಡದೆ, ಅವನ್ನು ಪ್ರಾಣಿಚರ್ಯೆಯ ವ್ಯಂಗ್ಯೋಕ್ತಿವಿಧಾನದಿಂದ ಮನವರಿಕೆ ಮಾಡಿಕೊಡುವ ಯತ್ನ ಇಲ್ಲಿ ವಿಶೇಷವಾಗಿ ಕಾಣುತ್ತದೆ. ರಾಜನೀತಿಯನ್ನು ಕುರಿತ ಉಪದೇಶದಲ್ಲಿ ಈ ವಿಧಾನ 'ಮನುಸ್ಮೃತಿ' (೭-೧೦೫, ೧೦೬), 'ಕುಮಾರವ್ಯಾಸಭಾರತ' (ಉದ್ಯೋಗ. ೩-೧೦೭) ಮೊದಲಾದೆಡೆಗಳಲ್ಲಿ ಪರಿಚಿತವಾದುದಾಗಿದೆ. ಆ ಶ್ರೇಣಿಗೇ ಪ್ರಸ್ತುತ ಕಾವ್ಯಾವ./ಶವ:ದ. ದ ನೀತಿಪದ್ಯವೂ ಸೇರುತ್ತದೆ. ಒಂದೆರಡು ಕಡೆ ಪ್ರಾಣಿ ಚರ್ಯೆಗೆ ಹೊರತಾದ ಅಂಶಗಳೂ ಉಂಟು. ಈ ಸ್ವಾತಂತ್ರ್ಯ ಕವಿಸಹಜವಾದುದು.

ವಾಯಸದಂತೆ ನೋಡುವುದೂ ಬಕದಂತೆ ಮೆಲ್ಲಗೆ ಮೆಟ್ಟುವುದೂ ಮೊದಲಾದುವೆಲ್ಲ ರಾಜಕಾರ್ಯ ನಿರ್ವಹಣೆಯಲ್ಲಿ ಅಥವಾ ಅಂತಹ ಜವಾಬ್ದಾರಿ ಹೊರುವ ಸಂದರ್ಭದಲ್ಲಿ ಕಾರ್ಯಸಾಧನೆಯ ಚತುರೋಪಾಯಗಳು, ತಂತ್ರಗಳು ಎನ್ನಬಹುದು. ಇವನ್ನು ಪದ್ಯಕರ್ತೃ 'ಖಳನ್ಯಾಯ'ದೊಳಗಿನವು ಎಂದು ತಿಳಿದಂತಿದೆ. 'ಖಳನ್ಯಾಯ' ಎಂದರೆ ಒಂದೊಂದು ವಿದ್ಯೆಯನ್ನು ಒಂದೊಂದು ಕಡೆಯಿಂದ ಸಂಗ್ರಹಿಸುವ ರೀತಿ, ಸಂಚಯನಮಾಡುವ ಪದ್ಧತಿ ಎಂದಾಗಬಹುದು (ಕನ್ನಡ ನಿಘಂಟು, ಸಂ.೨, ಪು. ೨೩೩೦); ದುರ್ಜನ ಸಂಬಂಧವಾದ ವ್ಯವಹಾರ ಎಂದೂ (ಪಂಪರಾಮಾಯಣ, ೧೧-೧೩೮) ಆಗಬಹುದು. ಪ್ರಸ್ತುತ, ಮೊದಲ ಅರ್ಥವೇ ಇಲ್ಲಿ ವಿವಕ್ಷಿತವೆಂದು ತೋರುತ್ತದೆ. ಎರಡನೆಯ ಅರ್ಥಕ್ಕೆ ಸಹ ಪ್ರಕಾರಾಂತರವಾಗಿ ಅವಕಾಶವಿದೆ. ಇಷ್ಟು ಮಾತ್ರವಲ್ಲ, ಖಳರ ಸಂಬಂಧವಾದ ನ್ಯಾಯಗಳು-'ಲೌಕಿಕನ್ಯಾಯ'ಗಳು-ಬೋಧಿಸುವ ವ್ಯಂಗ್ಯಾರ್ಥವಿವಕ್ಷೆಗೂ ಇಲ್ಲಿ ಬಹುಶಃ ಅವಕಾಶವಿದೆ.

(೧) 'ವಾಯಸದಂತೆ ನೋಡು': ಇಲ್ಲಿ 'ಕಾಕಾಕ್ಷಿಗೋಲಕ ನ್ಯಾಯ' ಅನ್ವಯಿಸುವಂತಿದೆ. ಕಾಗೆಗೆ ಒಂದೇ ಕಣ್ಣುಗುಡ್ಡೆ ಕಾಣುತ್ತದೆಯೆಂದೂ ಅದು ಸಂದರ್ಭಕ್ಕೆ ತಕ್ಕಂತೆ ಎಡಗಣ್ಣಿಗೂ ಬಲಗಣ್ಣಿಗೂ ಸರಿದಾಡುವುದೆಂದೂ ಪ್ರತೀತಿ. ಕಾಮಂದಕ ನೀತಿಯಲ್ಲಿ ಇದನ್ನೇ "ಪರಸ್ಪರ ಶತ್ರುಗಳಾದ ಇಬ್ಬರು ಬಲಿಷ್ಠ ರಾಜರಿದ್ದಾಗ ಅಶಕ್ತನಾದವನು ಯಾರ ಕಡೆಗೂ ಸೇರಬಾರದು. ಅವನು ಇಬ್ಬರಿಗೂ ಸ್ನೇಹಿತನಂತೆ ಮಾತನಾಡುತ್ತಾ ಕಾಕಾಕ್ಷಿಗೋಲಕ ನ್ಯಾಯದಂತೆ ವರ್ತಿಸಬೇಕು" —ಎಂದಿದೆ. ದುರ್ಬಲರು ಸಬಲರಿಂದ ತಮ್ಮನ್ನು ಕಾಪಾಡಿಕೊಳ್ಳುವ ಒಂದು ಜಾಣ್ಮೆ ಕಾಗೆಯ ನಡೆವಳಿಕೆಯ ಮೂಲಕ ಇಲ್ಲಿ ಇಂಗಿತಗೊಂಡಿದೆ.

(೨) 'ಬಕದಂತಿರೆ ಮೆಲ್ಲನೆ ಮೆಟ್ಟು': ಕೊಕ್ಕರೆಗೆ ಸಂಬಂಧಿಸಿದ 'ಬಕಬಂಧನ ನ್ಯಾಯ' ಇಲ್ಲಿಗೆ ಅನ್ವಯಿಸದು; ಆದರೆ 'ಬಕವತ್ ಚಿಂತಯೇದರ್ಥಾನ್' (ಮನುಸ್ಮೃತಿ, ೭-೧೦೬), 'ಬಕವತ್ ಧ್ಯಾನಮಾಚರೇತ್' (ಸಮಯೋಚಿತ ಪದ್ಯ ಮಾಲಿಕಾ) ಇಂತಹ ಸೂಕ್ತಿಗಳಿಂದ ವಿದಿತವಾಗುವಂತೆ, ಕೊಕ್ಕರೆ ಮೀನನ್ನು ಕಬಳಿಸಲು ಸುಳಿವು ಕೊಡದೆ ಹೇಗೆ ಏಕಾಗ್ರತೆಯಿಂದ ಹೊಂಚುಹಾಕಿ ವಂಚಿಸುವುದೋ ಹಾಗೆಯೇ ಕಾರ್ಯಸಾಧಕನು ಉಪಾಯದಿಂದ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂಬುದು

ಇಲ್ಲಿಯ ಇಂಗಿತ. 'ಬಕವಿಡಂಬನ', 'ಬಕವ್ರತಿ' (ಕುವ್ಯಾಆ. ೪–೨೬ ಕುವ್ಯಾಕ, ೨೨–೨೦ ಇಂತಹ ಮಾತುಗಳಲ್ಲಿ ಧ್ವನಿಸುವುದಾದರೂ ಇದೇ ಇಂಗಿತವೇ).

(೩) 'ಕಚ್ಛಪೋಪಾಯದಡಂಗಿ': ವಿಧ್ಯರ್ಥದ ಪೂರ್ಣ ಕ್ರಿಯಾಪದದ (ಅಡಂಗು) ಪ್ರತಿಯಾಗಿ ಭೂತನ್ಯೂನ ರೂಪವನ್ನೇ (ಅಡಂಗಿ) ಇಲ್ಲಿ ತಂದಿರುವುದು ಕವಿಸ್ವಾತಂತ್ರ್ಯದ ಫಲ. ಕಾರ್ಯಸಾಧಕನು ಅನುಸರಿಸಬಹುದಾದ ಕಾರ್ಯೋಪಾಯಗಳ ನಿರಂತರತೆಯನ್ನು ಈ ಮೂಲಕ ಪರಿಭಾವಿಸಬಹುದಾಗಿದೆ. ಇಲ್ಲಿ 'ಕೂರ್ಮಾಂಗನ್ಯಾಯ' ಉದ್ದೇಶಿತವಾಗಿರುವಂತಿದೆ. ಆಮೆ ತನ್ನ ಇಚ್ಛೆಗೆ ಅನುಸಾರವಾಗಿ ತನ್ನ ದೇಹಭಾಗಗಳನ್ನು ಹೇಗೆ ಹೊರಚಾಚಬಲ್ಲುದೋ ಒಳಗೆಳೆದುಕೊಳ್ಳಬಲ್ಲುದೋ, ಹಾಗೆಯೇ ಇಲ್ಲದುದರ ಉತ್ಪಾದನೆ, ಇರುವುದರ ವಿನಾಶ ಎಂಬಂತಹುದು ಇರುವುದಿಲ್ಲ ಎನ್ನುವುದು ಈ ನ್ಯಾಯದ ಆಶಯ. ರಾಜನೀತಿಗೆ ಸಂಬಂಧಿಸಿದಂತೆ, ಮನುಸ್ಮೃತಿಯಲ್ಲಿ "ನಾಸ್ಯ ಛಿದ್ರಂ ಪರೋ ವಿದ್ಯಾತ್ ವಿದ್ಯಾತ್ ಛಿದ್ರಂ ಪರಸ್ಯ ತು । ಗೂಹೇತ್ ಕೂರ್ಮ ಇವಾಂಗಾನಿ ರಕ್ಷೇತ್ ವಿವರಮಾತ್ಮನಃ ॥ (೭–೧೦೫), ಎಂದರೆ "ತನ್ನ ಛಿದ್ರಗಳನ್ನು ಹಗೆಗಳಿಂದ ಅಡಗಿಸಿಡಬೇಕು, ಹಗೆಗಳ ಛಿದ್ರಗಳನ್ನು ತಿಳಿಯಬೇಕು; ಆಮೆಯು ತನ್ನ ಅಂಗಗಳನ್ನು ಹೇಗೋ ಹಾಗೆಯೇ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕು"—ಎಂಬ ಮಾತು ಬಂದಿರುವುದನ್ನಿಲ್ಲಿ ನೆನೆಯಬೇಕು. ಕಷ್ಟದ ಸಂದರ್ಭಗಳಲ್ಲಿ ಗಟ್ಟಿಚಿಪ್ಪಿನೊಳಗೆ ದೇಹಭಾಗಗಳನ್ನು ಹುದುಗಿಸಿಕೊಂಡು ಆತ್ಮರಕ್ಷಣೆ ಮಾಡಿಕೊಳ್ಳುವ ಆಮೆಯಂತೆ, ಕಾರ್ಯಸಾಧಕನು ತನ್ನ ಎಚ್ಚರದಲ್ಲಿ ತಾನಿದ್ದು, ಮೊದಲು ತನ್ನ ಸುತ್ತ ಆತ್ಮರಕ್ಷಣೆಯ ವಲಯವನ್ನು ನಿರ್ಮಿಸಿಕೊಂಡು, ಬಳಿಕ ಸಾವಧಾನವಾಗಿ ಕಾರ್ಯಸಾಧನೆಗೆ ತೊಡಗಬೇಕು ಎಂಬುದೀಗ ಇಲ್ಲಿಯ ಇಂಗಿತ.

(೪) 'ನಿಲ್ ಭ್ರಮರಿವೋಲ್': ಪ್ರಸಿದ್ಧವಾದ 'ಭೃಂಗ(ಭ್ರಮರ)ಕೀಟನ್ಯಾಯ' ಇಲ್ಲಿಗೆ ಅನ್ವಯಿಸುವಂತೆ ತೋರುವುದಿಲ್ಲ. ಯಾವ ಕ್ಷಣವಾದರೂ ಕೈಗೆ ಸಿಕ್ಕದೆ ಹಾರಿಹೋಗುವ ನೆಲೆಯಲ್ಲಿ ನಿಂತಿರುವ ದುಂಬಿಯ ಚಾಂಚಲ್ಯದ ಪರಿ ಇಲ್ಲಿ ವಿವಕ್ಷಿತವೇ, ತಿಳಿಯದು. 'ಕುಮಾರವ್ಯಾಸ ಭಾರತ'ದ ಉದ್ಯೋಗಪರ್ವದ 'ವಿದುರನೀತಿ' ಭಾಗದಲ್ಲಿ (೩–೧೦೯) ರಾಜೋಚಿತ ಗುಣವಿಶೇಷಗಳನ್ನು ಕುರಿತಾಗ ಉಲ್ಲೇಖಗೊಂಡಿರುವ ಹಲವು ಪ್ರಾಣಿಗಳಲ್ಲಿ ಸಹ ದುಂಬಿಯನ್ನು ಸೇರಿಸಿಲ್ಲ.

ಆದರೆ ಸಭಾಪರ್ವದ ನಾರದನೀತಿ ಭಾಗದಲ್ಲಿ ಸೇರಿಸಿದೆ (೧–೫೪). ಮೂಲದಲ್ಲಿ ಸದೃಶಪದ್ಯವಿರುವಂತಿಲ್ಲ. ಮೂಲಭಾಗವತದಲ್ಲಿ (೧೧–೮) ದುಂಬಿಯ ಪ್ರಕೃತಿಯನ್ನು ಕುರಿತಾಗ, ಆತ್ಮಸಾಧಕನು ಮಿತಾಹಾರ ಸೇವನೆ, ಏಕಾಶ್ರಯದ ವ್ಯಾಮೋಹವಿಲ್ಲದಿರುವಿಕೆ, ಸಾರಸಂಗ್ರಹಣೆಯ ಶೀಲ ಇವನ್ನು ಆದರಿಂದ ತಿಳಿಯಬೇಕು ಎಂಬ ಸೂಚನೆಯುಂಟು. ರಾಜನೀತಿಯ ಅಭ್ಯಾಸಿಗೆ ಸಹ ಈ ಗುಣಗಳಲ್ಲಿ ಒಂದೆರಡಾದರೂ ಇರಬೇಕಾದುದೇ ಸರಿ.

(೫) 'ಭ್ರಮಿಯಂತಿರೆ ಬೆಚ್ಚರಾಗು': 'ಭ್ರಮಿ' ಶಬ್ದಕ್ಕೆ ಮಂಡಲಾಕಾರವಾಗಿ

ಸುತ್ತುವುದು ಅಥವಾ ತಿರುಗುವುದು, ಕುಂಬಾರನ ತಿಗುರಿ, ನೀರಿನ ಸುಳಿ, ಸುಂಟರ ಗಾಳಿ, ಒಂದು ಬಗೆಯ ಸೇನಾವ್ಯೂಹ ಮುಂತಾದ ಅರ್ಥಗಳಿವೆ. ' ಬೆಚ್ಚರಾಗು ' ವಿಧ್ಯರ್ಥದಲ್ಲಿ ಬಳಕೆಯಾಗಿರುವ ಒಂದು ನಾಮಧಾತು. ' ಬೆಚ್ಚರ ' ಶಬ್ದವನ್ನು ಕೇಶಿರಾಜನು ಶೀಘ್ರಾರ್ಥದ ಒಂದು ಅವ್ಯಯವನ್ನಾಗಿ ತೋರಿಸಿದ್ದಾನೆ (ಸೂ. ೩೨೦). ಹೆಚ್ಚು ಪ್ರಚುರವಲ್ಲದ 'ಬೆಚ್ಚರ' ಶಬ್ದ, ಪ್ರಾಯಃ ಚಚ್ಚರ/ಜೆಚ್ಚರ ಶಬ್ದದ ಬರೆವಣಿಗೆಯಲ್ಲಿ ಉಂಟಾದ ಲಿಪಿಕಾರಸ್ಖಾಲಿತ್ಯ ಕಾರಣವಾಗಿ ಉಗಮಿಸಿ ಅಸ್ತಿತ್ವಕ್ಕೆ ಬಂದು, ಆ ಶಬ್ದದ ಎಲ್ಲ ಅರ್ಥಚ್ಛಾಯೆಗಳನ್ನೂ ಒಳಕೊಂಡಂತೆ ತೋರುತ್ತದೆ. ಶೀಘ್ರತೆ ಲಘು, ಸತ್ವರ, ಆಶು, ಎಚ್ಚರಿಕೆ, ಜಾಗರೂಕತೆ ಮುಂತಾದ ಛಾಯೆಗಳಲ್ಲಿ ಬೆಳೆಯುವವಕಾಶವಿದೆ. ಆದರೆ ಕಿಟ್ಟೆಲ್ 'ಬೆಚ್ಚರ' ಶಬ್ದದ ಪ್ರಸ್ತುತ ಪ್ರಯೋಗಸಂದರ್ಭಕ್ಕೆ roaming, straying ಎಂಬುದಾಗಿ ಅರ್ಥ ಹೇಳಿರುವುದು ಸಮರ್ಥನೀಯವಾಗದು.

ಈ ಮೊದಲು ನೋಡಿದಂತೆ, ' ಭ್ರಮಿ ' ಪ್ರಾಣಿವಾಚಕವಲ್ಲ ; ಆದರೆ 'ಭ್ರಮಿ' ಯಲ್ಲಿ ಪ್ರಾಣಿಗಳ ಸಮಾವೇಶವುಂಟು. ಉಳಿದ ಕೆಲವು ಅರ್ಥವಿಶೇಷಗಳಲ್ಲಿ ಯಾವುದು ಕವಿಯ ಮನಸ್ಸಿನಲ್ಲಿದ್ದಿತು ಎನ್ನುವುದರ ನಿಷ್ಕರ್ಷೆ ತುಂಬ ಕಠಿನ. ಕುತೂಹಲಕ್ಕೆ ಎರಡರ ಸಾಧ್ಯತೆಯನ್ನು ಚರ್ಚಿಸಬಹುದು :

೧. ಕುಂಬಾರನ ತಿಗುರಿ ಎಂದರೆ ಕುಲಾಲಚಕ್ರಸಂಬಂಧವಾದ 'ಚಕ್ರಭ್ರಮಣ ನ್ಯಾಯ' ಪ್ರಸಿದ್ಧವಾದುದು. ಕುಂಬಾರನು ಗಡಿಗೆಯನ್ನು ನಿರ್ಮಿಸುವಾಗ ಚಕ್ರವನ್ನು ತಿರುಗಿಸುತ್ತಾನೆ. ಒಮ್ಮೆ ತಿರುಗಿಸಿ ದಂಡವನ್ನು ತೆಗೆದು ಹಾಕಿದ ಮೇಲೆಯೂ ಸ್ವಲ್ಪ ಕಾಲ ಚಕ್ರ ಸುತ್ತುತ್ತಲೇ ಇರುತ್ತದೆ. ಚಕ್ರದಲ್ಲಿ ಉಂಟಾದ ವೇಗವೆಂಬ ಸಂಸ್ಕಾರ ಅದಕ್ಕೆ ಕಾರಣ. ಅನೇಕ ಸಂದರ್ಭಗಳಲ್ಲಿ ಕಾರಣವು ಕಾರ್ಯವನ್ನು ಹುಟ್ಟಿಸಿ ನಷ್ಟವಾದ ಮೇಲೂ ಅದರ ಕಾರ್ಯ ನಡೆಯುತ್ತಲೇ ಇರುವುದು. ಅಧ್ಯಾತ್ಮಪರವಾದ ಈ ನ್ಯಾಯದ ಅರ್ಥವ್ಯಾಪ್ತಿಯನ್ನು ಹಿಗ್ಗಿಸಿ, ವೇಗಸಂಸ್ಕಾರ ಇರುವವರೆಗೂ ಚಕ್ರ ಸುತ್ತುವ ಹಾಗೆ, ಕಾರ್ಯಸಾಧಕನು ಕಾರ್ಯವೊಂದರ ಮೂಲವಾದ ಆಧಾರ, ಆಸರೆ ತಪ್ಪಿದ ಮೇಲೂ ಕಾರ್ಯತತ್ಪರನಾಗಿರುವುದನ್ನು ಬಿಡಬಾರದೆಂಬ ಇಂಗಿತವನ್ನು ಭಾವಿಸಬಹುದಾಗಿದೆ.

೨. ಭ್ರಮಿಯೆಂದರೆ ಮಂಡಲಾಕಾರ ಸೈನ್ಯರಚನೆಯೆಂಬ ಅರ್ಥವನ್ನು ಶಬ್ದಕಲ್ಪದ್ರುಮಾದಿ ಸಂಸ್ಕೃತ ಕೋಶಗಳು ಹೇಳುತ್ತವೆ. ವಸ್ತುಸಾಮ್ಯವನ್ನುಳ್ಳ ಕಥಾಭಾಗದಲ್ಲಿ ' ಭ್ರಮಿ ' ಎಂಬ ಶಬ್ದ ಈ ಅರ್ಥದಲ್ಲಿ ಪದ್ಮಪುರಾಣ (ಅ. ೬೧- ಪ. ೧೨-೧೭) ದಲ್ಲಿಯೂ ಜೈಮಿನೀಯ ಆಶ್ವಮೇಧಿಕ ಪರ್ವದಲ್ಲಿಯೂ (ಅ. ೩೩- ೨೬, ೨೭) ಹಲವು ಸಲ ಕಾಣಿಸಿಕೊಂಡಿದೆ. ಪದ್ಮಪುರಾಣದಲ್ಲಿ ಸಾಮಾನ್ಯಾರ್ಥವಷ್ಟೇ ಉಂಟು ; ಆಶ್ವಮೇಧಿಕ ಪರ್ವದಲ್ಲಿಯಾದರೋ ವ್ಯೂಹದ ವಿವರಣೆಯ ವಿಶಿಷ್ಟಾರ್ಥವಿದೆ. ಲಕ್ಷ್ಮೀಶಕೃತವಾದ ಕನ್ನಡ 'ಜೈಮಿನಿ ಭಾರತ'ದಲ್ಲಿ ಸಹ ಶಬ್ದದ ಉಲ್ಲೇಖವೂ ವಿವರಣೆಯೂ (೨೦-೪೪, ೪೮) ಕಂಡುಬರುತ್ತವೆ. ಸಂಸ್ಕೃತ ಕನ್ನಡಗಳ ವಿವರಣೆ

ಗಳಲ್ಲಿ ವ್ಯತ್ಯಾಸವುಂಟು. ಈ ವಿವರಣೆಗಳ ಭಿನ್ನತೆಯೇನಿದ್ದರೂ, ಭ್ರಮಿಯೆಂದರೆ "ಮಂಡಲಾಕಾರಗತಿಯಲ್ಲಿ ಚಲಿಸುವಂತೆ ವ್ಯವಸ್ಥೆಗೊಳಿಸಿದ ವಿಶಿಷ್ಟಸಂಖ್ಯೆಯ ಚತುರಂಗಬಲದ ಒಂದು ಸೇನಾವ್ಯೂಹ" ಎಂಬರ್ಥವೆಂದು ಹೇಳಲು ಅಡ್ಡಿಯಿಲ್ಲ. ಈ ವ್ಯೂಹದ ಸನ್ನದ್ಧತೆ, ಅಪ್ರತಿಹತವಾಗಿ ಮೇಲೆ ಬೀಳುವ ಕೌಶಲ ಮತ್ತು ಸಾಮರ್ಥ್ಯಗಳು, ಹೊಂಚುಗಾರಿಕೆ, ಜಾಗರೂಕತೆ ಇವೆಲ್ಲ ಪ್ರಸ್ತುತ ಚರ್ಚಿತ ಪದ ಸಮುಚ್ಚಯದಲ್ಲಿ ಇಂಗಿತಗೊಳ್ಳಬಹುದೆಂದು ತೋರುತ್ತದೆ.

ನೀರಿನ ಸುಳಿ ಮತ್ತು ಸುಂಟರ ಗಾಳಿಗಳ ಅರ್ಥಗಳನ್ನು ಅನ್ವಯಿಸುವ ಸಾಧ್ಯತೆಯನ್ನೂ ಪೂರ್ತಿ ತಳ್ಳಿಹಾಕುವಂತಿಲ್ಲ.

(೬) 'ಖಡ್ಗಾಯುಧಚಾಮರಂ ಪೊಳೆವ ಮಿಂಚನೆ ಪೋಲ್ತಿರೆ ಬೀಸು': ಚಾಮರವನ್ನು ಬೀಸಿ ಓಲೈಸುತ್ತಿರುವನೋ ಎಂದು ಪ್ರತಿಕಕ್ಷಿಗೆ ತೋರುತ್ತಿರಬೇಕಾದರೆ, ಖಡ್ಗವನ್ನು ಬೀಸಿ ನಿಗ್ರಹಿಸುವಂತಹ ಚತುರತೆ ಇಲ್ಲಿಯ ಇಂಗಿತವಿರಬಹುದು: ಮಿಂಚಿನ ಬೆಳಕು ಹೊಮ್ಮಿದಾಗ, ಕತ್ತಲೆ ತೊಲಗಿತು, ಕಣ್ಣಿಗೆ ದಿಗ್ದೆಸೆಗಳು ಹೊಲಬಾದುವು ಎಂದು ಭಾವನೆಯುಂಟಾಗುತ್ತದೆ; ಆದರೆ ಮರುಕ್ಷಣದಲ್ಲಿ ಮಿಂಚು ಕಣ್ಮರೆಯಾಗಿ ಮತ್ತೆ ಕತ್ತಲೆ ಕವಿಯುತ್ತದೆ; ಬೆಳಕು ಬರಿಯ ಭ್ರಮೆಯೆನಿಸುತ್ತದೆ. ಹಾಗೆಯೇ 'ಇವನು ನಮ್ಮ ಅಧೀನದಲ್ಲಿರುವವನು, ಊಳಿಗದವನು ಎಂಬುದಾಗಿ ಮೇಲೆ ತೋರುವಂತೆ ನಂಬಿಸಬೇಕು; ಆ ನಂಬುಗೆಯಲ್ಲಿ ಪ್ರತಿಕಕ್ಷಿ ಇರುವಾಗಲೇ, ಆತನನ್ನು ವಂಚಿಸಿ ನಿಗ್ರಹಿಸಿಬಿಡಬೇಕು. 'ಖಡ್ಗಾಯುಧಚಾಮರಂ' ಎಂಬ ಅಪೂರ್ವವಾದ ರೂಪಕದ ಅರ್ಥವ್ಯಾಪ್ತಿ ಹೃದಯಂಗಮವಾದುದು.

ಹೀಗೆ ವಿವಿಧ ಮೂಲಗಳಿಂದ ರಾಜನೀತಿಯ ವಿವಿಧಚರ್ಯೆಗಳನ್ನು ಗಮನವಿಟ್ಟು ತಿಳಿದುಕೊಂಡರೆ, ಅವನ್ನು ಇತರರಿಗೆ ಬೋಧಿಸಲು ಅವನು ಸಮರ್ಥನಾಗುವನು ಎಂಬುದು ಸ್ಪಷ್ಟವೇ ಇದೆ.

ಅನುಬಂಧ

೧. 'ಭ್ರಮಿ' ಶಬ್ದದ ಸಾಮಾನ್ಯಾರ್ಥಕ್ಕೆ 'ಪದ್ಮಪುರಾಣ'ದ ಪ್ರಯೋಗಗಳು:

(i) ವೀರಾನ್ ಸಹಸ್ರಶೋ ದೃಷ್ಟ್ವಾ ಭ್ರಮಿಭಿಃ ಪರ್ಯವಸ್ಥಿತಾನ್
ಲವೋ ಜವೇನ ಸಂಧಾಯ ಶರಾನ್ ರೋಷಪ್ರಪೂರಿತಃ ॥

(ii) ಭ್ರಮಿರಾದ್ಯಾ ಸಹಸ್ರೇಣ ದ್ವಿತೀಯಾಯುತಸಂಖ್ಯಯಾ
ತೃತೀಯಾಯುತ ಯುಗ್ಮೇನ ತುರೀಯಾಯುತ ಪಂಚಭಿಃ ॥

(ಪಾತಾಲ ಖಂಡ, ೬೧–೧೨,೧೩)

ಹೀಗೆಯೇ ೬೧-೧ಳರಿಂದ ೧೭ರವರೆಗೆ ಬರುವ ಶ್ಲೋಕಗಳಲ್ಲಿ ಸಹ 'ಭ್ರಮಿ' ಶಬ್ದವುಂಟು.

೨. ' ಜೈಮಿನೀಯ ಆಶ್ವಮೇಧಿಕ ಪರ್ವ 'ದಲ್ಲಿ ವಿಶಿಷ್ಟಾರ್ಥಕ್ಕೆ ಪ್ರಯೋಗ:

ಭ್ರಮ್ಯೋ ಗಜಾನಾಂ ಹಿ ಶತೇನ ಜಾತಾಃ
ತತೋಽಧಿಕಾಸ್ತಾಹಿ ಶತಂ ಶತೇನ
ಗಜೇ ಗಜೇ ತತ್ರ ರಥಾ ದಶಾಸನ್'
ರಥೇ ರಥೇ ವಾಜಿಶತಂ ಬಭೂವ ॥

ಹರೌ ಹರೌ ಪತ್ತಿ ಶತಂ ಹಿ ತಸ್ಥೌ
ಏವಂ ಭ್ರಮೀಣಾಂ ಶತಕೇನ ರುದ್ಧಃ...॥

(ಲವಯುದ್ಧವಿಜಯವರ್ಣನ. ಅ. ೩೩-೨೬,೨೭)

" ನೂರು ಆನೆಗಳಿಗೆ ಒಂದು ಭ್ರಮಿ (ಮಂಡಲಾಕಾರವಾದ ಗತಿವಿಶೇಷವುಳ್ಳ ಗುಂಪು) ಯಂತೆ ನೂರಕ್ಕೆ ನೂರರಷ್ಟು ಭ್ರಮಿಗಳು ಹೆಚ್ಚುತ್ತಿದ್ದವು. ನೂರು ಆನೆಗಳಿಗೂ ಆನೆಯೊಂದಕ್ಕೆ ಹತ್ತರಂತೆ ಸಾವಿರ ರಥಗಳೂ ರಥವೊಂದೊಂದಕ್ಕೆ ನೂರರಂತೆ ಕುದುರೆಗಳೂ (೧,೦೦,೦೦೦) ಕುದುರೆಯೊಂದೊಂದಕ್ಕೆ ನೂರರಂತೆ ಪದಾತಿಗಳೂ (೧,೦೦,೦೦,೦೦೦) ಹೀಗೆ ನೂರು ಭ್ರಮಿಗಳು ಬಾಲನೂ ಏಕಾಕಿಯೂ ಆದ ಲವನನ್ನು ಸುತ್ತಿಕೊಂಡು....ಹೊಡೆದರು ". (ಅನು. ಕಡಬದ ನಂಜುಂಡಶಾಸ್ತ್ರಿಗಳು, ಎನ್. ರಂಗನಾಥ ಶರ್ಮ : ಜೈಮಿನಿ ಭಾರತ : ಆಶ್ವಮೇಧಿಕಪರ್ವ, ಪು. ೨೩೨).

೩. ಲಕ್ಷ್ಮೀಶನ ' ಜೈಮಿನಿ ಭಾರತ 'ದಲ್ಲಿ ವಿಶಿಷ್ಟಾರ್ಥಕ್ಕೆ ಪ್ರಯೋಗ :

(i) ನೂಱಾಳಿಗೊಂದು ಹಯಮಿರುತಿರ್ಪುದಾ ಹಯಂ
ನೂಱಕಿರುತಿಹುದು ಮೇಣೊಂದು ರಥಮಾ ರಥಂ
ನೂಱಕಿಭವೊಂದಿರ್ಪುದಾ ಇಭಸಹಸ್ರಮಿರೆ ಭ್ರಮಿಯೆಂದೆನಿಸಿಕೊಂಬುದು ॥
ಮೀಱಿ ಯೋಜನದಗಲದೊಳ್ ಭ್ರಮಿಗಳೀರೈದು
ನೂಱಿಟ್ಟಣಿಸಿ ನಡೆದು ಬಂದೊಡಾ ಸೇನೆಯಂ
ತಾಱುತಟ್ಟಾಗಿ ಕೆಡಹಿದರೊಂದು ನಿಮಿಷದೊಳ್ ಕುಶಲವರದೇವೇಳ್ವೆನು ॥

(ii) ಭೂರಿ ಬಾಣದೊಳಹಿತಸೇನೆಯೊಳ್ ಮುಳಿದು ಚ
ತ್ವಾರಿಂಶದನುಪಮಭ್ರಮಿಗಳಂ ತಡೆಗಡಿದು
ವೀರಲವನಲ್ಲಿ ಕುಶನಂ ಕಾಣದೆಡಬಲದೊಳಱಸೆ ರುಧಿರಾಕ್ಷನೆಂಬ...॥

(೨೦-೪೪,೪೮)

ಲಕ್ಷ್ಮೀಶನ ವಿವರಣೆಯ ಪ್ರಕಾರ ' ಭ್ರಮಿ 'ಯ ಸ್ವರೂಪ : " ನೂರು ಕಾಲಾಳುಗಳಿಗೆ ಒಂದು ಕುದುರೆ ; ಅಂತಹ ನೂರು ಕುದುರೆಗಳಿಗೆ ಒಂದು ರಥ ; ಅಂತಹ ನೂರು ರಥಗಳಿಗೆ ಒಂದು ಆನೆ ; ಅಂತಹ ಸಾವಿರ ಆನೆಗಳು ಇದ್ದರೆ ಅದು ಭ್ರಮಿಯೆನಿಸಿಕೊಳ್ಳುತ್ತದೆ." ಟೀಕೆಯಲ್ಲಿ: " ಭ್ರಮಿ ಎಂದರೆ ಸಾವಿರ ಆನೆ, ಲಕ್ಷ ರಥ, ಕೋಟಿ ಕುದುರೆ, ನೂರು ಕೋಟಿ ಕಾಲಾಳುಗಳು ಇರುವ ಸೈನ್ಯ." (ಕೆ. ನಂಜುಂಡಶಾಸ್ತ್ರಿಗಳು ಮತ್ತು ಎಚ್. ನಾಗಪ್ಪನವರು : ' ಸಟೀಕಾ ಜೈಮಿನಿ ಭಾರತ ', ಪು. ೫೨೭).

ಪುಸ್ತಕ ವಿಮರ್ಶೆ

ದಾರಿ ಎಚ್ಚೆತ್ತಿದೆ (ಕವನ ಸಂಕಲನ) : ಲೇಖಕರು ; ಕೊಂಪಿ ಗುರುಬಸಪ್ಪ, ಪ್ರಕಾಶಕರು : ಸಂಕೀರ್ಣ ಪ್ರಕಾಶನ, ಹಿರೇಹಡಗಲಿ, ಬಳ್ಳಾರಿ ಜಿಲ್ಲೆ. ಪುಟ : ೩೪, ಬೆಲೆ : ರೂ.೧೦, ೧೯೮೭

ಕಾವ್ಯಕ್ಷೇತ್ರದಲ್ಲಿ ಶ್ರೀ ಕೊಂಪಿ ಗುರುಬಸಪ್ಪನವರ ಮೊಟ್ಟಮೊದಲ ಪ್ರಯತ್ನದ ಫಲವೇ "ದಾರಿ ಎಚ್ಚೆತ್ತಿದೆ" ಕವನ ಸಂಕಲನ. ಸಾವಿರಾರು ವರ್ಷಗಳಿಂದಲೂ ದೌರ್ಜನ್ಯಕ್ಕೆ ಗುರಿಯಾಗಿರುವ ಶೋಷಿತ ವರ್ಗದವರು ವ್ಯವಸ್ಥೆಯ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಇಂಥ ಬಾಳಿನ ಬವಣೆಗೆ ಕವಿ ಧ್ವನಿ ಎತ್ತಿದ್ದಾರೆ. ಅವರ ನಾನಾ ಭಾವಸಂಘರ್ಷಗಳ ಪ್ರತಿರೂಪವೇ ಈ ಕವನಗಳು.

ನಾವು ಬರತೇವ, ಧ್ವನಿ ಇದ್ದರೆ ಹಾಡೊ, ಕೊನೆಯ ದಾಖಲೆ, ಹಿಗ್ಗಿನ ಕ್ಷಣಗಳು, ನಮ್ಮದೇನ ತಪ್ಪಿದ್ದರ, ಬೇಕಾಗಿದ್ದಾರೆ ತಜ್ಞರು, ಮತ್ತು ಶೋಷಿತರ ಹಾಡು ಈ ಕೆಲವು ಕವನಗಳಲ್ಲಿ ಶೋಷಣೆಯ ದಾರುಣ ಚಿತ್ರಣವಿದೆ. ಕೆಲವೊಂದು ಕವನಗಳಲ್ಲಿ ಪರಿಸ್ಥಿತಿಯ ಬಗ್ಗೆ ಪರಿತಪಿಸುವ ಭಾವವಿದ್ದರೆ, ಮತ್ತೆ ಕೆಲವದರಲ್ಲಿ ಪರಿಸ್ಥಿತಿಯ ವಿರುದ್ಧ ಹೋರಾಡಿ ತಲೆಎತ್ತಿ ನಿಲ್ಲಬೇಕೆಂಬ ಬಯಕೆಯಿದೆ. ಮತ್ತೆ ಕೆಲವು ಕವನಗಳಲ್ಲಿ ಪ್ರತಿಭಟನೆಯ ಎಳೆಯಿದ್ದರೂ ಅದು ಕವನದುದ್ದಕ್ಕೂ ಗಟ್ಟಿಯಾಗಿ ನಿಲ್ಲದೆ ತೆಳುವಾಗುತ್ತ ಹೋಗುತ್ತದೆ.

"ಎಚ್ಚೆತ್ತ ದಲಿತರು ನಾವುಗಳು
ಬೋರಿಟ್ಟು ಬರುವಾಗ
....
ದೊಡ್ಡವರ ಎದೆ ಒಡೆಯುವುದು".

(ನಾವು ಬರತೇವ ಪು.೯)

ಇಲ್ಲಿ ಶೋಷಣೆಯ ವಿರುದ್ಧ ಹೋರಾಟ ನಡೆಸಬೇಕೆಂಬ ಒತ್ತಾಸೆಯಿದೆ, ಹೋರಾಟದ ಪರಿಣಾಮ ಎಂಥದ್ದೆಂಬುದರ ಬಗೆಗೆ ಅರಿವಿರುವುದನ್ನೂ ಗಮನಿಸಬಹುದು. ಮತ್ತೊಂದು ಕವನ "ಶೋಷಿತರ ಹಾಡು," ಕಳೆದುಹೋದ ಆ ಅಪಮಾನಕರ ಗಳಿಗೆಗಳ ಬಗ್ಗೆ ಆಕ್ರೋಶ ವ್ಯಕ್ತಪಡಿಸುತ್ತದೆ. ಆದರದು ಪ್ರತಿಭಟನೆಯ ಧ್ವನಿಯಾಗಿ ಗಟ್ಟಿಯಾಗಿ ನಿಲ್ಲದೆ ಸೂಚ್ಯವಾಗಿಯೇ ನಿಂತುಬಿಡುತ್ತದೆ.

ಮುಂದೆ "ಧ್ವನಿ ಇದ್ದರೆ ಹಾಡೋ" ಕವನದಲ್ಲೂ ತಾವು ಇದುವರೆವಿಗೂ ಪಟ್ಟ ಬವಣೆಗಳ ಬಗ್ಗೆ ತಿರಸ್ಕಾರವಿದೆ. ಅಂತೇ ತಮ್ಮ ಅಸಹಾಯಕತೆಯನ್ನು ಮೆಟ್ಟಿನಿಲ್ಲಬೇಕೆಂಬ ಛಲವಿದೆ.

"ಬಂಡಾಯದ ಗೆಳೆಯ
ಸೊಂಡಿಲೆತ್ತಿ ಕಿರುಚದಿರು ಬರೀ ಕಿರುಚದಿರು
....
ಕಪ್ಪುಗೆರೆ ಎಳೆದೆಳೆದು ಮುಗಿಯದ ಪ್ರಪಂಚಕೆ
ನಿಲ್ಲದ ನೀಚ ದೃಶ್ಯಗಳನ್ನು
ದಾಖಲಿಸುತ್ತ ಹೋಗುವಿ."

(ಕೊನೆಯ ದಾಖಲೆ ಪು ೨೧)

ಇಲ್ಲಿ ಕವಿ ತನ್ನ ಬಂಡಾಯದ ಗೆಳೆಯನನ್ನು ಕುರಿತು ಕವನ ಆರಂಭಿಸಿರುವುದನ್ನು ಗಮನಿಸಬೇಕು. ಕಾವ್ಯಗಳಲ್ಲಿ ಬಂಡಾಯ ಮತ್ತು ದಲಿತ ಪಂಥಗಳಲ್ಲಿರುವ ಭಿನ್ನ ಪ್ರವೃತ್ತಿಗಳನ್ನು ಗುರುತಿಸಿಕೊಳ್ಳಬಹುದಾದರೆ, ದಲಿತ ಕವಿಯೊಬ್ಬ ತನ್ನ ಬದುಕಿನ ಅನುಭವಗಳಿಗೆ ಬಂಡಾಯದ ಗೆಳೆಯ ಧ್ವನಿ ಎತ್ತುತ್ತಿರುವುದನ್ನು ವ್ಯಥೆಯಿಂದ ಪ್ರಶ್ನಿಸುತ್ತಿರುವಂತಿದೆ. ಅಂತೆಯೇ ಗೆಳೆಯ ತನ್ನ ಬದುಕಿನ ಬವಣೆಗೆ ತೋರುತ್ತಿರುವ ಕಾಳಜಿಗಾಗಿ ಕವಿಗೆ ಸಮಾಧಾನಕ್ಕಿಂತ, ಆತ ನೀಡುತ್ತಲೇ ಇರಬಹುದಾದ ದಾಖಲೆಗಳಿಗೆ ನಿರಂತರವಾಗಿ ಸಾಕ್ಷೀಭೂತರಾಗಿ ನಿಲ್ಲಬೇಕಾದ ಪರಿಸ್ಥಿತಿಯ ಬಗೆಗೆ ನೋವಿದೆ.

ಇಂಥ ದಲಿತರ ಜೀವನದಲ್ಲೂ ಕೆಲವಷ್ಟೇ "ಹಿಗ್ಗಿನ ಕ್ಷಣಗಳಿವೆ". ಅವುಗಳೆಂದರೆ ಮಾನಸಿಕ, ದೈಹಿಕ ಆಯಾಸವನ್ನು ಮರೆಸುವಂಥ ಕುಡಿತ, ಹೊಟ್ಟೆ ತುಂಬ ಊಟ ಸಿಕ್ಕಾಗ ಸಂತೋಷ ಮತ್ತು ಆತನ ಧಣಿಯ ಸಾವು. ಧಣಿಯ ಶೋಷಣೆಗೆ ಬಾಳಿನುದ್ದಕ್ಕೂ ಬಲಿಯಾದ ವ್ಯಕ್ತಿ ಆತನ ಸಾವಿನಲ್ಲಾದರೂ ಸಂತಸಪಡುವುದು ಅತಿಶಯವಲ್ಲ. ಆದರೆ ಕವಿ ಅದನ್ನು "ಹಿಗ್ಗಿನ ಕ್ಷಣ"ವೆಂದು ಸೂಚಿಸಿರುವುದರಲ್ಲೇ ಹೆಚ್ಚಿನ ಅರ್ಥವಿದೆ. ಧಣಿ ಸತ್ತ ಸಾವಿನ ಸಂತೋಷ ಕ್ಷಣಿಕವಾದದ್ದು, ಮುಂದಿನ ಗಳಿಗೆಯಲ್ಲೇ ಆತ ಮಗದೊಬ್ಬ ಧಣಿಯ ಮೊರೆ ಹೋಗಬೇಕಾಗಬಹುದು. ಇದು ಬದುಕಿನ ದಾರುಣ ವ್ಯಂಗ್ಯ ಕೂಡ

ಮತ್ತೊಂದು ಕವನ "ನಮ್ಮದೇನ ತೆಪ್ಪಿದ್ದರ" ಶೋಷಣೆಯ ಬಹುಮುಖತೆಗೆ ಹಿಡಿದ ಕನ್ನಡಿಯಾಗಿದೆ. ಶೋಷಣೆಯ ತೀವ್ರತೆ ಎಷ್ಟಿದೆಯೆಂದರೆ ಧಣಿ ಕಾಲಿನಿಂದ ತೋರಿದ್ದನ್ನು ಕೈಯಿಂದ ಮಾಡಿ, ತನ್ನ ಸಂಸಾರದ ಹಿತವನ್ನು ಕಡೆಗಣಿಸಿ ಧಣಿಯ ಏಳಿಗೆಗಾಗಿ ದುಡಿವ ತಪ್ಪಿಗೆ, ಸಿಕ್ಕ ಪ್ರತಿಫಲವೆಂದರೆ ಆತನ ದಾರಿದ್ರ್ಯದಲ್ಲೂ ಮತ್ತೇನಾದರೂ ಸಿಕ್ಕೀತೇ ಎಂದು ಆತನ ಕೇರಿಗೂ ನುಗ್ಗಿ ಸಿಕ್ಕಿದ್ದನ್ನು ಲಪಟಾಯಿಸುವ ಧೂರ್ತತೆ ಧಣಿಯದು. ಇಂಥ ಪರಿಸ್ಥಿತಿಯ ಬಗ್ಗೆ ಕವನದುದ್ದಕ್ಕೂ ಸೂಕ್ಷ್ಮವಾಗಿರುವ ಕ್ರೋಧದ ಎಳೆ ಪ್ರತಿಭಟನೆಯ ಸ್ವರೂಪ ತಾಳಿದೆ ಕವನ ಅಂತ್ಯದಲ್ಲಿ ;

"ನಮ್ಮದೇನರ ತೆಪ್ಪಿದ್ದರ
ಈ ನಮ ಸುಡುಗಾಡು ಮಾರಿ ಮೇಲೆ
ಹೇಲು ತಿಂದು ಉಗುಳ್ರೀ ಧಣೇರ...

ಬರತೇವಿ, ಇಲ್ಲ........ಹೋಗತೇವು
ನಿಮ್ಮಿಂದ ದೂರ

(ನಮ್ಮದೇನ ತಪ್ಪಿದ್ದರ ಪು. ೨೬)

ಹೀಗೆ ಸೋತುಬಿಡುವುದು ಅದರ ಬೆಳವಣಿಗೆಗೆ ಅಡ್ಡಿಯನ್ನುಂಟುಮಾಡಿದೆ.

ಇನ್ನುಳಿದ ಕೆಲವು ಕವನಗಳು ದೇಶದ ರಾಜಕೀಯ ಪರಿಸ್ಥಿತಿಯನ್ನು ಕುರಿತವು. ಇವು ಅಮಾಯಕ ಜನರ ಮೇಲೆ ರಾಜಕಾರಣಿಗಳು ಮಾಡುವ ಶೋಷಣೆಯ ಮತ್ತೊಂದು ಮುಖದ ಚಿತ್ರಣವನ್ನು ನೀಡುತ್ತವೆ. ನಮ್ಮೂರ ನಾಯಕ, ಎದ್ದೇನು ಮಾಡುವುದು, ದಾರಿ ಎಚ್ಚೆತ್ತಿದೆ. ರೈತರ ಕ್ರಾಂತಿಗೀತೆಗಳು ಅಂಥ ಕೆಲವು ಕವನಗಳು. "ನಮ್ಮ ಪಾಲಿನ ಮನೆ", "ದೇಶದ ಮೂರು ಸ್ಥಿತಿ", "ಸಂಕೇತ", "ಸಾಮರ್ಥರು, ವಾಸನೆ, ಇತ್ಯಾದಿ", "ಹೆಣಭಾರ", "ತಲೆಹಿಡುಕರು ಬರುತ್ತಾರೆ" ಕವನಗಳು ವಿಭಿನ್ನ ವಸ್ತುಗಳಿಂದ ಕೂಡಿದ್ದು ಓದುಗನನ್ನು ಆಕರ್ಷಿಸುತ್ತವೆ.

ಕಲಾಶ್ರೀ ಎಂ. ಹನಸೋಗೆ

ಸಂಪಾದಕೀಯ

ಯುವರಾಜ ಕಾಲೇಜಿನ ವಜ್ರಮಹೋತ್ಸವ

೧೯೮೮ ಡಿಸೆಂಬರ್ ೨೮ ರಿಂದ ೩೦ನೆಯ ದಿನಾಂಕದವರೆಗೆ ಅಂದರೆ ಮೂರು ದಿನಗಳ ಕಾಲ ಮೈಸೂರಿನ ಯುವರಾಜ ಕಾಲೇಜಿನ ವಜ್ರಮಹೋತ್ಸವವನ್ನು ಪ್ರಾಚಾರ್ಯ ಪ್ರೊ. ಎಸ್. ನಾರಾಯಣ ಶೆಟ್ಟಿ (ಸುಜನಾ) ಅವರ ನೇತೃತ್ವದಲ್ಲಿ ವೈಭವದಿಂದ ಆಚರಿಸಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ. ಪಿ. ಸೆಲ್ವಿದಾಸ್ ಅವರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಮಾರಂಭ ನಡೆಯಿತು. ಭಾರತದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದು ವಿಶ್ರಾಂತರಾಗಿರುವ ಶ್ರೀ ಇ. ಎಸ್. ವೆಂಕಟರಾಮಯ್ಯನವರು ವಜ್ರಮಹೋತ್ಸವವನ್ನು ಉದ್ಘಾಟಿಸಿದರು. ಅವರು ಹಿರಿಯ ಗುರುವೃಂದದ ಸನ್ಮಾನ ಕಾರ್ಯಕ್ರಮವನ್ನೂ ನಡೆಸಿಕೊಟ್ಟರು. ವಿಜ್ಞಾನ ವಸ್ತುಪ್ರದರ್ಶನದ ಉದ್ದೀಪನವನ್ನು ಟಾಟಾ ವಿಜ್ಞಾನ ಸಂಶೋಧನೆಯ ನಿರ್ದೇಶಕರಾಗಿದ್ದು ಈಗ ರಾಮಾನುಜನ್ ಪ್ರಾಧ್ಯಾಪಕರಾಗಿರುವ ಖ್ಯಾತ ಭೌತವಿಜ್ಞಾನಿ ಪ್ರೊ. ಬಿ. ವಿ. ಶ್ರೀಕಂಠನ್ ಅವರು ಮಾಡಿದರೆ, ಪ್ರೊ. ಸುಜನಾ ಅವರ ಪ್ರಧಾನ ಸಂಪಾದಕತ್ವ, ಪ್ರೊ. ಜೆ. ಆರ್. ಲಕ್ಷ್ಮಣರಾವ್, ಡಾ. ಬಿ. ನಂ. ಚಂದ್ರಯ್ಯ ಅವರ ಸಂಪಾದಕತ್ವದಲ್ಲಿ ಸಿದ್ಧವಾದ ಸ್ಮರಣ ಸಂಪುಟ 'ವಜ್ರ ಕಿರಣ'ದ ಬಿಡುಗಡೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಹಿಂದಿನ ಕುಲಪತಿ ಡಾ. ವೈ. ಪಿ. ರುದ್ರಪ್ಪನವರು ಮಾಡಿದರು. ಭಾರತದ ವೈಣಿಕರಲ್ಲಿ ಅಗ್ರಪಂಕ್ತಿಯಲ್ಲಿರುವ ಪದ್ಮಭೂಷಣ ಡಾ. ವಿ. ದೊರೆಸ್ವಾಮಿ ಅಯ್ಯಂಗಾರ್ ಅವರೂ ಪ್ರೊ. ಎಂ. ಷಡಕ್ಷರಸ್ವಾಮಿಯವರೂ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

ವಜ್ರಮಹೋತ್ಸವದ ಅಂಗವಾಗಿ ಉದ್ಘಾಟನಾ ಸಮಾರಂಭದ ಜೊತೆಗೆ ಎರಡು ವಿಜ್ಞಾನ ಗೋಷ್ಠಿಗಳೂ ಒಂದು ಕವಿಗೋಷ್ಠಿಯೂ ವಿದ್ಯಾರ್ಥಿಗಳ ಕ್ವಿಜ್, ಆಶುಭಾಷಣ ಉಪನ್ಯಾಸ ಮಂಜರಿ, ಪ್ರತಿಭಾ ಪ್ರದರ್ಶನಗಳ ಒಂದು ಗೋಷ್ಠಿಯೂ ಸ್ವಸ್ತಿ ವಚನ ಸಮಾರಂಭವೂ ನಡೆದವು.

ಮೊದಲ ವಿಜ್ಞಾನಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಬಿ. ವಿ. ಶ್ರೀಕಂಠನ್ ಅವರೇ ವಹಿಸಿದ್ದರು. ಆ ಗೋಷ್ಠಿಯಲ್ಲಿ ಪ್ರೊ. ಪಿ. ವೆಂಕಟರಾಮಯ್ಯ 'ಭಾರತದಲ್ಲಿ ಪರಮಾಣು ಶಕ್ತಿಯ ಉತ್ಪಾದನೆಯ ಆಗತ್ಯ', ಪ್ರೊ. ಎ. ಟಿ. ಭಾಷ್ಯಂ 'ಪರ್ಯಾಯ ಶಕ್ತಿ ಮೂಲಗಳು', ಪ್ರೊ. ಜೆ. ಶಶಿಧರ ಪ್ರಸಾದ್ 'ಸ್ಫಟಿಕಶಾಸ್ತ್ರ ಮತ್ತು ಪದಾರ್ಥ ವಿಜ್ಞಾನ', ಡಾ. ಬಿ. ಎಸ್. ಎನ್. ಪ್ರಸಾದ್ 'ಭೂ ವಾತಾವರಣ ಮತ್ತು ಪರಿಸರಕ್ಕೆ

ವಿಪತ್ತು' ಎಂಬ ವಿಷಯಗಳನ್ನು ಕುರಿತು ಉಪನ್ಯಾಸ ನೀಡಿದರು. ಪ್ರೊ. ಕೆ. ಶ್ರೀನಿವಾಸನ್ ಗೋಷ್ಠಿಯ ನಿರ್ವಾಹಕರಾಗಿದ್ದರು.

ಎರಡನೆಯ ವಿಜ್ಞಾನ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಎಂ. ಎಚ್. ಧನಂಜಯ ವಹಿಸಿದ್ದರಲ್ಲದೆ ಅವರು 'ಎಲೆಕ್ಟ್ರಾನಿಕ್ಸ್ ಪ್ರಪಂಚ' ಎಂಬ ವಿಷಯದ ಮೇಲೆ ಉಪನ್ಯಾಸವನ್ನೂ ನೀಡಿದರು. ಪ್ರೊ. ಡಿ. ಎಸ್. ಶಿವಪ್ಪ 'ವೈದ್ಯಶಾಸ್ತ್ರದ ಮುನ್ನಡೆ', ಡಾ. ಎ. ಜಿ. ಹರಿಹರನ್ 'ಕಂಪ್ಯೂಟರ್ ಮತ್ತು ಮಿದುಳು', ಡಾ. ಸಿ. ಜಿ ನರಸಿಂಹನ್ 'ಶಸ್ತ್ರವೈದ್ಯ: ಅಂದು-ಇಂದು' ಎಂಬ ವಿಷಯಗಳನ್ನು ಕುರಿತು ಉಪನ್ಯಾಸ ನೀಡಿದರು. ಪ್ರೊ. ಎಲ್. ಎನ್. ಚಕ್ರವರ್ತಿ ಗೋಷ್ಠಿಯ ನಿರ್ವಾಹಕರಾಗಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಕನ್ನಡದ ಪ್ರಖ್ಯಾತ ಕವಿ ಮತ್ತು ವಿಮರ್ಶಕರೂ ಆದ ಪ್ರೊ. ಜಿ. ಎಸ್. ಶಿವರುದ್ರಪ್ಪನವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಕನ್ನಡದ ಮತ್ತೊಬ್ಬ ಸುವಿಖ್ಯಾತ ಕವಿ ಕೆ. ಎಸ್. ನರಸಿಂಹಸ್ವಾಮಿಯವರು ಗೋಷ್ಠಿಯನ್ನು ಉದ್ಘಾಟಿಸಿದರು. ಕವಿಗೋಷ್ಠಿಯಲ್ಲಿ ಎಚ್ಚೆಸ್ಕೆ, ಚದುರಂಗ, ಡಾ. ಕೆ. ಕೃಷ್ಣಮೂರ್ತಿ, ಪ್ರೊ. ಜೀ.ಶಂ.ಪ., ಪ್ರೊ. ಸುಜನಾ, ಡಾ. ಬಿ. ನಂ. ಚಂದ್ರಯ್ಯ, ರಾಗೌ, ಮಳಲಿ ವಸಂತಕುಮಾರ, ಪ್ರೊ. ಸಿ. ಜಿ. ಪುರುಷೋತ್ತಮ ಮೊದಲಾದವರು ಕವನಗಳನ್ನು ಓದಿದರು.

ವಿದ್ಯಾರ್ಥಿ ಪ್ರತಿಭಾ ಗೋಷ್ಠಿಯ ಅಧ್ಯಕ್ಷತೆಯನ್ನು ಪ್ರೊ. ಎಚ್. ಸಂಜೀವಯ್ಯನವರು ವಹಿಸಿದ್ದರು. ಪ್ರೊ. ಜೆ. ಆರ್. ಲಕ್ಷ್ಮಣರಾವ್ ಅವರು ಗೋಷ್ಠಿಯ ಉದ್ದೀಪನ ಕಾರ್ಯವನ್ನು ನೆರವೇರಿಸಿದರು. ಪ್ರೊ. ಡಿ. ರಂಗಯ್ಯನವರು ಕಾರ್ಯಕ್ರಮದ ನಿರ್ವಾಹಕರಾಗಿದ್ದರು.

ವಜ್ರಮಹೋತ್ಸವದ ಮಂಗಳ ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿಗಳಾದ ಪ್ರೊ. ಎ. ಎನ್. ಮೂರ್ತಿರಾವ್ ವಹಿಸಿದ್ದರು. ಶ್ರೀ ಸ್ವಾಮಿ ಸೋಮನಾಥಾನಂದಜೀ ಅವರು ಸ್ವಸ್ತಿ ವಚನ ಉಪನ್ಯಾಸ ನೀಡಿದರು. ಪ್ರೊ. ಎಂ. ನಾಗರಾಜ್ ಅವರು ಅತಿಥಿಗಳಾಗಿದ್ದರು.

ಮೂರೂ ದಿನ ಸಂಜೆ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಈ ಸಂದರ್ಭದಲ್ಲಿ ಕಾಲೇಜಿಗೊಂದು ಸ್ಥಿರವಾದ ಲಾಂಛನವನ್ನೂ ಭಾವಿಸಲಾಯಿತು. ಅದನ್ನು ಕುರಿತು ದೀರ್ಘವಾದ, ಬೋಧಪ್ರದವಾದ ಸಮರ್ಥ ವಿವರಣೆ, ವ್ಯಾಖ್ಯಾನಗಳನ್ನು ಪ್ರಾಚಾರ್ಯ ಸುಜನಾ ಅವರು ಸ್ಮರಣ ಸಂಪುಟ 'ವಜ್ರಕಿರಣ'ದ 'ಅರಿಕೆ'ಯಲ್ಲಿ ನೀಡಿದ್ದಾರೆ.

ಯುವರಾಜ ಕಾಲೇಜು (ಆಗ ಇಂಟರ್‌ಮೀಡಿಯಟ್ ಕಾಲೇಜ್) ಸ್ಥಾಪನೆಯಾದದ್ದು ೧೯೨೮ರಲ್ಲಿ. ಮದ್ರಾಸ್ ವಿಶ್ವವಿದ್ಯಾನಿಲಯದ ಇಂಟರ್‌ಮೀಡಿಯಟ್

ಪದ್ಧತಿಯನ್ನು ಮೈಸೂರು ವಿಶ್ವವಿದ್ಯಾನಿಲಯ ಅಳವಡಿಸಿಕೊಂಡ ವರ್ಷವೇ ಈ ಕಾಲೇಜಿನ ಸ್ಥಾಪನೆಯಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಅಂದಿನ ಕುಲಪತಿಗಳಾಗಿದ್ದ ಬ್ರಜೇಂದ್ರನಾಥ್ ಸೀಲ್ ಅವರು ಆಗಸ್ಟ್ ೮, ೧೯೨೭ರಂದು ಕಾಲೇಜಿನ ಕಟ್ಟಡದ ಶಂಕುಸ್ಥಾಪನೆ ಮಾಡಿದರು. ಆಗ ಈ ಕಾಲೇಜಿನಲ್ಲಿ ವಿಜ್ಞಾನ, ಮಾನವಿಕ ವಿಷಯಗಳ ಪಾಠ ಪ್ರವಚನ ನಡೆಯುವ ಏರ್ಪಾಟಿತ್ತು.

ಸ್ವಾತಂತ್ರ್ಯಾನಂತರ ೧೯೪೮ರಲ್ಲಿ ಕಾಲೇಜಿನಲ್ಲಿ ಬಿ.ಎಸ್‌ಸಿ. ಶಿಕ್ಷಣ ಪ್ರಾರಂಭವಾದಾಗ ಅದು ಫಸ್ಟ್‌ಗ್ರೇಡ್ ಕಾಲೇಜ್ ಎಂಬ ಹೆಸರು ಪಡೆಯಿತು. ೧೯೫೪ರಲ್ಲಿ ಕಾಲೇಜಿಗೆ ಇಪ್ಪತ್ತೈದು ವರ್ಷಗಳು ತುಂಬಿದಾಗ ಯುವರಾಜ ಕಾಲೇಜು ಎಂದು ಪುನರ್ನಾಮಕರಣ ಮಾಡಲಾಯಿತು. ಈ ಕಾಲೇಜು ಮಹಾರಾಜ ಕಾಲೇಜಿನ ಪಕ್ಕದಲ್ಲಿದೆ; ಮಹಾರಾಣಿ ಕಾಲೇಜು ಅನತಿದೂರದಲ್ಲಿಯೇ ಇದೆ. ಶ್ರೀ ಜಯಚಾಮರಾಜ ಒಡೆಯರ್ ಅವರು ರಾಜಕುಮಾರರಾಗಿದ್ದಾಗ ೧೯೩೪-೩೬ರ ಅವಧಿಯಲ್ಲಿ ಈ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ವ್ಯಾಸಂಗಮಾಡಿದ್ದರು. ಅವರೇ ಬೆಳ್ಳಿ ಹಬ್ಬ ಮತ್ತು ಪುನರ್ನಾಮಕರಣೋತ್ಸವವನ್ನು ರಾಜಪ್ರಮುಖರಾಗಿದ್ದು ಉದ್ಘಾಟಿಸಿದ್ದರು. ಈ ಎಲ್ಲ ಸಂಗತಿಗಳೂ ಯುವರಾಜ ಕಾಲೇಜು ಎಂಬ ನಾಮಕರಣಕ್ಕೆ ಕಾರಣವಾದ ಅಂಶಗಳೆಂದು ತೋರುತ್ತದೆ.

೧೯೫೭ರಲ್ಲಿ ಎರಡು ವರ್ಷದ ಇಂಟರ್‌ಮೀಡಿಯಟ್ ಶಿಕ್ಷಣ ಪದ್ಧತಿಯ ಬದಲು ಒಂದು ವರ್ಷದ ಪಿ.ಯು.ಸಿ. ಪದ್ಧತಿ, ಮುಂದೆ ಮೂರು ವರ್ಷದ ಪದವಿ ಶಿಕ್ಷಣ ಪದ್ಧತಿ ಬಂದದ್ದರಿಂದ ಈ ಕಾಲೇಜಿನಲ್ಲಿಯೂ ಅಗತ್ಯವಾದ ಬದಲಾವಣೆ ಉಂಟಾಯಿತು. ಕಾಲಕ್ರಮೇಣ ಪಿ.ಯು.ಸಿ. ಶಿಕ್ಷಣವೇ ಕಾಲೇಜಿನಲ್ಲಿ ತಪ್ಪಿ ಹೋಯಿತು. ಬಿ.ಎಸ್‌ಸಿ. ಶಿಕ್ಷಣಕ್ಕೆ ಮೀಸಲಾದ ಈ ಕಾಲೇಜು ಹಿಂದಿನಿಂದ ಬಂದಿದ್ದ ಐಚ್ಛಿಕ ವಿಷಯಗಳನ್ನು ಮಾತ್ರವಲ್ಲದೆ ಇಲೆಕ್ಟ್ರಾನಿಕ್ಸ್, ಕಂಪ್ಯೂಟರ್, ರೇಷ್ಮೆ ವಿಜ್ಞಾನ, ಜಲವಿಜ್ಞಾನ, ಸಂಖ್ಯಾಶಾಸ್ತ್ರ, ಸೂಕ್ಷ್ಮ ಜೀವಶಾಸ್ತ್ರ—ಇಂಥ ಹೊಸ ಹೊಸ ವಿಷಯಗಳಲ್ಲಿಯೂ ಐಚ್ಛಿಕ ಅಧ್ಯಯನ ಸೌಲಭ್ಯಗಳನ್ನು ಈಗ ನೀಡುತ್ತಿದೆ. ಈ ಪ್ರಮಾಣದಲ್ಲಿ ಯಾವುದೇ ಒಂದು ಕಾಲೇಜಿನಲ್ಲಿ ಐಚ್ಛಿಕ ವ್ಯಾಸಂಗ ಇದ್ದಿರಲಾರದೆಂದು ತೋರುತ್ತದೆ. ೧೯೬೦ರ ದಶಕದ ಪ್ರಾರಂಭದ ವರ್ಷಗಳಲ್ಲಿ ಮಾನಸಗಂಗೋತ್ರಿಯಲ್ಲಿ ವಿಜ್ಞಾನ ವಿಷಯಗಳಿನ್ನೂ ಪ್ರಾರಂಭವಾಗದಿದ್ದಾಗ ಕೆಲವೊಂದು ಎಂ.ಎಸ್‌ಸಿ. ವಿಜ್ಞಾನ ವಿಷಯಗಳು—ರಸಾಯನಶಾಸ್ತ್ರ, ಪ್ರಾಣಿಶಾಸ್ತ್ರ ಮುಂತಾದವು— ಈ ಕಾಲೇಜಿನಲ್ಲಿಯೇ ಬೋಧಿತವಾಗುತ್ತಿದ್ದವು.

ಈ ಕಾಲೇಜಿನ ಆಡಳಿತವನ್ನು ನಡೆಸಿಕೊಂಡು ಬಂದು ಇದನ್ನು ಈ ಮಟ್ಟಕ್ಕೆ ಬೆಳೆಸುವುದರಲ್ಲಿ ಮಹತ್ವದ ಪಾತ್ರ ವಹಿಸಿದವರು ಮೂವರು ಅಧೀಕ್ಷಕರು (Superintendents) ಹಾಗೂ ಹತ್ತೊಂಬತ್ತು ಪ್ರಾಚಾರ್ಯರು (Principals) ಎಂಬುದನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಅವರಲ್ಲಿಯೂ ಡಾ. ಎಲ್. ಸೀಬಯ್ಯ ಮತ್ತು

ಡಾ. ಎಸ್. ವಿ. ಕೇಶವ ಹೆಗ್ಡೆ ದೀರ್ಘಕಾಲ ಕಾಲೇಜಿನ ಪ್ರಾಚಾರ್ಯರಾಗಿದ್ದು ಅತ್ಯಂತ ಮಹತ್ವಪೂರ್ಣವಾದ ಸೇವೆ ಸಲ್ಲಿಸಿದವರು.

ಡಾ. ಎಲ್. ಸೀಬಯ್ಯನವರು ಆಗಸ್ಟ್ ೧೯೫೧ ರಿಂದ ಮಾರ್ಚ್ ೧೯೬೦ರ ವರೆಗೆ ಪ್ರಾಚಾರ್ಯರಾಗಿದ್ದರು. ಅವರ ಆಡಳಿತಾವಧಿಯಲ್ಲಿಯೇ ಬೆಳ್ಳಿ ಹಬ್ಬವಾಗಿ ಈ ಕಾಲೇಜಿಗೆ ಯುವರಾಜ ಕಾಲೇಜು ಎಂಬ ನಾಮಕರಣವಾಯಿತು. ತರಗತಿಗಳನ್ನು ನಡೆಸಲು ಸ್ಥಳಾವಕಾಶ ಸಾಲದೆ ಕ್ರಾಫರ್ಡ್ ಭವನದ ಕೆಲವು ಕೊಠಡಿಗಳಲ್ಲಿ ಇಂಟರ್ ಮೀಡಿಯಟ್ ಆರ್ಟ್ಸ್ ವಿಭಾಗದ ತರಗತಿಗಳು ನಡೆಯುತ್ತಿದ್ದವು. ಪ್ರಾಚ್ಯ ಸಂಶೋಧನ ಸಂಸ್ಥೆಗೆ ಹತ್ತಿರವಾಗಿರುವ, ಯುವರಾಜ ಕಾಲೇಜಿನ ಕಟ್ಟಡದ ಪಶ್ಚಿಮ ದಿಕ್ಕಿನ ಪಾರ್ಶ್ವ ಅವರ ಕಾಲದಲ್ಲಿಯೇ ನಿರ್ಮಾಣವಾಯಿತು. ಪ್ರಯೋಗಶಾಲೆಗಳ ವಿಸ್ತರಣೆ ಮತ್ತು ಪುನರ್‌ವ್ಯವಸ್ಥೆ, ವಿದ್ಯಾರ್ಥಿಗಳಿಗೆ ಆವಶ್ಯಕವಾದ ಸೌಕರ್ಯ ಸೌಲಭ್ಯಗಳ ವಿಸ್ತರಣೆ, ವ್ಯವಸ್ಥಿತ ರೀತಿಯಲ್ಲಿ ಆಫೀಸ್ ಕೆಲಸಕಾರ್ಯಗಳ ನಿರ್ವಹಣೆ—ಈ ಎಲ್ಲ ವಿಷಯಗಳ ಬಗ್ಗೆಯೂ ಡಾ. ಸೀಬಯ್ಯನವರು ಹೆಚ್ಚಿನ ಲಕ್ಷ್ಯವಹಿಸಿದ್ದರು.

ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ. ಎಲ್. ಸೀಬಯ್ಯನವರು ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಡಿ.ಎಸ್‌ಸಿ. ಪದವಿ ಪಡೆದಿದ್ದ ಹೆಸರಾಂತ ವಿಜ್ಞಾನಿಯಾಗಿದ್ದರು. ಅತಿಸೂಕ್ಷ್ಮ ವರ್ಣಪಟಲಕ್ಕೆ (Hyper-fine super structure of spectral line) ಸಂಬಂಧಪಟ್ಟ ಸಂಶೋಧನೆ ಅವರ ಸಂಶೋಧನೆಗಳಲ್ಲೆಲ್ಲ ಉನ್ನತ ಮಟ್ಟದ್ದೆಂದು ಪರಿಗಣಿತವಾಗಿದೆ.

ಡಾ. ಸೀಬಯ್ಯನವರ ಕನ್ನಡಾಭಿಮಾನವೂ ಉಲ್ಲೇಖನಾರ್ಹವಾಗಿದೆ. ಅವರು ಕನ್ನಡ ಶಿಕ್ಷಣ ಮಾಧ್ಯಮದ ಪರವಾಗಿ ಇದ್ದ ವಿಜ್ಞಾನಿಯಾಗಿದ್ದರು. ಡಾ. ಸೀಬಯ್ಯನವರ ಸಹೋದ್ಯೋಗಿಯಾಗಿದ್ದ, ಭೌತಶಾಸ್ತ್ರದ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿರುವ ಪ್ರೊ. ಕೆ. ಶ್ರೀನಿವಾಸನ್ ಅವರು ಡಾ. ಸೀಬಯ್ಯನವರು ನಿಧನರಾದಾಗ 'ಪ್ರಜಾಮತ' ವಾರಪತ್ರಿಕೆಯ ೧೯೬೭ರ ಅಕ್ಟೋಬರ್ ಸಂಚಿಕೆಯಲ್ಲಿ ಬರೆದ ಲೇಖನದಲ್ಲಿ ಅವರ ಕನ್ನಡಾಭಿಮಾನ ಕುರಿತಂತೆ ಹೀಗೆ ಬರೆದರು :

"ನಮ್ಮ ತಾಯ್ನುಡಿಯಾದ ಕನ್ನಡ ಭಾಷೆಯಮೇಲೆ ಸೀಬಯ್ಯನವರಿಗೆ ವಿಶೇಷ ಮಮತೆ ಇತ್ತು. ವಿಜ್ಞಾನ ವಿಷಯಗಳನ್ನು, ಅವು ಎಷ್ಟೇ ಪ್ರೌಢ ವಿಷಯಗಳಾಗಿದ್ದರೂ ಸಹ, ಅರ್ಥವಾಗುವ ರೀತಿಯಲ್ಲಿ ಕನ್ನಡದಲ್ಲಿ ಬೋಧಿಸುವುದು ಸಾಧ್ಯ ಎಂದು ನಂಬಿದ್ದವರ ಪೈಕಿ ಸೀಬಯ್ಯನವರು ಒಬ್ಬರು. ವಿಜ್ಞಾನದ ಅನೇಕ ಪ್ರೌಢ ವಿಷಯಗಳ ಬಗ್ಗೆ ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಕನ್ನಡದಲ್ಲಿ ಭಾಷಣ ಮಾಡಿ ಕನ್ನಡ ಮಾಧ್ಯಮದ ಮೂಲಕವೂ ಗಹನವಾದ ವಿಜ್ಞಾನದ ವಿಷಯಗಳನ್ನು ಬೋಧಿಸುವುದು ಸಾಧ್ಯ ಎಂದು ಕಾರ್ಯತಃ ತೋರಿಸಿಕೊಟ್ಟರು. ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಕನ್ನಡದಲ್ಲಿ ಅನೇಕ ಲೇಖನಗಳನ್ನೂ ನಾಲ್ಕಾರು ಪುಸ್ತಕಗಳನ್ನೂ ಬರೆದಿರುತ್ತಾರೆ. ಇವರು ಅಣುಶಕ್ತಿಯ (Atomic energy) ಬಗ್ಗೆ

ಬರೆದಿರುವ ಕಿರುಪುಸ್ತಕ ಜನಸಾಮಾನ್ಯರಿಗೂ ಅರ್ಥವಾಗುವಂತೆ ಬಹಳ ಸರಳ ರೀತಿಯಲ್ಲಿ ಇದೆ."

ಡಾ. ಎಸ್. ವಿ. ಕೇಶವ ಹೆಗ್ಡೆಯವರು ಡಾ. ಸೀಬಯ್ಯನವರ ನಿವೃತ್ತಿಯ ಅನಂತರದ ಕಾಲದಲ್ಲಿ ಅಂದರೆ ಮಾರ್ಚ್ ೧೯೬೦ರಿಂದ ಏಪ್ರಿಲ್ ೧, ೧೯೬೮ರ ವರೆಗೆ ಯುವರಾಜ ಕಾಲೇಜಿನ ಪ್ರಾಚಾರ್ಯರಾಗಿದ್ದರು. ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಅವರು ಸ್ವಿಟ್ಝರ್‌ಲ್ಯಾಂಡ್ ದೇಶದ ಜ್ಯುರಿಚ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದ ವಿದ್ವಾಂಸರಾಗಿದ್ದರು. ಅವರ ಆಡಳಿತಾವಧಿಯಲ್ಲಿ ಯುವರಾಜ ಕಾಲೇಜು ತನ್ನ ಸಾಧನೆಯ ಕ್ಷಿತಿಜವನ್ನು ಇನ್ನಷ್ಟು ಫಲಪ್ರದವಾದ ರೀತಿಯಲ್ಲಿ ವಿಸ್ತರಿಸಿಕೊಂಡಿತು. ಅವರ ಕನ್ನಡಾಭಿಮಾನ ಮತ್ತು ಕನ್ನಡ ಶಿಕ್ಷಣ ಮಾಧ್ಯಮ ಕುರಿತ ನಿಷ್ಠೆ ಉಜ್ವಲವಾಗಿತ್ತು. ಬಿ.ಎಸ್‌ಸಿ. ಕನ್ನಡ ಮಾಧ್ಯಮ ತರಗತಿಗಳನ್ನೂ ಯಶಸ್ವಿಯಾಗಿ ನಡೆಸಿ ತೋರಿಸಿ ಅವರು ಯುವರಾಜ ಕಾಲೇಜಿನಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿದ್ದರು.

ಡಾ. ಕೇಶವ ಹೆಗ್ಡೆಯವರ ಆಡಳಿತದ ರೀತಿ ಹಾಗೂ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿ ವರ್ಗದವರ ಬಗ್ಗೆ ಅವರಿಗಿದ್ದ ಆತ್ಮೀಯ ಭಾವನೆ ಅನ್ಯಾದೃಶವಾಗಿತ್ತು. ಶ್ರದ್ಧೆ, ನಿಷ್ಠೆಗಳಿಂದ ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸುತ್ತಿದ್ದ ಅಧ್ಯಾಪಕ ಹಾಗೂ ಇತರ ಸಿಬ್ಬಂದಿವರ್ಗದವರು ತಮಗೆ ಪ್ರಾಚಾರ್ಯರಿಂದ, ವಿಶ್ವವಿದ್ಯಾನಿಲಯದಿಂದ ದೊರೆಯಬೇಕಾದ ನ್ಯಾಯಕ್ಕಾಗಿ ಯಾರ ವಶೀಲಿ, ವರ್ಚಸ್ಸುಗಳ ಮೊರೆಹೋಗಬೇಕಾಗಿರಲಿಲ್ಲ. ಅವರಿಗೆ ನ್ಯಾಯವಾಗಿ ಸಲ್ಲಬೇಕಾದದ್ದನ್ನು ದೊರಕಿಸಿಕೊಡುವುದರಲ್ಲಿ ಪ್ರಾಚಾರ್ಯ ಡಾ. ಹೆಗ್ಡೆಯವರು ಸ್ವಯಂಪ್ರೇರಣೆಯಿಂದ ಅದೊಂದು ತಮ್ಮ ಕರ್ತವ್ಯಭಾಗ, ಪ್ರಾಚಾರ್ಯ ಸ್ಥಾನದಲ್ಲಿ ಕುಳಿತಿರುವ ತಮ್ಮ ನೈತಿಕ ಹೊಣೆಗಾರಿಕೆ ಎಂಬ ಭಾವನೆಯಿಂದ ಮುಂದಾಗುತ್ತಿದ್ದರು. ಕೆಲಸದಲ್ಲಿ ತಕ್ಕ ಶ್ರದ್ಧೆ, ನಿಷ್ಠೆ ಇಲ್ಲದವರೂ ತಮ್ಮ ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸುವುದು ಅನಿವಾರ್ಯ ಆಗತ್ಯ ಎಂಬಂಥ ಶಿಸ್ತಿನ ವಾತಾವರಣವನ್ನೂ ಅವರ ಆಡಳಿತ ಸೃಷ್ಟಿಸಿತ್ತು. ಶಿಸ್ತಿನ ನಿಷ್ಠುರತೆ, ಪ್ರೀತಿಯ ಉದಾರತೆ ಅವರ ಆಡಳಿತದಲ್ಲಿ ಮಿಳಿತವಾಗಿದ್ದ ರೀತಿ ಅನನ್ಯ ಎಂಬಂತಿತ್ತು. ಡಾ. ಕೇಶವ ಹೆಗ್ಡೆಯವರ ಕರ್ತವ್ಯನಿಷ್ಠೆ, ಕೃತ್ರಿಮವರಿಯದ ನಿಷ್ಠುರ ಪ್ರಾಮಾಣಿಕತೆ, ನಿರ್ಭಯತೆ, ಜಾತಿ–ಮತಾತೀತ ಮನೋಭಾವ ಆದರ್ಶಪ್ರಾಯವಾಗಿತ್ತು.

ಡಾ. ಹೆಗ್ಡೆಯವರ ಸಹೋದ್ಯೋಗಿಯಾಗಿದ್ದು, ಮುಂದೆ ಯುವರಾಜ ಕಾಲೇಜಿನ ಪ್ರಾಚಾರ್ಯರೂ ಆಗಿದ್ದ (೧೯೭೯–೮೧) ಪ್ರೊ. ಎಲ್. ಎನ್. ಚಕ್ರವರ್ತಿಯವರು 'ವಜ್ರಕಿರಣ' ಸ್ಮರಣ ಸಂಚಿಕೆಯಲ್ಲಿ ಡಾ. ಹೆಗ್ಡೆಯವರನ್ನು ಕುರಿತು ಬರೆದಿರುವ ಕೆಲವು ವಾಕ್ಯಗಳನ್ನು ನೋಡಬಹುದು :

"ಹೆಗ್ಗಡೆಯವರು ಕೃತ್ರಿಮವರಿಯದ ವ್ಯಕ್ತಿ...ಸ್ವಲ್ಪ ದಿವಸಗಳಲ್ಲೇ ದಕ್ಷ

ಆಡಳಿತಗಾರರೆಂಬ ಖ್ಯಾತಿ ಪಡೆದರು...ಕಾಲೇಜಿನ ವಿವಿಧ ಶಾಖೆಗಳಲ್ಲಿ ಪ್ರೊಫೆಸರ್ ರೀಡರ್ ಹುದ್ದೆಗಳೇ ಆರಂಭದಲ್ಲಿರಲಿಲ್ಲ. ಸುಮಾರು ೨೫ ವರ್ಷ ಸೇವೆ ಸಲ್ಲಿಸಿದ ಮೇಲೂ ಅಧ್ಯಾಪಕರು ಲೆಕ್ಚರರ್ ಆಗಿಯೇ ಉಳಿದು ನಿವೃತ್ತಿಹೊಂದುವ ಸಂಭವವಿತ್ತು. ಈ ಕೊರತೆಯನ್ನು ಗಮನಿಸಿ ಶ್ರೀ ಕೇಶವ ಹೆಗ್ಡೆಯವರು ಪ್ರತಿಯೊಂದು ಶಾಖೆಗೂ ಪ್ರೊಫೆಸರ್, ರೀಡರ್ ಹುದ್ದೆಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ವಿಶ್ವವಿದ್ಯಾಲಯ ಏರ್ಪಡಿಸುವಂತೆ ಮಾಡಿ, ಆಯಾ ಹುದ್ದೆಗಳಿಗೆ ಅದೇ ಶಾಖೆಯಲ್ಲಿ ಅತಿಹೆಚ್ಚು ವರ್ಷ ಸೇವೆ ಸಲ್ಲಿಸಿರುವವರೇ ನೇಮಕವಾಗುವಂತೆ ಮಾಡಲು ಹೆಚ್ಚು ಶ್ರಮಪಟ್ಟರು. ಚಿಕ್ಕ ವಯಸ್ಸಿನಲ್ಲೇ ಕಲ್ಕತ್ತಾ ವಿಶ್ವವಿದ್ಯಾನಿಲಯದ ಎಂ.ಎಸ್ಸಿ. ಡಿಗ್ರಿ ಪಡೆದು, ಯೂರೋಪಿಗೆ ಪ್ರಯಾಣ ಬೆಳಸಿ, ಆಧುನಿಕ ಬೀಜಗಣಿತ Modern Algebra ಎಂಬ ಗಣಿತ ಶಾಖೆಯಲ್ಲಿ ನಿಷ್ಣಾತರೆಂದು ಹೆಸರು ಪಡೆದ Sir Vanderwarden ಅವರ ದಿಗ್ದರ್ಶನದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದರೂ ಅಹಂಕಾರ ಪಡುವುದು ಅವರ ಸ್ವಭಾವವಾಗಿರಲಿಲ್ಲ. ವಿಶ್ವವಿದ್ಯಾನಿಲಯದಲ್ಲಿ ೨೫ ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದವರು ಇನ್ನೂ ಲೆಕ್ಚರರ್ ಆಗಿಯೇ ಉಳಿದು ನಿವೃತ್ತರಾಗುವ ಪರಿಸ್ಥಿತಿ ಅವರ ಮನಸ್ಸಿಗೆ ಬಹಳ ನೋವುಂಟುಮಾಡುತ್ತಿತ್ತು...ಯುವರಾಜಾ ಕಾಲೇಜಿನ ಗಣಿತದ ಶಾಖೆಯಲ್ಲಿ...ಯವರು ನಿವೃತ್ತಿಹೊಂದಲು ಕೇವಲ ಏಳೆಂಟು ತಿಂಗಳು ಉಳಿದಿತ್ತು. ಆದರೆ ಅವರು ಇನ್ನೂ ಲೆಕ್ಚರರ್ ಆಗಿಯೇ ಇದ್ದರು. ಅವರು ನಿವೃತ್ತರಾಗುವುದಕ್ಕೆ ಮುಂಚೆ, ರೀಡರ್ ಆಗಿ ಬಡ್ತಿಹೊಂದಿ ನಿವೃತ್ತರಾಗುವಂತೆ ಆಗಿನ ಕುಲಪತಿಗಳಾದ ಡಾ. ಕುವೆಂಪುರವರ ಮನ ಒಲಿಸಿದ್ದು, ಶ್ರೀ ಹೆಗ್ಡೆಯವರ ಉದಾತ್ತ ಮನೋಭಾವ ವನ್ನು ವ್ಯಕ್ತಪಡಿಸುವ ಒಂದು ಜ್ವಲಂತ ನಿದರ್ಶನ...ಶ್ರೀ ಹೆಗ್ಡೆಯವರು ಆಗರ್ಭ ಶ್ರೀಮಂತರು. ಇಷ್ಟೇ ಅಲ್ಲದೆ ಅವರು ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ದರಲ್ಲೂ ಶ್ರೀಮಂತರಾಗಿದ್ದುದು ಅವರ ವ್ಯಕ್ತಿತ್ವಕ್ಕೆ ಒಂದು ಮೆರುಗು ಕೊಟ್ಟಿತ್ತು. ಪ್ರತಿಯೊಬ್ಬರ ಒಳಿತಿಗೂ ಜಾತೀಯತೆ ಮುಂತಾದ ಸಂಕುಚಿತ ಮನೋಭಾವನೆಗಳಿಲ್ಲದೆ ಶ್ರಮಿಸುತ್ತಿದ್ದರು. ಇದನ್ನು ವ್ಯಕ್ತಪಡಿಸುವ ನಿದರ್ಶನಗಳು ಹಲವಾರು."

ಕೆಲಕಾಲ ಕುಲಸಚಿವರೂ ಆಗಿದ್ದ ಡಾ. ಹೆಗ್ಡೆಯವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇನ್ನೂ ಮಹತ್ವಪೂರ್ಣವಾದ, ಫಲಪ್ರದವಾದ ಸೇವೆ ಸಲ್ಲಿಸಿ ಹೆಚ್ಚಿನ ಕೀರ್ತಿವಂತರಾಗುವ ಉಜ್ವಲ ಭವಿಷ್ಯ ಅವರ ಮುಂದಿದೆ ಎಂಬ ಭಾವನೆ ಅವರನ್ನು ಬಲ್ಲವರ ಮನಸ್ಸಿನಲ್ಲಿ ತುಂಬಿರುವಾಗಲೇ ಅವರ ಅಕಾಲಿಕ ಮರಣ ನಿರ್ದಯವಾಗಿ ಅದಕ್ಕೆ ತೆರೆ ಎಳೆಯಿತು.

ವಿಜ್ಞಾನವೇ ಪ್ರಧಾನ ಅಧ್ಯಯನ ವಿಷಯವಾಗಿರುವ ಈ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾದ ಪ್ರೊ. ಎಸ್. ಕೆ. ರಾಮಣ್ಣ, ಪ್ರೊ. ಎಸ್. ನಾರಾಯಣಶೆಟ್ಟಿ ಹಾಗೂ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಆರ್. ಗುರುರಾಜಾರಾವ್ ಅವರೂ ಪ್ರಾಚಾರ್ಯರಾಗಿ ಫಲಪ್ರದವಾದ ಸೇವೆ ಸಲ್ಲಿಸಿದ್ದರೆಂಬುದು ಗಮನಾರ್ಹವಾದ

ಸಂಗತಿಯಾಗಿದೆ. ವಜ್ರಮಹೋತ್ಸವದ ಕರ್ಣಧಾರರಾಗಿ ನಿಂತು ಅದನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿ ಕನ್ನಡದ ಪ್ರಾಧ್ಯಾಪಕರೂ ಕನ್ನಡದ ಪ್ರಸಿದ್ಧ ವಿಮರ್ಶಕರೂ ಕವಿಗಳೂ ಆದ ಪ್ರೊ. ಎಸ್. ನಾರಾಯಣ ಶೆಟ್ಟಿಯವರ ಪಾಲಿನದಾಯಿತು ಎಂಬುದೂ ಒಂದು ಘಟನಾ ವಿಶೇಷವೆಂದೇ ಹೇಳಬೇಕು.

ಕುವೆಂಪು, ತೀ. ನಂ. ಶ್ರೀ., ಡಾ. ಜಗಪತಿ ನಾಯ್ಡು, ಜಂಬುನಾಥನ್, ಸತ್ಯಗಿರಿನಾಥನ್, ನಂ. ಶಿವರಾಮಶಾಸ್ತ್ರಿ, ಎಸ್. ರಾಮಚಂದ್ರರಾವ್, ನಾ. ಕಸ್ತೂರಿ ಮೊದಲಾದ ಪ್ರತಿಭಾಶಾಲಿಗಳು ತಮ್ಮ ಶಿಕ್ಷಕ ವೃತ್ತಿಯನ್ನು ಈ ಕಾಲೇಜಿನಲ್ಲಿ ಪ್ರಾರಂಭಿಸಿದ್ದರು. ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ವಾಡಿಯಾ, ಜೆ. ಸಿ. ರಾಲೊ, ಎ. ಎನ್ ಮೂರ್ತಿರಾವ್, ಎಸ್. ವಿ. ರಂಗಣ್ಣ, ಜಿ. ಹನುಮಂತರಾವ್, ಕೆ. ಬಿ. ಮಾಧವ ಮುಂತಾದ ಮೇಧಾವಿಗಳಾದ ಪ್ರಾಧ್ಯಾಪಕರು, ಅಧ್ಯಾಪಕರು ಇಲ್ಲಿ ಪಾಠ ಹೇಳಿದ್ದರೆಂಬ ಹಿರಿಮೆಯೂ ಈ ಕಾಲೇಜಿಗೆ ಇದೆ.

ಈ ಕಾಲೇಜಿನ ಹಳೆಯ ವಿದ್ಯಾರ್ಥಿಗಳಲ್ಲಿ ಅನೇಕರು ಬೇರೆ ಬೇರೆ ಕ್ಷೇತ್ರಗಳಲ್ಲಿ ಹಿರಿಯ ಸ್ಥಾನಮಾನಗಳನ್ನು ಪಡೆದಿದ್ದಾರೆ. ಅಂಥ ಎಲ್ಲರನ್ನೂ ಗುರುತಿಸುವುದಾಗಲಿ ಹೆಸರಿಸುವುದಾಗಲಿ ಸಾಧ್ಯವಿಲ್ಲ. ಅವರಲ್ಲಿ ಭಾರತದ ಶ್ರೇಷ್ಠ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶ ಶ್ರೀ ಇ. ಎಸ್. ವೆಂಕಟರಾಮಯ್ಯನವರು, ವಿಜ್ಞಾನ ವಲಯದಲ್ಲಿ ಹೆಸರಾದ ಪ್ರೊ. ಬಿ. ವಿ. ಶ್ರೀಕಂಠನ್, ಡಾ. ರಾಘವೇಂದ್ರರಾವ್, ಡಾ. ರಾಮಾನುಜ ದೇಶಿಕಾಚಾರ್, ವೈದ್ಯಕೀಯ ಕ್ಷೇತ್ರದಲ್ಲಿ ಖ್ಯಾತರಾದ ಡಾ. ವೈ. ಪಿ ರುದ್ರಪ್ಪ, ಡಾ ಡಿ. ಎಸ್. ಶಿವಪ್ಪ, ಪ್ರತಿಷ್ಠಿತ 'ಕಬೀರ ಸಮ್ಮಾನ್' ಪ್ರಶಸ್ತಿ ವಿಜೇತ ಕವಿ ಎಂ. ಗೋಪಾಲಕೃಷ್ಣ ಅಡಿಗ, ಅಮೆರಿಕ ದೇಶದ ಶಿಕಾಗೊ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರೂ ಪ್ರತಿಷ್ಠಿತ ಮೆಕಾರ್ಥರ್ ಫೆಲೊಶಿಪ್ ವಿಜೇತ ವಿದ್ವಾಂಸರೂ ಇಂಗ್ಲಿಷ್ ಮತ್ತು ಕನ್ನಡ ಭಾಷೆಯ ಕವಿಗಳೂ ಪದ್ಮಶ್ರೀ ಆದ ಡಾ.ಎ.ಕೆ. ರಾಮಾನುಜನ್, ಕನ್ನಡದ ಪ್ರಸಿದ್ಧ ಸಾಹಿತಿಗಳಾದ ಕೆ. ಎಸ್. ನರಸಿಂಹಸ್ವಾಮಿ, ಚದುರಂಗ, ಎಂ ವಿ. ಸೀತಾರಾಮಯ್ಯ, ಶ್ರೇಷ್ಠ ಕಲಾವಿದರಾದ ಡಾ. ದೊರೆಸ್ವಾಮಿ ಅಯ್ಯಂಗಾರ್, ಆರ್. ಕೆ. ಲಕ್ಷ್ಮಣ್, ಟಿ. ಎಸ್. ಸತ್ಯನ್, ಶ್ರೇಷ್ಠ ಸಂಸ್ಕೃತ ವಿದ್ವಾಂಸರಾದ ಡಾ. ಕೆ. ಕೃಷ್ಣಮೂರ್ತಿ ಮುಂತಾದವರು ಸೇರುತ್ತಾರೆ.

'ಪ್ರಬುದ್ಧ ಕರ್ಣಾಟಕ'ದ ಈಗಿನ ಸಂಪಾದಕರಲ್ಲೊಬ್ಬರಾದ ಜಿ. ಎಚ್. ನಾಯಕರೂ ಈ ಕಾಲೇಜಿನ ವಿದ್ಯಾರ್ಥಿಯಾಗಿದ್ದರಲ್ಲದೆ ಇಂಟರ್‌ಮೀಡಿಯಟ್ ಆರ್ಟ್ಸ್ ಪರೀಕ್ಷೆಯಲ್ಲಿ (೧೯೫೬) ವಿಶ್ವವಿದ್ಯಾನಿಲಯಕ್ಕೆ ನಾಲ್ಕನೆಯ ರ್‍ಯಾಂಕ್ ಪಡೆದು ಉತ್ತೀರ್ಣರಾಗಿದ್ದರು. ಎಂ. ಎ ಪದವಿಯ ಫಲಿತಾಂಶ ಪ್ರಕಟವಾದ ಎರಡು ದಿನಗಳೊಳಗೇ ಅಂದರೆ ಸೆಪ್ಟೆಂಬರ್ ೫, ೧೯೬೦ ರಿಂದ ಇಲ್ಲಿಯೇ ತಮ್ಮ ಅಧ್ಯಾಪಕ ವೃತ್ತಿಯನ್ನೂ ಪ್ರಾರಂಭಿಸಿ ಹಲವು ವರ್ಷಗಳ ಕಾಲ ಈ ಕಾಲೇಜಿನಲ್ಲಿಯೇ ಇದ್ದರು. ಯುವರಾಜ ಕಾಲೇಜಿನ ಈ ಋಣವನ್ನು ಅವರು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಕಂಬನಿ

ಬಸವರಾಜ ಕಟ್ಟೀಮನಿಯವರು ೨೩-೧೦-೧೯೮೯ ರಂದು ನಿಧನರಾದರು. ಕನ್ನಡ ನಾಡಿನ ಸುವಿಖ್ಯಾತ ಸಾಹಿತಿಗಳಲ್ಲಿ ಒಬ್ಬರಾಗಿದ್ದ ಅವರ ನಿಧನಕ್ಕೆ 'ಪ್ರಬುದ್ಧ ಕರ್ಣಾಟಕ'ವು ಸಂತಾಪ ಸೂಚಿಸುತ್ತದೆ.

೧೯೪೦ ದಶಕದಲ್ಲಿ ಕನ್ನಡದಲ್ಲಿ ಕಾಣಿಸಿಕೊಂಡ ಪ್ರಗತಿಶೀಲ ಸಾಹಿತ್ಯ ಚಳವಳಿಯ ಪ್ರಮುಖ ಲೇಖಕರಲ್ಲಿ ಬಸವರಾಜ ಕಟ್ಟೀಮನಿಯವರೂ ಒಬ್ಬರಾಗಿದ್ದರು. "ವಾಸ್ತವ ಪರಿಸ್ಥಿತಿಗೆ ಕಣ್ಣು ಕಿವಿ ತೆರೆದಿಟ್ಟು ಒಳ್ಳೆಯ ಬದುಕಿಗಾಗಿ ಹೋರಾಡುತ್ತಿರುವ ಜನತೆಗೆ ಸ್ಫೂರ್ತಿ ನೀಡುವಂಥ ಕೃತಿ ರಚಿಸುವುದೇ ಪ್ರಗತಿಶೀಲತೆ", "ಮಾನವ ಕುಲವೆಲ್ಲ ಒಂದೇ; ಆ ಸತ್ಯಾಂಶವನ್ನು ಜನರಿಗೆ ತಿಳಿಸಿ 'ಮಾನವತೆಯ ಧ್ವಜ ಎತ್ತಿಹಿಡಿಯುವುದು'...ಧರ್ಮದ ಅಫೀಮು ನುಂಗಿ ಬಡತನ ಸಿರಿತನಗಳು ದೇವರಿಂದ ನಿರ್ಮಿತವಾದವುಗಳೆಂದು ನಂಬಿ, ದಾರಿದ್ರ್ಯದಲ್ಲಿಯೇ ಕೊಳೆಯುತ್ತಿದ್ದ ದಲಿತ ಜನರನ್ನು ಎಚ್ಚರಿಸಿ, ವಿಷಮ ಸಮಾಜದ ವಿರುದ್ಧ ಅವರು ಬಂಡೇಳುವಂತೆ ಮಾಡುವುದು ಪ್ರಗತಿಶೀಲರ ಕರ್ತವ್ಯ"—ಎಂಬ ನಂಬಿಕೆ ಅವರದಾಗಿತ್ತು. ಕಟ್ಟೀಮನಿಯವರು ಈ ನಂಬಿಕೆಗೆ ಅನುಗುಣವಾಗಿಯೇ ಸಾಹಿತ್ಯವನ್ನು ರಚಿಸಿದರು.

ಪ್ರಗತಿಶೀಲರು ಕಥಾಸಾಹಿತ್ಯವನ್ನು ಅಂದರೆ ಕಾದಂಬರಿ, ಸಣ್ಣಕತೆಗಳನ್ನು ತಮ್ಮ ಅಭಿವ್ಯಕ್ತಿಯ ಪ್ರಧಾನ ಪ್ರಕಾರಗಳನ್ನಾಗಿ ಮಾಡಿಕೊಂಡಿದ್ದವರು. ಕಟ್ಟೀಮನಿಯವರೂ ಆ ಮಾತಿಗೆ ಅಪವಾದವಾಗಿರಲಿಲ್ಲ. ಅವರು ಸುಮಾರು ಮೂವತ್ತೈದು ಕಾದಂಬರಿಗಳನ್ನೂ ಹತ್ತು ಸಣ್ಣ ಕಥಾಸಂಕಲನಗಳನ್ನೂ ಪ್ರಕಟಿಸಿದ್ದರು. ಜೊತೆಗೆ ಅವರು ಕಾವ್ಯ, ನಾಟಕ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ, ಆತ್ಮಚರಿತ್ರೆ—ಈ ಪ್ರಕಾರಗಳಲ್ಲಿಯೂ ಕೃತಿಗಳನ್ನು ರಚಿಸಿದ್ದರು.

ಕಟ್ಟೀಮನಿಯವರಿಗೆ ಅವರ ಕಾದಂಬರಿಗಳೆಲ್ಲ ಶ್ರೇಷ್ಠ ಮಟ್ಟದವೆಂಬ ಭ್ರಮೆ ಇರಲಿಲ್ಲ. 'ಮಾಡಿ ಮಡಿದವರು', 'ಜ್ವಾಲಾಮುಖಿಯ ಮೇಲೆ', 'ಮೋಹದ ಬಲೆಯಲ್ಲಿ', 'ಮಣ್ಣು ಮತ್ತು ಹೆಣ್ಣು'—ಇವು ಇತಿಹಾಸದಲ್ಲಿ ಸ್ಥಾನ ಪಡೆಯುವಂಥ ಕೃತಿಗಳೆಂಬುದು ಅವರ ನಂಬಿಕೆಯಾಗಿತ್ತು. 'ಬೀದಿಯಲ್ಲಿ ಬಿದ್ದವಳು' 'ಜರತಾರಿ ಜಗದ್ಗುರು', 'ಗಿರಿಯ ನವಿಲು', 'ಜಲತರಂಗ', 'ಪ್ರಪಾತ' 'ಖಾನಾವಳಿಯ ನೀಲಾ' ಮುಂತಾದ ಕಾದಂಬರಿಗಳ ಯಶಸ್ಸಿನ ಬಗ್ಗೆಯೂ ಅವರಿಗೆ ತೃಪ್ತಿಯಿತ್ತು. 'ನಾನು ಪೋಲೀಸನಾಗಿದ್ದೆ', 'ಬಂಗಾರದ ಜಿಂಕೆಯ ಹಿಂದೆ', 'ಕತ್ತರಿ ಪ್ರಯೋಗ', 'ಸಾಕ್ಷಾತ್ಕಾರ' 'ಪಾತರಗಿತ್ತಿ'—ಮೊದಲಾದ ಕಾದಂಬರಿಗಳು ಅವರಿಗೇ ತೃಪ್ತಿ ನೀಡಿರಲಿಲ್ಲ.

'ಮಾಡಿ ಮಡಿದವರು' (೧೯೫೦) ಕಟ್ಟೀಮನಿಯವರ ಎರಡನೆಯ ಕಾದಂಬರಿ. ಅವರ ಮೊದಲ ಕಾದಂಬರಿ 'ಸ್ವಾತಂತ್ರ್ಯದೆಡೆಗೆ'ಯ (೧೯೪೪) ಮುಂದುವರಿದ ಭಾಗವೆಂಬಂತೆ ತೋರುವ 'ಮಾಡಿ ಮಡಿದವರು' ಕಾದಂಬರಿಯೂ ಸ್ವಾತಂತ್ರ್ಯ

ಚಳವಳಿಯ ಕಾಲದ ವಸ್ತುವನ್ನು ಒಳಗೊಂಡದ್ದಾಗಿದೆ. ಕಟ್ಟೀಮನಿಯವರು ೧೯೪೨ರ ಸ್ವಾತಂತ್ರ್ಯ ಚಳವಳಿಯಲ್ಲಿ ನೇರವಾಗಿ ಧುಮುಕಿ ಸೆರೆಮನೆ ವಾಸವನ್ನೂ ಅನುಭವಿಸಿದವರಾಗಿದ್ದರು. ಅವರ ಆ ಕಾಲದ ಅನುಭವವು ಕಲ್ಪಕತೆಯೊಂದಿಗೆ ಮೇಳವಿಸಿ ಉತ್ಕಟತೆ ಮತ್ತು ತೀವ್ರತೆಯಲ್ಲಿ ಆ ಕಾದಂಬರಿಯಲ್ಲಿ ಅಭಿವ್ಯಕ್ತಿ ಪಡೆದಿದೆ. ಆ ಕಾದಂಬರಿ ಪ್ರಕಟವಾದಾಗ ಓದಿ ಸಂತೋಷಪಟ್ಟು "ಅಂಥ ಐವತ್ತು ಅರವತ್ತು, ಕಾದಂಬರಿಗಳು ನಿಮ್ಮಿಂದ ಬರಲಿ" ಎಂದು ಅ.ನ. ಕೃಷ್ಣರಾಯರು ಪ್ರಶಂಸಿಸಿ, ಹರಸಿ ಪ್ರೋತ್ಸಾಹಿಸಿದ್ದರು. ಗೋಪಾಲಕೃಷ್ಣ ಅಡಿಗರು "ನಿಮ್ಮ ಕೃತಿಗಳಲ್ಲಿ ಎಂಥ ವಿಮರ್ಶೆಯೂ ಕೊಲ್ಲಲಾರದ ಜೀವಶಕ್ತಿಯುಂಟು; ಸಹಜತೆಯುಂಟು; ಸೌಂದರ್ಯವುಂಟು; ಸೌಂದರ್ಯದೃಷ್ಟಿಯುಂಟು; ಕಲೆಗಾರಿಕೆಯುಂಟು", ಎಂದು ಪತ್ರ ಮುಖೇನ ಪ್ರಶಂಸಿಸಿದ್ದರು ಅಂಥವರ ಪ್ರಶಂಸೆ, ಪ್ರೋತ್ಸಾಹಗಳೂ ಅದಕ್ಕೆ ದೊರೆತ ಜನಪ್ರಿಯತೆಯೂ ಕಾದಂಬರಿಕಾರನಾಗಿ ಮುಂದುವರಿಯುವುದಕ್ಕೆ ಅಗತ್ಯವಾದ ಆತ್ಮ ವಿಶ್ವಾಸವನ್ನು ಕಟ್ಟೀಮನಿಯವರಲ್ಲಿ ಬೆಳೆಸಿದವು.

ಕಟ್ಟೀಮನಿಯವರು ಬರೆದ ಮೂರನೆಯ ಕಾದಂಬರಿ 'ಜ್ವಾಲಾಮುಖಿಯ ಮೇಲೆ' (೧೯೫೦) ಅವರಿಗೆ ಹೆಚ್ಚಿನ ಕೀರ್ತಿಯನ್ನು ತಂದುಕೊಟ್ಟ ಕೃತಿ. ಅವರು ಸಮಾಜವಾದ, ಸಮತಾವಾದಗಳ ಬಗ್ಗೆ ಹೆಚ್ಚಿನ ಒಲವು, ಆಸಕ್ತಿ ಉಳ್ಳವರಾಗಿದ್ದರು. ತಾರುಣ್ಯದಲ್ಲಿ ಲೆನಿನ್ನನ ಜೀವನ ಮತ್ತು ಬರಹಗಳಿಂದ ಹಾಗೂ ರಶಿಯನ್ ಕ್ರಾಂತಿಯಿಂದ ಅವರು ಪ್ರಭಾವಿತರಾಗಿದ್ದರು. ನಮ್ಮ ದೇಶದ ಸಮತಾವಾದಿಗಳನ್ನೂ ಸಮಾಜವಾದಿಗಳನ್ನೂ ಗಿರಣಿ ಮಾಲಿಕರನ್ನೂ ಕೂಲಿಕಾರರನ್ನೂ ಅವರು ಹತ್ತಿರದಿಂದ ಕಂಡವರಾಗಿದ್ದರು. 'ಜ್ವಾಲಾಮುಖಿಯ ಮೇಲೆ' ಆ ಪ್ರೇರಣೆ, ಪ್ರಭಾವ, ಅನುಭವಗಳಿಂದ ಸೃಷ್ಟಿಯಾದ ಕಾದಂಬರಿ. ಅದಕ್ಕೆ ಸೋವಿಯತ್ ದೇಶದ ನೆಹರೂ ಪ್ರಶಸ್ತಿ ದೊರೆತಿತ್ತು (೧೯೬೮). ಆ ಪ್ರಶಸ್ತಿಯ ಅಂಗವಾಗಿಯೇ ಸೋವಿಯತ್ ದೇಶ ಸಂಚಾರ ಸೌಲಭ್ಯವೂ ಅವರಿಗೆ ದೊರೆತಿತ್ತು (೧೯೬೯). ಆ ಸಂಚಾರದ ಅನುಭವವನ್ನು ಅವರ ಪ್ರವಾಸ ವೃತ್ತಾಂತ ಕೃತಿ 'ನಾನು ಕಂಡ ರಶಿಯಾ'ದಲ್ಲಿ ದಾಖಲಿಸಿದ್ದಾರೆ.

'ಮೋಹದ ಬಲೆಯಲ್ಲಿ'ಯೂ (೧೯೫೧) ಓದುಗರಿಂದ, ವಿಮರ್ಶಕರಿಂದ ಹೆಚ್ಚಿನ ಪ್ರಶಂಸೆಯನ್ನು ಪಡೆದ ಕಾದಂಬರಿ. "ಈ ಕಾದಂಬರಿಯಲ್ಲಿ ಕಂಡುಬರುತ್ತಿರುವ ಬುದ್ಧಿಯ ಸಮತೂಕವನ್ನು ಕಂಡು ಸಮಸ್ಯೆಯ ನಾನಾ ಮುಖಗಳನ್ನು ನೋಡಬಲ್ಲ ಕಲೆಗಾರಿಕೆಯನ್ನು ಕಂಡು ಬೆರಗಾಗಿದ್ದೇನೆ...." ಎಂದು ಮುಂತಾಗಿ ಗೋಪಾಲಕೃಷ್ಣ ಅಡಿಗರು ಪತ್ರಮುಖೇನ ಹೊಗಳಿದ್ದರು. 'ಮಣ್ಣು ಮತ್ತು ಹೆಣ್ಣು' ಕಾದಂಬರಿಯನ್ನು ಓದಿದ್ದ ಮಾಸ್ತಿಯವರು "ಅಂಥ ಹತ್ತಿಪ್ಪತ್ತು ಕಾದಂಬರಿಗಳನ್ನು ಬರೆಯಿರಿ. ಓದಿ ಸಂತೋಷಪಟ್ಟುಕೊಳ್ಳುತ್ತೇನೆ" ಎಂದು ಆ ಕೃತಿಯ ಬಗ್ಗೆ ತಮ್ಮ ಮೆಚ್ಚಿಕೆಯನ್ನು ಸೂಚಿಸಿದ್ದರು.

ಕಟ್ಟೀಮನಿಯವರು ಹತ್ತು ಕಥಾಸಂಕಲನಗಳನ್ನು ಪ್ರಕಟಿಸಿದ್ದರೂ ಅವರಿಗೆ ಕೆಲವು ಕಥೆಗಳು ಮಾತ್ರ ಹೆಚ್ಚಿನ ತೃಪ್ತಿ ನೀಡಿದ್ದವು. 'ಉಪಸಂಪಾದಕನ ಖುರ್ಚಿ' 'ಬಣ್ಣದ ಬುಗ್ಗೆ', 'ನಾಯಕನ ಮಾನ', 'ಮುದ್ದು', 'ಜಟ್ಟಿಯ ಪ್ರೀತಿ', 'ನಿರಾಶ್ರಿತೆ', 'ಹುಲಿಯಣ್ಣನ ಮಗಳು', 'ಬೂಟ್ ಪಾಲಿಶ್' ಅವು ಅಂಥ ಕಥೆಗಳು. 'ನಾಯಕನ ಮಾನ' ಅವರಿಗೆ ಪೂರ್ತಿಯಾಗಿ ತೃಪ್ತಿಕೊಟ್ಟ ಕಥೆ. ಅದು ಇತರ ಭಾರತೀಯ ಭಾಷೆಗಳಲ್ಲಿಯೂ ರಶಿಯನ್, ಜರ್ಮನ್ ಭಾಷೆಗಳಲ್ಲಿಯೂ ಅನುವಾದವಾಗಿದೆ. ಹಲವು ಆಯ್ದ ಕಥಾಸಂಕಲನಗಳಲ್ಲಿ ಸೇರ್ಪಡೆಯಾಗಿರುವ 'ಗಿರಿಜಾ ಕಂಡ ಸಿನಿಮಾ' ಕೂಡ ಅವರಿಗೆ ತೃಪ್ತಿನೀಡಿರಲಿಲ್ಲ. ಅವರ ಸಣ್ಣಕತೆಗಳಿಗೂ ಕಾದಂಬರಿಗಳಿಗೂ ಪ್ರಕಾರ ವ್ಯತ್ಯಾಸವನ್ನು ಬಿಟ್ಟರೆ ಥಾಟಿ, ಧೋರಣೆ, ನಿರ್ವಹಣೆ ಗಳಲ್ಲಿ ಹೇಳಿಕೊಳ್ಳುವಂಥ ಭಿನ್ನತೆಯೇನೂ ಕಾಣಿಸುವುದಿಲ್ಲ.

ಕಟ್ಟೀಮನಿಯವರು ಹುಟ್ಟಿದ್ದು ಬೆಳಗಾವಿ ಜಿಲ್ಲೆಯ ಗೋಕಾಕದಲ್ಲಿ ದಿನಾಂಕ ೫-೧೦-೧೯೧೯ ರಂದು. ಕಡುಬಡತನದಲ್ಲಿ ಬೆಳೆದ ಅವರು ಮುಲ್ಕೀ ಪರೀಕ್ಷೆಯಲ್ಲಿ (೧೯೩೫) ಬೆಳಗಾವಿ ಜಿಲ್ಲೆಗೆ ನಾಲ್ಕನೆಯ ಸ್ಥಾನ ಪಡೆದು ಉತ್ತೀರ್ಣರಾಗಿದ್ದರೂ ಪ್ರೌಢಶಾಲೆಯ ವಿದ್ಯಾಭ್ಯಾಸವನ್ನು ಪೂರ್ಣ ಮುಗಿಸಲು ಅನುಕೂಲವಿಲ್ಲದೆ ಕ್ರಮಾನುಗತ ವಿದ್ಯಾಭ್ಯಾಸಕ್ಕೆ ಶರಣು ಹೇಳಬೇಕಾಯಿತು. ಮುಂದೆ ವಿಶಾಲ ಲೋಕವೆ ಅವರ ಶಾಲೆಯಾಯಿತು. ಕಿವಿ ಮಾಂದ್ಯ ಬೇರೆ ಬಾಲ್ಯದಿಂದಲೂ ಇತ್ತು. ಹೀಗಿದ್ದೂ ಸ್ವಂತ ಪ್ರತಿಭೆ ಮತ್ತು ಸ್ವಪ್ರಯತ್ನಗಳಿಂದ ಅವರು ಕರ್ನಾಟಕದ ಪ್ರಸಿದ್ಧ ವ್ಯಕ್ತಿಗಳಲ್ಲಿ ಒಬ್ಬರಾಗಿ ಬೆಳೆದರು. ಅವರು ಕನ್ನಡದ ಸುವಿಖ್ಯಾತ ಸಾಹಿತಿಯಾದರು; ಸುಪ್ರಸಿದ್ಧ ಪತ್ರಿಕಾಕರ್ತರಾದರು. ೧೯೮೦ರಲ್ಲಿ ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ೧೯೬೮ ರಿಂದ ೧೯೭೪ರ ವರೆಗೆ ರಾಜ್ಯವಿಧಾನ ಪರಿಷತ್ತಿನಲ್ಲಿ ಅವರು ನಾಡಿನ ಸಾಹಿತಿಗಳನ್ನು ಪ್ರತಿನಿಧಿಸುವ ಸದಸ್ಯರಾಗಿದ್ದರು. ೧೯೬೮ ರಲ್ಲಿ 'ಜ್ವಾಲಾಮುಖಿಯ ಮೇಲೆ'ಗೆ ಸೋವಿಯತ್ ದೇಶದ ನೆಹರೂ ಪ್ರಶಸ್ತಿ ಪಡೆದರು. ೧೯೬೯ ರಲ್ಲಿ ಆ ಪ್ರಶಸ್ತಿಯ ಕಾರಣದಿಂದಾಗಿ ಅವರು ರಶಿಯಾ ದೇಶದ ಪ್ರವಾಸ ಮಾಡಿ ಬಂದರು. ೧೯೬೯ ರಿಂದ ೧೯೭೨ ರವರೆಗೆ ಕರ್ನಾಟಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿದ್ದರು. ಅವರಿಗೆ ಮೈಸೂರಿನಲ್ಲಿ ೧೯೬೯ರಲ್ಲಿ ದೇಜಗೌ-ಸಿಪಿಕೆ ಸಂಪಾದಕತ್ವದ 'ಕಟ್ಟೀಮನಿ: ಬದುಕು ಬರಹ' ಎಂಬ ಅಭಿನಂದನ ಗ್ರಂಥ ಸಮರ್ಪಣ ಹಾಗೂ ಸನ್ಮಾನ ಸಮಾರಂಭ ನಡೆಯಿತು— ಹೀಗೆ ಹತ್ತು ಹಲವು ಗೌರವಗಳನ್ನು ಅವರು ಪಡೆದರೆಂಬುದು ಪ್ರಶಂಸಾರ್ಹ ಸಾಧನೆ ಎಂದೇ ಹೇಳಬೇಕು. ರಾಜ್ಯ ಸರ್ಕಾರ ಸಾಹಿತ್ಯ ಸೇವೆಗಾಗಿ ಮಾಶಾಸನವನ್ನೂ ಕಾಹಿಲೆಯ ಚಿಕಿತ್ಸೆಗೆಂದು ಸಹಾಯಧನವನ್ನೂ ಅವರಿಗೆ ನೀಡಿತ್ತು.

ಇನ್ನೂ ಬರಬೇಕಾದ ಪದವಿ, ಪ್ರಶಸ್ತಿಗಳು ಬರಲಿಲ್ಲವೆಂಬ ಕೊರಗು ಕಟ್ಟೀಮನಿಯವರಿಗೆ ಇತ್ತು. ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್

ಪದವಿ ನೀಡದಿದ್ದುದಕ್ಕೆ, ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ತನ್ನ ಯಾವೊಂದು ಕೃತಿಗೂ ದೊರೆಯದೇ ಇದ್ದುದಕ್ಕೆ ಯಾರು ಯಾರನ್ನೊ ಹೊಣೆಗಾರರೆಂದು, ತಪ್ಪಿತಸ್ಥರೆಂದು ಅದಕ್ಕೆ ಯಾವ ಯಾವುದೊ ಕಾರಣಗಳೆಂದು ಸಾರುವಷ್ಟು ಮನಸ್ಸಿನಲ್ಲಿ ಕಹಿಯನ್ನೂ ಕೊರಗನ್ನೂ ಅವರು ಉಳಿಸಿಕೊಂಡಿದ್ದರು. ಉತ್ತರ ಕರ್ನಾಟಕದ ಬೇರೆ ಬೇರೆ ಕಡೆ ಅವರಿಗೆ ಸತ್ಕಾರ ಸಮಾರಂಭಗಳು ನಡೆದಿದ್ದರೂ ಮೈಸೂರಿನಲ್ಲಿ ನಡೆದಷ್ಟು ಅದ್ಭುತವಾದ ರೀತಿಯಲ್ಲಿ ಉತ್ತರ ಕರ್ನಾಟಕದಲ್ಲಿಯೇ ಅವರಿಗೆ ಸತ್ಕಾರ ಮತ್ತು ಅಭಿನಂದನಗ್ರಂಥ ಸಮರ್ಪಣ ಸಮಾರಂಭ ನಡೆಯಲಿಲ್ಲ ಎಂಬ ಬಗ್ಗೆ ಅಸಮಾಧಾನವಿತ್ತು. ದಲಿತರಲ್ಲಿ ದಲಿತರಾದ ಜನರ ಬದುಕನ್ನು ಕುರಿತು 'ಬೆಳಗಿನ ಗಾಳಿ' ಕಾದಂಬರಿಯಲ್ಲಿ ಅವರು ಚಿತ್ರಿಸಿದ್ದರೂ 'ದಲಿತ ಸಾಹಿತಿ'ಗಳಾಗಲಿ 'ಬಂಡಾಯ ಸಾಹಿತಿ'ಗಳಾಗಲಿ ಅದನ್ನು ಓದಿದಂತಿಲ್ಲವೆಂದೂ ಓದಿದ್ದರೂ ಅದರ ಬಗ್ಗೆ ಒಂದು ಮಾತು ಹೇಳುವ ಸೌಜನ್ಯ ಅವರಿಗೆ ಇಲ್ಲವೆಂದೂ ಕಟ್ಟೀಮನಿಯವರು ನೊಂದುಕೊಂಡಿದ್ದರು.

ಕಟ್ಟೀಮನಿಯವರ ವ್ಯಕ್ತಿತ್ವದ ಸಹಜ ತುಡಿತಗಳು ಸಾಮಾಜಿಕ ನ್ಯಾಯದ ಪರವಾಗಿದ್ದವು. ಅದರಿಂದ ಅನ್ಯಾಯ, ಅನಾಚಾರಗಳನ್ನು ಕಂಡಾಗಲೆಲ್ಲ ಸಿಡಿದೇಳುವ, ಅವುಗಳನ್ನು ದಿಟ್ಟತನದಿಂದ ಪ್ರತಿಭಟಿಸುವ, ಖಂಡಿಸುವ, ಜಾಹೀರುಪಡಿಸುವ ರಾಜಸ ಪ್ರೇರಣೆ ಅವರಲ್ಲಿ ಸಹಜಗುಣವೆಂಬಂತೆ ಇತ್ತು. ಆದರೆ ಬದುಕಿನ ಸಂದಿಗ್ಧತೆ ಸಂಕೀರ್ಣತೆಗಳನ್ನು ಗ್ರಹಿಸುವಂಥ ಸೂಕ್ಷ್ಮ ಸಂವೇದನಶೀಲತೆ ಅವರಲ್ಲಿ ತಕ್ಕ ಪ್ರಮಾಣದಲ್ಲಿ ಇದ್ದಿರಲಿಲ್ಲವಾದ್ದರಿಂದ ಅವರ ಬರವಣಿಗೆಯಲ್ಲಿ ಪಾತ್ರ, ಸನ್ನಿವೇಶಗಳ ನಿರೂಪಣೆಯಲ್ಲಿ ರಭಸಮತಿಯ ಆಕ್ರಮಣಶೀಲತೆ ಅಲ್ಲಲ್ಲಿ ಕಾಣಿಸುವುದುಂಟು. ಕಂಡದ್ದನ್ನು ಕಂಡಂತೆ ಹೇಳುವುದೇ ಸಾಹಿತ್ಯದಲ್ಲಿ ವಾಸ್ತವತೆ ಎಂಬುದು ಅವರ ತಿಳಿವಳಿಕೆಯಾಗಿದ್ದಂತೆಯೂ ತೋರುತ್ತದೆ. ಏಳೆಂಟು ದಿನ, ವಾರ, ಮಾಸ ಪತ್ರಿಕೆಗಳಲ್ಲಿ ಪತ್ರಿಕಾಕರ್ತನಾಗಿ ದುಡಿದಿದ್ದ ಅವರಿಗೆ ಪತ್ರಿಕಾಕರ್ತನ ವಾಸ್ತವತೆಯ ಪರಿಕಲ್ಪನೆಗೂ ಸಾಹಿತಿಯ ವಾಸ್ತವತೆಯ ಪರಿಕಲ್ಪನೆಗೂ ಇರುವ ವ್ಯತ್ಯಾಸದ ಬಗ್ಗೆಯೂ ಸ್ಪಷ್ಟಕಲ್ಪನೆ ಇದ್ದಂತಿರಲಿಲ್ಲ. ಆದರಿಂದಾಗಿ ಅವರ ಎಷ್ಟೋ ಕಾದಂಬರಿ, ಕಥೆಗಳಲ್ಲಿ ಕಾದಂಬರಿಕಾರ, ಪತ್ರಿಕಾಕರ್ತ ಆಗಾಗ ಕಲಸಿಕೊಳ್ಳುತ್ತಿರುವ ಅನುಭವ ಓದುಗನಿಗೆ ಆಗುವುದುಂಟು. ಅದು ಸ್ವಲ್ಪ ಹೆಚ್ಚಾದಾಗ, ಢಾಳವಾದಾಗ ಅವರ ಕೆಲವು ಕಾದಂಬರಿ, ಕಥೆಗಳು ಸಂಬಂಧಪಟ್ಟವರನ್ನು ಉದ್ರೇಕಗೊಳಿಸಿದ್ದುಂಟು; ಕೆರಳಿಸಿದ್ದುಂಟು.

ಮಠದ ಸ್ವಾಮಿಯೊಬ್ಬನ ವಿಷಯಲಂಪಟತನ, ಆಷಾಢಭೂತಿತನಗಳನ್ನು ನಿರ್ಭಯವಾಗಿ, ನಿರ್ದಯವಾಗಿ ಬಯಲಿಗೆಳೆಯುವ ಉದ್ದೇಶದಿಂದ ರಚಿತವಾದ ಅವರ ಕಾದಂಬರಿ 'ಜರತಾರಿ ಜಗದ್ಗುರು' ಪ್ರಕಟವಾದಾಗ ಅದು ಸಾಕಷ್ಟು ಜನಪ್ರಿಯವಾಯಿತಾದರೂ ಆ ಕಾದಂಬರಿಯ ಕಾರಣದಿಂದಾಗಿ ಕಟ್ಟೀಮನಿಯವರ ಹತ್ಯೆಯ ವಿಫಲ ಪ್ರಯತ್ನ ನಡೆಯಿತಂತೆ. 'ನೀ ನನ್ನ ಮುಟ್ಟಬೇಡ' ಕಾದಂಬರಿ, ನಗರಗಳಲ್ಲಿ

ಹರಿಜನಾಶ್ರಮ ಸ್ಥಾಪಿಸಿ, ಸರ್ಕಾರದಿಂದ ಹಣಪಡೆದು, ಅದನ್ನು ನುಂಗುತ್ತ, ಹರಿಜನ ಬಾಲಿಕೆಯರ ಮೇಲೂ ಅತ್ಯಾಚಾರ ಮಾಡಿ ಸುಖಿಸುವ, ತಾನು ಕಂಡಂಥ ದೇ. ಭ. ಗಳನ್ನು ಕುರಿತದ್ದು ಎಂದು ಕಟ್ಟೀಮನಿಯವರು ಹೇಳಿಕೊಂಡಿದ್ದಾರೆ. ಅದು ಪ್ರಕಟವಾದಾಗ ಆಗ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರವರೆಗೂ ಸಂಬಂಧ ಪಟ್ಟವರು ಕಟ್ಟೀಮನಿಯವರ ವಿರುದ್ಧ ದೂರು ಒಯ್ದಿದ್ದರಂತೆ ' ಸೆರೆಮನೆಯಿಂದ ಹೊರಗೆ ' ಎಂಬ ಸಣ್ಣ ಕತೆ ಪ್ರಕಟವಾದಾಗ ಅದು ಒಂದು ಮಠದ ಪ್ರಸಾದ ನಿಲಯಕ್ಕೆ ಸಂಬಂಧಿಸಿತ್ತಾದ್ದರಿಂದ ಆ ಮಠದ ಭಕ್ತರಲ್ಲೊಬ್ಬರು ಕಟ್ಟೀಮನಿಯವರನ್ನು ಹೊಡೆಯಲು ಬಂದಿದ್ದರಂತೆ. ಸ್ವತಃ ಆ ಮಠದ ಸ್ವಾಮಿಗಳೇ ಹಾಗೆ ಆಗದಂತೆ ತಡೆದರಂತೆ. ಆ ಕಥೆ ಪ್ರಕಟಿಸಿದ್ದಕ್ಕಾಗಿ ಬೆದರಿಕೆ ಹಾಕಿದ್ದರಿಂದ ಅದನ್ನು ಪ್ರಕಟಿಸಿದ ಪತ್ರಿಕೆಯ ಸಂಪಾದಕರು ಬಹಿರಂಗವಾಗಿ ಕ್ಷಮೆ ಕೇಳಿದ್ದರು. ಇವು ಮತ್ತು ಇಂಥ ಇತರ ಕೆಲವು ಸಂಗತಿಗಳನ್ನು ಕುರಿತ ವಿವರಗಳು ಕಟ್ಟೀಮನಿಯವರ ಆತ್ಮಕತೆ ' ಕಾದಂಬರಿಕಾರನ ಕಥೆ 'ಯಲ್ಲಿ ಉಲ್ಲೇಖಗೊಂಡಿವೆ.

ಕಟ್ಟೀಮನಿಯವರು ದುಷ್ಟ, ದುರಾಚಾರಿ ವ್ಯಕ್ತಿಗಳ ಬಗ್ಗೆ ಮಾತ್ರವಲ್ಲ ಎಷ್ಟೋ ಗೌರವಾನ್ವಿತ ವ್ಯಕ್ತಿಗಳ ಬಗ್ಗೆ, ಹಿರಿಯ ಸಾಹಿತಿಗಳ ಬಗ್ಗೆ ಕೂಡ ಅವಸರದ, ದುಡುಕಿನ ಅಭಿಪ್ರಾಯ, ತೀರ್ಮಾನಗಳನ್ನು ' ಕಾದಂಬರಿಕಾರನ ಕಥೆ ' ಯಲ್ಲಿ ಎಸೆಯುತ್ತ ಹೋಗಿರುವುದುಂಟು. ಒಬ್ಬರೇ ವ್ಯಕ್ತಿಯ ವಿಷಯದಲ್ಲಿಯೂ ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ರೀತಿಯ ನಿಲವು, ಅಭಿಪ್ರಾಯ; ಒಲವು ವಿರೋಧಗಳನ್ನು ಪ್ರಕಟಿಸಿರುವುದೂ ಉಂಟು. ಮಾಸ್ತಿ, ಮುಗಳಿ, ಬೇಂದ್ರೆಯಂಥವರ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳೂ ಮಾಡಿದ ಆರೋಪಗಳೂ ಈ ಮಾತಿಗೆ ಹೊರತಾಗಿಲ್ಲ. ಮಾಸ್ತಿಯವರ ' ಚನ್ನಬಸವನಾಯಕ ' ಕಾದಂಬರಿಯನ್ನು ಖಂಡಿಸಿ ಬರೆದದ್ದಲ್ಲದೆ ಅದನ್ನು ಸಾರ್ವಜನಿಕವಾಗಿ ಸುಡಬೇಕೆಂದೂ ಅವರು ಕರೆನೀಡಿದ್ದರು. ಕಟ್ಟೀಮನಿಯವರ ' ಗಿರಿಯ ನವಿಲು ' ಕಾದಂಬರಿ ಪ್ರಕಟವಾದಾಗ ಅವರಿಗೇ ಅಂಥ ಅನುಭವ ಆಯಿತೆಂಬುದು ಒಂದು ವ್ಯಂಗ್ಯ. ಗದಗಿನವರೊಬ್ಬರು ಅವರ ಆ ಕಾದಂಬರಿಯನ್ನು "ಅತ್ಯಂತ ತುಚ್ಛ"ವಾದ ರೀತಿಯಲ್ಲಿ ಖಂಡಿಸಿ ಒಂದು ಪುಸ್ತಕವನ್ನೇ ಬರೆದಿದ್ದರು.

ಲೋಕತಿದ್ದುವ ಉತ್ಸಾಹಿ, ಆದರ್ಶವಾದಿ ಲೋಕವನ್ನು ತೆರೆದಕಣ್ಣು, ಮುಕ್ತ ಮನಸ್ಸುಗಳಿಂದ ಕಂಡು ಅರಿಯುವ ವಿವೇಕ ಮರೆಯಾಗದಂತೆ ಹಾಗೂ ತನ್ನ ಅಂತ ರಂಗವನ್ನೂ ತನ್ನ ಬಹಿರಂಗ ವ್ಯವಹರಣೆಗಳನ್ನೂ ನಿಷ್ಠುರ ಪ್ರಾಮಾಣಿಕತೆಯಿಂದ ಪರೀಕ್ಷಿಸಿಕೊಳ್ಳುತ್ತ ಹೋಗುವ ಎಚ್ಚರ ತಪ್ಪದಂತೆ ಎಷ್ಟು ಲಕ್ಷ್ಯವಹಿಸಿದರೂ ಕಡಮೆ. ಸಾಹಿತಿಯೂ ಆದವನು ಈ ದಿವ್ಯವನ್ನು ಎದುರಿಸದೆ ಗತ್ಯಂತರವಿಲ್ಲ. ಈ ದಿವ್ಯಕ್ಕೆ ತನ್ನ ಬಾಹ್ಯಾಭ್ಯಂತರ ಚಿಂತನೆಗಳನ್ನೂ ವರ್ತನೆಗಳನ್ನು ನಿಷ್ಠುರವಾಗಿ ಒಡ್ಡಿಕೊಳ್ಳುವ ದಿಟ್ಟತನವೂ ಇತರರ ಚಿಂತನೆ ವರ್ತನೆಗಳಲ್ಲಿಯ ದೋಷ, ದೌರ್ಬಲ್ಯ

ಗಳನ್ನು ಬಯಲಿಗೆಳೆಯುವುದರಲ್ಲಿ ತೋರಿಸುವ ದಿಟ್ಟತನದ ಜೊತೆಗೆ ಸಹಯೋಗಗೊಂಡಾಗ ಮಾತ್ರ ಸಾಮಾಜಿಕ ನ್ಯಾಯ, ಮಾನವೀಯ ನ್ಯಾಯಗಳನ್ನು ಪ್ರತಿಪಾದಿಸುವ ಹೋರಾಟಕ್ಕೆ, ಅಂಥ ಸಾಹಿತ್ಯಸೃಷ್ಟಿಗೆ ಅಗತ್ಯವಾದ ನೈತಿಕಶಕ್ತಿ ಕೂಡಿಕೊಳ್ಳುತ್ತದೆ. ಆ ನೈತಿಕಶಕ್ತಿ ನಿಷ್ಠುರ ಪ್ರಾಮಾಣಿಕತೆ, ಸಂಕಲ್ಪಶಕ್ತಿಯ ನಿರಂತರ ಜಾಗರಣೆಯಿಂದ ಪರಿಣಾಮಗೊಳ್ಳಬೇಕಾದ ಸಂಸ್ಕಾರ ವಿಶೇಷ. ಈ ಅರಿವು ಇಂದಿನ ನಮ್ಮ ಸಾಹಿತ್ಯ ಸಂದರ್ಭದಲ್ಲಿ ತುಂಬ ಅಗತ್ಯವೆಂದು ಅನಿಸುತ್ತದೆ.

ಸಾದರ ಸ್ವೀಕಾರ

೧. ಚಂದ್ರಶೇಖರ ನಾಯಕ **ಚೆಲುವು–ಒಲವು** (ಕವನ ಸಂಕಲನ) ೧೯೮೭ ಉದಯರವಿ ಪ್ರಕಾಶನ, ಬೆಳಗಾವಿ ಪು. ೧೬ + ೯೮ ಬೆಲೆ ರೂ. ೧೫/–

೨. ಆಮೂರ ಜಿ. ಎಸ್. **ಅ. ನ. ಕೃಷ್ಣರಾಯರು** ೧೯೮೬ ಸಾಹಿತ್ಯ ಅಕಾದೆಮಿ, ನವದೆಹಲಿ ಪು. ೮೨ ಬೆಲೆ ರೂ. ೫/–

೩. ವೆಂಕಟಾಚಲಶಾಸ್ತ್ರೀ ಟಿ. ವಿ. **ಪಂಪ** ೧೯೮೬ ಸಾಹಿತ್ಯ ಅಕಾದೆಮಿ, ನವದೆಹಲಿ ಪು. ೧೧೨ ಬೆಲೆ ರೂ. ೫/–

೪. ದೇವೀರಪ್ಪ ಎಚ್. **ಹಂಪೆಯ ಹರಿಹರ** ೧೯೮೬ ಸಾಹಿತ್ಯ ಅಕಾದೆಮಿ, ನವದೆಹಲಿ ಪು. ೧೦೧ ಬೆಲೆ ರೂ. ೫/–

೫. ಹೃದಯಕುಮಾರಿ ಬಿ. **ವಲ್ಲತ್ತೋಳ್ ನಾರಾಯಣ ಮೆನೊನ್** ೧೯೮೮ ಸಾಹಿತ ಅಕಾದೆಮಿ. ನವದೆಹಲಿ ಪು. ೧೧೧ ಬೆಲೆ ೫/–

೬. ಪೂರ್ಣಿಮಾ ಟಿ. ಸಿ. **ಮೌನಗೀತೆ** (ಕವನ ಸಂಕಲನ) ೧೯೮೯ ಶ್ರೀವಿಜಯ ಪ್ರಕಾಶನ, ಮೈಸೂರು ೯ ಪು. ೧೨ + ೧೨೮ ಬೆಲೆ ರೂ. ೧೦/–

೭. ಗುರುನಾಥ ಇನಾಮದಾರ **ಚಕ್ರವ್ಯೂಹ** (ಕಥಾಸಂಕಲನ) ೧೯೮೮ ಯುವಕರ ಸಂಘ. ರಾಮನಗರ, ಹಗರಿಬೊಮ್ಮನಹಳ್ಳಿ ಪು. ೧೦೦, ಬೆಲೆ ರೂ. ೧೫/–

೮. ನಂಜುಂಡಾರಾಧ್ಯ ಎಂ. ಜಿ. **ಪರಮಹಂಸ ಶ್ರೀಪತಿ ಪಂಡಿತಾಚಾರ್ಯ** (ಕಾದಂಬರಿ) ೧೯೮೯ ಪ್ರಬೋಧ ಪುಸ್ತಕಮಾಲೆ, ಮೈಸೂರು ೪ ಪು. ೮ + ೪೭೦ ಬೆಲೆ ರೂ. ೪೦/–

೯. **ಕ್ರಾಂತಿ ಮುಂದುವರೆದಿದೆ** ೧೯೮೮ ಸೋವಿಯೆತ್‌ದೇಶ ಪ್ರಕಟಣೆ ಪು. ೯೫ ಬೆಲೆ.–

೧೦. ಶಾಂತಾರಾಮನಾಯಕ ಹಿಚಕಡ **ಅನುಭವ** (ಕವನ ಸಂಕಲನ) ೧೯೮೮ ಜಿನದೇವ ಪ್ರಕಾಶನ, ಹಿಚಕಡ, ಅಂಕೋಲಾ (ಉ.ಕ.) ಪು. ೮ + ೪೦ ರೂ. ೧೦/–

೧೧. *The Quarterly Journal of the Mythic Society* July–Sept. 1988 No. 3, Oct–Dec. 1988 No. 4, Mythic Society, Bangalore pp. 235–352, 353–482, Price: Annual Subscription.

೧೨. *The Journal of the International Dayananda Vedapeetha* Vol. I No. 2 (1) 1988 Dayananda Vedapeetha, New Delhi 55 pp. 141–264 Price: Annual Subscription.

೧೩. ಗೋವಿಂದ ಕಣೇಕಲ್ಲ **ರಾಸಕ್ರೀಡೆ** (ಕವನ ಸಂಕಲನ) ೧೯೮೯ ನಂದಕಂದ ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ ೨೫ ಪು. ೫೬ ಬೆಲೆ ರೂ. ೧೦/–

೧೪. **ಕರ್ನಾಟಕ ಲೋಚನ** ಸಂಪುಟ ೧. ಸಂಚಿಕೆ ೨ ಡಿಸೆಂಬರ್ ೧೯೮೮ ಬಿ. ಎಂ. ಶ್ರೀ. ಪ್ರತಿಷ್ಠಾನ, ಬೆಂಗಳೂರು ೧೯ ಪು. ೧೨೧ ಬೆಲೆ : ವಾ. ಚಂ.

೧೫. **ಬ್ರಹ್ಮವಿದ್ಯಾ** (The Adyar Library Bulletin) Vol. 52, 1988. The Theosophical Society, Madras 20 pp. 50 + 285 price : Annl. Subs.

೧೬. ಮಂಗಳಾ ಚಿ. ನ. (ಸಂ.) **ಆವಿಷ್ಕರಣ** (ಕವಿ ವಿನಾಯಕ ಕಾವ್ಯಸಮೀಕ್ಷೆ) ೧೯೮೯ ವಿನಾಯಕ ವಾಙ್ಮಯ ಟ್ರಸ್ಟ್, ಬೆಂಗಳೂರು ೮೦ ಪು. ೬ + ೩೯೮ ಬೆಲೆ ರೂ. ೧೦೦/–

೧೭. ಮಂಗಳಾ ಚಿ. ನ. **ಕೆನಡ ಕವನಗಳು** (ಕವನ ಸಂಕಲನ) ೧೯೮೯ ಸ್ಕ್ಯಾನ್ ಪ್ರಿಂಟ್, ಬಸವನಗುಡಿ, ಬೆಂಗಳೂರು ೪ ಪು. ೧೬ + ೭೨ ಬೆಲೆ : —

೧೮. ಲಿಂಗಯ್ಯ ಡಿ. (ಸಂಗ್ರಾಹಕ) **ಪಿರಿಯಾಪಟ್ಟಣದ ಜಗಳ** ೧೯೮೯ (ಎರಡನೇ ಮುದ್ರಣ) ದಿನಕರ ಪ್ರಕಾಶನ, ಬನಶಂಕರಿ ೩ನೇ ಹಂತ ಬೆಂಗಳೂರು ೮೫ ಪು. lxx + ೧೪೦ ಬೆಲೆ ರೂ. ೧೫/–

೧೯. ಶಿವಾನಂದ ಗುಬ್ಬಣ್ಣವರ ಡಾ. **ಚಲವಾದಿ ಚಂದಪ್ಪನ ಅನುಭಾವ ಪದಗಳು** ೧೯೮೮ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪು. ೨೨೭ ಬೆಲೆ ರೂ. ೨೬/–

೨೦. ಕಡತೋಟದ ಎಸ್. ಕೆ. ಡಾ. **ಮೀನುಗಾರಿಕೆಯ ಪ್ರಾಚೀನತೆ** ೧೯೮೮ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪು. ೮೨ ಬೆಲೆ ರೂ. ೧/–

೨೧. ನಾಗಲೋಟಿಮಠ **ಸಾಂಕ್ರಾಮಿಕ ರೋಗಗಳು** ೧೯೮೭ ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪು. ೭೪ ಬೆಲೆ ರೂ. ೧/–

ಕೆ.ಸಂ. 31453—ಮ್ಯೈ.ವಿ.ಮು.—825 ಪ್ರತಿಗಳು—14–9–90

ಪ್ರಬುದ್ಧ ಕರ್ಣಾಟಕ

ಸಂಪುಟ ೭೧

ಶ್ರೀಶುಕ್ಲ ಸಂವತ್ಸರ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೯

ವಿಷಯ ಸೂಚಿ

ಅವಲೋಕನ/ಪುಸ್ತಕ ವಿಮರ್ಶೆ

ರಿಜಿಸ್ಟ್ರೇಷನ್ ಆಫ್ ನ್ಯೂಸ್ ಪೇಪರ್ಸ್ (ಸೆಂಟ್ರಲ್) ೧೯೫೬ರ ೮ನೇ ನಿಯಮದ ೪ನೇ ಫಾರಂಗೆ ಸಂಬಂಧಿಸಿದಂತೆ 'ಪ್ರಬುದ್ಧ ಕರ್ಣಾಟಕ' ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ :

೧. ಪ್ರಕಾಶನ ಸ್ಥಳ	ಪ್ರಸಾರಾಂಗ, ಮಾನಸಗಂಗೋತ್ರಿ ಮೈಸೂರು ೬
೨. ನಿಯತಕಾಲಿಕತೆ	ತ್ರೈಮಾಸಿಕ
೩. ಮುದ್ರಕರು	ಎನ್. ಹನುಮಯ್ಯ, ನಿರ್ದೇಶಕ, ವಿ.ವಿ. ಮುದ್ರಣಾಲಯ, ಮೈಸೂರು ೬
ರಾಷ್ಟ್ರೀಯತೆ	ಭಾರತೀಯ
ವಿಳಾಸ	ವಿ.ವಿ. ಮುದ್ರಣಾಲಯ ಮೈಸೂರು ೬
೪. ಪ್ರಕಾಶಕರ ಹೆಸರು	ಕೆ. ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು ೬
ರಾಷ್ಟ್ರೀಯತೆ	ಭಾರತೀಯ
ವಿಳಾಸ	ಪ್ರಸಾರಾಂಗ, ಮಾನಸಗಂಗೋತ್ರಿ ಮೈಸೂರು ೬
೫. ಸಂಪಾದಕರ ಹೆಸರು	ಜಿ. ಎಚ್. ನಾಯಕ ಲಕ್ಷ್ಮೀನಾರಾಯಣ ಆರೋರಾ
ರಾಷ್ಟ್ರೀಯತೆ	ಭಾರತೀಯ
ವಿಳಾಸ	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ೬
೬. ಪತ್ರಿಕಾಸ್ವಾಮಿತ್ವ ಮತ್ತು ವಿಳಾಸ: ಬಂಡವಾಳದಲ್ಲಿ ನೂರಕ್ಕೆ ೧ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ	ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ೫

ಕೆ. ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

(ಸಹಿ) **ಕೆ. ಟಿ. ವೀರಪ್ಪ**

ನಿರ್ದೇಶಕ ಹಾಗೂ ಪ್ರಕಾಶಕ, ಪ್ರಸಾರಾಂಗ, ಮೈಸೂರು–೬